ಶನಿವಾರ, ಏಪ್ರಿಲ್ 16, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಸರತ್ತು

ಪಂಜಾಬ್‌ನ ಬಟಿಂಡಾದಲ್ಲಿ ಬೈಸಾಖಿ ಮೇಳದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಿಹಾಂಗ್ ಒಬ್ಬರು ಕುದುರೆ ಮೇಲೆ ಕಸರತ್ತು ಪ್ರದರ್ಶಿಸಿದರು



‘ಕುಮಾರಸ್ವಾಮಿ ದಲಿತರನ್ನು ಸಿ.ಎಂ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದಲಿತರನ್ನು ಮುಖ್ಯಮಂತ್ರಿ ಮಾಡುತ್ತೇನೆ ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಹೇಳಿರುವುದು ಕೇವಲ ನಾಟಕ. ಅವರಿಗೆ ತಾವು, ತಮ್ಮ ಕುಟುಂಬದವರನ್ನು ಬಿಟ್ಟು ಬೇರೆ ಯಾರೂ ಕಾಣಿಸುವುದಿಲ್ಲ’ ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆಮಾತನಾಡಿ, ‘ಕುಮಾರಸ್ವಾಮಿ ನಾಟಕವಾಡಿಕೊಂಡೇ, ಕಣ್ಣೀರು ಹಾಕಿಕೊಂಡೇ ಜನರಿಗೆ ಮೋಸ ಮಾಡುತ್ತಾರೆ. ಜಲಧಾರೆ ಕಾರ್ಯಕ್ರಮವೂ ಹೊಸ ನಾಟಕ. ಅವರು ಹುಟ್ಟಿದ್ದೇ ನಾಟಕದಲ್ಲಿ.’ ಎಂದು ಟೀಕಿಸಿದರು. ‘ಜೆಡಿಎಸ್ ಜೊತೆ ಹೊಂದಾಣಿಕೆಯಂಥ ಪಾಪದ ಕೆಲಸ ಇನ್ನೊಂದಿಲ್ಲ. ಬಿಜೆಪಿ ಅದರ ಸಹವಾಸ ಮಾಡುವುದಿಲ್ಲ ಎಂದರು.

‘ಜೆಡಿಎಸ್ ಅಧ್ಯಕ್ಷ ಸ್ಥಾನಕ್ಕೆ ನಾಳೆ ರಾಜೀನಾಮೆ’


ಎಚ್.ಕೆ. ಕುಮಾರಸ್ವಾಮಿ

ಹಾಸನ: ‘ಪಕ್ಷದ ಸಂಘಟನೆ ದೃಷ್ಟಿಯಿಂದ ಅಧಿಕಾರ ಸ್ಥಾನಗಳು ಬದಲಾಗುತ್ತಿದ್ದು, ಏ.17ರಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ’ ಎಂದು ಶಾಸಕ ಎಚ್.ಕೆ.ಕುಮಾರಸ್ವಾಮಿ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈಗಾಗಲೇ ಪಕ್ಷದ ವರಿಷ್ಠರಾದ ಎಚ್.ಡಿ.ದೇವೇಗೌಡ, ಕುಮಾರಸ್ವಾಮಿ ನನ್ನೊಂದಿಗೆ ಚರ್ಚಿಸಿದ್ದು, ನಾನೂ ಹುದ್ದೆ ಬಿಟ್ಟು ಕೊಡಲು ಒಪ್ಪಿದ್ದೇನೆ. ಪಕ್ಷಕ್ಕಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧ’ ಎಂದರು.

ಕೆಆರ್‌ಎಸ್‌ನಲ್ಲಿ ದೇವೇಗೌಡ, ಆಲಮಟ್ಟಿಯಲ್ಲಿ ಕುಮಾರಸ್ವಾಮಿ ಚಾಲನೆ

‘ಜನತಾ ಜಲಧಾರೆ ಯಾತ್ರೆ’ ಇಂದಿನಿಂದ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯದ ಸಮಗ್ರ ನೀರಾವರಿ ಯೋಜನೆಗಳ ಜಾರಿಗಾಗಿ ಜಾತ್ಯತೀತ ಜನತಾದಳ ಹಮ್ಮಿಕೊಂಡಿರುವ ‘ಜನತಾ ಜಲಧಾರೆ-ಗಂಗಾ ರಥಯಾತ್ರೆ’ಗೆ ಶನಿವಾರ (ಏಪ್ರಿಲ್ 16) ಚಾಲನೆ ದೊರೆಯಲಿದೆ.

ಬೆಳಿಗ್ಗೆ 11 ಗಂಟೆಗೆ ರಾಜ್ಯದ 15 ನದಿಗಳ ‘ಪವಿತ್ರ ಜಲ’ವನ್ನು ಕಲಶಕ್ಕೆ ತುಂಬಿಕೊಳ್ಳುವ ಕಾರ್ಯಕ್ರಮ ನಡೆಯಲಿದೆ. ಕಲಾ ತಂಡಗಳ ಮೆರವಣಿಗೆ, ಕಲಶ ಪೂಜೆ, ಮಂಗಳ ವಾದ್ಯಗಳ ಸದ್ದು, ಪಕ್ಷದ ಕಾರ್ಯಕರ್ತೆಯರಿಂದ ಕಲಶ ಮೆರವಣಿಗೆ ನಡುವೆ ‘ಪವಿತ್ರ ಜಲ’ವನ್ನು ಸಂಗ್ರಹ ಮಾಡಿಕೊಳ್ಳುವ ಕೆಲಸ ನಡೆಯಲಿದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರದಲ್ಲಿ ಕಾವೇರಿ ಜಲ ಸಂಗ್ರಹ ಮಾಡಲಿದ್ದಾರೆ.

ಮುಖ್ಯಾಂಶಗಳು

- ರಾಜ್ಯದ 15 ಕಡೆ ಏಕಕಾಲಕ್ಕೆ ಜಲ ಸಂಗ್ರಹ
- ಒಟ್ಟು 180 ವಿಧಾನಸಭೆ ಕ್ಷೇತ್ರಗಳಲ್ಲಿ ಗಂಗಾ ರಥಗಳ ಸಂಚಾರ
- ಕಲಾ ತಂಡಗಳ ಮೆರುಗು; ಗಂಗಾ ಮಾತೆಗೆ ಪೂಜೆ

ಜಲಧಾರೆ ಯಾತ್ರೆ ಕಾರ್ಯಕ್ರಮ ನನ್ನ ರಾಜಕೀಯ ಜೀವನದ ಅತ್ಯಂತ ಮಹತ್ವಾಕಾಂಕ್ಷೆಯದ್ದಾಗಿದೆ
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಪಕ್ಷದ ಶಾಸಕಾಂಗ ನಾಯಕ ಎಚ್.ಡಿ. ಕುಮಾರಸ್ವಾಮಿ ಆಲಮಟ್ಟಿಯಲ್ಲಿ ಚಾಲನೆ ನೀಡಲಿದ್ದಾರೆ.

ಜಲಧಾರೆಗಾಗಿ ಕಲಶದ ವ್ಯವಸ್ಥೆಯುಳ್ಳ 15 ವಾಹನಗಳು ಈಗಾಗಲೇ ಆಯಾ ಪ್ರದೇಶಗಳನ್ನು ತಲುಪಿವೆ. ಒಟ್ಟು 94 ಕಡೆಗಳಲ್ಲಿ ನದಿ ನೀರು ಸಂಗ್ರಹಣೆಗೆ ಉದ್ದೇಶಿಸಲಾಗಿದೆ. ರಾಜ್ಯದ 180ಕ್ಕೂ ಹೆಚ್ಚು ವಿಧಾನಸಭೆ ಕ್ಷೇತ್ರಗಳಲ್ಲಿ ಜಲಧಾರೆಯ ‘ಗಂಗಾ ರಥ’ಗಳು ಹಾದು ಹೋಗಲಿವೆ. ಇವೆಲ್ಲ ಮೇ 8ರ ಒಳಗೆ ರಾಜಧಾನಿ ಬೆಂಗಳೂರು ಸೇರಲಿದ್ದು, ಬಳಿಕ ಎಲ್ಲ ಕಲಶಗಳಲ್ಲಿನ ನೀರನ್ನು ಒಂದು ಬ್ರಹ್ಮ ಕಲಶದಲ್ಲಿ ತೆಗೆದಿರಿಸಿ ಜೆಡಿಎಸ್ ಕಚೇರಿಯಲ್ಲಿಟ್ಟು ನಿತ್ಯ ಗಂಗಾ ಪೂಜೆ ಸಲ್ಲಿಸಲು ಯೋಜಿಸಲಾಗಿದೆ. ಬೆಂಗಳೂರಿನಲ್ಲಿ ಬೃಹತ್ ಸಂಕಲ್ಪ ಸಮಾವೇಶ ಸಹ ನಡೆಯಲಿದೆ.



ಜಲಧಾರೆ ಯೋಜನೆಗೆ ಸಿದ್ಧಪಡಿಸಲಾದ ಗಂಗಾ ರಥ

ಸಂಗೀತ ವಿ.ವಿ ತಾತ್ಕಾಲಿಕ ಬೋಧಕೇತರ ನೌಕರರ ಪರ ದಲಿತ ವೆಲ್‌ಫೇರ್ ಟ್ರಸ್ಟ್ ದನಿ

ನ್ಯಾಯ ಸಿಗದಿದ್ದರೆ ಆಮರಣಾಂತ ಉಪವಾಸ

ಪ್ರಜಾವಾಣಿ ವಾರ್ತೆ

ಮೈಸೂರು: ಗಂಗೂಬಾಯಿ ಹಾನಗಲ್ ‘ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ತಾತ್ಕಾಲಿಕ ಬೋಧಕೇತರ ನೌಕರರಿಗೆ ನ್ಯಾಯ ಸಿಗದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು. ಏನಾದರೂ ಅನಾಹುತವಾದರೆ ಸರ್ಕಾರವೇ ಹೊಣೆ’ ಎಂದು ದಲಿತ ವೆಲ್‌ಫೇರ್ ಟ್ರಸ್ಟ್ ಎಚ್ಚರಿಕೆ ನೀಡಿದೆ.

ವರ್ಷದಿಂದ ಬಾಕಿ ಉಳಿಸಿಕೊಂಡಿರುವ ವೇತನ ಪಾವತಿಸಬೇಕು ಎಂದು ಒತ್ತಾಯಿಸಿದೆ.

ಮುಖ್ಯಾಂಶಗಳು

- ಅನಾಹುತವಾದರೆ ಸರ್ಕಾರವೇ ಹೊಣೆ–ಎಚ್ಚರಿಕೆ
- ಸರ್ಕಾರ, ವಿ.ವಿಯಿಂದ ನಿರ್ಲಕ್ಷ್ಯ–ಆರೋಪ
- ವರ್ಷದಿಂದ ಸಿಗದ ವೇತನ

‘ಕೆಲಸದಲ್ಲಿ ಮುಂದುವರಿಸಬೇಕೆಂದು 53 ದಿನಗಳಿಂದ ಮುಷ್ಕರ ನಡೆಸುತ್ತಿರುವ 19 ನೌಕರರ ಮನವಿ ಆಲಿಸುವವರೇ ಇಲ್ಲ. ಅವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಸರ್ಕಾರ ಹಾಗೂ ವಿಶ್ವವಿದ್ಯಾಲಯಕ್ಕೆ ಮಾನವೀಯತೆ ಎಂಬುದೇ ಇಲ್ಲ’ ಎಂದು ಟ್ರಸ್ಟ್‌ನ ಅಧ್ಯಕ್ಷ ಶಾಂತರಾಜು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

‘ಹಲವು ಪ್ರಗತಿಪರ ಸಂಘಟನೆಗಳು ನೌಕರರನ್ನು ಬೆಂಬಲಿಸಿವೆ. ಅವರಿಗೆ ನ್ಯಾಯ ದೊರಕಿಸಿಕೊಡುವುದು ನಮ್ಮ ಜವಾಬ್ದಾರಿಯಾಗಿರುವುದರಿಂದ ಅವರೊಂದಿಗೆ ಚರ್ಚಿಸಿ ಆಮರಣಾಂತ ಉಪವಾಸ ನಡೆಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದರು.

‘ಸಚಿವರು, ಸಂಸದರು, ಶಾಸಕರಿಗೆ ಮನವಿ ನೀಡಿದ್ದರೂ ಪ್ರಯೋಜನವಾಗಿಲ್ಲ. ಉನ್ನತ ಶಿಕ್ಷಣ ಸಚಿವರು ದಾಖಲೆ ಪಡೆದು ಪರಿಶೀಲಿಸಬಹುದಿತ್ತು. ನೌಕರರನ್ನು ಕೆಲಸದಲ್ಲಿ ಮುಂದುವರಿಸುವ ಬಗ್ಗೆ ಕಾನೂನು ತೊಡಕಿದೆ ಎನ್ನುತ್ತಾರೆಯೇ ಹೊರತು, ಆ ಬಗ್ಗೆ ಮಾಹಿತಿ ನೀಡದಿರುವುದು ಅನುಮಾನಗಳಿಗೆ ದಾರಿ ಮಾಡಿದೆ’ ಎಂದರು. ಚಿಂತಕ ನಾ.ದಿವಾಕರ ಮಾತನಾಡಿದರು. ಟ್ರಸ್ಟ್‌ನ ಪದಾಧಿಕಾರಿಗಳಾದ ಚಿಕ್ಕಂದಾನಿ, ನಂಜುಂಡಸ್ವಾಮಿ ಇದ್ದರು.

‘ಶಾಸಕ ಮಹೇಶ್ ಸೂಚನೆಯಿಂದ ಹಲ್ಲೆ’

ಕೊಳ್ಳೇಗಾಲ: ‘ಶಾಸಕ ಎನ್.ಮಹೇಶ್ ಅವರಿಗೆ ಚಪ್ಪಲಿ ತೋರಿಸಿದರು ಎಂದು ಆರೋಪಿಸಿ ಪೊಲೀಸರು ಗ್ರಾಮದ ಸಿದ್ದರಾಜು ಅವರನ್ನು ಹಿಗ್ಗಾಮುಗ್ಗಾ ಥಳಿಸಿದ್ದಾರೆ’ ಎಂದು ದೂರಿ ತಾಲ್ಲೂಕಿನ ಉತ್ತಂಬಳ್ಳಿ ಗ್ರಾಮಸ್ಥರು ನಗರ ಠಾಣೆಯ ಮುಂದೆ ಶುಕ್ರವಾರ ಸಂಜೆ ದಿಢೀರನೆ ಪ್ರತಿಭಟಿಸಿದರು.

‘ಗ್ರಾಮದಲ್ಲಿ ಬೆಳಿಗ್ಗೆ ಕೊಂಡೋತ್ಸವದಲ್ಲಿ ಶಾಸಕ ಎನ್.ಮಹೇಶ್ ಭಾಗವಹಿಸಿದ್ದಾಗ ಸಿದ್ದರಾಜು, ಶಾಸಕರ ಕಾರ್ಯವೈಖರಿ ಬಗ್ಗೆ ಆಕ್ಷೇಪಿಸಿ ಚಪ್ಪಲಿ ತೋರಿಸಿದ್ದರು’ ಎಂದು ಆರೋಪಿಸಲಾಗಿದೆ.

‘ಶಾಸಕರು ಸೂಚಿಸಿದ್ದರಿಂದಲೇ ಪೊಲೀಸರು ಥಳಿಸಿದ್ದಾರೆ’ ಎಂಬುದು ಗ್ರಾಮಸ್ಥರ ಆರೋಪ. ‘ನನಗೂ ಇದಕ್ಕೂ ಸಂಬಂಧ ಇಲ್ಲ. ಪೊಲೀಸರಿಗೆ ಸೂಚನೆಯನ್ನೂ ನೀಡಿಲ್ಲ. ದೂರು ದಾಖಲಾದ ನಂತರ ಪ್ರತಿಕ್ರಿಯಿಸುವೆ’ ಎಂದು ಶಾಸಕರು ಹೇಳಿದರು.

ಸಿದ್ದರಾಜು ಅವರನ್ನು ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ‘ಶಾಸಕರನ್ನು ಟೀಕಿಸಿದ್ದೆ. ಆದರೆ ಚಪ್ಪಲಿ ತೋರಿಸಿದ್ದೇನೆ ಎಂಬುದು ಸುಳ್ಳು’ ಎಂದು ಸಿದ್ದರಾಜು ಹೇಳಿದರು.



ಕಳಸಾಭಿಷೇಕ... ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರ ವರ್ಧಂತಿ ಮಹೋತ್ಸವದ ಅಂಗವಾಗಿ ಶುಕ್ರವಾರ ಕಳಸಾಭಿಷೇಕ ನಡೆಯಿತು ಪ್ರಜಾವಾಣಿ ಚಿತ್ರ

ಹತ್ಯೆ ಸಂಚು: 6 ಮಂದಿ ಬಂಧನ


ಶಿವಮೊಗ್ಗ: ಯುವಕನ ಹತ್ಯೆಗೆ ಸಂಚು ರೂಪಿಸಿದ್ದ ಆರೋಪದ ಮೇಲೆ 13 ಮಂದಿ ವಿರುದ್ಧ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, 6 ಮಂದಿ ಯುವಕರನ್ನು ಬಂಧಿಸಲಾಗಿದೆ.

ಹರ್ಷ ಹತ್ಯೆ ಪ್ರಕರಣ ಬಳಿಕ ಉಂಟಾಗಿದ್ದ ಗಲಭೆ ಸಂಬಂಧ ಬಂಧಿಸಿದ್ದ ಯುವಕ ವಿಚಾರಣೆ ವೇಳೆ ಈ ಮಾಹಿತಿ ತಿಳಿಸಿದ್ದಾನೆ.

ಫೆ.21ರಂದು ಬೆಳಿಗ್ಗೆ 11.30ಕ್ಕೆ ಸೀಗೆಹಟ್ಟಿಯಲ್ಲಿ ಪತ್ರಕರ್ತರ ಮೇಲೆ ಗುಂಪು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿತ್ತು. ದೊಡ್ಡಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ರಾಕಿ ಎಂಬಾತನನ್ನು ವಿಚಾರಣೆ ನಡೆಸಲಾಗಿತ್ತು. ರಾಕಿ, ವಿಶ್ವಾಸ್, ನಿತಿನ್, ಯಶವಂತ್, ಕಾರ್ತಿಕ್, ಆಕಾಶ್, ಪ್ರವೀಣ್, ಸುಹಾಸ್, ಸಚಿನ್ ರಾಯ್ಕರ್, ಶ್ರೀಕಾಂತ್, ರಘು, ಮಂಜ, ವಿಶಾಲ್ ವಿರುದ್ಧ ಪ್ರಕರಣ ದಾಖಲಾಗಿದೆ. ವಿಶ್ವಾಸ್, ಯಶವಂತ್, ಕಾರ್ತಿಕ್, ಆಕಾಶ್, ಪ್ರವೀಣ್, ಸುಹಾಸ್ ಅವರನ್ನು ಬಂಧಿಸಲಾಗಿದೆ ಎಂದು ಎಸ್‌ಪಿ ಲಕ್ಷ್ಮೀಪ್ರಸಾದ್ ತಿಳಿಸಿದ್ದಾರೆ.

ನಿಧನ ವಾರ್ತೆ

ಚನ್ನಬಸವಣ್ಣ ಸ್ವಾಮಿ



ಹಾಸನ: ತಾಲ್ಲೂಕಿನ ಮಲ್ಲೇದೇವರಪುರ ಚಿದಾನಂದ ಆಶ್ರಮದ ಚನ್ನಬಸವಣ್ಣ ಸ್ವಾಮಿ (70) ಶುಕ್ರವಾರ ಶಿವೈಕ್ಯರಾದರು.

ಹಳ್ಳಿಮೈಸೂರು ಹೋಬಳಿಯ ತೇಜೂರು ಗ್ರಾಮದ ಸ್ವಾಮೀಜಿ, ತಮ್ಮ ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿ ಬಂದ ಹಣದಲ್ಲಿ ಆಶ್ರಮ ಸ್ಥಾಪಿಸಿದ್ದರು. ಮುಕುಂದೂರು ಬೆಟ್ಟ ಎಂದೇ ಪ್ರಸಿದ್ಧಿಯಾಗಿದ್ದ ಆಶ್ರಮಕ್ಕೆ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಿದ್ದರು. ಮುಕುಂದೂರು ಬೆಟ್ಟದ ತಪ್ಪಲಿನಲ್ಲಿ ಕ್ರಿಯಾಸಮಾಧಿ ಮಾಡಲಾಯಿತು.

ಸಕ್ಕರೆ ಕಾರ್ಖಾನೆ: ಪ್ರತಿಭಟನನಿರತ ಕಾರ್ಮಿಕರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮುಧೋಳ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ತಿಮ್ಮಾಪುರದ ರೈತರ ಸಹಕಾರ ಸಕ್ಕರೆ ಕಾರ್ಖಾನೆ ಕಾರ್ಮಿಕರು 262 ದಿನಗಳಿಂದ ತಹಶೀಲ್ದಾರ್ ಕಚೇರಿ ಬಳಿ ನಡೆಸುತ್ತಿದ್ದ ಧರಣಿ ಪೆಂಡಾಲಿಗೆ ಶುಕ್ರವಾರ ಸಂಜೆ ಬೆಂಕಿ ಹಚ್ಚಿ, ವೇದಿಕೆಯನ್ನು ಧ್ವಂಸಗೊಳಿಸಿ, ಕಾರ್ಮಿಕರನ್ನು ಥಳಿಸಲಾಗಿದೆ.

‘ಕಾರ್ಖಾನೆ ಪುನರಾಂಭ ಮಾಡಬೇಕು ಹಾಗೂ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಬೇಕು’ ಎಂದು ಆಗ್ರಹಿಸಿ ಕಾರ್ಮಿಕರು ಪ್ರತಿಭಟನೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಕಾರ್ಖಾನೆ ಅಧ್ಯಕ್ಷ ರಾಮಣ್ಣ ತಳೇವಾಡ ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು, ಚಪ್ಪಲಿ ಹಾರ ಹಾಕಿ ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದರು.

ಇದರಿಂದ ಕೋಪಗೊಂಡ ಅಧ್ಯಕ್ಷರ ಬೆಂಬಲಿಗರು ಈ ಕೃತ್ಯ ಎಸಗಿದ್ದಾರೆ.

ಘಟನೆಯಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಕೆಲ ಪದಾಧಿಕಾರಿಗಳನ್ನು ಥಳಿಸಲಾಗಿದೆ. ಪೆಂಡಾಲ್‌ಗೆ ಬೆಂಕಿ ಹಚ್ಚಿದ್ದರಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ, ಬೆಂಕಿ ನಂದಿಸಿದ್ದಾರೆ.

ಈ ಕುರಿತು ಕಾರ್ಖಾನೆ ಅಧ್ಯಕ್ಷ ರಾಮಣ್ಣ ತಳೇವಾಡ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿ, ‘ನೂರಾರು ದಿನಗಳಿಂದ ಧರಣಿ ನಡೆಸುತ್ತಾ ಬಂದಿದ್ದಾರೆ. ನಾವೂ ನೋಡುತ್ತಿದ್ದೆವು. ಆದರೆ ಇದೀಗ ವೈಕ್ತಿಕವಾಗಿ ನನ್ನ ತೇಜೋವಧೆ ಮಾಡಿದಾಗ ಬೆಂಬಲಿಗರು ಸಹಿಸದೆ ಹೀಗೆ ಮಾಡಿದ್ದಾರೆ’ ಎಂದರು.

ಸುಪ್ರೀಂಕೋರ್ಟ್ ನ್ಯಾ. ಅಭಯ್ ಎಸ್. ಓಕಾ ಕಿವಿಮಾತು

‘ನ್ಯಾಯದಾನ ವಿಮರ್ಶೆಗೆ ಅರಿವು ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯದಾನ ಪ್ರಕ್ರಿಯೆ ಹೇಗೆಂದು ತಿಳಿದುಕೊಳ್ಳದೇ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ, ವಿಮರ್ಶೆಗೆ ಒಳಪಡಿಸುವ ವಿದ್ಯಾವಂತರು ಕಾನೂನಿನ ತಿಳಿವಳಿಕೆ ಹೊಂದುವ ಅವಶ್ಯಕತೆ ಇದೆ. ಆದ್ದರಿಂದ, ಸಮಾಜದಲ್ಲಿ ಕಾನೂನು ಸಾಕ್ಷರತಾ ಕಾರ್ಯಕ್ರಮಗಳನ್ನು ವ್ಯಾಪಕ ಪ್ರಮಾಣದಲ್ಲಿ ನಡೆಸುವುದು ಇಂದಿನ ಅಗತ್ಯವಾಗಿದೆ’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಎಸ್. ಓಕಾ ಪ್ರತಿಪಾದಿಸಿದರು.

ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಬೆಳ್ಳಿ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಶುಕ್ರವಾರ ಮಾತನಾಡಿದ ಅವರು, ‘ವಿದ್ಯಾವಂತರಲ್ಲೂ ಕಾನೂನಿನ ತಿಳಿವಳಿಕೆ ಕೊರತೆ ಇರುವುದನ್ನು ನನ್ನ 19 ವರ್ಷಗಳ ನ್ಯಾಯಾಂಗ ವೃತ್ತಿಯಲ್ಲಿ ಗಮನಿಸಿದ್ದೇನೆ’ ಎಂದು ಅವರು ಹೇಳಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಾಧನೆ ಮತ್ತು ಸೇವೆಯನ್ನು ಪ್ರಶಂಸಿಸಿದ ಅವರು, ‘ಲಾಕ್‌ಡೌನ್ ವೇಳೆ ರಾಜ್ಯ ಪ್ರಾಧಿಕಾರ ಮಾಡಿದ ಕೆಲಸಗಳನ್ನು ಮರೆಯುವಂತಿಲ್ಲ. ಘನತ್ಯಾಜ್ಯ, ರಸ್ತೆ ಗುಂಡಿ, ಮಕ್ಕಳ ಭಿಕ್ಷಾಟನೆ, ವಲಸೆ ಕಾರ್ಮಿಕರ ವಿಚಾರದಲ್ಲಿ ಪ್ರಾಧಿಕಾರ ಸಾಕಷ್ಟು ಕೆಲಸ ಮಾಡಿದೆ. ಇದಕ್ಕೆ ಅನೇಕ ಹಿರಿ–ಕಿರಿಯ ವಕೀಲರು ಸ್ವಯಂಪ್ರೇರಿತವಾಗಿ ಸಹಾಯ ಮಾಡಿದ್ದಾರೆ. ಹಲವು ನಿವೃತ್ತ ನ್ಯಾಯಮೂರ್ತಿಗಳು ಮಾರ್ಗದರ್ಶನ ಮಾಡಿದ್ದಾರೆ’ ಎಂದು ಸ್ಮರಿಸಿದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಸಮಾರೋಪ ಭಾಷಣ ಮಾಡಿದರು.

ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಬಿ. ವೀರಪ್ಪ, ಹೈಕೋರ್ಟ್ ಕಾನೂನು ಸೇವಾ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್, ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ. ಶಿವಶಂಕರೇಗೌಡ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ ಇದ್ದರು.



ಸಮಾರಂಭದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ (ಎಡದಿಂದ) ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಅವರನ್ನು ಸನ್ಮಾನಿಸಿದರು.

ಶನಿವಾರ, ಏಪ್ರಿಲ್ 16, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಅಸ್ಸಾಂನ ಶಿವಸಾಗರದಲ್ಲಿ ಶುಕ್ರವಾರ ಬಿಹು ನೃತ್ಯ ಪ್ರದರ್ಶಿಸಿದ ಕಲಾವಿದೆ



ಕೆ.ಎಸ್. ಈಶ್ವರಪ್ಪ ಬಂಧನ, ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲು ಪಟ್ಟು

‘ಭ್ರಷ್ಟಾಚಾರ’ ವಿರುದ್ಧ ಇಂದಿನಿಂದ ‘ಕೈ’ ಕಹಳೆ

ಪ್ರಜಾವಾಣಿ ವಾರ್ತೆ



ವಿಧಾನಸೌಧದ ಮೆಟ್ಟಿಲುಗಳ ಬಳಿ ಧರಣಿ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಚರ್ಚಿಸಿದರು. ಸಲೀಂ ಅಹ್ಮದ್, ದಿನೇಶ್ ಗುಂಡೂರಾವ್, ರಾಮಲಿಂಗಾ ರೆಡ್ಡಿ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಸರ್ಕಾರದ ವಿರುದ್ಧ ‘ಶೇ 40 ಕಮಿಷನ್’ ಆರೋಪ ಹೊರಿಸಿ ರಾಜ್ಯದಾದ್ಯಂತ ಜನಜಾಗೃತಿ ಮೂಡಿಸಲು ನಿರ್ಧರಿಸಿರುವ ಕಾಂಗ್ರೆಸ್, ಶನಿವಾರದಿಂದ (ಏ.16) ಒಂಬತ್ತು ತಂಡಗಳಾಗಿ ಐದು ದಿನ ಜಿಲ್ಲಾ ಕೇಂದ್ರಗಳಲ್ಲಿ ‘ಭ್ರಷ್ಟಾಚಾರ ಮುಕ್ತ ಕರ್ನಾಟಕ’ ಅಭಿಯಾನ ಹಮ್ಮಿಕೊಂಡಿದೆ.

ಬಿಜೆಪಿ ಕಾರ್ಯಕಾರಿಣಿ ನಡೆಯಲಿರುವ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಶಾಸಕ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ‘ಕೈ’ ನಾಯಕರು ನಿರ್ಧರಿಸಿದ್ದಾರೆ.

ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಬಂಧಿಸುವಂತೆ ಆಗ್ರಹಿಸಿ ವಿಧಾನಸೌಧದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ 24 ಗಂಟೆಗಳ ಅಹೋರಾತ್ರಿ ಧರಣಿಯ ಮುಕ್ತಾಯದ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

‘ಈಶ್ವರಪ್ಪ ಅವರನ್ನು ಬಂಧಿಸಬೇಕು ಮತ್ತು ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಮೃತ ಸಂತೋಷ್ ಪಾಟೀಲ ಪೂರ್ಣಗೊಳಿಸಿರುವ ಕಾಮಗಾರಿಯ ಒಟ್ಟು ₹ 4 ಕೋಟಿ ಬಿಲ್ ಕೂಡಲೇ ಪಾವತಿಸಬೇಕು, ಅವರ ಕುಟುಂಬಸ್ಥರಿಗೆ ₹ 1 ಕೋಟಿ ಪರಿಹಾರ ನೀಡಬೇಕು. ಪತ್ನಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಾವು ಅಹೋರಾತ್ರಿ ಧರಣಿ ಮಾಡಿದ್ದೇವೆ. ಶನಿವಾರದಿಂದ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ತೆರಳಿ, ಅಲ್ಲಿ ಭ್ರಷ್ಟಾಚಾರದ ವಿರುದ್ಧ ಪಾದಯಾತ್ರೆ, ಪ್ರತಿಭಟನೆ ನಡೆಸಿ ಆಯಾ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸುತ್ತೇವೆ’ ಎಂದು ಹೇಳಿದರು.

‘ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ನಿಷ್ಪಕ್ಷಪಾತ ತನಿಖೆ ಆಗಬೇಕು. ಸ್ವತಃ ಮುಖ್ಯಮಂತ್ರಿಯೇ ಈಶ್ವರಪ್ಪ ಅಮಾಯಕ ಎಂದು ಹೇಳಿಕೆ ನೀಡಿದ್ದಾರೆ. ಹೀಗಾಗಿ, ರಾಜ್ಯ ಸರ್ಕಾರ ನಡೆಸುವ ತನಿಖೆಯಿಂದ ನ್ಯಾಯ ಸಿಗುವ ನಂಬಿಕೆ ಇಲ್ಲ. ಈಶ್ವರಪ್ಪ ಸಾಮಾನ್ಯ ಮನುಷ್ಯ ಅಲ್ಲ. ಅವರು ಸಾಕ್ಷ್ಯ ನಾಶ ಮಾಡುವ, ಪ್ರತ್ಯಕ್ಷ ಸಾಕ್ಷಿಗಳನ್ನು ಬೆದರಿಸುವ ಸಾಧ್ಯತೆಗಳಿವೆ. ಹೀಗಾಗಿ, ಹೈಕೋರ್ಟ್ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ ತನಿಖೆಯಾಗಬೇಕು’ ಎಂದು ಆಗ್ರಹಿಸಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ ಆರೋಪದಲ್ಲಿ ಮೊದಲು ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎನ್ನುವುದು ನಮ್ಮ ಪ್ರಮುಖ ಬೇಡಿಕೆ. ಶನಿವಾರದಿಂದ ನಾವು ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಶೇ 40 ಕಮಿಷನ್ ವಿಚಾರದಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತೇವೆ. ಬಳಿಕ, ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲೂ ಈ ರಾಜ್ಯವನ್ನು ಭ್ರಷ್ಟಾಚಾರದ ರಾಜಧಾನಿಯಾಗಿ ಮಾಡಿರುವ ಬಗ್ಗೆ ಅರಿವು ಮೂಡಿಸುತ್ತೇವೆ’ ಎಂದರು.

‘ಸಂತೋಷ್ ಪಾಟೀಲ ಅವರ ಕುಟುಂಬ ಸದಸ್ಯರು ಯಡಿಯೂರಪ್ಪ ಅವರಿಂದ ನ್ಯಾಯ ಸಿಗುವ ನಿರೀಕ್ಷೆಯಲ್ಲಿದ್ದರು. ಆದರೆ, ಮುಖ್ಯಮಂತ್ರಿ ಹಾಗೂ ಯಡಿಯೂರಪ್ಪ ಅವರು ಈ ಪ್ರಕರಣದಲ್ಲಿ ಈಗಾಗಲೇ ತೀರ್ಪು ನೀಡಿದ್ದಾರೆ. ಮೂರು ತಿಂಗಳಲ್ಲಿ ಈಶ್ವರಪ್ಪನವರು ಮತ್ತೆ ಮಂತ್ರಿಯಾಗುತ್ತಾರೆ ಎಂದು ಯಡಿಯೂರಪ್ಪ ಹೇಳುತ್ತಿದ್ದಾರೆ. ಇವರಿಂದ ನ್ಯಾಯ ಸಿಗುವ ನಂಬಿಕೆ ಇಲ್ಲ’ ಎಂದರು.

ಸುದ್ದಿ 2 ನಿಮಿಷ

‘ಸಂತೋಷ್ ಪತ್ನಿಗೆ ಸರ್ಕಾರಿ ನೌಕರಿ, ಬಾಕಿ ಬಿಲ್ ಕೊಡಿಸಲು ಕ್ರಮ’

ಬೆಳಗಾವಿ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಅವರು ತಾಲ್ಲೂಕಿನ ಬಡಸ ಕೆ.ಎಚ್. ಗ್ರಾಮದ ಸಂತೋಷ್ ಮನೆಗೆ ಭೇಟಿ ನೀಡಿ ಕುಟುಂಬ ದವರಿಗೆ ಸಾಂತ್ವನ ಹೇಳಿದರು. ವೈಯಕ್ತಿಕವಾಗಿ ₹ 5 ಲಕ್ಷ ಧನ ಸಹಾಯ ನೀಡಿದರು.

‘ಅವರನ್ನು ಕಳೆದುಕೊಂಡ ಕುಟುಂಬ ತೊಂದರೆಗೆ ಸಿಲುಕಬಾರದೆಂಬ ದೃಷ್ಟಿಯಿಂದ, ಬಿಎ ಪದವೀಧರೆಯಾದ ಪತ್ನಿ ಜಯಶ್ರೀ ಪಾಟೀಲ



ಅವರಿಗೆ ಸರ್ಕಾರಿ ನೌಕರಿ ಮತ್ತು ಸಂತೋಷ್ ಮಾಡಿದ್ದ ಕೆಲಸಗಳನ್ನು ಅಧಿಕಾರಿಗಳಿಂದ ತನಿಖೆ ಮಾಡಿಸಿ, ಕ್ರಮಬದ್ಧಗೊಳಿಸಿ ₹ 4 ಕೋಟಿ ಬಿಲ್ ಕೊಡಿಸಲಾಗುವುದು’ ಎಂದು ಭರವಸೆ ನೀಡಿದರು. ‘ಈ ಕುರಿತ ನನ್ನ ಮನವಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಪತ್ರಕರ್ತರಿಗೆ ತಿಳಿಸಿದರು.

‘ನೈತಿಕ ಹೊಣೆ ಹೊರಬೇಕು’: ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗುತ್ತಿಗೆದಾರ ಸಂತೋಷ ಪಾಟೀಲ ಅವರ ಸಾವಿನ ನೈತಿಕ ಹೊಣೆ ಆ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಹೊರಬೇಕು’ ಎಂದು ಒತ್ತಾಯಿಸಿದರು.

‘ಶವ ಇಟ್ಟು ಕೊಂಡು ರಾಜಕೀಯ ಮಾಡುವ ಬದಲಿಗೆ ಬದುಕಿದ್ದಾಗಲೇ ಅವರಿಗೆ ಸಹಾಯ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ’ ಎಂದು ಅವರು ಹೇಳಿದರು.

ಏ.21ರಿಂದ 5ನೇ ಹಂತದ ಹೋರಾಟ: ಕೂಡಲಸಂಗಮಶ್ರೀ ಘೋಷಣೆ

ಕೂಡಲಸಂಗಮ: ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಏ.21ರಿಂದ ಮೇ 3 ರವರೆಗೆ ಕೂಡಲಸಂಗಮದ ಸಂಗಮೇಶ್ವರ ದೇವಾಲಯ ಆವರಣದಲ್ಲಿ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಧರಣಿ ನಡೆಸಲಾಗುವುದು’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯಮೃತ್ಯುಂಜಯ ಸ್ವಾಮೀಜಿ ಘೋಷಿಸಿದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಶುಕ್ರವಾರ ನಡೆದ 2ಎ ಮೀಸಲಾತಿ ಅಂತಿಮ ಹೋರಾಟದ ಎರಡನೇ ಸಿದ್ಧತಾ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

‘ಈಗಾಗಲೇ 4 ಹಂತದ ಹೋರಾಟಗಳು ನಡೆದಿದ್ದು, ಸರ್ಕಾರ ಸ್ಪಂದಿಸದೇ ಇರುವುದರಿಂದ 5ನೇ ಹಂತದ ಹೋರಾಟ ಕೂಡಲಸಂಗಮದಲ್ಲಿ ಆರಂಭವಾಗಲಿದೆ. ಮೇ 4ರಿಂದ 21ರವರೆಗೆ ರಾಜ್ಯದ ಪ್ರತಿ ತಾಲ್ಲೂಕು ಕಚೇರಿಯ ಮುಂದೆ ಧರಣಿ ನಡೆಸಲಾಗುವುದು. ಮೇ 22ರಿಂದ ನನ್ನ ನೇತೃತ್ವದಲ್ಲಿ ಪ್ರತಿ ಜಿಲ್ಲಾ ಕೇಂದ್ರದ ಮುಂದೆ ಧರಣಿ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಈ ಹೋರಾಟದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದ್ದು, ಅಧಿಕ ಸಂಖ್ಯೆಯಲ್ಲಿ ಕೂಡಲಸಂಗಮಕ್ಕೆ ಆಗಮಿಸಬೇಕು’ ಎಂದು ಕರೆ ನೀಡಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ‘ಸಚಿವ ಮುರುಗೇಶ ನಿರಾಣಿ ಸಮಾಜಕ್ಕೆ 2ಎ ಮೀಸಲಾತಿ ಕೊಡಿಸುವ ಕೆಲಸ ಮಾಡಬೇಕು, ಹೀಯಾಳಿಸುವ ಕಾರ್ಯ ಮಾಡಬಾರದು’ ಎಂದರು.

ಭ್ರಷ್ಟಾಚಾರ ಪರಂಪರೆಯನ್ನು ಪ್ರಾರಂಭಿಸಿದ್ದೇ ಕಾಂಗ್ರೆಸ್’

ಗದಗ: ‘ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ದೇಶದಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ, ಲೂಟಿ ನಡೆದಿದೆ. ಇದಕ್ಕೆ ಇತಿಹಾಸದಲ್ಲಿ ಸಾಕ್ಷಿ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ವಿವೇಕಾನಂದ ಸಭಾಂಗಣದಲ್ಲಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಶುಕ್ರವಾರ ಸನ್ಮಾನ ಸ್ವೀಕರಿಸಿ ಮಾತನಾಡಿ, ‘ಕಾಂಗ್ರೆಸ್ ತನ್ನ ಸುದೀರ್ಘ ಆಡಳಿತದ ಅವಧಿಯಲ್ಲಿ ದೇಶ ಆರ್ಥಿಕವಾಗಿ ಹಿಂದುಳಿಯುವಂತೆ ಮಾಡಿತು. ಅಲ್ಲದೇ ಸಾಮಾಜಿಕವಾಗಿ ಒಡೆದು ಆಳುವುದು, ತುಷ್ಟೀಕರಣ ನೀತಿ ಪ್ರಾರಂಭಿಸಿತು. ಭ್ರಷ್ಟಾಚಾರ ಪರಂಪರೆಯನ್ನು ಪ್ರಾರಂಭಿಸಿದ್ದೇ ಕಾಂಗ್ರೆಸ್’ ಎಂದು ಆರೋಪ ಮಾಡಿದರು.

‘ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್ ನಾಯಕರು ಇಂದು ಹತಾಶರಾಗಿ ಬಿಜೆಪಿ ಮತ್ತು ಪಕ್ಷದ ನಾಯಕರ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ನಾವು ಶುಭ್ರರು ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ, ನಾನು ಗಮನಿಸಿದಂತೆ ರಾಜ್ಯದ ವಿರೋಧ ಪಕ್ಷದಲ್ಲಿ ಇಂದು ತೊಳಲಾಟ ಪ್ರಾರಂಭವಾಗಿದೆ. ಅದನ್ನು ಮುಚ್ಚಿಟ್ಟುಕೊಳ್ಳಲು ಕಾಂಗ್ರೆಸ್‌ನವರು ನಾಟಕ ಪ್ರಾರಂಭ ಮಾಡಿದ್ದಾರೆ’ ಎಂದರು.

‘ಕಾಂಗ್ರೆಸ್ ನಾಯಕರು ಈಗಲಾದರೂ ಬುದ್ಧಿ ಕಲಿಯಬೇಕು. ಒಂದೊಮ್ಮೆ ಈಗ ವಿರೋಧ ಪಕ್ಷವಾಗಿ ವಿಫಲವಾದರೆ, ಮುಂದೆ ಜನ ಅವರಿಗೆ ಆ ಸ್ಥಾನವನ್ನೂ ಕೊಡುವುದಿಲ್ಲ. ಲೋಕಸಭೆಯಲ್ಲಿ ಆದಂತೆ, 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನವನ್ನೂ ಕಳೆದುಕೊಳ್ಳಲಿದೆ’ ಎಂದು ಭವಿಷ್ಯ ನುಡಿದರು.

ರಾಜೀನಾಮೆಯಿಂದ ಬಿಜೆಪಿಗೆ ಯಾವುದೇ ಹಿನ್ನಡೆಯಾಗಲ್ಲ–ಬಿಎಸ್‌ವೈ

‘ಈಶ್ವರಪ್ಪ ಆರೋಪಮುಕ್ತರಾಗುತ್ತಾರೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಯಾವುದೇ ತಪ್ಪು ಮಾಡದ ಕೆ.ಎಸ್. ಈಶ್ವರಪ್ಪ ವಿನಾ ಕಾರಣ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಸಿಲುಕಿಕೊಂಡಿದ್ದಾರೆ. ಅನಿವಾರ್ಯವಾಗಿ, ಸಚಿವ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದಾರೆ. ಅವರು ಆರೋಪದಿಂದ ಮುಕ್ತರಾಗುತ್ತಾರೆ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈಶ್ವರಪ್ಪ ಯಾರದೋ ಒತ್ತಾಯಕ್ಕಾಗಿ ರಾಜೀನಾಮೆ ನೀಡುವ ಪರಿಸ್ಥಿತಿ ಬಂದಿದೆ. ಮುಂದಿನ ದಿನಗಳಲ್ಲಿ ಪ್ರಕರಣ ಎದುರಿಸುತ್ತಾರೆ. ನಿರಪರಾಧಿಯಾಗಿ ಬಂದಾಗ ಮತ್ತೆ ಸಂಪುಟದಲ್ಲಿ ಸೇರಿಸಿಕೊಳ್ಳಲು ಯಾವುದೇ ಅಡ್ಡಿ ಇಲ್ಲ. ರಾಜೀನಾಮೆಯಿಂದ ಬಿಜೆಪಿಗೆ ಯಾವುದೇ ಹಿನ್ನಡೆಯಾಗಲ್ಲ. ದೇವರು ಅವರಿಗೆ ಒಳ್ಳೆಯದು ಮಾಡಲಿ’ ಎಂದು ಆಶಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, ‘ಈಶ್ವರಪ್ಪ ಅಪರಾಧ ಮಾಡದೇ ಇದ್ದರೂ ಅವರ ಮೇಲೆ ಆರೋಪ ಬಂದಿದೆ. ಸಚಿವ ಸ್ಥಾನದಲ್ಲಿದ್ದರೆ ತನಿಖೆಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ರಾಜೀನಾಮೆ ನೀಡುತ್ತಿದ್ದಾರೆ. ಈಗಾಗಲೇ ಸಂತೋಷ್ ಪ್ರಕರಣದಲ್ಲಿ ಪೊಲೀಸರು ಪಾರದರ್ಶಕ ವಾಗಿ ತನಿಖೆ ನಡೆಸಿದ್ದಾರೆ. ಸಂತೋಷ್ ಪಾಟೀಲ ಅವರದ್ದು ಯಾವುದೇ ಡೆತ್‌ನೋಟ್ ಇಲ್ಲ. ಅವರು ವಾಟ್ಸ್‌ಆ್ಯಪ್ ಸಂದೇಶ ಕಳಿಸಿದ್ದಾರಷ್ಟೇ. ಅದರ ಬಗ್ಗೆಯೂ ತನಿಖೆ ನಡೆಯುತ್ತಿದೆ. ಅವರೇ ಟೈಪ್ ಮಾಡಿದ್ದಾರೋ, ಬೇರೆಯವರು ಟೈಪ್ ಮಾಡಿದ್ದಾರೋ ಎಂಬುದು ತಿಳಿಯಬೇಕಿದೆ. ಎಲ್ಲಾ ಆಯಾಮಗಳಲ್ಲಿಯೂ ತನಿಖೆ ನಡೆಯುತ್ತಿದೆ. ಉಡುಪಿ ಎಸ್ಪಿ ನೇತೃತ್ವದಲ್ಲಿ ತನಿಖಾ ತಂಡ ರಚನೆಯಾಗಿದೆ. ಸದ್ಯದಲ್ಲೇ ವಿವರವಾದ ವರದಿ ಬರಲಿದೆ’ ಎಂದು ಅವರು ಹೇಳಿದರು.

‘ಕೆಪಿಸಿಸಿ ಮುಖಂಡರ ಕೈವಾಡ’

ಹುಬ್ಬಳ್ಳಿ: ‘ಕೆ.ಎಸ್. ಈಶ್ವರಪ್ಪ ಅವರ ಮೇಲಿನ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಇದೆಲ್ಲವೂ ಕಾಂಗ್ರೆಸ್ ಷಡ್ಯಂತ್ರ’ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ ಸಿಂಗ್ ಆರೋಪಿಸಿದರು.

ಶುಕ್ರವಾರ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಈ ಪ್ರಕರಣದ ಹಿಂದೆ ಕೆಪಿಸಿಸಿ ಮುಖಂಡರೊಬ್ಬರು ಇದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದ್ದು, ಸತ್ಯ ಹೊರ ಬೀಳಲಿದೆ’ ಎಂದರು.

ಸಾವಿನ ಹಿಂದೆ ಕಾಂಗ್ರೆಸ್: ನಳಿನ್

ಮಂಗಳೂರು: ‘ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಎಲ್ಲೂ ಡೆತ್ ನೋಟ್ ಸಿಕ್ಕಿಲ್ಲ. ವಾಟ್ಸ್‌ಆ್ಯಪ್‌ನಲ್ಲಷ್ಟೇ ಸಂದೇಶ ಹರಿದಾಡಿದೆ. ಸಂತೋಷ್ ಸಾವಿನ ಹಿಂದೆ ಕಾಂಗ್ರೆಸ್ ಇದೆ. ತನಿಖೆ ನಡೆಯುತ್ತಿದ್ದು, ಸತ್ಯಾಸತ್ಯತೆ ಬಯಲಾಗಲಿದೆ’ ಎಂದು ಸಂಸದ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಇದ್ದಾಗ ಡಿವೈಎಸ್ಪಿ ಗಣಪತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರಾಗಿದ್ದ ಕೆ.ಜೆ. ಜಾರ್ಜ್ ಅವರನ್ನು ಏಕೆ ಬಂಧಿಸಲಿಲ್ಲ? ಸಿದ್ದರಾಮಯ್ಯ ಸರ್ಕಾರ ಇದ್ದಾಗ 24 ಮಂದಿ ಕಾರ್ಯಕರ್ತರ ಹತ್ಯೆಯಾಗಿತ್ತು. ಆ ವೇಳೆ ಸಿದ್ದರಾಮಯ್ಯ ಅವರನ್ನು ಜೈಲಿಗೆ ಕಳುಹಿಸಬೇಕಾಗಿತ್ತು’ ಎಂದರು.

‘ಹಗರಣವೊಂದರಲ್ಲಿ ಜಾಮೀನು ಪಡೆದಿರುವ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷರೂ ಜೈಲಿನಲ್ಲಿ ಇರಬೇಕಾಗಿತ್ತು. ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರ ಮೇಲೆ ಹತ್ತು ಪ್ರಕರಣಗಳಿದ್ದು, ಅವರನ್ನೂ ಜೈಲಿಗೆ ಹಾಕಬೇಕು. ಕಾಂಗ್ರೆಸ್‌ನವರು ಜೈಲಿನ ಹೊರಗೆ ಅಲ್ಲ, ಒಳಗಡೆ ಹೋರಾಟ ಮಾಡಬೇಕು’ ಎಂದು ಲೇವಡಿ ಮಾಡಿದರು.

‘ಭ್ರಷ್ಟಾಚಾರ ತನಿಖೆಯಾದರೆ ಅರ್ಧ ಸಂಪುಟ ಖಾಲಿ’

ಬೆಂಗಳೂರು: ‘ರಾಜ್ಯ ಸರ್ಕಾರದ ಭ್ರಷ್ಟಾಚಾರದ ಕುರಿತು ಸರಿಯಾದ ರೀತಿಯಲ್ಲಿ ತನಿಖೆ ನಡೆದರೆ ಅರ್ಧ ಸಚಿವ ಸಂಪುಟ ಖಾಲಿಯಾಗಲಿದೆ’ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, ‘ಗಂಗಾ ಕಲ್ಯಾಣ ಯೋಜನೆಯಲ್ಲಿ 14,537 ಕೊಳವೆ ಬಾವಿ ಮಂಜೂರಾಗಿದ್ದು, ಅದರಲ್ಲಿ ಅವ್ಯವಹಾರ ನಡೆದಿದೆ. ಈ ತನಿಖೆಯನ್ನು ಆರ್‌ಡಿಪಿಆರ್ ಇಲಾಖೆಯ ಎಂಜಿನಿಯರ್‌ಗೆ ವಹಿಸಲಾಗಿದ್ದು, 15 ದಿನಗಳಲ್ಲಿ ವರದಿ ಬರಬೇಕಿತ್ತು. ದೇವರಾಜ ಅರಸು ನಿಗಮದಲ್ಲಿ ಒಂದು ಕೊಳವೆ ಬಾವಿ ಕೊರೆಯಲು ₹ 93 ಲಕ್ಷ ಬಿಲ್ ಮಾಡಲಾಗುತ್ತಿದೆ. ಆದರೆ, ಅಂಬೇಡ್ಕರ್, ಆದಿ ಜಾಂಬವ ನಿಗಮದಲ್ಲಿ ಅದೇ ಕೊಳವೆ ಬಾವಿ ಕೊರೆಯಲು ₹ 1.83 ಲಕ್ಷ ವೆಚ್ಚ ಮಾಡಲಾಗುತ್ತಿದೆ’ ಅವರು ದೂರಿದರು.

‘ಗಂಗಾಕಲ್ಯಾಣ ಯೋಜನೆಯಲ್ಲಿ ಸಮಾಜ ಕಲ್ಯಾಣ ಸಚಿವರಿಗೂ ಶೇ 40ರಷ್ಟು ಕಿಕ್ ಬ್ಯಾಕ್ ಹೋಗಿದೆ. ಹಿಂದಿನ ಸಚಿವರು, ಈಗಿನ ಸಚಿವರು ಇಬ್ಬರೂ ಇದರ ಹಿಂದೆ ಇದ್ದಾರೆ’ ಎಂದು ಆರೋಪಿಸಿ ಅವರು, ‘ಈ ಬಗ್ಗೆ ಸರಿಯಾಗಿ ತನಿಖೆ ನಡೆದರೆ ಇನ್ನೂ ಎರಡು ವಿಕೆಟ್ ಬೀಳಲಿದೆ’ ಎಂದರು.

‘545 ಪಿಎಸ್ಐ ಹುದ್ದೆಗೆ ನಡೆದ ನೇಮಕಾತಿ ಪರೀಕ್ಷೆಯಲ್ಲೂ ಅವ್ಯವಹಾರ ಆಗಿದೆ. ಈ ಬಗ್ಗೆ ಅಭ್ಯರ್ಥಿಗಳೇ ದೂರು ನೀಡಿದ್ದಾರೆ. ಬಿಜೆಪಿಯ ಕಾರ್ಯದರ್ಶಿಯ ಶಾಲೆಯಲ್ಲಿ ಪಿಎಸ್ಐ ಪರೀಕ್ಷೆಯ ಪತ್ರಿಕೆ ಸೋರಿಕೆ ಆಗಿದೆ. ಆದರೆ, ಗೃಹ ಸಚಿವರು ಯಾವುದೇ ಅವ್ಯವಹಾರ ನಡೆದಿಲ್ಲ ಎಂದಿದ್ದಾರೆ. ಒಬ್ಬ ಅಭ್ಯರ್ಥಿಯಿಂದ ₹ 70 ಲಕ್ಷದಿಂದ ₹ 80 ಲಕ್ಷ ಲಂಚ ಪಡೆದು ಆಯ್ಕೆ ಮಾಡಲಾಗಿದೆ. ಅಧಿಕಾರಿಗಳು, ಗೃಹ ಸಚಿವರು ಇದರ ಹಿಂದೆ ಇದ್ದಾರೆ’ ಎಂದು ಪ್ರಿಯಾಂಕ್ ಖರ್ಗೆ ಅವರು ದೂರಿದರು.

ದಾಖಲೆಗಳಿದ್ದರೆ ತಕ್ಷಣ ಬಿಡುಗಡೆ ಮಾಡಿ: ರಮೇಶಗೆ ಲಕ್ಷ್ಮಿ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸಿ.ಡಿ. ಪ್ರಕರಣದ ಹಿಂದೆ ಯಾರಿದ್ದಾರಂತೆ?. ಅದನ್ನು ಮೊದಲು ಬಹಿರಂಗಪಡಿಸಲಿ. ಏನಾದರೂ ದಾಖಲೆಗಳಿದ್ದರೆ ಜನರನ್ನು ಕಾಯಿಸುವುದು ಬೇಡ. ತಕ್ಷಣವೇ ಬಿಡುಗಡೆ ಮಾಡಬೇಕು. ಬೇಜವಾಬ್ದಾರಿ ಹೇಳಿಕೆ ನೀಡಿ ಗೊಂದಲ ಸೃಷ್ಟಿಸಬಾರದು’ ಎಂದು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ತಿರುಗೇಟು ನೀಡಿದರು.

‘ನನ್ನ ವಿರುದ್ಧದ ಸಿಡಿ ಹಾಗೂ ಸಂತೋಷ್ ಆತ್ಮಹತ್ಯೆ ಪ್ರಕರಣದ ಹಿಂದೆ ಷಡ್ಯಂತ್ರ ಮಾಡಿರುವ ಮಹಾನಾಯಕನ ಬಗ್ಗೆ ಶೀಘ್ರವೇ ವಿವರ ನೀಡುತ್ತೇನೆ’ ಎಂಬ ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆಗೆ ಅವರು ಶುಕ್ರವಾರ ಪ್ರತಿಕ್ರಿಯಿಸಿದರು.

ತಾಲ್ಲೂಕಿನ ಪಂತಬಾಳೇಕುಂದ್ರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ‘ಕಾರ್ಯಾದೇಶ ಪತ್ರವಿಲ್ಲದೆ, ಆಡಳಿತಾತ್ಮಕ–ತಾಂತ್ರಿಕ ಅನುಮೋದನೆ ಇಲ್ಲದೆ, ಟೆಂಡರ್ ಆಗದೆ ಗುತ್ತಿಗೆದಾರ ಸಂತೋಷ್ ಪಾಟೀಲ ಅವರಿಂದ ಕೆಲಸ ಮಾಡಿಸಿದವ ರಾರು? ಯಾರ ಕುಮ್ಮಕ್ಕಿತ್ತು, ಒತ್ತಡವಿತ್ತು. ₹ 4 ಕೋಟಿ ಕೆಲಸವನ್ನು ಯಾರ ಆಶ್ವಾಸನೆ ಮೇಲೆ ಮಾಡಿದ್ದಾರೆ? ನಾನು ಕ್ಷೇತ್ರದ ಶಾಸಕಿ ಇರಬಹುದು. ಆದರೆ, ಅಕ್ಕನಿಗೆ ಸಹಾಯ ಆಗಲೆಂದೇನೂ ಅವರು ಕೆಲಸ ಕೈಗೊಂಡಿಲ್ಲ. ಊರಿನ ಅಭಿವೃದ್ಧಿಗೆ, ಪಕ್ಷಕ್ಕೆ ಮತ್ತು ಆಗಿನ ಜಿಲ್ಲಾ ಉಸ್ತುವಾರಿ ಸಚಿವ (ರಮೇಶ ಜಾರಕಿಹೊಳಿ)ರಿಗೆ ಹೆಸರು ಬರಲೆಂದು ಮಾಡಿದ್ದಾರೆ’ ಎಂದರು.

‘ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದರಿಂದ ಮತ್ತು ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ರಮೇಶ ಅವರಿಗೆ ಗೊತ್ತಿದ್ದೇ ಸಂತೋಷ್ ಕೆಲಸ ಮಾಡಿದ್ದಾರೆ. ಈಗ ಅವರಿಬ್ಬರೂ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾವು ಹೋರಾಡುತ್ತಿದ್ದೇವೆ’ ಎಂದು ಲಕ್ಷ್ಮಿ ಹೆಬ್ಬಾಳಕರ ಅವರು ಹೇಳಿದರು.

‘ಇವೆಲ್ಲ ಅಕ್ರಮಗಳು, ಟೀವಿ ಮುಂದೆ ಹೋಗಬೇಡ ಎಂದಿದ್ದೆ’

ಪ್ರಜಾವಾಣಿ ವಾರ್ತೆ



ರಮೇಶ ಜಾರಕಿಹೊಳಿ

ಬೆಳಗಾವಿ: ‘ಕೆಲವು ದಿನಗಳ ಹಿಂದೆ ಸಂತೋಷ್ ಪಾಟೀಲ ನನಗೆ ಕರೆ ಮಾಡಿದ್ದ. ಇವೆಲ್ಲವೂ ಅಕ್ರಮ ಕೆಲಸಗಳು. ಟೀವಿಗಳ ಮುಂದೆ ಹೋಗಬೇಡ. ಆಗುವುದೂ ಆಗುವುದಿಲ್ಲ. ನಿನ್ನ ದುಡ್ಡು ಸಿಲುಕಿದ್ದು ಅದನ್ನು ಪಡೆದುಕೊಳ್ಳುವುದರತ್ತ ನೋಡಿಕೋ ಎಂದು ಆತನಿಗೆ ತಿಳಿಸಿದ್ದೆ’ ಎಂದು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಂತೋಷ್ ಪಾಟೀಲ ಅವರ ಸ್ವಗ್ರಾಮ ತಾಲ್ಲೂಕಿನ ಬಡಸ ಕೆ.ಎಚ್.ನಲ್ಲಿ ಸಂತೋಷ್ ಬಂಧುಗಳು ಹಾಗೂ ಬೆಂಬಲಿಗರ ಎದುರು ಗುರುವಾರ ಅವರು ಮಾತನಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕಾರ್ಯಾದೇಶವಿಲ್ಲದೆ ₹10 ಕೋಟಿ ಕೆಲಸ: ‘ನಾನೂ ಗೋಕಾಕದಲ್ಲಿ ಕಾರ್ಯಾದೇಶವಿಲ್ಲದೆ ಹತ್ತತ್ತು ಕೋಟಿ ರೂಪಾಯಿ (₹10 ಕೋಟಿ) ಕೆಲಸ ಮಾಡಿಸ್ತೀನಿ. ಕೆಳಗಿನಿಂದ ಮೇಲಿನವರೆಗೂ ಹೋಗಬೇಕಾಗುತ್ತದೆ. ನಂತರ ಬಿಲ್ ಕೊಡುತ್ತಾರೆ. ಸಂತೋಷ್ ತನ್ನ ಮನೆ ಕೆಲಸವನ್ನೇನೂ ಮಾಡಿಕೊಂಡಿಲ್ಲ. ಜಾತ್ರೆ ವೇಳೆ ಗ್ರಾಮದ ಕೆಲಸ ಮಾಡಿದ್ದಾನೆ’ ಎಂದು ಅವರು ತಿಳಿಸಿದ್ದಾರೆ.

‘ಇಲಾಖೆಗಳ ಕಾರ್ಯಾದೇಶ ಪತ್ರ ಸಿಗುವ ಮೊದಲೇ ಅಥವಾ ಟೆಂಡರ್ ಕರೆಯದೆ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುವ ವ್ಯವಸ್ಥೆ ಹೊಸದೇನಲ್ಲ. ಬಹುತೇಕ ಕ್ಷೇತ್ರಗಳಲ್ಲಿ ಹೀಗೆಯೇ ನಡೆಯುತ್ತದೆ’ ಎಂದಿದ್ದಾರೆ.

‘ಬೇಗ ಮುಗಿಸಿ ಚಲೋ ಮಾಡಿದ್ರಿ...’

‘ಬೆಳಿಗ್ಗೆ 11ರ ನಂತರ ಅಂತ್ಯಕ್ರಿಯೆ ಎಂದುಕೊಂಡಿದ್ದೆ. ಬೇಗ ಮುಗಿಸಿ ಚಲೋ ಮಾಡಿದ್ರಿ. ಮೃತದೇಹ ಇಟ್ಟುಕೊಂಡರೆ ಏನೂ ಪ್ರಯೋಜನ ಆಗೋಲ್ಲ. ಅವರು (ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸೇರಿದಂತೆ ಕಾಂಗ್ರೆಸ್‌ನವರು) ಎರಡು ದಿನ ಬರ್ತಾರೆ ಹೋಗ್ತಾರೆ. ಆಮೇಲೆ ನೀವೇ ಅನುಭವಿಸಬೇಕಾಗುತ್ತದೆ. ಎಲ್ಲವನ್ನೂ ಸರಿಪಡಿಸುತ್ತೇನೆ’ ಎಂದು ರಮೇಶ ಜಾರಕಿಹೊಳಿ ಬಂಧುಗಳಿಗೆ ಭರವಸೆ ನೀಡಿದ್ದಾರೆ.

‘ತಪ್ಪು ಮಾಡಿದ್ದರೆ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಬಂಧಿಸಲಿ. ಆದರೆ, ಆ ಆತ್ಮಹತ್ಯೆ ನಿರ್ಧಾರಕ್ಕೆ ಆತ ಬಂದಿದ್ದೇಕೆ ಎನ್ನುವುದೇ ಪ್ರಶ್ನೆ. ವಾರದ ಹಿಂದೆ, ಹಿಂಡಲಗಾ ಗ್ರಾಮ ಪಂಚಾಯ್ತಿ ಅಧ್ಯಕ್ಷ ನಾಗೇಶ ಮನ್ನೋಳಕರ ಅವರಿಗೆ ಫೋನ್ ಮಾಡಿದ್ದನಂತೆ. ಸಾಹುಕಾರ್ (ನಾನು) ಮಂತ್ರಿ ಆಗುತ್ತಾರೆ. ಆಗ ಎಲ್ಲವೂ ಸರಿಯಾಗಲಿದೆ. ನನಗೇನು ಭಯ ಎಂದು ಖುಷಿಯಿಂದ ಹೇಳಿದ್ದನಂತೆ. ಅವನ ಸಾವು ಪ್ರಶ್ನೆಯಾಗಿಯೇ ಉಳಿದಿದೆ. ಪ್ರಕರಣದ ಸಮಗ್ರ ತನಿಖೆ ಆಗಬೇಕು’ ಎಂದು ಅವರು ಹೇಳಿರುವುದು ವಿಡಿಯೊದಲ್ಲಿದೆ.

‘ಅವ ಯಾವ ಮಹಾನಾಯಕ?’

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ರಮೇಶ ಜಾರಕಿಹೊಳಿ ಅವರ ರಾಜೀನಾಮೆ ಹಿಂದೆ ಯಾರೆಲ್ಲ ಇದ್ದರು ಎನ್ನುವುದು ನಾಡಿನ ಜನತೆಗೆ ತಿಳಿದಿದೆ. ಗುತ್ತಿಗೆದಾರ ಸಂತೋಷ್ ಪಾಟೀಲ ಪ್ರಕರಣದಲ್ಲಿಯೂ ಮಹಾನಾಯಕನ ಕೈವಾಡ ಇದೆ ಎಂದು ರಮೇಶ ಜಾರಕಿಹೊಳಿ ಹೇಳುತ್ತಿದ್ದಾರೆ. ಅವ ಯಾವ ಮಹಾನಾಯಕ’ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ಪ್ರಶ್ನಿಸಿದರು.

‘ಮಹಾ ನಾಯಕ ಎಂದು ಕರೆಯಬಾರದು. ಮಹಾ ನಾಯಕರು ಇಂತಹ ಚಿಲ್ಲರೆ ಕೆಲಸಗಳನ್ನು ಮಾಡುವುದಿಲ್ಲ. ಆ ಮಹಾ ನಾಯಕ ಯಾರು ಎಂಬ ಬಗ್ಗೆ ನಮಗೂ ಗೊತ್ತಿಲ್ಲ’ ಎಂದು ಜಿಲ್ಲೆಯ ಹಿರೇಬೊಮ್ಮನಾಳ ಗ್ರಾಮದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

‘ಬಿಜೆಪಿ ಕಾರ್ಯಕಾರಣಿ ಸಭೆಗೂ ಈಶ್ವರಪ್ಪ ರಾಜೀನಾಮೆಗೂ ಸಂಬಂಧವಿಲ್ಲ. ಸರ್ಕಾರವನ್ನು ವಿಸರ್ಜನೆ ಮಾಡುವಂತೆ ಕಾಂಗ್ರೆಸ್ ಒತ್ತಾಯಿಸುತ್ತಿದೆ. ಹಾಗೆ ಹೇಳಲು ಅವರಿಗೆ ನೈತಿಕತೆಯೇ ಇಲ್ಲ. ದೇಶದಾದ್ಯಂತ ಕಾಂಗ್ರೆಸ್ ಅನ್ನು ಜನತೆ ಈಗಾಗಲೇ ವಿಸರ್ಜನೆ ಮಾಡಿದ್ದಾರೆ’ ಎಂದು ಲೇವಡಿ ಮಾಡಿದರು.

ಈಶ್ವರಪ್ಪ ವಿರುದ್ಧ ಕಾಂಗ್ರೆಸ್ ಹೋರಾಟದ ಹಿಂದೆ ರಾಜಕೀಯ: ಕುಮಾರಸ್ವಾಮಿ

ಆಲಮಟ್ಟಿ: ‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆಯಲ್ಲಿ ಕಾಂಗ್ರೆಸ್ ಒಣ ರಾಜಕೀಯ ಮಾಡುತ್ತಿದೆ. ಕಾಂಗ್ರೆಸ್ ಗೆ ಮಾಡಲು ಬೇರೆ ಕೆಲಸವಿಲ್ಲ, ಅದಕ್ಕಾಗಿ ಇದೇ ವಿಷಯವನ್ನು ದೊಡ್ಡದಾಗಿ ಮಾಡುತ್ತಿದೆ’ ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಆಲಮಟ್ಟಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಈಶ್ವರಪ್ಪ ಒಬ್ಬರೇ ಶೇ 40 ಕಮಿಷನ್ ಕೇಳಿದ್ದಾರೆ ಎಂದು ಸಂತೋಷ್ ಆರೋಪಿಸಿಲ್ಲ. ಈಶ್ವರಪ್ಪ ರಾಜೀನಾಮೆ ಕೊಟ್ಟರೂ ಕಾಂಗ್ರೆಸ್‌ನವರು ಈಗ ಅವರ ಬಂಧನ ಮಾಡಬೇಕು ಅಂತ ಹೇಳ್ತಿದ್ದಾರೆ. ಇದು ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತೆ. ಕಾಂಗ್ರೆಸ್ ಏನು ಮಾಡಿದ್ರು ಅನ್ನೋದು ಗೊತ್ತಿದೆ. ಕಾಂಗ್ರೆಸ್ ಒಂದು ನಯಾ ಪೈಸೆ ಕಮೀಷನ್ ಪಡೆಯದೆ ಕೆಲಸ ಮಾಡಿದೆಯಾ? ಇದು ಕಾಂಗ್ರೆಸ್ ರಾಜಕೀಯ’ ಎಂದು ಲೇವಡಿ ಮಾಡಿದರು.

ಕೇಂದ್ರೀಯ ವಿದ್ಯಾಲಯ ಪ್ರವೇಶ: ‘ವಿವೇಚನಾ ಕೋಟಾ’ಕ್ಕೆ ತಡೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿ ಸಂಸದರಿಗಿದ್ದ ಕೋಟಾ ಸೇರಿದಂತೆ ಎಲ್ಲ ಬಗೆಯ ‘ವಿವೇಚನಾ ಕೋಟಾ’ಗಳನ್ನು ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ತಡೆಹಿಡಿದಿದೆ.

ಈ ಸಂಬಂಧ ಎಲ್ಲ ಕೇಂದ್ರೀಯ ವಿದ್ಯಾಲಯಗಳಿಗೆ ಪತ್ರ ಬರೆದಿರುವ ಕೆವಿಎಸ್, ‘ಕೇಂದ್ರ ಕಚೇರಿಯ ನಿರ್ದೇಶನದಂತೆ, ಮುಂದಿನ ಆದೇಶದವರೆಗೆ ವಿಶೇಷ ನಿಯಮಗಳಡಿ ಯಾರಿಗೂ ಪ್ರವೇಶ ನೀಡಬಾರದು’ ಎಂದು ಸೂಚಿಸಿದೆ. 2022–23ನೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಜೂನ್‌ವರೆಗೆ ಅವಕಾಶ ಇದೆ.

ಬಿಜೆಪಿ ಸಂಸದ ಸುಶೀಲ್ ಮೋದಿ ಅವರು ಕೇಂದ್ರೀಯ ವಿದ್ಯಾಲಯ ಸಂಘಟನೆಯ ಈ ನಿರ್ಧಾರವನ್ನು ಸ್ವಾಗತಿಸಿ ಟ್ವೀಟ್ ಮಾಡಿದ್ದಾರೆ. ‘ಇಂಥ ಕ್ರಮದಿಂದ ದೇಶದಾದ್ಯಂತ ಕೇಂದ್ರೀಯ ವಿದ್ಯಾಲಯಗಳಲ್ಲಿನ 30 ಸಾವಿರ ಸೀಟುಗಳು ಪ್ರವೇಶಕ್ಕೆ ಮುಕ್ತವಾಗಲಿವೆ’ ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ವಿಶೇಷ ನಿಯಮಗಳ ಪ್ರಕಾರ ಲೋಕಸಭಾ ಸದಸ್ಯರಿಗೆ ‘ವಿವೇಚನಾ ಕೋಟಾ’ ಇದ್ದು, ಇದರಡಿ 10 ಮಕ್ಕಳಿಗೆ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರವೇಶ ನೀಡುವಂತೆ ಅವರು ಶಿಫಾರಸು ಮಾಡಬಹುದಾಗಿದೆ. ಜಿಲ್ಲಾಧಿಕಾರಿಗೂ ಈ ‘ವಿವೇಚನಾ ಕೋಟಾ’ ಸೌಲಭ್ಯ ಇದ್ದು, ಅವರು ಇಬ್ಬರು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಂತೆ ಶಿಫಾರಸು ಮಾಡಬಹುದು.

2021–22ನೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಕೇಂದ್ರ ಶಿಕ್ಷಣ ಸಚಿವರಿಗಿದ್ದ ವಿವೇಚನಾ ಕೋಟಾವನ್ನು ಕೇಂದ್ರ ಸರ್ಕಾರ ಕಳೆದ ವರ್ಷ ರದ್ದು ಮಾಡಿತ್ತು. ದೇಶದಲ್ಲಿ 1,200 ಕೇಂದ್ರೀಯ ವಿದ್ಯಾಲಯಗಳಿದ್ದು, 14.35 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಇವುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

‘ಹಿಟ್ ಅಂಡ್ ರನ್ ಕೆಲಸ ಬಿಟ್ಟು ದಾಖಲೆ ಕೊಡಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗುತ್ತಿಗೆದಾರರ ಸಂಘಕ್ಕೆ ಕಾರಜೋಳ ತಾಕೀತು
- ಅನಗತ್ಯ ತೇಜೋವಧೆ ಮಾಡುವುದು ಬಿಡಿ– ಸಲಹೆ

ಬಾಗಲಕೋಟೆ: ‘ಪರ್ಸೆಂಟೇಜ್ ವಿಚಾರದಲ್ಲಿ ಹಿಟ್ ಅಂಡ್ ರನ್ ಕೆಲಸ ಬಿಟ್ಟು ಯಾರು ಲಂಚ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ದಾಖಲೆಗಳನ್ನು ಕೊಡಿ. ಆ ಬಗ್ಗೆ ಸೂಕ್ತ ಸಂಸ್ಥೆಯಿಂದ ತನಿಖೆ ಮಾಡಿಸೋಣ’ ಎಂದು ರಾಜ್ಯ ಗುತ್ತಿಗೆದಾರರ ಸಂಘದವರಿಗೆ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಾಕೀತು ಮಾಡಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಇಲಾಖೆಯ ಕಾರ್ಯಭಾರ ವಹಿಸಿಕೊಂಡ ನಂತರ 8,723 ಮಂದಿ ಗುತ್ತಿಗೆದಾರರಿಗೆ ₹10,210 ಕೋಟಿ ಮೊತ್ತ ಬಿಡುಗಡೆ ಮಾಡಿಸಿದ್ದೇನೆ. ಇದರಲ್ಲಿ ಯಾವುದೇ ಪರ್ಸೆಂಟೇಜ್ ವ್ಯವಹಾರ ನಡೆದಿಲ್ಲ. ಎಲ್ಲವನ್ನೂ ಪಾರದರ್ಶಕವಾಗಿ ನಡೆಸಿದ ಹೆಮ್ಮೆ ಇದೆ. ಈ ಅವಧಿಯಲ್ಲಿ ಯಾವುದೇ ಟೆಂಡರ್ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸರ್ಕಾರಿ ಕಾಮಗಾರಿಗಳಲ್ಲಿ ಹಣ ಮಂಜೂರು ಮಾಡಲು ಮೊದಲು ಶೇ 15ರಿಂದ ಶೇ 20ರಷ್ಟು ಕಮಿಷನ್ ಇತ್ತು. ಅದೀಗ ಶೇ 40ಕ್ಕೆ ಹೆಚ್ಚಿದೆ ಎಂಬುದು ಗುತ್ತಿಗೆದಾರರ ಸಂಘದವರ ಆರೋಪ. ಹೀಗೆ ಅನಗತ್ಯವಾಗಿ ತೇಜೋವಧೆ ಮಾಡುವುದು ಬಿಟ್ಟು ದಾಖಲೆಗಳ ಬಿಡುಗಡೆ ಮಾಡಲಿ’ ಎಂದು ಆಗ್ರಹಿಸಿದರು.

‘ನರಿ ತೋಟದಲ್ಲಿ ಹೊಟ್ಟೆ ತುಂಬ ಮೇಯ್ದು ನಂತರ ರಸ್ತೆಗೆ ಬಂದು ಊಳಿಟ್ಟಿತಂತೆ. ಇದರಿಂದ ಅದರೊಟ್ಟಿಗೆ ಮೇಯುತ್ತಿದ್ದ ಉಳಿದ ನರಿಗಳ ಹೊಟ್ಟೆಗೆ ಕಲ್ಲು ಬಿದ್ದಂತಾಯಿತಂತೆ’ ಎಂದು ಕಾರಜೋಳ ಹೇಳಿದರು.

‘ಸಂಘದ ಮುಖಂಡರು ಹಿರಿಯರು ಇದ್ದಾರೆ. ಅವರ ಬಗ್ಗೆ ಕೆಟ್ಟದ್ದಾಗಿ ಮಾತಾಡೊಲ್ಲ’ ಎಂದೂ ಅವರು ಹೇಳಿದರು.

ಜಿಲ್ಲಾ ನ್ಯಾಯಾಧೀಶರಿಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಮಣ ಕರೆ

‘ವಿವಾದದ ಮಾನವೀಯ ಮುಖ ಮರೆಯದಿರಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಫಿರ್ಯಾದುದಾರರಿಗೆ ಹಿತಕರವಾದ ವಾತಾವರಣ ಸೃಷ್ಟಿಸಬೇಕು ಮತ್ತು ಮಾನವೀಯವಾಗಿರಬೇಕು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಜಿಲ್ಲಾ ನ್ಯಾಯಾಧೀಶರಿಗೆ ಶುಕ್ರವಾರ ಕರೆ ಕೊಟ್ಟಿದ್ದಾರೆ.

‘ವಿವಾದದ ಮಾನವೀಯ ಮುಖವನ್ನು ಸದಾ ನೆನಪಿನಲ್ಲಿ ಇರಿಸಿಕೊಳ್ಳಿ. ಕಾನೂನು, ಸಮಾನತೆಯಿಂದ ದೂರ ಇರುವುದು ಸಾಧ್ಯವಿಲ್ಲ. ವಿವೇಚನಾಧಿಕಾರ ಬಳಸುವ ಅವಕಾಶ ಸಿಕ್ಕಾಗಲೆಲ್ಲ ನ್ಯಾಯಾಂಗದ ಮಾನವೀಯ ಮುಖವನ್ನು ಮುನ್ನೆಲೆಗೆ ತರುವುದು ಮುಖ್ಯ. ನ್ಯಾಯಾಲಯದ ಪ್ರಕ್ರಿಯೆಯು ಎಲ್ಲರಿಗೂ ಎಟಕುವಂತೆ ಮಾಡಿ. ಫಿರ್ಯಾದುದಾರರ ಸಾಮಾಜಿಕ–ಆರ್ಥಿಕ ಹಿನ್ನೆಲೆ, ಭಾಷೆ, ಶಿಕ್ಷಣ ಇತ್ಯಾದಿಯನ್ನು ಗಣನೆಗೆ ತೆಗೆದುಕೊಳ್ಳಿ. ಅದಕ್ಕೆ ಅನುಗುಣವಾಗಿ ಅವರೊಂದಿಗೆ ವ್ಯವಹರಿಸಿ’ ಎಂದು ರಮಣ ಸಲಹೆ ನೀಡಿದ್ದಾರೆ.

‘ದಾಖಲೆ ಕುರಿತು ಸ್ವತಂತ್ರವಾಗಿ ಚಿಂತಿಸಿ’



ಎನ್.ವಿ. ರಮಣ

ಸಾಂವಿಧಾನಿಕ ವ್ಯವಸ್ಥೆಯಲ್ಲಿ ಜಿಲ್ಲಾ ನ್ಯಾಯಾಧೀಶರು ವಹಿಸುವ ಪಾತ್ರವು ಬಹಳ ಮಹತ್ವದ್ದಾಗಿದೆ. ಜಿಲ್ಲಾ ನ್ಯಾಯಾಧೀಶರು ತಮಗೆ ಸಲ್ಲಿಕೆಯಾಗಿರುವ ದಾಖಲೆಗಳ ಬಗ್ಗೆ ಸ್ವತಂತ್ರವಾಗಿ ಚಿಂತಿಸಬೇಕು. ಅಪರಾಧ ದಂಡ ಸಂಹಿತೆಯ ಅನುಸಾರ ಈಡೇರಿಸಬೇಕಿರುವ ಅಂಶಗಳು ಕೇವಲ ಶಿಷ್ಟಾಚಾರ ಅಲ್ಲ. ಅದು ಕಾರ್ಯಾಂಗದ ಚಟುವಟಿಕೆಯ ಮೇಲೆ ಇರುವ ನಿಯಂತ್ರಣಗಳಾಗಿವೆ ಮತ್ತು ಆರೋಪಿಯು ಹೊಂದಿರುವ ಹಕ್ಕುಗಳ ಪ್ರತಿನಿಧಿಯಾಗಿದೆ ಎಂದು ರಮಣ ವಿವರಿಸಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದ ತೆಲಂಗಾಣ ರಾಜ್ಯ ನ್ಯಾಯಾಂಗದ ಅಧಿಕಾರಿಗಳ ಸಮಾವೇಶವನ್ನು ಉದ್ಘಾಟಿಸಿ ರಮಣ ಮಾತನಾಡಿದ್ದಾರೆ. ಜಿಲ್ಲಾ ನ್ಯಾಯಾಂಗ ವ್ಯವಸ್ಥೆಯು ನ್ಯಾಯಾಂಗದ ತಳಹದಿಯಾಗಿದೆ. ತಳಹದಿಯು ಗಟ್ಟಿಯಾಗಿದ್ದಾಗ ಮಾತ್ರ ವ್ಯವಸ್ಥೆಯು ಬೆಳೆಯುತ್ತದೆ. ಈ ದಿಸೆಯಲ್ಲಿ ಎಲ್ಲರೂ ಕೆಲಸ ಮಾಡಬೇಕು ಎಂದು ಅವರು ಹೇಳಿದ್ದಾರೆ.

ಮುಖ್ಯ ನ್ಯಾಯಮೂರ್ತಿಗಳು ಮತ್ತು ಮುಖ್ಯಮಂತ್ರಿಗಳ ಜಂಟಿ ಸಮಾವೇಶ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಈ ತಿಂಗಳ ಕೊನೆಗೆ ಇದು ನಡೆಯಲಿದೆ. ನ್ಯಾಯಾಲಯದ ಮೂಲಸೌಕರ್ಯ ಮತ್ತು ಇತರ ಸಮಸ್ಯೆಗಳ ಬಗ್ಗೆ ಈ ಸಮಾವೇಶದಲ್ಲಿ ಚರ್ಚೆ ಆಗಲಿದೆ ಎಂದರು.

ನ್ಯಾಯಾಧೀಶರ ಮೇಲೆ ನಡೆಯುವ ದೈಹಿಕ ಹಲ್ಲೆಗಳ ಕುರಿತೂ ಅವರು ಮಾತನಾಡಿದರು. ‘ಇಂತಹ ಘಟನೆಗಳು ನಡೆಯುವುದನ್ನು ತಡೆಯಲು ನನ್ನಿಂದಾದ ಎಲ್ಲವನ್ನೂ ಮಾಡಿದ್ದೇನೆ. ನ್ಯಾಯಾಲಯದ ಅಧಿಕಾರಿಗಳಿಗೆ ನ್ಯಾಯಾಲಯದ ಒಳಗೆ ಮತ್ತು ಹೊರಗೆ ಭದ್ರತೆಯನ್ನು ಉತ್ತಮಪಡಿಸುವುದಕ್ಕೆ ಅಗತ್ಯವಾದ ನಿರ್ದೇಶನಗಳನ್ನು ನೀಡಿದ್ದೇನೆ’ ಎಂದರು.

ನ್ಯಾಯಾಧೀಶರನ್ನು ಅವರು ಕೊಟ್ಟ ತೀರ್ಪಿನ ಗುಣಮಟ್ಟದ ಆಧಾರದಲ್ಲಿ ಮಾತ್ರ ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಅವರ ವ್ಯಕ್ತಿತ್ವ, ಪಾರದರ್ಶಕತೆ, ಪ್ರಶ್ನಾತೀತ ಬದ್ಧತೆಯೂ ಅಷ್ಟೇ ಮುಖ್ಯ ಎಂದು ರಮಣ ಪ್ರತಿಪಾದಿಸಿದ್ದಾರೆ.

‘ಸಾಂಕ್ರಾಮಿಕದ ಭೀತಿಯಿಂದ ನೀವೆಲ್ಲರೂ ಹೊರಗೆ ಬರಬೇಕು. ನ್ಯಾಯಾಲಯದ ನಿಗದಿತ ಅವಧಿಯಲ್ಲದೆ, ಇನ್ನೂ ಹೆಚ್ಚಿನ ಸಮಯವನ್ನು ಕೋರ್ಟ್‌ಗೆ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿ’ ಎಂದು ಅವರು ಹೇಳಿದರು.

ಕಕ್ಷಿದಾರರು ಎದುರಿಸುವ ವಿವಿಧ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಿಕೊಳ್ಳಿ, ಎಲ್ಲರನ್ನೂ ಗೌರವದಿಂದ ನೋಡಿ. ಕಿರಿಯರು, ದುರ್ಬಲ ವರ್ಗಗಳ ಜನರು, ಅಂಗವಿಕಲರು ಮುಂತಾದವರ ಭಿನ್ನ ಅಗತ್ಯಗಳನ್ನು ಅರಿತುಕೊಳ್ಳಿ ಎಂದರು.

ನಿಧನ ವಾರ್ತೆ

ಡಾ.ಬೈದ್ಯನಾಥ್ ಚಕ್ರವರ್ತಿ

ಕೋಲ್ಕತ್ತ (ಪಿಟಿಐ): ಪ್ರನಾಳ ಶಿಶು (ಐವಿಎಫ್) ಕ್ಷೇತ್ರದಲ್ಲಿ ಭಾರತದಲ್ಲಿ ಆರಂಭಿಕವಾಗಿ ಸಂಶೋಧನೆಗೆ ಚಾಲನೆ ನೀಡಿದ್ದ ಡಾ.ಬೈದ್ಯನಾಥ್ ಚಕ್ರವರ್ತಿ (94) ಶುಕ್ರವಾರ ನಿಧನರಾದರು.

ಮಾರ್ಚ್ ತಿಂಗಳಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದರು. ನಂತರ ಅವರ ಆರೋಗ್ಯ ಹದಗೆಟ್ಟಿದ್ದು, ಇಲ್ಲಿನ ಸಾಲ್ಟ್ ಲೇಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಆಸ್ಪತ್ರೆಯ ಹೇಳಿಕೆ ತಿಳಿಸಿದೆ.

ಪ್ರನಾಳ ಶಿಶು ಕುರಿತಂತೆ ಸಂಶೋಧನೆಗಾಗಿ 1986ರಲ್ಲಿ ಸಂತಾನೋತ್ಪತ್ತಿ ಚಿಕಿತ್ಸಾ ಕೇಂದ್ರ (ಐಆರ್‌ಎಂ) ಸ್ಥಾಪಿಸಿದ್ದರು.


2019ರಲ್ಲಿ ಇದನ್ನು ಐಸಿಎಂಆರ್‌ಗೆ ಹಸ್ತಾಂತರಿಸಿದ್ದರು. ಅದೇ ವರ್ಷ ಪಶ್ಚಿಮಬಂಗಾಳ ಸರ್ಕಾರ ಇವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿತ್ತು.

ಶನಿವಾರ, ಏಪ್ರಿಲ್ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 105 | ಪುಟ 24
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಹಿಳೆಯರಲ್ಲಿ 'ಏಕಾಂಗಿ ಪ್ರವಾಸ' ಎನ್ನುವುದು ಇತ್ತೀಚೆಗೆ ಟ್ರೆಂಡ್ ಆಗಿದೆ. ಪ್ರವಾಸದ ವೇಳೆ ಕೈಗೊಳ್ಳಬೇಕಾದ ಸಿದ್ಧತೆಗಳ ಕುರಿತು ಮಾಹಿತಿ ಇಲ್ಲಿದೆ...



ಚರ್ಚೆ
ವನ್ಯ ಮೃಗಗಳು ಸತ್ತಾಗ ಅವುಗಳನ್ನು ಸುಡುವುದು ಅಥವಾ ಹೂಳುವುದರ ಬದಲು ಹಾಗೆಯೇ ಕೊಳೆಯಲು ಬಿಡಬೇಕೇ? 6

ಟ್ವಿಟರ್ ಖರೀದಿ: ಪರಿಣತರ ಆತಂಕ 10

'ಫೋನ್ ಮೂಲಕ ವಂಚನೆ' 8

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹54,900 (ಬೆಂಗಳೂರು) ▲	₹71,300 (ಬೆಂಗಳೂರು) ▼

ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಇನ್ನಿಲ್ಲ



ಚಿಕ್ಕಬಳ್ಳಾಪುರ: ಪ್ರಜಾ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಹಾಗೂ ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ (70) ಶುಕ್ರವಾರ ಬಾಗೇಪಲ್ಲಿಯ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. 8

ನುಡಿ ನಮನ 8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬೆಂಬಲಿಗರ 150 ವಾಹನಗಳೊಂದಿಗೆ ಬೆಂಗಳೂರಿಗೆ ಬಂದ ಈಶ್ವರಪ್ಪ

ತಲೆದಂಡದಲ್ಲೂ ಶಕ್ತಿ ಪ್ರದರ್ಶನ


ಪ್ರಜಾವಾಣಿ ವಾರ್ತೆ

ಬೆಂಗಳೂರು/ಶಿವಮೊಗ್ಗ: ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ನೂರಾರು ವಾಹನಗಳಲ್ಲಿ ಬೆಂಬಲಿಗರೊಂದಿಗೆ ಶಿವಮೊಗ್ಗದಿಂದ ಬೆಂಗಳೂರಿಗೆ ಶುಕ್ರವಾರ ಬಂದು ಶಕ್ತಿ ಪ್ರದರ್ಶನದೊಂದಿಗೆ ರಾಜೀನಾಮೆ ಸಲ್ಲಿಸಿದರು.

ತಾವು ಮಾಡಿದ್ದ ಕಾಮಗಾರಿಗಳ ಬಾಕಿ ಬಿಲ್ ಮಂಜೂರಾತಿಗೆ ಈಶ್ವರಪ್ಪ ಶೇಕಡಾ 40ರಷ್ಟು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ಪ್ರಧಾನಿಗೆ ದೂರು ನೀಡಿದ್ದ ಸಂತೋಷ್, ಉಡುಪಿಯ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಮಂಗಳವಾರ ಬಹಿರಂಗವಾಗಿತ್ತು. ಈಶ್ವರಪ್ಪ ಮತ್ತು ಅವರ ಇಬ್ಬರು ಆಪ್ತರ ವಿರುದ್ಧ ಬುಧವಾರ ಎಫ್‌ಐಆರ್ ದಾಖಲಾಗಿತ್ತು. ಮೈಸೂರಿನಲ್ಲಿದ್ದ ಸಚಿವರನ್ನು ಸಂಪರ್ಕಿಸಿದ್ದ ಬಿಜೆಪಿ ವರಿಷ್ಠರು ರಾಜೀನಾಮೆ ನೀಡುವಂತೆ ಬುಧವಾರವೇ ಸೂಚಿಸಿದ್ದರು.

ವರಿಷ್ಠರ ಸೂಚನೆಗೆ ಮಣಿಯದ ಈಶ್ವರಪ್ಪ ಶಿವಮೊಗ್ಗಕ್ಕೆ ತೆರಳಿ, ಅಲ್ಲಿಯೇ ಬೀಡುಬಿಟ್ಟಿದ್ದರು. ಕಾಂಗ್ರೆಸ್ ಆರಂಭಿಸಿದ ಅಹೋರಾತ್ರಿ ಧರಣಿಯಿಂದ ಇಕ್ಕಟ್ಟಿಗೆ ಸಿಲುಕಿದ ಬಿಜೆಪಿ ವರಿಷ್ಠರು, ತಕ್ಷಣ ರಾಜೀನಾಮೆ ನೀಡುವಂತೆ ಗುರುವಾರ ಸೂಚಿಸಿದ್ದರು.

8ನೇ ಪುಟ ನೋಡಿ



ರಾಜೀನಾಮೆ ಸಲ್ಲಿಸಲು ಕಾರಿನಲ್ಲಿ ಬೆಂಗಳೂರಿಗೆ ಬಂದ ಸಚಿವ ಈಶ್ವರಪ್ಪ

ಮೊಮ್ಮಗನ ಮದುವೆಗೆ ಆಹ್ವಾನ

ಈಶ್ವರಪ್ಪ ಅವರ ಮೊಮ್ಮಗ ಪೃಥ್ವಿರಾಜ್ ಮದುವೆ ಇದೇ 21ರಂದು ಶಿವಮೊಗ್ಗದಲ್ಲಿ ನಡೆಯಲಿದೆ. ಈಶ್ವರಪ್ಪ ರಾಜೀನಾಮೆ ಪತ್ರದ ಜತೆಯಲ್ಲೇ ಮೊಮ್ಮಗನ ಮದುವೆಯ ಆಹ್ವಾನ ಪತ್ರಿಕೆಯನ್ನೂ ಮುಖ್ಯಮಂತ್ರಿಗೆ ನೀಡಿದರು.

'ಬಂಧನ ಅಧಿಕಾರಿಗಳ ವಿವೇಚನೆಗೆ'

ಹುಬ್ಬಳ್ಳಿ/ಗದಗ: 'ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಬಂಧಿಸಬೇಕೇ ಬೇಡವೇ ಎಂಬುದನ್ನು ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳು ತೀರ್ಮಾನಿಸುತ್ತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿದ ಅವರು, 'ಈಗಾಗಲೇ ಈಶ್ವರಪ್ಪ ಅವರೊಂದಿಗೆ ಮಾತನಾಡಿದ್ದೇನೆ. ತಾವು ನಿರಪರಾಧಿಯಾಗಿದ್ದು, ಆದಷ್ಟು ಬೇಗನೆ ತನಿಖೆ ಮಾಡಿದರೆ ಆರೋಪದಿಂದ ಮುಕ್ತನಾಗುತ್ತೇನೆ ಎಂದಿದ್ದಾರೆ. ಕಾರ್ಯಾದೇಶ ಇಲ್ಲದೆ ಸಂತೋಷ್ ಕಾಮಗಾರಿ ಮಾಡಿದ್ದಾರೆ. ಇವೆಲ್ಲವನ್ನೂ ನೋಡಿದಾಗ, ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಿದಾಗ ಸತ್ಯಾಂಶ ಹೊರಬರಲಿದೆ' ಎಂದರು. ಈಶ್ವರಪ್ಪ ಅವರನ್ನು ಬಂಧಿಸಬೇಕು ಎಂಬ ಕಾಂಗ್ರೆಸ್ ನಾಯಕರ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಅವರು, 'ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಜೆ. ಜಾರ್ಜ್ ಅವರ ವಿರುದ್ಧ ಆರೋಪ ಮಾಡಿ, ಪೊಲೀಸ್ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು. ಆಗ ರಾಜ್ಯದ ಪೊಲೀಸರಾಗಲಿ ಅಥವಾ ಸಿಬಿಐನವರಾಗಲಿ ಜಾರ್ಜ್ ಅವರನ್ನು ಬಂಧಿಸಿರಲಿಲ್ಲ. ತನಿಖೆ ಆಧರಿಸಿ, ಈಶ್ವರಪ್ಪ ಅವರನ್ನು ಬಂಧಿಸಬೇಕೇ ಬೇಡವೇ ಎಂಬುದನ್ನು ಪೊಲೀಸರು ನಿರ್ಧರಿಸಲಿದ್ದಾರೆ. ಈ ವಿಷಯದಲ್ಲಿ ಕಾಂಗ್ರೆಸ್‌ನವರು ತನಿಖಾಧಿಕಾರಿ ಅಥವಾ ನ್ಯಾಯಾಧೀಶ ಆಗುವ ಅವಶ್ಯಕತೆ ಇಲ್ಲ. ತನಿಖೆಗೆ ಮುಕ್ತ ಅವಕಾಶ ನೀಡಬೇಕು' ಎಂದರು.

'ಕುತಂತ್ರ ಬಯಲಿಗೆಳೆಯಲು ಮನವಿ'

'ನನ್ನ ಮೇಲೆ ಆರೋಪ ಬಂದಿದೆ. ಈ ಕಾರಣಕ್ಕಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಬಿಜೆಪಿ ವರಿಷ್ಠರ ಜತೆ ಮಾತನಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಆದರೆ, ಸರ್ಕಾರ ಮತ್ತು ಸಂಘ ಪರಿವಾರಕ್ಕೆ ಮುಜುಗರ ಆಗಬಾರದು ಎಂಬ ಉದ್ದೇಶದಿಂದ ರಾಜೀನಾಮೆ ಸಲ್ಲಿಸಿದ್ದೇನೆ' ಎಂದು ರಾಜೀನಾಮೆ ಬಳಿಕ ಕೆ.ಎಸ್. ಈಶ್ವರಪ್ಪ ಹೇಳಿದರು. 'ಈಗ ನನ್ನ ಮೇಲೆ ಆರೋಪ ಬಂದಿದೆ. ಅದರಿಂದ ಮುಕ್ತನಾಗಬೇಕಿದೆ. ಈ ಪ್ರಕರಣದ ಹಿಂದೆ ಇರುವ ರಾಜಕೀಯ ಷಡ್ಯಂತ್ರವನ್ನು ಬಯಲಿಗೆಳೆಯಲು ಸಮಗ್ರವಾದ ತನಿಖೆ ನಡೆಸುವಂತೆಯೂ ಮನವಿ ಮಾಡಿದ್ದೇನೆ' ಎಂದರು.

ಕಾರ್ಯಕಾರಿಣಿಯ ಹುರುಪು ಕಸಿದ ಸಚಿವರ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಜಿಲ್ಲೆಯ ಕೇಂದ್ರಸ್ಥಾನ ಹೊಸಪೇಟೆಯಲ್ಲಿ ಶನಿವಾರದಿಂದ ಎರಡು ದಿನಗಳ ಕಾಲ ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿಗೆ, ರಾಜ್ಯ ಸರ್ಕಾರದ ವಿರುದ್ಧದ ಶೇ 40 ಕಮಿಷನ್ ಆರೋಪ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ರಾಜೀನಾಮೆ ಪ್ರಕರಣದ ಕರಿನೆರಳು ಆವರಿಸಿದೆ.

ವರ್ಷಕ್ಕೂ ಮೊದಲೇ ವಿಧಾನಸಭಾ ಚುನಾವಣೆಯ ತಯಾರಿಗೆ ಚಾಲನೆ ನೀಡುವ ಸಿದ್ಧತೆಯಲ್ಲಿ ಬಿಜೆಪಿ ನಾಯಕರು ಇದ್ದಾರೆ. ರಾಜ್ಯ ಕಾರ್ಯಕಾರಿಣಿಯ ಮೂಲಕವೇ ಚುನಾವಣಾ ಕಹಳೆ ಮೊಳಗಿಸಲು ಮುಂದಾಗಿದ್ದರು. ಆದರೆ, ಭ್ರಷ್ಟಾಚಾರದ ಆರೋಪ ಮಾಡಿದ್ದ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಿಂದ ಸಚಿವರೊಬ್ಬರು ರಾಜೀನಾಮೆ ಕೊಡುವಂತಾಗಿರುವುದು ಕಮಲ ಪಾಳಯದ ಹುರುಪು ಕಸಿದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಸೇರಿದಂತೆ 800 ಪ್ರತಿನಿಧಿಗಳು ಕಾರ್ಯಕಾರಿಣಿಯಲ್ಲಿ ಭಾಗವಹಿಸಲಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕೂಡ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳುವರು.

ನಡ್ಡಾ ಮತ್ತು ಸಂತೋಷ್ ಮೂಲಕ ಚುನಾವಣಾ ತಯಾರಿಯ ಸಂದೇಶ ರವಾನಿಸಲು ಬಿಜೆಪಿ ರಾಜ್ಯ ನಾಯಕರು ಯೋಜನೆ ರೂಪಿಸಿಕೊಂಡಿದ್ದಾರೆ.

8ನೇ ಪುಟ ನೋಡಿ

'ರಾಜ್ಯ ಸಚಿವ ಸಂಪುಟ ವಿಸ್ತರಣೆ ಶೀಘ್ರ'

ವಿಜಯಪುರ: 'ರಾಜ್ಯ ಸಚಿವ ಸಂಪುಟದ ವಿಸ್ತರಣೆ ಶೀಘ್ರವೇ ಆಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಅವರ ರಾಜೀನಾಮೆಯಿಂದ ತೆರವಾಗುವ ಸಚಿವ ಸ್ಥಾನ ಸೇರಿ ಒಟ್ಟು ಐದು ಸ್ಥಾನಗಳು ಖಾಲಿಯಿದ್ದು, ಅವುಗಳನ್ನು ಭರ್ತಿ ಮಾಡಲಾಗುವುದು' ಎಂದರು.

ಅಪಾಯಕ್ಕೆ ಸಿಲುಕಿದ ರ್‍ಯಾಫ್ಟಿಂಗ್ ಬೋಟ್: ಪ್ರವಾಸಿಗರ ರಕ್ಷಣೆ

ಪ್ರಜಾವಾಣಿ ವಾರ್ತೆ

ಜೋಯಿಡಾ (ಉತ್ತರ ಕನ್ನಡ): ತಾಲ್ಲೂಕಿನ ಗಣೇಶಗುಡಿ ಸಮೀಪ ಕಾಳಿ ನದಿಯಲ್ಲಿ ನಿಗದಿಗಿಂತ ಹೆಚ್ಚು ಜನರನ್ನು ಕರೆದೊಯ್ಯುತ್ತಿದ್ದ ರಿವರ್ ರ್‍ಯಾಫ್ಟಿಂಗ್ ಬೋಟ್ ಗುರುವಾರ ಸಂಜೆ ಅಪಾಯಕ್ಕೆ ಸಿಲುಕಿತು. ಕೂಡಲೇ ಅದರಲ್ಲಿದ್ದ ಮಕ್ಕಳೂ ಸೇರಿದಂತೆ 12 ಮಂದಿ ಪ್ರವಾಸಿಗರು ರಕ್ಷಿಸಲಾಯಿತು.

ರಭಸವಾಗಿ ಹರಿಯುತ್ತಿದ್ದ ನದಿಯಲ್ಲಿ ಹೆಚ್ಚು ಜನರನ್ನು ಕರೆದೊಯ್ಯುತ್ತಿದ್ದ ಬೋಟ್ ಅಕ್ಕಪಕ್ಕದಲ್ಲಿರುವ ಬಂಡೆಗಳಿಗೆ ಅಪ್ಪಳಿಸುತ್ತ ಸಾಗಿದೆ. ನೀರಿನ ಸುಳಿಗೆ ಸಿಲುಕುತ್ತಿದ್ದ ಬೋಟ್‌ಅನ್ನು ಸಮೀಪದಲ್ಲಿ ಇನ್ನೊಂದು ಬೋಟ್‌ನಲ್ಲಿದ್ದ ಪ್ರವಾಸಿಗರು ರಕ್ಷಿಸಿದ್ದಾರೆ. ನೀರಿನಲ್ಲಿ ಮುಳುಗುತ್ತಿದ್ದ ಮಕ್ಕಳನ್ನು ಮೇಲಕ್ಕೆತ್ತಿದ್ದಾರೆ.

'ಸಣ್ಣ ರ್‍ಯಾಫ್ಟಿಂಗ್ ಬೋಟ್‌ನಲ್ಲಿ ಗರಿಷ್ಠ 6 ರಿಂದ 8 ಜನರನ್ನು ಕರೆದೊಯ್ಯಬಹುದಾಗಿದೆ. ಆದರೆ 12 ಜನರನ್ನು ಬೋಟ್‌ನಲ್ಲಿ ಕರೆದೊಯ್ಯಲಾಗಿತ್ತು. ಇದೇ ಅವಘಡಕ್ಕೆ ಕಾರಣ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.



ಅಪಾಯಕ್ಕೆ ಸಿಲುಕಿದ್ದ ರ್‍ಯಾಫ್ಟಿಂಗ್ ಬೋಟ್‌ನಲ್ಲಿದ್ದ ಪ್ರವಾಸಿಗರು ಆತಂಕಗೊಂಡಿದ್ದರು

ಘಟನೆ ಹಿನ್ನೆಲೆಯಲ್ಲಿ ಜೋಯಿಡಾ ಸಿಪಿಐ ದಯಾನಂದ ಶೇಗುಣಸಿ ಶುಕ್ರವಾರ ಜಲಸಾಹಸ ಕ್ರೀಡೆ ಆಯೋಜಕರ ಸಭೆ ನಡೆಸಿದ್ದು ಸುರಕ್ಷತಾ ಕ್ರಮ ಅನುಸರಿಸುವಂತೆ ಸೂಚಿಸಿದ್ದಾರೆ. ಪ್ರತಿನಿತ್ಯ ಇಲ್ಲಿನ ಚಟುವಟಿಕೆಗಳ ಮೇಲೆ ನಿಗಾ ಇಡಲಾಗುವುದು ಎಂದಿದ್ದಾರೆ.

8ನೇ ಪುಟ ನೋಡಿ

ಕಾಮಾಕ್ಯದಲ್ಲಿ ಜೋರು ಮಳೆಗೆ ತುಂಬಿ ಹರಿದ ಕಾಲುವೆಗಳು

ಮಳೆ ಅಬ್ಬರ: ನಲುಗಿದ ನಿವಾಸಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಸರಿನ ಗದ್ದೆಗಳಾದ ರಸ್ತೆಗಳು. ದುರ್ನಾತ ಬರುವ ಮನೆಗಳು. ಕೆಸರಿನಲ್ಲಿದ್ದ ಬಟ್ಟೆ, ಅಡುಗೆ ಸಾಮಗ್ರಿ, ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳ ಅವಶೇಷಗಳ ಎದುರು ಕಣ್ಣೀರಿಟ್ಟ ನಿವಾಸಿಗಳು. ನೀರಿನಲ್ಲಿ ತೇಲಿಹೋದ ವಸ್ತುಗಳನ್ನು ನೆನೆದು ಕೈ ಚೆಲ್ಲಿ ಕುಳಿತಿದ್ದ ಜನ.

ಉತ್ತರಹಳ್ಳಿ, ಬನಶಂಕರಿ 3ನೇ ಹಂತದ ಕಾಮಾಕ್ಯ ಬಡಾವಣೆ ಹಾಗೂ ರಾಜರಾಜೇಶ್ವರಿನಗರದ ಕೆಲ ಪ್ರದೇಶಗಳಲ್ಲಿ ಶುಕ್ರವಾರ ಬೆಳಿಗ್ಗೆ ಕಂಡುಬಂದ ದೃಶ್ಯಗಳಿವು. ಗುರುವಾರ ರಾತ್ರಿ ಎರಡು ಗಂಟೆ ಸುರಿದ ಮಳೆಯಿಂದಾಗಿ 250ಕ್ಕೂ ಹೆಚ್ಚು ಮನೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿದ್ದರಿಂದ, ನಿವಾಸಿಗಳು ಪರದಾಡಿದರು.

ಸಿಡಿಲು- ಗುಡುಗು- ಗಾಳಿ ಸಹಿತ ಜೋರು ಮಳೆ ಸುರಿದು, ರಾಜಕಾಲುವೆಗಳಲ್ಲಿ ನೀರು ತುಂಬಿ ಹರಿಯಿತು. ಮುಖ್ಯರಸ್ತೆ ಹಾಗೂ ವಸತಿ ಪ್ರದೇಶದಲ್ಲಿ ಅಡ್ಡಾದಿಡ್ಡಿಯಾಗಿ ನೀರು ಹರಿದಿದ್ದರಿಂದ ಅವಾಂತರ ಸೃಷ್ಟಿಯಾಯಿತು.

ನೀರು ಹರಿಯುವಿಕೆ ತಡೆದ ಪ್ಲೈವುಡ್: ಕಾಮಾಕ್ಯ ಬಡಾವಣೆಯಲ್ಲಿ ರಾಜಕಾಲುವೆ ಅಕ್ಕ- ಪಕ್ಕದಲ್ಲಿರುವ 89 ಮನೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿತ್ತು.

3B ಪುಟ ನೋಡಿ

ಎಸಿಪಿ ಶೋಭಾ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ ವಿಶೇಷ ವಿಭಾಗದ ಎಸಿಪಿ ಶೋಭಾ ಕಟಾವ್ಕರ್ (59) ಅವರು ಅನುಮಾನಾಸ್ಪದ ರೀತಿಯಲ್ಲಿ ಸಾವಿಗೀಡಾಗಿದ್ದು, ಅವರ ಮೃತದೇಹ ಶುಕ್ರವಾರ ರಾತ್ರಿ ಪತ್ತೆಯಾಗಿದೆ.

ಕರ್ನಾಟಕ ಪೊಲೀಸ್ ಸೇವೆಯ 1996ನೇ ಬ್ಯಾಚ್ ಅಧಿಕಾರಿ ಆಗಿದ್ದ ಶೋಭಾ ಅವರಿಗೆ ಇತ್ತೀಚೆಗಷ್ಟೇ ಎಸ್ಪಿ ಹುದ್ದೆಗೆ ಬಡ್ತಿ ಸಿಕ್ಕಿತ್ತು. ಹುಬ್ಬಳ್ಳಿ ಹೆಸ್ಕಾಂ ಅಧೀಕ್ಷಕರಾಗಿ ವರ್ಗಾಯಿಸಲಾಗಿತ್ತು. ಸದ್ಯದಲ್ಲೇ ಅಧಿಕಾರ ವಹಿಸಿಕೊಳ್ಳಲು ಅವರು ಸಿದ್ಧತೆ ನಡೆಸುತ್ತಿದ್ದರು.

‘ಜೆ.ಪಿ.ನಗರ 5ನೇ ಹಂತದಲ್ಲಿರುವ ವಸತಿ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಶೋಭಾ ಅವರು ಕುಟುಂಬದ ಜೊತೆ ವಾಸವಿದ್ದರು. ಕುಟುಂಬದ ಸದಸ್ಯರು, ಕಾರ್ಯಕ್ರಮ ನಿಮಿತ್ತ ಹೊರ ಜಿಲ್ಲೆಗೆ ಹೋಗಿದ್ದರು. ಶೋಭಾ ಅವರೊಬ್ಬರೇ ಮನೆಯಲ್ಲಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಶುಕ್ರವಾರ ಮಧ್ಯಾಹ್ನದಿಂದಲೇ ಶೋಭಾ ಮೊಬೈಲ್‌ಗೆ ಕುಟುಂಬಸ್ಥರು ಕರೆ ಮಾಡಿದ್ದರು. ಆದರೆ, ಕರೆ ಸ್ವೀಕರಿಸಿರಲಿಲ್ಲ. ಅನುಮಾನಗೊಂಡ ಕುಟುಂಬಸ್ಥರು ವಸತಿ ಸಮುಚ್ಚಯದ ಭದ್ರತಾ ಸಿಬ್ಬಂದಿಗೆ ವಿಷಯ ತಿಳಿಸಿದ್ದರು. ಆತ, ಫ್ಲ್ಯಾಟ್ ಬಳಿ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ಆತನೇ ಪುಟ್ಟೇನಹಳ್ಳಿ ಠಾಣೆಗೆ ಮಾಹಿತಿ ನೀಡಿದ್ದ’ ಎಂದೂ ತಿಳಿಸಿದರು.

‘ಪೊಲೀಸರು ಪರಿಶೀಲನೆ ನಡೆಸಿದ್ದು, ಶೋಭಾ ಹೃದಯಾಘಾತದಿಂದ ಮೃತಪಟ್ಟಿರುವುದು ಗೊತ್ತಾಗುತ್ತಿದೆ ಎಂದರು.

ಸಂಕ್ಷಿಪ್ತ ಸುದ್ದಿ

ರಂಗಶಂಕರದಲ್ಲಿ ‘ಆಯೀನ್’ ನಾಟಕ ಇಂದು

ನಗರದ ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್ ಮತ್ತು ದಿ ಕಂಪನಿ ಥಿಯೇಟರ್ ಒಟ್ಟಾಗಿ ‘ರಂಗಶಂಕರ’ದಲ್ಲಿ ಶನಿವಾರ ‘ಆಯೀನ್’ ನಾಟಕ ಪ್ರದರ್ಶನ ಆಯೋಜಿಸಿವೆ.

ಸಂಜೆ 7.30ರ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಪ್ರವೇಶ ಇದೆ. ಈ ನಾಟಕವು ಭಾರತದ ಸಂವಿಧಾನದ ಪರಿಣಾಮಗಳು,ಅಮೆರಿಕದ ಸಂವಿಧಾನದ ಆಶಯಗಳ ಕುರಿತಾಗಿದೆ. ನಾಟಕವನ್ನು ಅತುಲ್ ಕುಮಾರ್ ನಿರ್ದೇಶಿಸಿದ್ದಾರೆ.

₹ 12 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ನಗರದಲ್ಲಿ ಗಾಂಜಾ ಮಾರುತ್ತಿದ್ದ ಆರೋಪಿಯನ್ನು ಬಂಧಿಸಿರುವ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು, ₹ 12 ಲಕ್ಷ ಮೌಲ್ಯದ 40 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.

‘ಮಹಾರಾಷ್ಟ್ರದ ಆದಿಲ್ ಹಮೀದ್ ಶೇಖ್ ಬಂಧಿತ. ಹೊರ ರಾಜ್ಯದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ, ಈ ಮಾಹಿತಿಯನ್ನು ಆಧರಿಸಿ ಕಾರ್ಯಾಚರಣೆ ನಡೆಸಿದ ಬಳಿಕ ಈತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಬಿ.ಎನ್ ಅಶ್ವತ್ಥಪ್ಪ



ಬಿ.ಎನ್. ಅಶ್ವತ್ಥಪ್ಪ

ಬೆಂಗಳೂರು: ಯಲಹಂಕ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಬಿ.ಎನ್. ಅಶ್ವತ್ಥಪ್ಪ (53) ಅವರು ಅನಾರೋಗ್ಯದಿಂದಾಗಿ ಗುರುವಾರ (ಏಪ್ರಿಲ್ 14) ನಿಧನರಾದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಬೆಣ್ಣೆಪರ್ತಿ ಗ್ರಾಮದ ಅಶ್ವತ್ಥಪ್ಪ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.



ಕಾಂಗ್ರೆಸ್, ಬಿಜೆಪಿ ನಾಯಕರ ಕೈವಾಡ–ಯತ್ನಾಳ್ ಆರೋಪ

ವಿಜಯಪುರ: 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆಯ ಹಿಂದೆ ಕಾಂಗ್ರೆಸ್ ಜೊತೆ ಬಿಜೆಪಿ ನಾಯಕರ ಕೈವಾಡವೂ ಇದೆ' ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್ ಹಾಗೂ ಬಿಜೆಪಿಯ ತಲಾ ಒಬ್ಬರು ನಾಯಕರು ಇಂಥ ದಂಧೆಯಲ್ಲಿ ತೊಡಗಿಕೊಂಡಿದ್ದಾರೆ. ಸಿಡಿ ಮಾಡುವುದು, ಎಡಿಟ್ ಮಾಡುವುದೇ ಇವರ ಕಾಯಕ. ಈ ನಾಯಕರು ಮಹಾನ್ ಕಳ್ಳರು' ಎಂದರು.

'ಸಂತೋಷ್ ಆತ್ಮಹತ್ಯೆ ಹಿಂದೆ ಕಾಂಗ್ರೆಸ್ ನಾಯಕರು ಮಾತ್ರವಲ್ಲ, ಬಿಜೆಪಿ ಮುಖಂಡರೊಬ್ಬರ ಕೈವಾಡವೂ ಇದೆ. ಈಶ್ವರಪ್ಪ ಅವರನ್ನು ಬಲಿಪಶು ಮಾಡಲಾಗಿದೆ' ಎಂದು ದೂರಿದರು. 'ಮಾಜಿ ಸಚಿವ ರಮೇಶ ಜಾರಕಿಹೊಳಿ ಹೇಳಿದ ಹಾಗೆ, ಸಿಡಿ ಹಗರಣ, ಗುತ್ತಿಗೆದಾರ ಆತ್ಮಹತ್ಯೆ ಹಿಂದೆ ಮಹಾ ನಾಯಕರೊಬ್ಬರ ಕೈವಾಡವಿದೆ ಎಂದರು.

ನೀವು ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ಪ್ರಜಾವಾಣಿ ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

ಇಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ
ನೋಂದಣಿ: ಬೆಳಗ್ಗೆ 9 ಗಂಟೆಯಿಂದ

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿ.

ಸ್ಥಳ : ಎಚ್ಎಂಟಿ ಮೈದಾನ, ಗಂಗಾನಗರ, ಆರ್‌ಟಿ ನಗರ ಪೊಲೀಸ್ ಠಾಣೆ ಎದುರು, ಬೆಂಗಳೂರು 560032

'ಹುಕ್ಕಾ ಸೇವನೆಗೆ ಪ್ರತ್ಯೇಕ ಜಾಗ ಮೀಸಲಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಿರುವ ಕಾರಣ ಹುಕ್ಕಾ ಸೇವನೆಯಿಂದ ಇತರೆ ಗ್ರಾಹಕರಿಗೆ ತೊಂದರೆ ಉಂಟು ಮಾಡಬಾರದು. ಆದ್ದರಿಂದ, ಹುಕ್ಕಾ ಸೇವನೆಗೆ ರೆಸ್ಟೋರೆಂಟ್‌ಗಳಲ್ಲಿ ಪರವಾನಗಿ ಪಡೆದ ಪ್ರತ್ಯೇಕ ಜಾಗ ಮೀಸಲಿಡಬೇಕು' ಎಂದು ಹೈಕೋರ್ಟ್ ಹೇಳಿದೆ.



'ನಾವು ನ್ಯಾಯಬದ್ಧವಾಗಿ ನಡೆಸುತ್ತಿರುವ ಚಟುವಟಿಕೆಗಳಲ್ಲಿ ಪೊಲೀಸರು ಹಸ್ತಕ್ಷೇಪ ಮಾಡದಂತೆ ನಿರ್ಬಂಧ ವಿಧಿಸಬೇಕು' ಎಂದು ಕೋರಿ, 'ಸೋಹೊ ಪಬ್ ಮತ್ತು ಗ್ರಿಲ್' ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದೆ.

'ರೆಸ್ಟೋರೆಂಟ್ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಗತ್ಯ ಅನುಮತಿ ಪಡೆದು ಹೊಗೆರಹಿತ ಹುಕ್ಕಾ ಸೇವನೆಗಾಗಿ ನಿರ್ದಿಷ್ಟ ಸ್ಮೋಕಿಂಗ್ ಝೋನ್ ಮೀಸಲಿಡಬೇಕು' ಎಂದು ಆದೇಶಿಸಿದೆ.

'ಹುಕ್ಕಾ ಮೂಲಕ ತಂಬಾಕು ಸೇವನೆಗೆ ಅವಕಾಶ ಇರುವುದರಿಂದ ಹುಕ್ಕಾ ಯಂತ್ರಗಳನ್ನು ನಿಷೇಧಿಸಲು ಸಾಧ್ಯವಿಲ್ಲ. ಆದರೆ, ಹುಕ್ಕಾದ ಮೂಲಕ ಬೇರಾವುದೇ ವಸ್ತುಗಳ ಸೇವನೆಯಂತಹ ಅಕ್ರಮ ಉದ್ದೇಶಕ್ಕೆ ಬಳಕೆ ಮಾಡಿದರೆ ಪೊಲೀಸರು ಮಧ್ಯ ಪ್ರವೇಶಿಸಬಹುದು ಎಂಬ ಅಂಶವನ್ನು ಇದೇ ಹೈಕೋರ್ಟ್ 2015 ಮತ್ತು 2017ರಲ್ಲೇ ನೀಡಿರುವ ತೀರ್ಪುಗಳಲ್ಲಿ ಸ್ಪಷ್ಟಪಡಿಸಿದೆ' ಎಂಬ ಅಂಶವನ್ನು ನ್ಯಾಯಪೀಠ ತನ್ನ ತೀರ್ಪಿನಲ್ಲಿ ಉಲ್ಲೇಖ ಮಾಡಿದೆ.

ಹೆಬ್ಬಾಳ ವಿಧಾನಸಭಾ ಕ್ಷೇತ್ರ: ರಸ್ತೆ ಬದಿ ಅಂಗಡಿಗಳು

ಬೇಕಿದೆ ಸಂಚಾರ ಪೊಲೀಸರ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಸುಲ್ತಾನ್ ಪಾಳ್ಯದಿಂದ ವಿ.ನಾಗೇನಹಳ್ಳಿ ಕಡೆ ಹೋಗುವ ರಸ್ತೆ ಕಿರಿದಾಗಿದ್ದು, ಇಲ್ಲಿ ಸದಾ ಹೆಚ್ಚಿನ ವಾಹನದಟ್ಟಣೆ ಇರುತ್ತದೆ. ಕೆಲವರು ರಸ್ತೆ ಜಾಗದಲ್ಲೇ ಅಂಗಡಿಗಳನ್ನು ಇರಿಸಿಕೊಂಡಿರುವ ಪರಿಣಾಮ ಪಾದಚಾರಿ ಮಾರ್ಗ ಮಾಯವಾಗಿದೆ' ಎಂಬುದು ಕನಕ ನಗರದ ವಕೀಲ ಎ.ಡೆರಿಕ್ ಅನಿಲ್ ಅವರ ಆರೋಪ.

'ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯ ಎಡಬಲಗಳಲ್ಲಿ ಹಂಚಿಹೋಗಿರುವ ಹೆಬ್ಬಾಳ ಕ್ಷೇತ್ರದ ಪ್ರದೇಶಗಳು ಅತ್ಯಂತ ಕಿರಿದಾಗಿವೆ. ಅದರಲ್ಲೂ ಸುಮಂಗಲಿ ಸೇವಾಶ್ರಮ, -ಚಾಮುಂಡಿ ನಗರ, ಸುಲ್ತಾನ್ ಪಾಳ್ಯ-ವಿ.ನಾಗೇನಹಳ್ಳಿ ರಸ್ತೆಗಳು, ಪುಷ್ಪಾಂಜಲಿ ಥಿಯೇಟರ್-ಕನಕ ನಗರ ರಸ್ತೆ ಹಾಗೂ ವಿ.ನಾಗೇನಹಳ್ಳಿ-ಹೆಬ್ಬಾಳ ಮೇಲ್ಸೇತುವೆ ರಸ್ತೆಗಳಲ್ಲಿ ವಾಹನ ಸವಾರರ ನಿರ್ಲಕ್ಷ್ಯದ ಸಂಚಾರ ಮತ್ತು ದಟ್ಟಣೆಯಿಂದ ನಾಗರಿಕರು ಸಹಿಸಲಾಗದ ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಅವರು ಹೇಳುತ್ತಾರೆ.

'ವಾಹನಗಳನ್ನು ಚಲಾಯಿಸುವ ವೇಳೆ ರಸ್ತೆಯ ಮಧ್ಯದಲ್ಲೇ ಗಾಡಿಗಳನ್ನು ನಿಲ್ಲಿಸಿಕೊಂಡು ಮೊಬೈಲ್ ಫೋನ್‌ಗಳಲ್ಲಿ ಮಾತನಾಡುವುದು, ಮೊಬೈಲ್ ಫೋನಿನಲ್ಲಿ ಮಾತನಾಡುತ್ತಲೇ ವಾಹನ ಚಲಾಯಿಸುವುದು, ಹೆಲ್ಮೆಟ್ ಧರಿಸದೇ ಇರುವಂತಹ ಸಂಗತಿಗಳು ಇಲ್ಲಿ ಅತ್ಯಂತ ಸಾಮಾನ್ಯ ಎಂಬಂತಾಗಿದೆ. ಇಂತಹ ಕಿರಿಕಿರಿಗಳ ಪರಿಣಾಮ ಈ ಭಾಗದಲ್ಲಿ ಪ್ರತಿದಿನವೂ ಸಣ್ಣಪುಟ್ಟ ಅವಘಡ, ಪರಸ್ಪರ ಜಗಳ ಕಂಡುಬರುತ್ತಿವೆ' ಎನ್ನುತ್ತಾರೆ ಡೆರಿಕ್.

'ನಿಯಮಗಳ ಉಲ್ಲಂಘನೆ ಮಾಡುವವರನ್ನು ಸಂಚಾರಿ ಪೊಲೀಸರು ತಡೆಗಟ್ಟುವ ಪ್ರಯತ್ನ ಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಚಾರ ಪೊಲೀಸರು ಹೆಚ್ಚಿನ ಜಾಗ್ರತೆ ವಹಿಸಿ ಕಿರಿದಾದ ರಸ್ತೆಗಳು ಹಾಗೂ ಗಲ್ಲಿಗಳಲ್ಲಿನ ಉಪದ್ರವ ನಿಯಂತ್ರಿಸಬೇಕು' ಎಂಬುದು ಅವರ ಮನವಿ.

ತ್ಯಾಜ್ಯ ವಿಲೇವಾರಿ: 'ಹೆಬ್ಬಾಳ ಕ್ಷೇತ್ರದ ವಿವಿಧೆಡೆ ಘನತ್ಯಾಜ್ಯದ ವೈಜ್ಞಾನಿಕ ನಿರ್ವಹಣೆಗಾಗಿ 2006ರಲ್ಲಿ ರಚನೆಯಾಗಿದ್ದ, 'ಫುಲ್ ಸರ್ಕಲ್ ಟ್ರಸ್ಟ್' ಸದ್ಯಕ್ಕೆ ಅಷ್ಟೊಂದು ಕ್ರಿಯಾಶೀಲವಾಗಿಲ್ಲ. ಅಂದು ಡಾ.ರಾಧಿಕಾ ಅಂಜನಾ ಅಯ್ಯರ್, ಚೇತನ್ ಕಾರಂತ್ ಅಂತಹವರ ನೇತೃತ್ವದಲ್ಲಿ ಕ್ಷೇತ್ರದ ವಿವಿಧೆಡೆ ಒಣ ಮತ್ತು ಹಸಿ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ ಮತ್ತು ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಈಗಲೂ ತ್ಯಾಜ್ಯ ವಿಲೇವಾರಿಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ' ಎಂದು ಕನಕ ನಗರದ ಸ್ಥಳೀಯರು ಹೇಳುತ್ತಾರೆ.

'ತ್ಯಾಜ್ಯ ವಿಲೇವಾರಿಯಲ್ಲಿ ಬಿಬಿಎಂಪಿ ವಿಫಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಹಸಿ ಮತ್ತು ಒಣ ತ್ಯಾಜ್ಯ ವಿಲೇವಾರಿ ಅತ್ಯಂತ ಅವೈಜ್ಞಾನಿಕತೆಯಿಂದ ಕೂಡಿದೆ. ಈ ಸಂಬಂಧ ಕಾಲಕಾಲಕ್ಕೆ ಹೈಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸುವಲ್ಲಿ ಬಿಬಿಎಂಪಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ವಿಫಲವಾಗಿವೆ' ಎಂದು ಹೈಕೋರ್ಟ್‌ಗೆ ತಿಳಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 2012ರಲ್ಲಿ ಕವಿತಾ ಶಂಕರ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್ ಈ ಕುರಿತಂತೆ ನ್ಯಾಯಪೀಠಕ್ಕೆ ಜ್ಞಾಪನಾ ಪತ್ರ ಸಲ್ಲಿಸಿದ್ದು, 'ಗುರುತಿಸಲಾದ 800 ಚದರ ಕಿ.ಮೀ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ವಿಲೇವಾರಿ ಮಾಡಲು ಬಿಬಿಎಂಪಿಗೆ ಸಾಧ್ಯವಾಗುತ್ತಿಲ್ಲ' ಎಂಬ ಅಂಶದತ್ತ ನ್ಯಾಯಪೀಠದ ಗಮನ ಸೆಳೆದಿದ್ದಾರೆ.

'ಸ್ವಚ್ಛಭಾರತ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬೆಂಗಳೂರು ನಗರಕ್ಕೆ ಲಭ್ಯವಾಗಿರುವ ₹ 73 ಕೋಟಿ ಅನುದಾನದಲ್ಲಿ ಯಾವುದೇ ದೂರದೃಷ್ಟಿ ಇಲ್ಲದೇ ₹ 8 ಕೋಟಿ ಖರ್ಚು ಮಾಡಿ ಒಟ್ಟು 25 ಕಾಂಪ್ಯಾಕ್ಟ್ ಟ್ರಕ್‌ಗಳನ್ನು ಖರೀದಿಸಲಾಗಿದೆ ಹಾಗೂ ಈ ಹಣವನ್ನು ಬೇಕಾಬಿಟ್ಟಿ ಬಳಸಲಾಗಿದೆ. ವಾಸ್ತವದಲ್ಲಿ ಪ್ರತಿ ಟ್ರಕ್‌ಗೆ ₹ 13 ಲಕ್ಷ ಹೆಚ್ಚಿನ ಮೊತ್ತ ನೀಡಿ ಖರೀದಿಸಲಾಗಿದೆ' ಎಂದು ಆರೋಪಿಸಲಾಗಿದೆ.

'ಘನತ್ಯಾಜ್ಯ ನಿರ್ವಹಣಾ ನಿಯಮ–2016 ಅನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕೆಎಸ್‌ಪಿಸಿಬಿ ಸೂಕ್ತ ಕ್ರಮ ಕೈಗೊಳ್ಳಬೇಕು. ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು ಎಂದು ಹೈಕೋರ್ಟ್ 2019ರ ಸೆಪ್ಟೆಂಬರ್‌ನಲ್ಲೇ ನಿರ್ದೇಶಿಸಿತ್ತು. ಆದರೆ, ಕೆಎಸ್‌ಪಿಸಿಬಿ ಈತನಕ ನ್ಯಾಯಾಲಯಕ್ಕೆ ಯಾವುದೇ ವರದಿ ಸಲ್ಲಿಸಿಲ್ಲ' ಎಂದು ಆಕ್ಷೇಪಿಸಲಾಗಿದೆ. ಅರ್ಜಿದಾರರ ಈ ಜ್ಞಾಪನಾ ಪತ್ರವನ್ನು ದಾಖಲಿಸಿಕೊಂಡಿರುವ ನ್ಯಾಯಪೀಠ, ಇದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಬಿಬಿಎಂಪಿ ಹಾಗೂ ಕೆಎಸ್‌ಪಿಸಿಬಿಗೆ ನಿರ್ದೇಶಿಸಿ ಜೂನ್ 15ಕ್ಕೆ ವಿಚಾರಣೆ ಮುಂದೂಡಿದೆ.









ಮನೆ ಸಾಮಗ್ರಿಗಳು ನೀರಿನಲ್ಲಿ ತೇಲಿಕೊಂಡು ಹೋದ ನಂತರ, ಅಳಿದುಳಿದ ವಸ್ತುಗಳನ್ನು ಮಹಿಳೆಯೊಬ್ಬರು ಸ್ವಚ್ಛಗೊಳಿಸಿದರು



ಕಾಮಾಕ್ಯ ಬಡಾವಣೆಯ ಆಸ್ಥ ಆರ್ಥೋ ಡರ್ಮಾ ಸೆಂಟರ್ ಆಸ್ಪತ್ರೆಯಲ್ಲಿ ಸಂಗ್ರಹವಾಗಿದ್ದ ನೀರು ತೆರವು ಮಾಡಿದ ಬಿಬಿಎಂಪಿ ಕಾರ್ಮಿಕರು ಸ್ವಚ್ಛಗೊಳಿಸಿದರು



ಕಾಮಾಕ್ಯ ಬಸ್ ತಂಗುದಾಣ ಕುಸಿದಿರುವುದು — ಪ್ರಜಾವಾಣಿ ಚಿತ್ರಗಳು / ಎಂ.ಎಸ್.ಮಂಜುನಾಥ್

ಮಳೆ ಅಬ್ಬರ: ನಲುಗಿದ ನಿವಾಸಿಗಳು

ಒಂದನೇ ಪುಟದಿಂದ

ನಸುಕಿನವರೆಗೂ 4 ಅಡಿಯಿಂದ 5 ಅಡಿಯಷ್ಟು ನೀರು ನಿಂತುಕೊಂಡಿದ್ದರಿಂದ ನಿವಾಸಿಗಳು ಆತಂಕಗೊಂಡಿದ್ದರು. ಬೆಳಿಗ್ಗೆ ನೀರು ಕ್ರಮೇಣವಾಗಿ ಕಡಿಮೆಯಾಗಿದ್ದರಿಂದ ನಿಟ್ಟುಸಿರು ಬಿಟ್ಟರು.

'ಹೊರವರ್ತುಲ ರಸ್ತೆಗೆ ಹೊಂದಿಕೊಂಡಿರುವ ಕಾಮಾಕ್ಯ ಬಸ್ ತಂಗುದಾಣ ಕೆಳಭಾಗದಲ್ಲಿ ರಾಜಕಾಲುವೆ ಇದೆ. ಚನ್ನಮ್ಮನ ಕೆರೆ ಅಚ್ಚುಕಟ್ಟು ಪ್ರದೇಶದಿಂದ ನೀರು ಕಾಮಾಕ್ಯ ಬಡಾವಣೆಯತ್ತ ರಾಜಕಾಲುವೆಯಲ್ಲಿ ಬರುತ್ತದೆ. ಈ ಭಾಗದ ರಾಜಕಾಲುವೆಗೆ ತಡೆಗೋಡೆ ನಿರ್ಮಿಸುವ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದು, ಇದುವೇ ಮಳೆ ನೀರು ಮನೆಗೆ ನುಗ್ಗಲು ಕಾರಣ' ಎಂದು ನಿವಾಸಿಗಳು ಹೇಳಿದರು.

'ತಡೆಗೋಡೆ ನಿರ್ಮಾಣಕ್ಕೆ ಪ್ಲೈವುಡ್‌ಗಳನ್ನು ಬಳಸಲಾಗಿದ್ದು, ಅವುಗಳನ್ನು ರಾಜಕಾಲುವೆಯಲ್ಲಿ ಎಲ್ಲೆಂದರಲ್ಲಿ ಬಿಸಾಡಲಾಗಿತ್ತು. ಗುರುವಾರ ರಾತ್ರಿ ಮಳೆ ಸುರಿದಾಗ ನೀರಿನ ಜೊತೆ ಪ್ಲೈವುಡ್‌ಗಳು ತೇಲಿಕೊಂಡು ಬಂದು, ಪೈಪ್‌ಗಳಿಗೆ ಅಡ್ಡವಾಗಿದ್ದವು. ಪೈಪ್‌ನಲ್ಲಿ ನೀರು ಹರಿದು ಹೋಗಲು ಜಾಗವಿರಲಿಲ್ಲ. ಆಗಲೇ ಕಾಲುವೆಯಿಂದ ನೀರು ಉಕ್ಕಿ ಹರಿದು, ವಸತಿ ಪ್ರದೇಶದತ್ತ ನುಗ್ಗಿದೆ' ಎಂದೂ ತಿಳಿಸಿದರು.

'ಬಟ್ಟೆ, ಚಪ್ಪಲಿಗಳು, ಫ್ರಿಡ್ಜ್, ವಾಷಿನ್ ಮಷಿನ್, ಟಿ.ವಿ, ಪೀಠೋಪಕರಣ, ಸಿಲಿಂಡರ್ ಹಾಗೂ ಇತರೆ ವಸ್ತುಗಳು ನೀರಿನಲ್ಲಿ ತೇಲಿ ಹೋಗಿವೆ. ವಸ್ತುಗಳಿಂದ ತುಂಬಿದ್ದ ಮನೆ ಈಗ ಬರಿದಾಗಿದೆ' ಎಂದೂ ನಿವಾಸಿಗಳು ಕಣ್ಣೀರಿಟ್ಟರು. ಮನೆಯಲ್ಲಿ ನೀರು ನಿಂತಿದ್ದಾಗ ಕೆಲ ನಿವಾಸಿಗಳು, 'ಕಾಪಾಡಿ... ಕಾಪಾಡಿ...' ಎಂದು ಕೂಗಾಡಿದ್ದರು. ಸ್ಥಳೀಯ ಯುವಕರು ನೀರಿನಲ್ಲಿ ಈಜಿಕೊಂಡು ಹೋಗಿ ರಕ್ಷಿಸಿದ್ದಾರೆ.

ಹೊಳೆಯಂತಾದ ಹೊರವರ್ತುಲ ರಸ್ತೆ: ರಾಜಕಾಲುವೆ ಮೇಲ್ಭಾಗದಲ್ಲಿದ್ದ ಹೊರವರ್ತುಲ ರಸ್ತೆ ಹೊಳೆಯಂತಾಗಿತ್ತು. ಮೂರು ಅಡಿಯಷ್ಟು ನೀರು ಹರಿಯಿತು. ಡಿಪೊ ನಂಬರ್ 13ರ ಮೈದಾನಕ್ಕೂ ನೀರು ನುಗ್ಗಿತ್ತು. ಕಾಮಾಕ್ಯ ಬಸ್ ತಂಗುದಾಣ ಹಾಗೂ ಪಾದಚಾರಿ ಮಾರ್ಗ ಸಹ ಕುಸಿದಿದೆ. ಆಸ್ಥ ಆರ್ಥೋ ಡರ್ಮಾ ಸೆಂಟರ್ ಆಸ್ಪತ್ರೆಗೂ ನೀರು ನುಗ್ಗಿತ್ತು.

ಮನೆ ಹಾಗೂ ಅಂಗಡಿಗಳ ಮುಂದೆ ನಿಲ್ಲಿಸಿದ್ದ ಕಾರು, ದ್ವಿಚಕ್ರ ವಾಹನ ಹಾಗೂ ಬೈಸಿಕಲ್‌ಗಳು ನೀರಿನಲ್ಲಿ ತೇಲಿದವು. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ನಿವಾಸಿಗಳ ಕಾರುಗಳು ಸಹ ಮಾರ್ಗಮಧ್ಯೆಯೇ ನೀರಿನಲ್ಲಿ ಸಿಲುಕಿ, ತೇಲಿಕೊಂಡು ಹೋಗಿದ್ದವು. ಕಾರಿನೊಳಗಿದ್ದವರು, ಬಾಗಿಲು ತೆರೆದು ಈಜಿಕೊಂಡೇ ಸುರಕ್ಷಿತ ಸ್ಥಳ ತಲುಪಿದರು.

ಸಿನಿಮಾ ನೋಡಲು ಬಂದಿದ್ದ ಕೆಲವರು, 1ನೇ ಮುಖ್ಯರಸ್ತೆಯ ಅಕ್ಕ-ಪಕ್ಕದಲ್ಲಿ ಕಾರುಗಳನ್ನು ನಿಲ್ಲಿಸಿದ್ದರು. ಅವರ ಕಾರುಗಳೂ ನೀರಿನಲ್ಲಿ ತೇಲಿಕೊಂಡು ಹೋದವು. ಸಿನಿಮಾ ಮುಗಿದ ನಂತರ ಮಾಲೀಕರು ಸ್ಥಳಕ್ಕೆ ಬಂದಾಗ ನೀರು ಆವರಿಸಿಕೊಂಡಿತ್ತು. ಕಾರಿಗಾಗಿ ಇಡೀ ರಾತ್ರಿ ಹುಡುಕಾಡಿದರು. ನಸುಕಿನಲ್ಲಿ ಕಾರುಗಳು ಪತ್ತೆಯಾದವು. ತೇಲಿಕೊಂಡ ಹೋದ ಕಾರುಗಳು 4ನೇ ಹಾಗೂ 5ನೇ ಅಡ್ಡರಸ್ತೆಯ ಅಂತ್ಯದಲ್ಲಿರುವ ತಡೆಗೋಡೆಗೆ ತಾಗಿಕೊಂಡು ನಿಂತಿದ್ದವು. ಕ್ರೇನ್ ಮೂಲಕ ಶುಕ್ರವಾರ ಸ್ಥಳಾಂತರಿಸಲಾಯಿತು.

ರಾಜರಾಜೇಶ್ವರಿನಗರದಲ್ಲೂ ಅವಾಂತರ: ರಾಜರಾಜೇಶ್ವರಿನಗರದ ಪ್ರಮೋದ್ ಬಡಾವಣೆ, ಮಲ್ಲತ್ತಹಳ್ಳಿ, ಪೂರ್ವ ವಲಯದ ಗಾಲ್ಫ್ ಕ್ಲಬ್ ಹಾಗೂ ಮಹದೇವಪುರ ವಲಯದ ದೊಡ್ಡನೆಕ್ಕುಂದಿಯ ಕೆಲ ಪ್ರದೇಶಗಳು ಜಲಾವೃತ್ತಗೊಂಡಿದ್ದವು.

ಚಾವಣಿ ಶೀಟ್ ಮುರಿದು ಅಂಗವಿಕಲನ ರಕ್ಷಣೆ




ಮನೆಯಲ್ಲಿ ನೀರು ನಿಂತಿದ್ದ ವೇಳೆ ತಮ್ಮನ್ನು ರಕ್ಷಿಸಿದ್ದ ಚಾವಣಿ ಶೀಟ್ ತೋರಿಸುತ್ತಿರುವ ಅಂಗವಿಕಲ ಕುಮಾರ್

ಮನೆಯೊಳಗೆ ನೀರು ನುಗ್ಗಿದ್ದರಿಂದ ಅಪಾಯಕ್ಕೆ ಸಿಲುಕಿದ್ದ ಅಂಗವಿಕಲ ಕುಮಾರ್ ಅವರನ್ನು ಚಾವಣಿ ಶೀಟ್ ಕಿಂಡಿ ಮೂಲಕ ಹೊರಗೆ ಕರೆತಂದು ರಕ್ಷಿಸಲಾಗಿದೆ.

ಕಾಮಾಕ್ಯ ಬಡಾವಣೆಯ 5ನೇ ಮುಖ್ಯರಸ್ತೆಯ ಮನೆಯಲ್ಲಿ ಕುಮಾರ್ ಒಂಟಿಯಾಗಿ ವಾಸವಿದ್ದಾರೆ. ಗುರುವಾರ ರಾತ್ರಿ 7.30ರ ಸುಮಾರಿಗೆ ಕುಮಾರ್ ಊಟಕ್ಕೆ ಕುಳಿತಿದ್ದರು. ನೀರು ಏಕಾಏಕಿ ಮನೆಯೊಳಗೆ ನುಗ್ಗಿತ್ತು. ಬಾಗಿಲು ತೆರೆಯಲಾಗದೇ ಮನೆಯೊಳಗೆ ಸಿಲುಕಿದ್ದ ಕುಮಾರ್, ರಕ್ಷಣೆಗಾಗಿ ಕೂಗಾಡಿದ್ದರು. ಪಕ್ಕದ ಕೊಠಡಿಯಲ್ಲಿ ವಾಸವಿದ್ದ ಯುವಕರು, ಚಾವಣಿ ಏರಿ ಶೀಟ್ ಮುರಿದು ಅದರ ಕಿಂಡಿ ಮೂಲಕ ಕುಮಾರ್ ಅವರನ್ನು ಹೊರಗೆ ಕರೆತಂದಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಕುಮಾರ್, 'ಸುನಾಮಿ ರೀತಿಯಲ್ಲಿ ನೀರು ಮನೆಯೊಳಗೆ ನುಗ್ಗಿತ್ತು. ಅಂಗವಿಕಲನಾದ ನನಗೆ ಹೊರಗೆ ಬರಲು ಸಾಧ್ಯವಾಗಲಿಲ್ಲ. ಯುವಕರೇ ಶೀಟ್ ಮುರಿದು ಹೊರಗೆ ತಂದು ಜೀವ ಉಳಿಸಿದರು' ಎಂದರು.



ಗುರುವಾರ ರಾತ್ರಿ ಎಲ್ಲೆಲ್ಲಿ ಎಷ್ಟು ಮಳೆ

ವಿದ್ಯಾಪೀಠ	73 ಮಿ.ಮೀ
ಸಂಪಂಗಿರಾಮನಗರ	42 ಮಿ.ಮೀ
ವಿ.ವಿ. ಪುರ	45 ಮಿ.ಮೀ
ಬೊಮ್ಮನಹಳ್ಳಿ	42 ಮಿ.ಮೀ
ಬೆಳ್ಳಂದೂರು	40 ಮಿ.ಮೀ
ಅಂಜನಾಪುರ	36 ಮಿ.ಮೀ
ಗಾಳಿ ಆಂಜನೇಯ ದೇವಸ್ಥಾನ	37 ಮಿ.ಮೀ
ರಾಜರಾಜೇಶ್ವರಿನಗರ	34 ಮಿ.ಮೀ
ಕೋರಮಂಗಲ	34 ಮಿ.ಮೀ
ಬಿಇಎಂಎಲ್ ಬಡಾವಣೆ	31 ಮಿ.ಮೀ

ಪ್ರಜಾವಾಣಿ ಗ್ರಾಫಿಕ್ಸ್ ಮಂಜುನಾಥ ಹುಲಕೊಪ್ಪದ



ಕಾಮಾಕ್ಯ ಬಸ್ ತಂಗುದಾಣಕ್ಕೆ ಹೊಂದಿಕೊಂಡಿರುವ ರಾಜಕಾಲುವೆ ಪೈಪ್‌ಗಳಲ್ಲಿ ಸಂಗ್ರಹವಾಗಿದ್ದ ತ್ಯಾಜ್ಯವನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದರು



ಕಾಮಾಕ್ಯ ಬಡಾವಣೆಯ ರಸ್ತೆಗಳನ್ನು ಬಿಬಿಎಂಪಿ ಪೌರ ಕಾರ್ಮಿಕರು ಸ್ವಚ್ಛಗೊಳಿಸಿದರು

'ನೀರಿನ ಹೊಡೆತಕ್ಕೆ ಬೆಂಡಾದ ಶಟರ್'

ಚಾಮುಂಡೇಶ್ವರಿ ಕಾಂಪ್ಲೆಕ್ಸ್‌ನ ನೆಲ ಮಹಡಿಯಲ್ಲಿರುವ 10 ಅಂಗಡಿಗಳಿಗೆ ನೀರು ನುಗ್ಗಿತ್ತು. ನೀರಿನ ರಭಸಕ್ಕೆ ಅಂಗಡಿಗಳ ಶಟರ್ ಬೆಂಡಾಗಿತ್ತು.

'ಮುಖ್ಯರಸ್ತೆಯಲ್ಲಿ ಹರಿದ ನೀರು ಏಕಾಏಕಿ ಮನೆಯೊಳಗೆ ನುಗ್ಗಿತ್ತು. ರಾತ್ರಿಯಿಡಿ ನೀರು ನಿಂತುಕೊಂಡಿದ್ದರಿಂದ ಯಂತ್ರಗಳೆಲ್ಲವೂ ಹಾಳಾಗಿವೆ. ಅವುಗಳ ದುರಸ್ತಿ ಮಾಡಿಸಬೇಕು. ಲಕ್ಷಾಂತರ ರೂಪಾಯಿ ನಷ್ಟವಾಗಿದೆ' ಎಂದು ವಾಲ್‌ನೆಟ್ ಪ್ಲೈವುಡ್‌ನ ಸತೀಶ್ ಅಳಲು ತೋಡಿಕೊಂಡರು.

ನಿವಾಸಿಗಳ ಅಭಿಪ್ರಾಯ

'ಆಡಳಿತ ನಡೆಸುವವರ ಬೇಜವಾಬ್ದಾರಿ'

'ರಾತ್ರಿಯಿಡಿ ನಿವಾಸಿಗಳು ಕಷ್ಟದಲ್ಲಿದ್ದರೂ ಯಾರೊಬ್ಬ ಜನಪ್ರತಿನಿಧಿಯೂ ಸ್ಥಳಕ್ಕೆ ಬರಲಿಲ್ಲ. ಗೆದ್ದು ಹೋದ ನಂತರ ಎಲ್ಲರೂ ಜನರನ್ನು ಮರೆಯುತ್ತಾರೆ. ರಾಜಕಾಲುವೆಯಲ್ಲಿ ಕಾಟಾಚಾರಕ್ಕೆ ಕಾಮಗಾರಿ ನಡೆಯುತ್ತಿದ್ದು, ಅರ್ಧ ಕೆಲಸ ಮಾಡಿ ನಿಲ್ಲಿಸಿದ್ದಾರೆ. ಇದರಿಂದಲೇ ಅವಾಂತರ ಸೃಷ್ಟಿಯಾಗಿದೆ. ಇದು ಆಡಳಿತ ನಡೆಸುವವರ ಬೇಜವಾಬ್ದಾರಿ. ಇನ್ನಾದರೂ ಸಮಸ್ಯೆ ಆಲಿಸಿ, ಶಾಶ್ವತ ಪರಿಹಾರ ನೀಡಬೇಕು.

– **ನೇಹಾ,** ಸ್ಥಳೀಯ ನಿವಾಸಿ

'ಕಬ್ಬಿಣದ ಗ್ರೀಲ್ ಮುರಿದು ರಕ್ಷಣೆ'

ರಾತ್ರಿ 7.30ರ ಸುಮಾರಿಗೆ ಮನೆಯೊಳಗೆ ನುಗ್ಗಿದ್ದ ನೀರು, ಆರು ಅಡಿಯಷ್ಟು ಆವರಿಸಿತ್ತು. ಕೊಠಡಿಯಲ್ಲಿ ಸಿಲುಕಿದ್ದ ಪತ್ನಿ, ಮಗುವನ್ನು ಚಾವಣಿಯ ಕಬ್ಬಿಣದ ಗ್ರೀಲ್ ಮುರಿದು ಹೊರಗೆ ಕರೆತಂದು ರಕ್ಷಿಸಿದೆ.

– **ಶರತ್,** ನಿವಾಸಿ

'ಲಕ್ಷಾಂತರ ರೂಪಾಯಿ ನಷ್ಟ'

ಅಡುಗೆ ಸಿದ್ಧಪಡಿಸಿ, ಗ್ರಾಹಕರಿಗಾಗಿ ಕಾಯುತ್ತಿದ್ದೆ. ರಭಸದಿಂದ ನೀರು ಬಂತು. ವಸ್ತುಗಳೆಲ್ಲವೂ ಒಂದೊಂದಾಗಿ ನೀರಿನಲ್ಲಿ ತೇಲಿ ಹೋಗಲಾರಂಭಿಸಿದವು. ಕೂಡಲೇ ಅಂಗಡಿ ಶಟರ್ ಹಾಕಿದೆ. ನೀರು ಕಡಿಮೆಯಾದ ನಂತರ ಶಟರ್ ತೆರೆದಾಗ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ಒಂದೇ ರಾತ್ರಿಯಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

– **ಬಸವರಾಜು,** ಬಸವೇಶ್ವರ ಖಾನಾವಳಿ

'ಪ್ರತಿ ಮನೆಗೆ ₹ 10 ಸಾವಿರ ತುರ್ತು ಪರಿಹಾರ'

ಹಾನಿಗೀಡಾದ ಪ್ರದೇಶಗಳಲ್ಲಿ ಪಾಲಿಕೆಯ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರು ಶುಕ್ರವಾರ ಸ್ವಚ್ಛತಾ ಕಾರ್ಯ ಕೈಗೊಂಡರು. ಟ್ರ್ಯಾಕ್ಟರ್, ಕಸ ಸಾಗಣೆ ವಾಹನ ಹಾಗೂ ಜೆಸಿಬಿ ಯಂತ್ರವನ್ನು ಬಳಸಿಕೊಳ್ಳಲಾಯಿತು.

ಪಾಲಿಕೆಯ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ದಕ್ಷಿಣ ವಲಯ ಜಂಟಿ ಆಯುಕ್ತ ಕೆ. ಜಗದೀಶ್ ನಾಯಕ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಕೆ. ಜಗದೀಶ್, 'ಹಾನಿಗೀಡಾದ ಮನೆಗಳನ್ನು ಗುರುತಿಸಲಾಗಿದೆ. ಪ್ರತಿಯೊಂದು ಮನೆಗೂ ₹ 10,000 ತುರ್ತು ಪರಿಹಾರ ನೀಡಲಾಗುತ್ತಿದೆ' ಎಂದರು.

ಊಟ, ನೀರು ನಿರಾಕರಿಸಿದ ಸ್ಥಳೀಯರು

ಬಿಬಿಎಂಪಿ ವತಿಯಿಂದ ಸ್ಥಳೀಯ ನಿವಾಸಿಗಳಿಗೆ ತಾತ್ಕಾಲಿಕವಾಗಿ ಊಟ ಹಾಗೂ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಕೆಲವರು ಆಹಾರ ಸ್ವೀಕರಿಸದೇ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ರಾಜಕಾಲುವೆ ವ್ಯವಸ್ಥೆ ಸರಿ ಇಲ್ಲ. ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮಗೆ ಈ ಸ್ಥಿತಿ ಬಂದಿದೆ. ಊಟ ನಮಗೆ ಬೇಡ' ಎಂದು ಸ್ಥಳೀಯರು ಕಿಡಿಕಾರಿದರು.

ಹಲಸೂರು ಮಾರುಕಟ್ಟೆ ನೆಲಸಮಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಥಿಲಾವಸ್ಥೆಯಲ್ಲಿ ಇರುವ ಬಜಾರ್ ಸ್ಟ್ರೀಟ್ ಹಲಸೂರು ಮಾರುಕಟ್ಟೆ ನೆಲಸಮಗೊಳಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

'ಮಾರುಕಟ್ಟೆ ಸಂಕೀರ್ಣವು 70 ವರ್ಷಕ್ಕಿಂತ ಹಳೆಯದಾಗಿದ್ದು, ನಮ್ಮ ಎಂಜಿನಿಯರ್‌ಗಳು ಮಾರುಕಟ್ಟೆ ಸಮೀಕ್ಷೆ ಮಾಡಿದ್ದಾರೆ. ವ್ಯಾಪಾರಿಗಳನ್ನು ಸ್ಥಳಾಂತರಿಸಬೇಕಿದ್ದು, ಈ ಸಂಬಂಧ ನೋಟಿಸ್ ನೀಡಿದ್ದೇವೆ' ಎಂದು ಬಿಬಿಎಂಪಿ ಉಪ ಆಯುಕ್ತ(ಮಾರುಕಟ್ಟೆಗಳು) ಕೆ.ಮರಳೀಧರ್ ತಿಳಿಸಿದರು.

ಮಾರುಕಟ್ಟೆ ತೆರವುಗೊಳಿಸುವ ನೋಟಿಸ್ ಸ್ವೀಕರಿಸಲು ವರ್ತಕರು ನಿರಾಕರಿಸಿದ್ದಾರೆ. 'ನಮ್ಮ ಬದುಕು ಕಸಿದುಕೊಳ್ಳಲು ಬಿಬಿಎಂಪಿ ಹೊರಟಿದೆ. ಮಾರುಕಟ್ಟೆ ನೆಲಸಮದ ಬಗ್ಗೆ ಯಾವುದೇ ಅಧಿಕಾರಿಯೂ ನಮ್ಮೊಂದಿಗೆ ಚರ್ಚಿಸಿಲ್ಲ. ಪರ್ಯಾಯ ವ್ಯವಸ್ಥೆ ಮಾಡದೆ ಏಕಾಏಕಿ ತೆರವುಗೊಳಿಸಲು ಮುಂದಾದರೆ ನಾವು ಎಲ್ಲಿ ಹೋಗಬೇಕು' ಎಂದು ವ್ಯಾಪಾರಿ ಸೈಯದ್ ಮುಕಿಯಾ ಪ್ರಶ್ನಿಸಿದರು.

'ಮಾರುಕಟ್ಟೆ ನಿರ್ವಹಣೆ ಮಾಡುವಲ್ಲಿ ಬಿಬಿಎಂಪಿ ವಿಫಲವಾಗಿದೆ. ಕಳೆದ ವರ್ಷದ ಮಳೆಯಲ್ಲಿ ಹಲವು ಅಂಗಡಿಗಳಿಗೆ ಹಾನಿಯಾಗಿದೆ. ಯಾವುದೇ ಅಧಿಕಾರಿಯೂ ನಮಗೆ ಸಹಾಯ ಮಾಡಿಲ್ಲ. ಎಲ್ಲವನ್ನು ನಾವೇ ನಿರ್ವಹಣೆ ಮಾಡಿಕೊಂಡಿದ್ದೇವೆ' ಎಂದು ವರ್ತಕರು ಹೇಳಿದರು.

'ಮಾರುಕಟ್ಟೆಯ ಪರಿಸ್ಥಿತಿ ಗಮನಿಸಿದರೆ ಕೂಡಲೇ ವ್ಯಾಪಾರಿಗಳನ್ನು ಸ್ಥಳಾಂತರಿಸಬೇಕಿದೆ. ಹೊಸದಾಗಿ ಮಾರುಕಟ್ಟೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸುತ್ತೇವೆ. ಅನುದಾನ ದೊರೆಯದಿದ್ದರೆ ಈ ಮಾರುಕಟ್ಟೆಯನ್ನೇ ನವೀಕರಿಸುತ್ತೇವೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

ಶಿವಾಜಿನಗರ–ಎಂ.ಜಿ.ರಸ್ತೆ ನಡುವಿನ ಸುರಂಗ ಮಾರ್ಗ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರ ಮತ್ತು ಎಂ.ಜಿ ರಸ್ತೆ ನಡುವಿನ ಮೆಟ್ರೊ ರೈಲು ಮಾರ್ಗಕ್ಕೆ ಸುರಂಗ ಕೊರೆಯುವ ಕಾಮಗಾರಿಯನ್ನು ಟನಲ್ ಬೋರಿಂಗ್ ಮಷಿನ್ (ಟಿಬಿಎಂ) 'ಲಾವಿ' ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಎಂ.ಜಿ. ರಸ್ತೆ ಬಳಿ ಸುರಂಗದಿಂದ ಟಿಬಿಎಂ ಶುಕ್ರವಾರ ಹೊರ ಬಂದಿತು.

ಡೇರಿ ವೃತ್ತದಿಂದ ನಾಗವಾರ ತನಕದ ರೀಚ್ –6 ಮಾರ್ಗದಲ್ಲಿ 13.76 ಕಿ.ಮೀ ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. ಶಿವಾಜಿನಗರ ಮೆಟ್ರೊ ರೈಲು ನಿಲ್ದಾಣದಿಂದ ಫೆಬ್ರುವರಿ 10ರಂದು ಹೊರಟ 'ಲಾವಿ' ಎಂಬ ಸುರಂಗ ಕೊರೆಯುವ ಯಂತ್ರ, 1,076 ಮೀಟರ್‌ಗಳಷ್ಟು ಉದ್ದದ ಸುರಂಗ ಕೊರೆದಿದೆ.

'ಈ ಮಾರ್ಗದಲ್ಲಿ ಸುರಂಗ ಕೊರೆಯುವಾಗ ಎದುರಾದ ಬಂಡೆಗಳನ್ನು ಸೀಳಿ 'ಲಾವಿ' ತನ್ನ ಕೆಲಸ ಪೂರ್ಣಗೊಳಿಸಿದೆ. 232 ಮೀಟರ್ ಉದ್ದದ ಬಂಡೆ ಕೊರೆಯಲಾಗಿದೆ. ಎಂ.ಜಿ. ರಸ್ತೆ ಮತ್ತು ರಾಷ್ಟ್ರೀಯ ಮಿಲಿಟರಿ ಶಾಲೆ ನಿಲ್ದಾಣಗಳ ನಡುವಿನ ಸುರಂಗ ಕೊರೆಯುವ ಕಾಮಗಾರಿಯನ್ನು ಈ ಯಂತ್ರ ಮುಂದುವರಿಸಲಿದೆ' ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.



ಎಂ.ಜಿ. ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಮೆಟ್ರೊ ರೈಲು ನಿಲ್ದಾಣದ ಬಳಿ ಹೊರ ಬಂದ ಟಿಬಿಎಂ 'ಲಾವಿ'ಯೊಂದಿಗೆ ಕಾರ್ಮಿಕರು ಮತ್ತು ಅಧಿಕಾರಿಗಳು ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

ನಮ್ಮ ಮೆಟ್ರೊ ಎರಡನೇ ಹಂತದಲ್ಲಿ ಗೊಟ್ಟಿಗೆರೆ– ನಾಗವಾರವರೆಗಿನ 21.25 ಕಿ.ಮೀ ಉದ್ದದ ಮಾರ್ಗದಲ್ಲಿ (ರೀಚ್ –6) ಡೇರಿ ವೃತ್ತದಿಂದ ನಾಗವಾರದವರೆಗೆ 13.76 ಕಿ.ಮೀ ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. ಇದು ದೇಶದಲ್ಲೇ ಅತಿ ಉದ್ದದ ಮೆಟ್ರೊ ಸುರಂಗ ಮಾರ್ಗ. 9 ಯಂತ್ರಗಳು ಸುರಂಗ ಕೊರೆಯುವ ಕಾರ್ಯದಲ್ಲಿ ತೊಡಗಿವೆ. ಪ್ರತಿ ದಿನ ಸರಾಸರಿ 3.5 ಮೀ.ಉದ್ದದಷ್ಟು ಸುರಂಗ ಕೊರೆಯಲಾಗುತ್ತಿದೆ. ಎರಡನೇ ಹಂತದ ಮೆಟ್ರೊ ರೈಲು ಮಾರ್ಗದ ಕಾಮಗಾರಿಗಳನ್ನು 2024ರಲ್ಲಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಡುವು ನೀಡಿದ್ದಾರೆ.

ಕೋವಿಡ್ ಲಸಿಕೆ: ಮುನ್ನೆಚ್ಚರಿಕೆ ಡೋಸ್‌ಗೆ ನಿರಾಸಕ್ತಿ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗಿರುವುದರಿಂದ ಮುನ್ನೆಚ್ಚರಿಕೆ ಡೋಸ್ ಪಡೆಯಲು 18ರಿಂದ 60 ವರ್ಷದೊಳಗಿನವರು ನಿರಾಸಕ್ತಿ ತೋರುತ್ತಿದ್ದಾರೆ.

'ಕೋವಿಶೀಲ್ಡ್' ಹಾಗೂ 'ಕೋವ್ಯಾಕ್ಸಿನ್' ಲಸಿಕೆಯ ಮುನ್ನೆಚ್ಚರಿಕೆ ಡೋಸ್ ದರವನ್ನು ತಯಾರಿಕಾ ಕಂಪನಿಗಳು ₹ 225ಕ್ಕೆ ಇಳಿಕೆ ಮಾಡಿವೆ. ಆಸ್ಪತ್ರೆಗಳು ಡೋಸ್ ಲಸಿಕೆಗೆ ಸೇವಾ ಶುಲ್ಕ ಸಹಿತ ₹ 386 ನಿಗದಿ ಮಾಡಿವೆ. ಹಣ ಪಾವತಿಸಿ ಲಸಿಕೆ ಪಡೆದುಕೊಳ್ಳಬೇಕಿದೆ. ಹೀಗಾಗಿ, 18ರಿಂದ 60 ವರ್ಷದವರು ಲಸಿಕೆಗೆ ಹಿಂದೇಟು ಹಾಕುತ್ತಿದ್ದಾರೆ.

ಅಪೂರ್ವ, ಅಪೋಲೊ, ದೇವ್ ಹೆಲ್ತ್ ಕೇರ್ ಸೆಂಟರ್, ಕೊಲಂಬಿಯಾ ಏಷ್ಯಾ, ಮಣಿಪಾಲ್, ಆಸ್ಟರ್ ಕ್ಲಿನಿಕ್ ಸೇರಿದಂತೆ ಬಹುತೇಕ ಆಸ್ಪತ್ರೆಗಳಲ್ಲಿ ಕಾಯ್ದಿರಿಸುವಿಕೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. 132 ಖಾಸಗಿ ಆಸ್ಪತ್ರೆಗಳು ಕೋವಿಡ್ ಲಸಿಕೆ ವಿತರಿಸುತ್ತಿವೆ.

ಚಿತ್ರದುರ್ಗ ಜಿಲ್ಲೆ: ಆಲಿಕಲ್ಲು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿರಿಯೂರು ತಾಲ್ಲೂಕಿನ ಧರ್ಮಪುರ ಹೋಬಳಿಯಲ್ಲಿ ಗುರುವಾರ ರಾತ್ರಿ ಬಿರುಗಾಳಿ ಸಹಿತ ಸುರಿದ ಆಲಿಕಲ್ಲು ಮಳೆಗೆ ಸೂಗೂರಿನಲ್ಲಿ 50ಕ್ಕೂ ಹೆಚ್ಚು ತೆಂಗಿನಮರಗಳು ಧರೆಗುರುಳಿವೆ. ಜಮೀನಿನಲ್ಲಿದ್ದ ಮನೆಯ ಮೇಲೆ ಹೊದಿಸಿದ್ದ ಶೀಟುಗಳು ಸಂಪೂರ್ಣ ಹಾರಿ ಹೋಗಿದ್ದು, ಅಪಾರ ನಷ್ಟ ಉಂಟಾಗಿದೆ.

ಸೂಗೂರು ಹಾಗೂ ಬುರುಡುಕುಂಟೆಯಲ್ಲಿ ಅಡಿಕೆ ಮತ್ತು ಬಾಳೆತೋಟಕ್ಕೆ ಹಾನಿಯಾಗಿದೆ. ಬೆಟ್ಟಗೊಂಡನಹಳ್ಳಿ, ಹೊಸಕೆರೆ, ಮದ್ದಿಹಳ್ಳಿ, ಹಲಗಲದ್ದಿ, ಕೃಷ್ಣಾಪುರಗಳಲ್ಲಿ ಮಾವಿನತೋಟದಲ್ಲಿ ಮಾವಿನಕಾಯಿಗಳು ನೆಲಕ್ಕೆ ಉದುರಿವೆ. ಧರ್ಮಪುರ ಹೋಬಳಿಯಲ್ಲಿ ಹೆಚ್ಚು ತೋಟಗಾರಿಕೆ ಬೆಳೆಗಳಿದ್ದು, ದಾಳಿಂಬೆ, ಪಪ್ಪಾಯಿ, ಸೀಬೆಕಾಯಿಗಳು ಕೊಳೆಯುವ ಆತಂಕವಿದೆ. ಚಳ್ಳಕೆರೆಯಲ್ಲಿ ಆಲಿಕಲ್ಲು ಮಳೆಗೆ ಪರಶುರಾಂಪುರ ಹೋಬಳಿ ವ್ಯಾಪ್ತಿಯ ಕೆಲ ಗ್ರಾಮಗಳಲ್ಲಿ ಟೊಮೆಟೊ, ಬದನೆಕಾಯಿ ಸೇರಿ ಅಲ್ಪ ಪ್ರಮಾಣದ ತರಕಾರಿ ಬೆಳೆಗೆ ಹಾನಿಯಾಗಿದೆ.

ದಾವಣಗೆರೆ ನಗರ ಸೇರಿ ಹೊನ್ನಾಳಿ, ಚನ್ನಗಿರಿ, ಹರಿಹರ ತಾಲ್ಲೂಕುಗಳಲ್ಲಿ ಮಳೆಯಾಗಿದೆ. ಹರಿಹರ ತಾಲ್ಲೂಕಿನ ಮಲೇಬೆನ್ನೂರು ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ ಅರ್ಧಗಂಟೆ ಆಲಿಕಲ್ಲು ಸಹಿತ ಗುಡುಗು ಸಿಡಿಲು, ಮಿಂಚಿನ ಆರ್ಭಟದೊಂದಿಗೆ ಬಿರುಮಳೆ ಸುರಿಯಿತು. ಜಗಳೂರಿನಲ್ಲಿ ಮಂಜಣ್ಣ ಎಂಬುವವರಿಗೆ ಸೇರಿದ ಬೇಕರಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಸುಟ್ಟು ಭಸ್ಮವಾಗಿದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹಾಗೂ ಆನವಟ್ಟಿಯಲ್ಲಿ ಶುಕ್ರವಾರ ಬೆಳಗಿನ ಜಾವ ಸಾಧಾರಣ ಮಳೆಯಾಗಿದೆ.

ವಿಶ್ವೇಶ್ವರಯ್ಯ ಬ್ಯಾಂಕ್‌ಗೆ ₹ 40.44 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರಿ ವಲಯದ ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ 2021–22ರ ಆರ್ಥಿಕ ವರ್ಷದಲ್ಲಿ ಉತ್ತಮ ವಹಿವಾಟು ನಡೆಸಿ ₹40.44 ಕೋಟಿ ಲಾಭ ಗಳಿಸಿದೆ.

ಏ.15ಕ್ಕೆ ಬ್ಯಾಂಕ್ 43 ವರ್ಷ ಪೂರೈಸಿದ್ದು, 44ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಕಳೆದ ಆರ್ಥಿಕ ವರ್ಷದಲ್ಲಿ ₹1,253.14 ಕೋಟಿಯಷ್ಟು ಠೇವಣಿ ಸಂಗ್ರಹಿಸಿದ್ದು, ₹884.25 ಕೋಟಿ ಸಾಲ ವಿತರಿಸಿದೆ. ಜತೆಗೆ, ₹8 ಕೋಟಿ ಆದಾಯ ತೆರಿಗೆ ಪಾವತಿಸಿದೆ ಎಂದು ಅಧ್ಯಕ್ಷರಾದ ಡಾ. ರೇಖಾ ಲಕ್ಷ್ಮಣ್ ಮತ್ತು ಉಪಾಧ್ಯಕ್ಷ ಬಿ.ಎಸ್. ಶ್ರೀಪತಿರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀರ್ಘಾವಧಿ ಠೇವಣಿಗೆ ಗರಿಷ್ಠ ಶೇ 8ರ ದರದಲ್ಲಿ ಬಡ್ಡಿ ನೀಡಲಾಗುತ್ತಿದೆ. ಅರ್ಹ ಸದಸ್ಯರಿಗೆ ವೈದ್ಯಕೀಯ ಸೌಲಭ್ಯ ನೀಡಲಾಗುತ್ತಿದೆ. ಎಟಿಎಂಗಳಲ್ಲಿ ರುಪೆ ಕಾರ್ಡ್‌ಗಳನ್ನು ಗ್ರಾಹಕರು ತಿಂಗಳಲ್ಲಿ ಎಷ್ಟು ಬಾರಿಯಾದರೂ ಹಣ ಹಿಂಪಡೆಯಲು ಬಳಸಬಹುದಾಗಿದೆ. ಇದಕ್ಕೆ ಯಾವುದೇ ಶುಲ್ಕ ಇಲ್ಲ ಎಂದು ವಿವರಿಸಿದ್ದಾರೆ.

12 ಜಿಲ್ಲೆಗಳಲ್ಲಿ ಕಾರ್ಯವ್ಯಾಪ್ತಿ ಹೊಂದಿರುವ ಬ್ಯಾಂಕ್, 11 ಶಾಖೆಗಳಲ್ಲಿ 3 ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಿದೆ. 20,301 ಸದಸ್ಯರನ್ನು ಹೊಂದಿದ್ದು, ₹49.06 ಕೋಟಿ ಷೇರು ಬಂಡವಾಳ ಹೊಂದಿದೆ. ಜತೆಗೆ, ₹225.15 ಆಪದ್ಧನ ನಿಧಿ ಮತ್ತು ₹274.51 ಕೋಟಿ ಸ್ವಂತ ಬಂಡವಾಳ ಹೊಂದಿದೆ ಎಂದು ವಿವರಿಸಿದ್ದಾರೆ.

ಅಂಬೇಡ್ಕರ್ ಪ್ರತಿಮೆ ನಿರ್ಮಾಣ; ಭೂಮಿ ಪೂಜೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮಿನಿ ವಿಧಾನಸೌಧದ ಮುಂಭಾಗದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ. ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪಿಸುವ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಭೂಮಿ ಪೂಜೆ ನೆರವೇರಿಸಿದರು.

'ಮಿನಿ ವಿಧಾನಸೌಧದ ಮುಂಭಾಗದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣವಾಗಬೇಕೆಂಬ ದಲಿತ ಮುಖಂಡರ ಹಲವು ವರ್ಷಗಳ ಬೇಡಿಕೆಯಂತೆ 14 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರ ಅನುಮತಿ ನೀಡಿದೆ. ಇದಕ್ಕಾಗಿ ಒಟ್ಟು ₹1.60 ಕೋಟಿ ಅನುದಾನ ಬಿಡುಗಡೆ ಮಾಡಿದೆ' ಎಂದು ವಿಶ್ವನಾಥ್ ತಿಳಿಸಿದರು



ಯಲಹಂಕ ಮಿನಿ ವಿಧಾನಸೌಧ ಮುಂಭಾಗ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಭೂಮಿ ಪೂಜೆ ನೆರವೇರಿಸಿದರು. ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಪಾಲಿಕೆ ಮಾಜಿ ಸದಸ್ಯ ಎಂ. ಸತೀಶ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ, ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಎನ್. ನಾಗರಾಜ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಜಯಕುಮಾರ್ ಇದ್ದರು. —ಪ್ರಜಾವಾಣಿ ಚಿತ್ರ

ಅಂಗಾಂಗ ದಾನ: 8 ಮಂದಿಗೆ ನೆರವಾದ ಕಿರುಚಿತ್ರ ನಿರ್ಮಾಪಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುಚಿತ್ರ ನಿರ್ಮಾಪಕ ಗಣೇಶ್ ವೇಮುಲ್ಕರ್ (42) ಅವರು ಸೆರೆಬ್ರಲ್ ವೆನಸ್ ಥ್ರಂಬೋಸಿಸ್ ಕಾಯಿಲೆಯಿಂದ ಮೃತಪಟ್ಟಿದ್ದಾರೆ. ಅವರ ಮೂತ್ರಪಿಂಡ, ಹೃದಯ, ಯಕೃತ್ತು, ಶ್ವಾಸಕೋಶ ಹಾಗೂ ಕಾರ್ನಿಯಾಗಳನ್ನು ಕುಟುಂಬದವರು ಬಿಜಿಎಸ್ ಗ್ಲೆನೆಗಲ್ಸ್ ಗ್ಲೋಬಲ್ ಆಸ್ಪತ್ರೆಗೆ ದಾನ ಮಾಡಿದ್ದು, ಅವುಗಳನ್ನು ನಗರದ ಎಂಟು ಮಂದಿ ರೋಗಿಗಳಿಗೆ ಕಸಿ ಮಾಡಲಾಗಿದೆ.

‘ತೀವ್ರ ತಲೆನೋವಿನಿಂದ ಬಳಲುತ್ತಿದ್ದ ಗಣೇಶ್ ಅವರು ಕುಟುಂಬ ವೈದ್ಯರು ಸೂಚಿಸಿದ್ದ ಔಷಧಿಗಳನ್ನು ತೆಗೆದುಕೊಂಡಿದ್ದರು. ಸತತ ಎರಡು ದಿನ ಔಷಧ ಸೇವಿಸಿದರೂ ತಲೆನೋವು ಕಡಿಮೆಯಾಗಿರಲಿಲ್ಲ. ಜೊತೆಗೆ ವಾಂತಿ ಸೇರಿದಂತೆ ಇತರ ಲಕ್ಷಣಗಳೂ ಕಂಡುಬಂದಿದ್ದವು. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಏಪ್ರಿಲ್ 6ರಂದು ನಮ್ಮ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಸೆರೆಬ್ರಲ್ ವೆನಸ್ ಥ್ರಂಬೋಸಿಸ್ ಕಾಯಿಲೆ ಬಾಧಿಸಿರುವುದು ಪರೀಕ್ಷೆಗಳಿಂದ ದೃಢಪಟ್ಟಿತ್ತು. ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಿದರೂ ಪ್ರಯೋಜನವಾಗಿರಲಿಲ್ಲ. ಅವರ ಮೆದುಳು ನಿಷ್ಕ್ರಿಯವಾಗಿರುವುದು ಏಪ್ರಿಲ್ 13 ರಂದು ದೃಢಪಟ್ಟಿತ್ತು’ ಎಂದು ಆಸ್ಪತ್ರೆಯ ವೈದ್ಯ ಡಾ.ಪಿ.ಸಿ.ಮೋಹನ್ ತಿಳಿಸಿದ್ದಾರೆ.


ಗಣೇಶ್ ವೇಮುಲ್ಕರ್

ಡಾ.ಕ್ರಾಂತಿ ಮೋಹನ್, ‘ಗಣೇಶ್ ಅವರು ಅಂಗಾಗ ದಾನ ಮಾಡುವ ಮೂಲಕ ಎಂಟು ಮಂದಿ ರೋಗಿಗಳ ಬಾಳಿಗೆ ಬೆಳಕಾಗಿದ್ದಾರೆ. ಅವರ ಒಂದು ಮೂತ್ರಪಿಂಡವನ್ನು ಮೃತರಾದ ದಿನವೇ ರೋಗಿಯೊಬ್ಬರಿಗೆ ಕಸಿ ಮಾಡಲಾಯಿತು’ ಎಂದು ತಿಳಿಸಿದರು.

ಮೃತರಿಗೆ ಪತ್ನಿ ಹಾಗೂ 4 ವರ್ಷದ ಮಗ ಇದ್ದಾನೆ ಎಂದು ಕುಟುಂಬದವರು ಹೇಳಿದ್ದಾರೆ.

ಎಸಿಬಿ ಹೆಸರಿನಲ್ಲಿ ₹1.50 ಲಕ್ಷ ವಸೂಲಿ: ಪ್ರಕರಣ ದಾಖಲು

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಡಿವೈಎಸ್ಪಿ ಹೆಸರಿನಲ್ಲಿ ತುಮಕೂರು ಬೆಸ್ಕಾಂ ಕಚೇರಿ ಅಧೀಕ್ಷಕ ಎಂಜಿನಿಯರ್ ಗುರುಸ್ವಾಮಿ ಅವರಿಂದ ₹ 1.50 ಲಕ್ಷ ವಸೂಲಿ ಮಾಡಲಾಗಿದ್ದು, ಈ ಬಗ್ಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಗುರುಸ್ವಾಮಿ ಅವರು ದೂರು ಕೊಟ್ಟಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗುರುಸ್ವಾಮಿ ಅವರಿಗೆ ಮಾರ್ಚ್ 31ರಂದು ಕರೆ ಮಾಡಿದ್ದ ಆರೋಪಿ, ‘ನಾನು ಬೆಂಗಳೂರು ಎಸಿಬಿ ಕಚೇರಿ ಡಿವೈಎಸ್ಪಿ. ನಿಮ್ಮ ವಿರುದ್ಧ ಭ್ರಷ್ಟಾಚಾರ ಆರೋಪವಿದ್ದು, ಶೀಘ್ರದಲ್ಲಿ ದಾಳಿ ಮಾಡಲಾಗುವುದು. ಈ ರೀತಿ ಮಾಡಬಾರದು ಎಂದರೆ ₹ 1.50 ಲಕ್ಷ ನೀಡಬೇಕು ಎಂದಿದ್ದ’. ಆತನ ಮಾತು ನಂಬಿದ್ದ ಗುರುಸ್ವಾಮಿ, ಖಾತೆಗೆ ಹಣ ಜಮೆ ಮಾಡಿದ್ದರು’ ಎಂದೂ ತಿಳಿಸಿವೆ. ‘ಇತ್ತೀಚೆಗೆ ಪುನಃ ₹ 50,000 ಆರೋಪಿ ಬೇಡಿಕೆ ಇರಿಸಿದ್ದ. ಅನುಮಾನಗೊಂಡ ಗುರುಸ್ವಾಮಿ, ಪರಿಚಯಸ್ಥರ ಮೂಲಕ ಎಸಿಬಿ ಕಚೇರಿಯಲ್ಲಿ ವಿಚಾರಿಸಿದ್ದರು. ಯಾರೊಬ್ಬರೂ ಕರೆ ಮಾಡಿಲ್ಲವೆಂಬುದು ಗೊತ್ತಾಗಿತ್ತು. ಬಳಿಕ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ಹೇಳಿವೆ.

ರಸ್ತೆ ಅಭಿವೃದ್ಧಿ ಕಾಮಗಾರಿ • ನೀರು ಪೂರೈಕೆ ಪೈಪ್‌ಲೈನ್ ಅಳವಡಿಕೆಯಿಂದ ವಿಳಂಬ

ಅಂಜನಾಪುರ ರಸ್ತೆಗೆ ಬಿಡದ ಗ್ರಹಣ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಅಂಜನಾಪುರ 80 ಅಡಿ ರಸ್ತೆ ಅಭಿವೃದ್ಧಿಗೆ ಹಿಡಿದಿರುವ ಗ್ರಹಣ ಸದ್ಯಕ್ಕೆ ಬಿಡುವ ಲಕ್ಷಣ ಇಲ್ಲ. ಕಳೆದ ಎರಡು ವರ್ಷಗಳಿಂದ ರಸ್ತೆ ಇದ್ದರೂ ಇಲ್ಲದ ಸ್ಥಿತಿಯಲ್ಲಿದ್ದು, ವಾಹನ ಸವಾರರು ಬದಲಿ ರಸ್ತೆಗಳಲ್ಲೂ ಸುತ್ತು ಬಳಸಿ ಸಂಚರಿಸುತ್ತಿದ್ದಾರೆ.

ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದಿಂದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಸಂಪರ್ಕಿಸುವ ಅಂಜನಾಪುರ ಮುಖ್ಯ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಂತೆ ಆಗಿದೆ. ಒಟ್ಟು 6.7 ಕಿಲೋ ಮೀಟರ್ ಉದ್ದದ ರಸ್ತೆಯಲ್ಲಿ ಒಂದೂವರೆ ಕಿಲೋ ಮೀಟರ್ ಮಾತ್ರ ಅಭಿವೃದ್ಧಿಯಾಗಿದೆ. ಉಳಿದಂತೆ 5.2 ಕಿಲೋ ಮೀಟರ್ ರಸ್ತೆ ಅಭಿವೃದ್ಧಿ ಮರೀಚಿಕೆಯಾಗಿದೆ.

ವೈಟ್‌ಫೀಲ್ಡ್‌ಗೆ ಕಾವೇರಿ ನೀರು ಪೂರೈಸಲು ಜಲಮಂಡಳಿಯಿಂದ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ದೊಡ್ಡ ದೊಡ್ಡ ಪೈಪ್‌ಗಳನ್ನು ರಸ್ತೆ ಮಧ್ಯದಲ್ಲಿ ನೆಲದೊಳಕ್ಕೆ ಹೂಳಲಾಗುತ್ತಿದೆ.

ರಸ್ತೆ ಮಧ್ಯದಲ್ಲಿ ಪೈಪ್‌ಲೈನ್ ಅಳವಡಿಕೆ ಮಾರ್ಗದಲ್ಲಿ ದೊಡ್ಡ ಬಂಡೆಯೊಂದು ಕಾಣಿಸಿದ್ದು, ಅದನ್ನು ಕತ್ತರಿಸಿ ಪೈಪ್‌ಲೈನ್ ಅಳವಡಿಕೆ ಮಾಡಬೇಕಿದೆ. ಆದ್ದರಿಂದ ಕಾಮಗಾರಿಯ ವೇಗಕ್ಕೆ ತೊಡಕಾಗಿದೆ. ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳದೆ ರಸ್ತೆ ಅಭಿವೃದ್ಧಿ ಅಸಾಧ್ಯ. ಕಾಮಗಾರಿ ನಡೆಯುತ್ತಿರುವ ವೇಗ ನೋಡಿದರೆ ವರ್ಷಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ.

ಒಂದೇ ಒಂದು ವಾಹನವೂ ಸಂಚರಿಸಲು ಸಾಧ್ಯವಿಲ್ಲದಷ್ಟು ರಸ್ತೆ ಹಾಳಾಗಿದೆ. ಆದ್ದರಿಂದ ಪರ್ಯಾಯ ಮಾರ್ಗಗಳಲ್ಲಿ ಸುತ್ತು ಬಳಸಿ ವಾಹನಗಳು ಸಂಚರಿಸುತ್ತಿವೆ. 80 ಅಡಿ ರಸ್ತೆಯ ಅಕ್ಕ–ಪಕ್ಕದ ನಿವಾಸಿಗಳು ಅನಿವಾರ್ಯವಾಗಿ ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದಾರೆ. ಒಂದು ವಾಹನ ಹಾದು ಹೋದರೂ ರಸ್ತೆಯ ತುಂಬ ದೂಳು ತುಂಬಿಕೊಳ್ಳುತ್ತದೆ. ರಸ್ತೆ ಅಕ್ಕ–ಪಕ್ಕದ ಮನೆಗಳಿಗೆ ದೂಳು ತುಂಬಿಕೊಂಡು ಗೋಡೆಗಳೆಲ್ಲವೂ ಕೆಂಪು ಬಣ್ಣಕ್ಕೆ ತಿರುಗಿವೆ. ರಸ್ತೆ ಬದಿಯ ಅಂಗಡಿಗಳಿಗೆ ವ್ಯಾಪಾರವೇ ಇಲ್ಲವಾಗಿದೆ.

‘ಎರಡು ವರ್ಷಗಳಿಂದ ದೂಳಿನ ನಡುವೆಯೇ ಜೀವನ ನಡೆಸುತ್ತಿರುವುದರಿಂದ ಅನಾರೋಗ್ಯಕ್ಕೆ ತುತ್ತಾಗಿದ್ದೇನೆ. ನಮ್ಮ ಕಷ್ಟ ಯಾರಿಗೆ ಹೇಳುವುದೋ ಗೊತ್ತಿಲ್ಲ’ ಎಂದು 80 ಅಡಿ ರಸ್ತೆ ಬದಿಯಲ್ಲಿ ಅಂಗಡಿ ನಡೆಸುತ್ತಿರುವ ಲೋಕೇಶ್ ಬೇಸರ ವ್ಯಕ್ತಪಡಿಸಿದರು.

ಇದೇ ರಸ್ತೆ ಬದಿಯಲ್ಲಿ ಬಿಎಂಟಿಸಿ ಬಸ್ ಘಟಕ ಕೂಡ ಇದೆ. ಅಲ್ಲಿಗೆ ಬಸ್‌ಗಳು ಬರುವುದು ಮತ್ತು ಹೋಗುವುದೇ ದೊಡ್ಡ ಸಮಸ್ಯೆ. ರಸ್ತೆಯ ಒಂದು ಬದಿಯಲ್ಲಾದರೂ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂಬುದು ಸ್ಥಳೀಯರ ಒತ್ತಾಯ.


ಅಂಜನಾಪುರ 80 ಅಡಿ ರಸ್ತೆಯಲ್ಲಿ ನಡೆಯುತ್ತಿರುವ ಕಾವೇರಿ ನೀರು ಪೂರೈಕೆ ಪೈಪ್‌ಲೈನ್ ಕಾಮಗಾರಿ
ಪ್ರಜಾವಾಣಿ ಚಿತ್ರ– ಎಂ.ಎಸ್.ಮಂಜುನಾಥ್

ಹೊರ ವಲಯ ಒಳ ಬೇಗುದಿ

ಪೈಪ್‌ಲೈನ್ ಕಾಮಗಾರಿ ಮುಗಿದರೆ ರಸ್ತೆ ಅಭಿವೃದ್ಧಿ

‘ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡ ಕೂಡಲೇ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗುವುದು’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

‘ಮೊದಲೇ ರಸ್ತೆ ಅಭಿವೃದ್ಧಿಪಡಿಸಿದರೆ ಜಲಮಂಡಲಿಯವರು ಮತ್ತೆ ಅಗೆಯುವ ಸಾಧ್ಯತೆ ಇದೆ. ಆದ್ದರಿಂದ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳ್ಳಲಿ ಎಂದು ಕಾಯುತ್ತಿದ್ದೇವೆ’ ಎಂದು ಹೇಳಿದರು.

10 ವರ್ಷಗಳಲ್ಲಿ ವೈದ್ಯರ ಸಂಖ್ಯೆ ಹೆಚ್ಚಳ– ಮೋದಿ

ಭುಜ್ (ಪಿಟಿಐ): ‘ಪ್ರತಿ ಜಿಲ್ಲೆಗೊಂದು ಕನಿಷ್ಠ ಒಂದು ವೈದ್ಯಕೀಯ ಕಾಲೇಜು ಸ್ಥಾಪಿಸುವ ಕೇಂದ್ರ ಸರ್ಕಾರದ ನೀತಿಯಿಂದಾಗಿ ಮುಂದಿನ 10 ವರ್ಷಗಳಲ್ಲಿ ದೇಶವು ದಾಖಲೆಯ ಸಂಖ್ಯೆಯಲ್ಲಿ ವೈದ್ಯರನ್ನು ಹೊಂದಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಗುಜರಾತನ್ ಕಛ್ ಜಿಲ್ಲೆಯ ಭುಜ್‌ನಲ್ಲಿ 200 ಹಾಸಿಗೆ ಸಾಮರ್ಥ್ಯದ ಕೆ.ಕೆ. ಪಟೇಲ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಅವರು ಮಾತನಾಡಿದರು.

‘ಕೊರೊನಾ ವೈರಸ್ ಇನ್ನೂ ಸುಪ್ತವಾಗಿ ಅಡಗಿದ್ದು, ಜನರು ಈ ಬಗ್ಗೆ ಲಘುವಾಗಿ ಪರಿಗಣಿಸದೇ ಜಾಗ್ರತೆಯಿಂದ ಇರಬೇಕು’ ಎಂದು ಸಲಹೆ ನೀಡಿದರು.

‘ವೈದ್ಯಕೀಯ ಶಿಕ್ಷಣವನ್ನು ಎಲ್ಲರೂ ಪಡೆಯುವಂತಾಗಲು ಸರ್ಕಾರದಿಂದ ಪ್ರತಿ ಜಿಲ್ಲೆಯಲ್ಲೂ ಕನಿಷ್ಠ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಎರಡು ದಶಕಗಳ ಹಿಂದೆ, ಗುಜರಾತ್‌ನಲ್ಲಿ ಸುಮಾರು 1,100 ಎಂಬಿಬಿಎಸ್ ಸೀಟುಗಳೊಂದಿಗೆ ಕೇವಲ 9 ವೈದ್ಯಕೀಯ ಕಾಲೇಜುಗಳಿದ್ದವು. ಆದರೆ, ಈಗ ಗುಜರಾತ್‌ನಲ್ಲಿ ಒಂದು ಏಮ್ಸ್ ಮತ್ತು ಮೂರು ಡಜನ್‌ಗಳಿಗಿಂತಲೂ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ’ ಎಂದು ಅವರು ಹೇಳಿದರು.

‘ಈ ಹಿಂದೆ ಗುಜರಾತಿನ ವೈದ್ಯಕೀಯ ಕಾಲೇಜುಗಳಲ್ಲಿ ಕೇವಲ ಒಂದು ಸಾವಿರ ವಿದ್ಯಾರ್ಥಿಗಳಷ್ಟೇ ಪ್ರವೇಶ ಪಡೆಯುತ್ತಿದ್ದರು. ಆದರೆ, ಈಗ 6 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯುವಂತಾಗಿದೆ. 2021ರಲ್ಲಿ ರಾಜ್‌ಕೋಟ್‌ನಲ್ಲಿ ಏಮ್ಸ್ ಆರಂಭವಾದಾಗಿನಿಂದ 50 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ’ ಎಂದರು.

‘ಕೋವಿಡ್ ಬಂದ ಬಳಿಕ ಜಗತ್ತಿನಾದ್ಯಂತ ಜನರಿಗೆ ಅರಿಶಿನದ ಆರೋಗ್ಯಕರ ಗುಣಗಳ ಕುರಿತು ಅರಿವಾಗಿದೆ ಎಂದು ಹೇಳಿದ್ದಾರೆ.

ಜೋಡಿ ಕೊಲೆ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೋಡಿ ಕೊಲೆ ಪ್ರಕರಣವೊಂದರ ಅಪ್ರಾಪ್ತ ವಯಸ್ಸಿನ ಆರೋಪಿ ಈಗಾಗಲೇ ಎರಡೂವರೆ ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದಾನೆ’ ಎಂಬ ಕಾರಣಕ್ಕೆ ಹೈಕೋರ್ಟ್ ಆತನಿಗೆ ಷರತ್ತುಬದ್ಧ ಜಾಮೀನು ನೀಡಿದೆ.

ಈ ಕುರಿತಂತೆ ಆರೋಪಿ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಅಪ್ರಾಪ್ತರು ತಪ್ಪಿತಸ್ಥರೆಂದು ಸಾಬೀತಾದರೆ ಗರಿಷ್ಠ 3 ವರ್ಷ ಶಿಕ್ಷೆಯನ್ನಷ್ಟೇ ವಿಧಿಸಬಹುದಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರ 17 ವರ್ಷದವನಿದ್ದ ಸಂದರ್ಭದಲ್ಲಿ ಆತನ ವಿರುದ್ಧ ಕೊಲೆ ಆರೋಪ ದಾಖಲಾಗಿದೆ. ಈಗಾಗಲೇ ಎರಡೂವರೆ ವರ್ಷ ಜೈಲುವಾಸ ಅನುಭವಿಸಿದ್ದಾನೆ. ಮೇಲಾಗಿ ಪ್ರಕರಣದ ಮೊದಲ ಆರೋಪಿಯೂ ಸೇರಿದಂತೆ ಇತರ ಆರೋಪಿಗಳಿಗೆ ಜಾಮೀನು ದೊರೆತಿದೆ. ಹೀಗಾಗಿ, ಅರ್ಜಿದಾರನಿಗೆ ಷರತ್ತುಬದ್ಧ ಜಾಮೀನು ನೀಡಬಹುದಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ಮೊದಲು ಆರೋಪಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಬಾಲನ್ಯಾಯ ಮಂಡಳಿ 2019ರ ಜನವರಿ 4ರಂದು ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ಆರೋಪಿ ಮೇಲ್ಮನವಿ ಸಲ್ಲಿಸಿದ್ದ.ಈ ಅರ್ಜಿಯೂ 2020ರ ಜನವರಿ 31ರಂದು ವಜಾಗೊಂಡಿತ್ತು. ಹೀಗಾಗಿ, ಹೈಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದ.

ನಾಟಕ ಅಕಾಡೆಮಿ ಅನುದಾನ ಕಡಿತ ಸ್ಥಗಿತಕ್ಕೆ ಆಗ್ರಹ

ಬಳ್ಳಾರಿ: ಕೋವಿಡ್ ಕಾರಣದಿಂದ ವಿವಿಧ ಅಕಾಡೆಮಿಗಳ ಅನುದಾನ ಕಡಿತಗೊಳಿಸಿರುವ ನಿರ್ಧಾರ ಹಿಂದಕ್ಕೆ ಪಡೆಯಬೇಕು ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಆರ್. ಭೀಮಸೇನ ಆಗ್ರಹಿಸಿದರು.

ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೇ 7 ಮತ್ತು 8ರಂದು ಇಲ್ಲಿನ ದೊಡ್ಡನಗೌಡ ರಂಗಮಂದಿರದಲ್ಲಿ ನಡೆಸುವ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಅವರು ಒತ್ತಾಯ ಮಾಡಿದರು. ಸರ್ಕಾರ ಕೋವಿಡ್‌ಗೆ ಮೊದಲು ನಾಟಕ ಅಕಾಡೆಮಿಗೆ ₹ 1 ಕೋಟಿ ಅನುದಾನ ಕೊಡುತ್ತಿತ್ತು. ಕೋವಿಡ್ ಬಳಿಕ ಈ ಅನುದಾನವನ್ನು ಶೇ 40ರಷ್ಟು ಕಡಿಮೆ ಮಾಡಿದೆ. 2020–21ನೇ ಸಾಲಿನಲ್ಲಿ ಕೇವಲ ₹ 60 ಲಕ್ಷ ನೀಡಿದೆ. ಈ ವರ್ಷ ₹ 80 ಲಕ್ಷವನ್ನಾದರೂ ಕೊಡಬೇಕು ಎಂದು ಕೋರಿದರು.

ಸಿಎಂಆರ್ ವಿವಿ: ಡಿಸೈನ್ ಥಿಂಕಿಂಗ್ ಡೇ

ಪ್ರಜಾವಾಣಿ ವಾರ್ತೆ

ಯಲಹಂಕ: ಜನೋಪಯೋಗಿ ಸಾಮಾಜಿಕ ಕೊಡುಗೆ ನೀಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಗುರಿಯೊಂದಿಗೆ ‘ಸಿಎಂಆರ್ ವಿವಿ ಡಿಸೈನ್ ಥಿಂಕಿಂಗ್ ಡೇ’ ಎಂಬ ದಿನಾಚರಣೆಗೆ ಚಾಲನೆ ನೀಡಲಾಯಿತು.


ಪ್ರಸ್ತುತ ನಗರದ ತ್ಯಾಜ್ಯ ನಿರ್ವಹಣೆ, ನೀರಿನ ಬಿಕ್ಕಟ್ಟಿನಂತಹ ಸಮಸ್ಯೆಗಳ ಪರಿಶೀಲನೆಯಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಂಡಿದ್ದು, ಈ ದಿನಾಚರಣೆಯ ಮೊದಲ ಆವೃತ್ತಿಯಲ್ಲಿ ತಮ್ಮ ಆಸಕ್ತಿಯ ವಿಷಯಗಳನ್ನು ಕುರಿತು ಜನಸಾಮಾನ್ಯರಿಗೆ ವಿವರಿಸಿದರು. ವಿಶ್ವವಿದ್ಯಾಲಯವು 2021-22ರ ಶೈಕ್ಷಣಿಕ ವರ್ಷದಿಂದ ತನ್ನ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಈ ವಿನ್ಯಾಸ ಚಿಂತನೆಯನ್ನು ಕಡ್ಡಾಯ ಕೋರ್ಸ್ ಆಗಿ ಮಾಡಿದೆ.

ಭೂಭರ್ತಿ ಮತ್ತು ತ್ಯಾಜ್ಯನಿರ್ವಹಣೆಗೆ ಕಾರ್ಯಸಾಧ್ಯವಾದ ಆಯ್ಕೆಗಳ ಜೊತೆಗೆ ಆಹಾರ, ಪ್ಲಾಸ್ಟಿಕ್ ಮತ್ತು ಇ-ತ್ಯಾಜ್ಯಗಳ ಪ್ರಮಾಣ ಮತ್ತು ಪ್ರವಾಸೋದ್ಯಮ, ಜವಳಿ ಉದ್ಯಮ ಮತ್ತಿತರ ಕ್ಷೇತ್ರಗಳ ಬಗ್ಗೆ ವಾಸ್ತವ ಅಧ್ಯಯನವನ್ನು ವಿದ್ಯಾರ್ಥಿಗಳು ಕೈಗೊಂಡಿದ್ದಾರೆ. ಮೊಬೈಲ್ ಫೋನ್‌ಗಳ ಬಳಕೆ ಮತ್ತು ಚಾರ್ಜಿಂಗ್ ಸಮಯವನ್ನು ಕಡಿಮೆ ಮಾಡಲು ಅಪ್ಲಿಕೇಶನ್‌ಗಳು, ಆಹಾರ ಪ್ಯಾಕೇಜಿಂಗ್‌ನಲ್ಲಿ ಕಾರ್ಯಕ್ಷಮತೆಯ ವಿಧಾನಗಳು, ಸರೋವರ ಸಂರಕ್ಷಣೆಗಾಗಿ ಆಕ್ವಾ ಸುರಂಗಮಾರ್ಗ ರಚಿಸುವುದೂ ಸೇರಿದಂತೆ ಹಲವು ಮಾದರಿಗಳನ್ನು ವಿದ್ಯಾರ್ಥಿಗಳು ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶಿಸಿದರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ದಾರದ ಕುಣಿಕೆಗಳನ್ನು ಕಟ್ಟುವ ಮೂಲಕ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ ವಿಧಾನದ ಮಾಹಿತಿ ನೀಡಿದರು

ಚಿತ್ರಾವಳಿ


ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್ ನಗರದಲ್ಲಿ ಆಯೋಜಿಸಿರುವ 84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವದಲ್ಲಿ ವಿದ್ವಾನ್ ಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಮಕುಮಾರ್ ಮೋಹನ್ (ತ್ರಿಚೂರ್ ಸಹೋದರರು) ಶುಕ್ರವಾರ ದ್ವಂದ್ವ ಗಾಯನ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ


ಭಾರತೀಯ ಸಾಮಗಾನ ಸಭಾ ವತಿಯಿಂದ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಅಮೃತ ಸಂಗೀತಂ’ ಕಾರ್ಯಕ್ರಮದಲ್ಲಿ ಗಾಯಕ ಓಂಕಾರ್ ಹವಾಲ್ದಾರ್ ಮತ್ತು ತಂಡದವರು ಹಿಂದೂಸ್ತಾನಿ ಸಂಗೀತ ಕಛೇರಿ ನಡೆಸಿಕೊಟ್ಟರು –ಪ್ರಜಾವಾಣಿ ಚಿತ್ರ



ಕೆ.ಆರ್.ಪುರ ಸಮೀಪದ ಗೆದ್ದಲಹಳ್ಳಿಯ ಪ್ರೆಸ್ಟಿಜ್ ಶಾಲೆಯಲ್ಲಿ ಆಸ್ಪೈರಾ ಎಚ್‌ಆರ್ ಸಲ್ಯೂಷನ್ ಸಿಇಒ ಮೊನ್ನಪ್ಪ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಪ್ರದಾನ ಮಾಡಿದರು. ಪ್ರೆಸ್ಟಿಜ್ ಸಮೂಹ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ. ಅಂಜಿನಪ್ಪ, ಪ್ರಾಂಶುಪಾಲ ಶೀಲಾ ಮ್ಯಾಥ್ಯೂ, ಶಾಲಾ ನಿರ್ದೇಶಕಿ ರಮಾದೇವಿ, ಲಾಸ್ಯ ಅಂಜಿನಪ್ಪ ಇದ್ದರು.

ಕಾನೂನುಬಾಹಿರ ಬ್ಯಾನರ್ ತೆರವುಗೊಳಿಸಲು ನಾಗರಿಕರ ಆಗ್ರಹ

ಬೈಕ್ ಸವಾರನ ಮೇಲೆ ಬಿದ್ದ ಫ್ಲೆಕ್ಸ್: ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಕೋಡಿ ಸಮೀಪ ರಸ್ತೆ ವಿಭಜಕದಲ್ಲಿ ಅಳವಡಿಸಿದ್ದ ಫ್ಲೆಕ್ಸ್‌ವೊಂದು ಬೈಕ್ ಸವಾರರೊಬ್ಬರ ಮೇಲೆ ಗುರುವಾರ ಬಿದ್ದಿದೆ. ಅದೃಷ್ಟವಶಾತ್ ಬೈಕ್ ಸವಾರ ಅಪಾಯದಿಂದ ಪಾರಾಗಿದ್ದಾರೆ.

ಈ ಬಗ್ಗೆ ‘ವೈಟ್‌ಫೀಲ್ಡ್ ರೈಸಿಂಗ್’ ಸಂಘಟನೆ ಟ್ವೀಟ್ ಮಾಡಿದ್ದು, ಸಿಗ್ಮಾ ಟೆಕ್ ಪಾರ್ಕ್ ಕಚೇರಿ ಬಳಿ ನಡೆದಿರುವ ಈ ಘಟನೆಗೆ ಯಾರು ಹೊಣೆ ಎಂದು ಪ್ರಶ್ನಿಸಿದೆ.

‘ಸಡಿಲಗೊಂಡಿದ್ದ ಬ್ಯಾನರ್‌ವೊಂದು ಬೈಕ್ ಸವಾರ ಮೇಲೆ ಬಿದ್ದಿತು. ಆಯತಪ್ಪಿದ ಬೈಕ್ ಸವಾರ ಸ್ಥಳದಲ್ಲೇ ಬಿದ್ದು, ತೀವ್ರವಾಗಿ ಗಾಯಗೊಂಡ. ಈತನ ಹಿಂದೆಯೇ ಕೇವಲ 50 ಮೀಟರ್ ದೂರದ ಅಂತರದಲ್ಲಿ ಲಾರಿಗಳು ಬರುತ್ತಿದ್ದವು. ತಕ್ಷಣವೇ ಬೈಕ್ ಸವಾರ ಎದ್ದು, ಸುರಕ್ಷಿತವಾಗಿ ರಸ್ತೆ ಬದಿಗೆ ತೆರಳಿದ. ಲಾರಿಗಳು ಅತಿ ಸಮೀಪದಲ್ಲಿ ಇದ್ದಿದ್ದರೆ ಬೈಕ್ ಸವಾರ ತನ್ನ ಜೀವವನ್ನು ಕಳೆದುಕೊಳ್ಳಬೇಕಾಗುತ್ತಿತ್ತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರ ಹೇಳಿಕೆಯನ್ನು ಟ್ವೀಟ್‌ನಲ್ಲಿ ವಿವರಿಸಲಾಗಿದೆ.

‘ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ನಗರದಲ್ಲಿ ನಿಷೇಧಿಸಲಾಗಿದೆ. ಆದರೂ ವೈಟ್‌ಫೀಲ್ಡ್ ಸುತ್ತಮುತ್ತ ಪ್ರದೇಶದಲ್ಲಿ ಎಲ್ಲೆಡೆ ಅಳವಡಿಸಲಾಗಿದೆ. ಇವುಗಳಿಗೆ ಮತ್ತೆ ಏಕೆ ಅವಕಾಶ ನೀಡಲಾಗಿದೆ. ಬಿಬಿಎಂಪಿ ಮತ್ತು ಪೊಲೀಸರು ಕಾನೂನುಬಾಹಿರ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ವಿರುದ್ಧ ಏಕೆ ಕ್ರಮಕೈಗೊಳ್ಳುತ್ತಿಲ್ಲ’ ಎಂದು ಪ್ರಶ್ನಿಸಿದೆ.

‘ಇಂತಹ ಅಪಘಾತಗಳನ್ನು ತಡೆಯಬಹುದಿತ್ತು. ವಿಭಜಕಗಳಲ್ಲಿ ಬ್ಯಾನರ್‌ಗಳನ್ನು ಏಕೆ ಅಳವಡಿಸಲಾಗಿದೆ. ಈ ಫಲಕಗಳು ಚಾಲಕರ ಗಮನವನ್ನು ಬೇರೆಡೆ ಸೆಳೆಯುತ್ತವೆ. ಈ ಬ್ಯಾನರ್‌ಗಳು ಅಪಾಯಕಾರಿ ಎನ್ನುವುದು ಪದೇ ಪದೇ ಸಾಬೀತಾಗುತ್ತದೆ. ಇದಕ್ಕೆ ಯಾರು ಹೊಣೆ’ ಎಂದು ಪ್ರಶ್ನಿಸಿದೆ.


ವರ್ತೂರು ಕೋಡಿ ಸಮೀಪ ರಸ್ತೆ ವಿಭಜಕದಲ್ಲಿ ಅಳವಡಿಸಿರುವ ಫ್ಲೆಕ್ಸ್‌ಗಳು

ಕೆಎಸ್‌ಸಿಎಸ್‌ಟಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು (ಕೆಎಸ್‌ಸಿಎಸ್‌ಟಿ) 2020 ಮತ್ತು 2021ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳಿಗಾಗಿ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಂದ ಅರ್ಜಿ ಆಹ್ವಾನಿಸಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಇಬ್ಬರು ಸಾಧಕರಿಗೆ ನೀಡುವ ‘ಸರ್. ಎಂ.ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ’ಯು ತಲಾ ₹2 ಲಕ್ಷ ನಗದು, ನೆನಪಿನ ಕಾಣಿಕೆ ಒಳಗೊಂಡಿದೆ. ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಗೆ ಈ ಪ್ರಶಸ್ತಿ ನೀಡಲಾಗುವುದು.

₹1.50 ಲಕ್ಷ ನಗದು ಒಳಗೊಂಡಿರುವ ‘ರಾಜಾ ರಾಮಣ್ಣ ಪ್ರಶಸ್ತಿ’ಯನ್ನು ಇಬ್ಬರಿಗೆ ನೀಡಲಾಗುವುದು.

ಐದು ಮಂದಿ ವಿಜ್ಞಾನಿಗಳಿಗೆ ‘ಸರ್. ಸಿ.ವಿ.ರಾಮನ್ ವಿಜ್ಞಾನಿ ಪ್ರಶಸ್ತಿ’, ನಾಲ್ಕು ಎಂಜಿನಿಯರ್‌ಗಳಿಗೆ ‘ಸತೀಶ್ ಧವನ್ ಎಂಜಿನಿಯರ್ ಪ್ರಶಸ್ತಿ’, ಇಬ್ಬರು ಮಹಿಳಾ ಸಾಧಕರಿಗೆ ‘ಕಲ್ಪನಾ ಚಾವ್ಲಾ ಮಹಿಳಾ ವಿಜ್ಞಾನಿ ಅಥವಾ ಎಂಜಿನಿಯರ್ ಪ್ರಶಸ್ತಿ’ಗಳನ್ನು ನೀಡಲಾಗುವುದು. ಈ ಮೂರೂ ಪ್ರಶಸ್ತಿಗಳು ತಲಾ ₹1 ಲಕ್ಷ ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿಪತ್ರ ಒಳಗೊಂಡಿವೆ.

ಆಸಕ್ತರು ಪ್ರಶಸ್ತಿಗಳಿಗೆ ನಾಮಪತ್ರ ಸಲ್ಲಿಸಲು ಮೇ 17 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ಮಂಡಳಿಯ ವೆಬ್‌ಸೈಟ್ www.kscst.org.in ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದೆ.

ವಿಳಾಸ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆವರಣ, ಬೆಂಗಳೂರು.

ಸಂಪರ್ಕ: 080–23341652

ನಾಯಿ ಹಿಂಡು ದಾಳಿ ಬಾಲಕನಿಗೆ ಗಾಯ

ಮೈಸೂರು: ಬನ್ನಿಮಂಟಪದ ಟಿಪ್ಪು ಮಸೀದಿ ಹಿಂಭಾಗ ನಾಯಿಗಳ ಹಿಂಡಿನ ದಾಳಿಗೆ ಸಿಲುಕಿ, ಕಮ್ರನ್ ರಶೀದ್ ಅವರ ಪುತ್ರ 9 ವರ್ಷದ ಮಹಮ್ಮದ್ ಉಮೇಜ್ ರಜ್ವಿ ಗಂಭೀರವಾಗಿ ಗಾಯಗೊಂಡಿದ್ದಾನೆ. ಆತನ ಬೆನ್ನು, ಕತ್ತು, ಕೈಗೆ ನಾಯಿಗಳು ಕಚ್ಚಿವೆ.

‘ಏ.13ರಂದು ಸಂಜೆ ನಮಾಜ್‌ಗೆ ತೆರಳುವ ವೇಳೆ ಬಾಲಕನ ಮೇಲೆ 10ಕ್ಕೂ ಹೆಚ್ಚು ನಾಯಿಗಳು ದಾಳಿ ನಡೆಸಿ ಕಚ್ಚಿ ಎಳೆದಾಡಿದವು. ಕಿರುಚಾಟ ಕೇಳಿ ಅಕ್ಕಪಕ್ಕದ ಮನೆಯವರು ರಕ್ಷಿಸಿದ್ದರು. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ’ ಎಂದು ಬಾಲಕನ ತಾತ ಹರೂನ್ ರಶೀದ್ ಹೇಳಿದ್ದಾರೆ.

‘ಈ ಪ್ರದೇಶದಲ್ಲಿ ನಾಯಿಗಳು ಹೆಚ್ಚಿದ್ದು, ಜನರಿಗೆ ತೊಂದರೆ ಉಂಟಾಗಿದೆ. ಪಾಲಿಕೆಗೆ ದೂರು ನೀಡಿದರೂ ಕ್ರಮ ವಹಿಸಿಲ್ಲ’ ಎಂದು ಸ್ಥಳೀಯರು ದೂರಿದರು.

ಆಂಧ್ರಪ್ರದೇಶದಲ್ಲಿ ಅವಿತುಕೊಂಡಿದ್ದ ಆರೋಪಿ

ಮಾಜಿ ಸೈನಿಕನ ಹತ್ಯೆ: ಶುಶ್ರೂಷಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಮ್ಮಲೂರು ಬಳಿಯ ಗೌತಮ್‌ನಗರದಲ್ಲಿ ಮಾಜಿ ಸೈನಿಕ ಸುರೇಶ್ ಉರ್ಫ್ ಜ್ಯೂಡ್ ತೆಡ್ಡಾಸ್ (60) ಅವರನ್ನು ಹತ್ಯೆ ಮಾಡಿದ್ದ ಆರೋಪದಡಿ ಶುಶ್ರೂಷಕ ಬಾಬು (24) ಸೇರಿ ಐವರನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಕುಪ್ಪಂನ ಬಾಬು, ನಗರದ ಆಸ್ಪತ್ರೆಯೊಂದರ ಶುಶ್ರೂಷಕ (ನರ್ಸ್) ಆಗಿ ಕೆಲಸ ಮಾಡುತ್ತಿದ್ದ. ಹಣ ಹಾಗೂ ಚಿನ್ನಾಭರಣ ದೋಚುವ ಉದ್ದೇಶದಿಂದ ಸುರೇಶ್ ಅವರನ್ನು ಹತ್ಯೆ ಮಾಡಿ ಪರಾರಿಯಾಗಿದ್ದ. ಆಂಧ್ರಪ್ರದೇಶದಲ್ಲಿದ್ದ ಆತನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೃತ್ಯದಲ್ಲಿ ಭಾಗಿಯಾಗಿದ್ದ ಬಾಬುನ ಸಹೋದರ ಮುರುಳಿ (26), ಸ್ನೇಹಿತರಾದ ಗಜೇಂದ್ರ (26), ರಾಜೇಂದ್ರ (26), ದೇವೇಂದ್ರ (24) ಎಂಬುವರನ್ನೂ ಬಂಧಿಸಲಾಗಿದೆ. ಇವರಿಂದ ಎರಡು ಕಾರು ಹಾಗೂ ಐ-ಫೋನ್ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.


ಬಂಧಿತ ಆರೋಪಿಗಳು


ಸುರೇಶ್

ತಾಯಿ ಆರೈಕೆಗೆ ಬಂದಿದ್ದ: ‘ಸೇನೆಯಿಂದ ನಿವೃತ್ತರಾದ ನಂತರ ಸುರೇಶ್ ಅವರು ಗೌತಮ್ ನಗರದಲ್ಲಿ ವಾಸವಿದ್ದರು. ಪತ್ನಿಗೆ ವಿಚ್ಛೇದನ ನೀಡಿದ್ದರು. ನಂತರ ತಾಯಿ ಜೊತೆ ವಾಸವಿದ್ದರು. ತಾಯಿಗೆ ಹುಷಾರಿಲ್ಲದಿದ್ದರಿಂದ ಚಿಕಿತ್ಸೆ ಕೊಡಿಸಲು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಬಾಬು ಪರಿಚಯವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಚಿಕಿತ್ಸೆ ನಂತರ ತಾಯಿಯನ್ನು ಮನೆಗೆ ಕರೆದುಕೊಂಡು ಬಂದಿದ್ದ ಸುರೇಶ್, ಅವರ ಆರೈಕೆ ಮಾಡಲೆಂದು ಬಾಬುನನ್ನು ನೇಮಿಸಿಕೊಂಡಿದ್ದರು. ಇದರ ನಡುವೆಯೇ ತಾಯಿ ತೀರಿಕೊಂಡಿದ್ದರು. ಅದಾದ ನಂತರವೂ ಸುರೇಶ್ ಜೊತೆ ಬಾಬು ಒಡನಾಟ ಇಟ್ಟುಕೊಂಡಿದ್ದ’ ಎಂದು ವಿವರಿಸಿದರು.

‘ಸುರೇಶ್ ಬಳಿ ಹಣ ಹಾಗೂ ಚಿನ್ನಾಭರಣ ಇರುವುದು ಬಾಬುಗೆ ತಿಳಿದಿತ್ತು. ಅದನ್ನು ತನ್ನದಾಗಿಸಿಕೊಳ್ಳಲು ನಿರ್ಧರಿಸಿದ್ದ ಆತ, ಸಹೋದರ ಹಾಗೂ ಸ್ನೇಹಿತರ ಜೊತೆ ಸೇರಿ ಸುರೇಶ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ’ ಎಂದೂ ತಿಳಿಸಿದರು.

‘ಏ. 13ರಂದು ರಾತ್ರಿ ಸುರೇಶ್ ಮನೆಗೆ ಬಾಬು ಬಂದಿದ್ದ. ನಂತರ, ಇತರೆ ಆರೋಪಿಗಳನ್ನೂ ಮನೆಗೆ ಕರೆಸಿಕೊಂಡಿದ್ದ. ಬಳಿಕ, ಎಲ್ಲರೂ ಕೈಗವಸು ಧರಿಸಿಕೊಂಡು ಸುರೇಶ್ ಅವರನ್ನು ಹತ್ಯೆ ಮಾಡಿದ್ದರು. ಸಾಕ್ಷ್ಯನಾಶ ಮಾಡುವ ಉದ್ದೇಶದಿಂದ ಮನೆಯಲ್ಲೆಲ್ಲ ಖಾರದ ಪುಡಿ ಎರಚಿ ಪರಾರಿಯಾಗಿದ್ದರು’ ಎಂದೂ ಹೇಳಿದರು.

ಸುಳಿವು ನೀಡಿದ್ದ ಸ್ಥಳೀಯರು: ‘ಆರೋಪಿ ಬಾಬು ಮನೆಗೆ ಬಂದು ಹೋಗಿದ್ದ ಸ್ಥಳೀಯರು, ಠಾಣೆಗೆ ಮಾಹಿತಿ ನೀಡಿದ್ದರು. ಅದೇ ಸುಳಿವು ಬೆನ್ನತ್ತಿ ಹೋದಾಗ ಆರೋಪಿ ಸಿಕ್ಕಿಬಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಐಐಐಟಿಗೆ ಪ್ರವೇಶ ಆರಂಭ

ಬೆಂಗಳೂರು: ‘ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿ’ಯ (ಐಐಐಟಿ–ಬಿ) ವಿವಿಧ ಕೋರ್ಸ್‌ಗಳಿಗೆ ದಾಖಲಾತಿ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ.

ಎಂ.ಟೆಕ್. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್, ಮಾಸ್ಟರ್ ಆಫ್ ಸೈನ್ಸ್ ಇನ್ ಡಿಜಿಟಲ್ ಸೊಸೈಟಿ, ಮಾಸ್ಟರ್ ಆಫ್ ಸೈನ್ಸ್ ಬೈ ರಿಸರ್ಚ್ ಮತ್ತು ಪಿಎಚ್.ಡಿ. ವಿಭಾಗಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭಿಸಲಾಗಿದೆ.

ಕೋರ್ಸ್‌ಗಳು ಮತ್ತು ದಾಖಲಾತಿಗಳ ಕುರಿತು ಹೆಚ್ಚಿನ ವಿವರಗಳಿಗಾಗಿ https://www.iiitb.ac.in/admissions ವೆಬ್‌ಸೈಟ್ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿದಾರರ ಪೋರ್ಟಲ್‌ನಲ್ಲಿ ಯಾವುದೇ ತುರ್ತು ತಾಂತ್ರಿಕ ಸಮಸ್ಯೆಗಳಿದ್ದಲ್ಲಿ, +91-9770502091 ಸಂಖ್ಯೆಯನ್ನು Whatsapp ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಿದೆ.

ವಿದ್ಯುತ್ ವ್ಯತ್ಯಯ


ಬೆಂಗಳೂರು: ನಿರ್ವಹಣೆ ಕಾರ್ಯ-ಕೈಗೊಂಡಿರುವುದರಿಂದ ಜಯನಗರ ಉಪವಿಭಾಗ ವ್ಯಾಪ್ತಿಯಲ್ಲಿ ಏ.16ರಿಂದ 18ರವರೆಗೆ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬಿಎಸ್‌ಕೆ 5ನೇ ಹಂತ ಮತ್ತು 6ನೇ ಹಂತ, ಪಿಪಿ ಬಡಾವಣೆ, ಉತ್ತರಹಳ್ಳಿ, ಭಾರತ್ ಬಡಾವಣೆ, ಜೆಎಚ್‌ಬಿಸಿಎಸ್ ಬಡಾಣೆ, ದ್ವಾರಕಾ ನಗರ

ಹೆಬ್ಬಾಳು ಕೆರೆ– ಮೀನುಗಳು ಸಾವು

ಮೈಸೂರು: ಕೊಳಚೆ ನೀರಿನಿಂದಾಗಿ ಇಲ್ಲಿನ ಹೆಬ್ಬಾಳು ಕೆರೆಯಲ್ಲಿ ಸಾವಿರಾರು ಮೀನುಗಳು ಮೃತಪಟ್ಟವು.

ಸತ್ತ ಮೀನುಗಳು ನೀರಿನಲ್ಲಿ ತೇಲುತ್ತಿರುವ ದೃಶ್ಯ ಶುಕ್ರವಾರ ಕಂಡು ಬಂತು. ಮಂಚೇಗೌಡನಕೊಪ್ಪಲು, ಹೆಬ್ಬಾಳು, ಕುಂಬಾರಕೊಪ್ಪಲಿನ ಸ್ಥಳೀಯ ಯುವಕರು ಸ್ಥಳಕ್ಕೆ ಬಂದು ಪ್ರತಿಭಟನೆನಡೆಸಿದರು. ‘ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುತ್ತಿವೆ. ವಿಪರೀತ ವಾಸನೆ ಬರುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸುಭಾಷಿತ

ನಿಮಗೆ ಸಂಬಂಧಿಸಿದಂತೆ ಘಟಿಸುವ ಎಲ್ಲ ಸಂಗತಿಗಳೂ ನಿಮ್ಮ ಬೆಳವಣಿಗೆಗೆ ಸಿಗುವ ಅವಕಾಶಗಳಾಗಿರುತ್ತವೆ ಅಥವಾ ಬೆಳವಣಿಗೆಗೆ ಅಡ್ಡಿಪಡಿಸುವಂತಹವಾಗಿರುತ್ತವೆ. ಆಯ್ಕೆ ನಿಮ್ಮದು.

–ವೇನ್ ಡಯರ್

ಮುಂಗಾರು: ಆಶಾದಾಯಕ ಮುನ್ಸೂಚನೆ ಮಳೆಗಾಲದ ಸಿದ್ಧತೆ ಈಗಲೇ ಪ್ರಾರಂಭಿಸಿ

ಪ್ರಸಕ್ತ ವರ್ಷದ ಮುಂಗಾರು ವಾಡಿಕೆಯಂತೆಯೇ ಇರಲಿದ್ದು, ಕೆಲವೆಡೆ ಅಧಿಕ ಮಳೆ ಬೀಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ಕೊಟ್ಟಿದೆ. ದೇಶದ ಕೃಷಿಕವರ್ಗದ ಪಾಲಿಗೆ ಈ ಮುನ್ಸೂಚನೆಯು ತಂಗಾಳಿಯಂತೆ ಹಿತಾನುಭವವನ್ನು ನೀಡಿದ್ದರೆ ಸೋಜಿಗವೇನಿಲ್ಲ. ವಾಡಿಕೆ ಪ್ರಮಾಣದಲ್ಲಿ ಮಳೆ ಸುರಿದರೆ ಕೃಷಿ ಹಾಗೂ ಕೃಷಿ ಸಂಬಂಧಿ ಉದ್ಯಮಗಳ ಚಟುವಟಿಕೆಗಳು ಗರಿಗೆದರಲಿದ್ದು, ಹಣದುಬ್ಬರ ತಹಬಂದಿಗೆ ಬರುವ ಸಾಧ್ಯತೆ ಇದೆ. ಬೆಲೆ ಏರಿಕೆ ನಿಯಂತ್ರಣಕ್ಕೂ ಇದರಿಂದ ಅವಕಾಶವಾಗಲಿದೆ. ಆದ್ದರಿಂದಲೇ ಮುಂಗಾರಿನ ಮೇಲೆ ಎಲ್ಲರ ಕಣ್ಣೂ ನೆಟ್ಟಿದೆ. ಹವಾಮಾನ ಇಲಾಖೆಯ ಮುನ್ಸೂಚನೆ ಆಶಾದಾಯಕವಾಗಿದ್ದರೂ ಒಳಹೊಕ್ಕು ನೋಡಿದಾಗ ಕೆಲವು ಆತಂಕಕಾರಿ ಅಂಶಗಳೂ ಅದರಲ್ಲಿವೆ. ಮುಂಗಾರು ಅವಧಿಯಲ್ಲಿನ ಸರಾಸರಿ ಮಳೆ ಪ್ರಮಾಣ ವಾಡಿಕೆಯಂತಿದ್ದರೂ ಕೆಲಭಾಗಗಳಲ್ಲಿ ಇದ್ದಕ್ಕಿದ್ದಂತೆ ವಿಪರೀತ ಮಳೆ ಸುರಿಯುವ, ಭರ್ತಿ ಮಳೆಗಾಲದಲ್ಲೂ ದೀರ್ಘಕಾಲದವರೆಗೆ 'ಶುಷ್ಕ ದಿನ'ಗಳನ್ನು ಕಾಣುವ ಸಾಧ್ಯತೆಯೂ ಇದೆ ಎಂದು ಅಂದಾಜಿಸಲಾಗಿದೆ. ಮಳೆಗಾಲದ ಯಾವುದೇ ಕೆಲವು ದಿನಗಳಲ್ಲಿ ಇಡೀ ಋತುವಿನ ಮಳೆ ಸುರಿದು, ಮಿಕ್ಕ ದಿನಗಳು ಶುಷ್ಕವಾಗಿ ಉಳಿದರೆ ಕೃಷಿ ಚಟುವಟಿಕೆಗಳು ದಿಕ್ಕು ತಪ್ಪಲಿವೆ. ಋತುವಿನ ಆರಂಭದ ಕೆಲವು ವಾರಗಳವರೆಗೆ ದೊಡ್ಡ ಪ್ರಮಾಣದಲ್ಲಿ ಮಳೆಯಾಗಲಿದ್ದು, ನಂತರದ ದಿನಗಳಲ್ಲಿ ಸಂಪೂರ್ಣ ಕ್ಷೀಣಿಸುವ ಸಾಧ್ಯತೆ ಇದೆ ಎಂದೂ ಅಂದಾಜಿಸಲಾಗಿದೆ. ಈ ಮುನ್ಸೂಚನೆ ಸಂಪೂರ್ಣ ನಿಜವಾದರೆ ಬಿತ್ತನೆ ಸಂದರ್ಭದಲ್ಲಿ ಮಳೆಯಿಂದ, ಕೊಯ್ಲು ಹತ್ತಿರವಾದಾಗ ಮಳೆ ಅಭಾವದಿಂದ ಕೃಷಿಕ ಸಮುದಾಯ ಸಂಕಷ್ಟಕ್ಕೆ ಸಿಲುಕಲಿದೆ.



ಮಳೆ ಮುನ್ಸೂಚನೆಯ ಜಿಲ್ಲಾವಾರು ವಿವರಗಳನ್ನು ಅಧ್ಯಯನ ಮಾಡಿ, ಅದಕ್ಕೆ ತಕ್ಕಂತೆ ಕ್ರಿಯಾಯೋಜನೆ ಹಾಕಿಕೊಂಡು ಕಾರ್ಯಪ್ರವೃತ್ತವಾಗಬೇಕು

ಕರ್ನಾಟಕದಲ್ಲಿ ಜುಲೈ ತಿಂಗಳಿನಲ್ಲಿ ವಿಪರೀತ ಮಳೆ ಸುರಿಯುವ ಸಾಧ್ಯತೆಯಿದೆ ಎಂಬ ಅಂಶ ಕೂಡ ಮುನ್ಸೂಚನೆಯಲ್ಲಿ ಇದೆ. ಮುಂಗಾರಿನ ವಾಡಿಕೆ ಪ್ರಮಾಣದ ಬಹುಪಾಲು ಮಳೆ ಇದೇ ತಿಂಗಳಲ್ಲಿ ಸುರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿರುವುದರಿಂದ ಆತಂಕವೊಂದು ಮನೆಮಾಡಿದೆ. ಮುಂಗಾರಿನ ಮುನ್ಸೂಚನೆಯ ಮೇಲೆ ಹಲವು ಆರ್ಥಿಕ ಚಟುವಟಿಕೆಗಳ ಭವಿಷ್ಯ ನಿಂತಿರುವುದರಿಂದ ಅದಕ್ಕೆ ವಿಶೇಷ ಮಹತ್ವವಿದೆ. ಮಳೆಯ ಮುನ್ಸೂಚನೆಗೆ ಬಳಕೆಯಾಗುತ್ತಿರುವ ತಂತ್ರಜ್ಞಾನ ನಿರಂತರವಾಗಿ ಸುಧಾರಣೆ ಆಗುತ್ತಿದ್ದರೂ ಹವಾಮಾನ ಇಲಾಖೆಯು ಕೊಡುವ ಸೂಚನೆಗಳು ಶೇಕಡ ನೂರರಷ್ಟು ನಿಖರವಾಗಿಲ್ಲ. ಕೆಲವೊಮ್ಮೆ ವಾತಾವರಣ ಕೊಡುವ 'ಸೂಚನೆ'ಯನ್ನು ಗ್ರಹಿಸಲು ಕೂಡ ಅದಕ್ಕೆ ಸಾಧ್ಯವಾಗಿಲ್ಲ. ಇಲಾಖೆಯು ದೀರ್ಘಾವಧಿ, ವಿಸ್ತರಿತ ಅವಧಿ, ಅಲ್ಪಾವಧಿ ಮತ್ತು ಅಲ್ಪ-ಮಧ್ಯಮಾವಧಿ ಮುನ್ಸೂಚನೆಯನ್ನು ನೀಡುತ್ತದೆ. ದೀರ್ಘಾವಧಿಯ ನಿಖರತೆ ಉತ್ತಮವಾಗಿದ್ದರೂ ವಿಸ್ತರಿತ ಅವಧಿಯ ಮುನ್ಸೂಚನೆ ಸಮಸ್ಯಾತ್ಮಕ. ಈ ಅವಧಿಯ ಮುನ್ಸೂಚನೆಯೇ ಕೃಷಿಕರಿಗೆ ಅಗತ್ಯವಾಗಿ ಬೇಕಿರುವುದರಿಂದ, ಅದರಲ್ಲಿನ ದೋಷವು ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವುದರಲ್ಲಿ ಯಾವುದೇ ಅನುಮಾನವಿಲ್ಲ. ಮಳೆ ಮುನ್ಸೂಚನೆಯ ಲೆಕ್ಕಾಚಾರವೆಲ್ಲ ತಪ್ಪಿದ್ದರಿಂದ ಮಧ್ಯಪ್ರದೇಶದ ಕೃಷಿಕರು ಕಳೆದ ವರ್ಷ ತೀವ್ರ ನಷ್ಟ ಅನುಭವಿಸಿರುವುದು ಇದಕ್ಕೊಂದು ನಿದರ್ಶನ. ಅಲ್ಲಿನ ಕಿಸಾನ್ ಸಂಘವು ಹವಾಮಾನ ಇಲಾಖೆಯ ವಿರುದ್ಧವೇ ಮೊಕದ್ದಮೆಯನ್ನು ಹೂಡಿದೆ! ಜಾಗತಿಕ ತಾಪಮಾನ ಬದಲಾವಣೆಯಿಂದಾಗಿ ಹವಾಮಾನದ 'ತೀವ್ರ ವೈಪರೀತ್ಯ' ವಿದ್ಯಮಾನಗಳ ಸಂಖ್ಯೆ ಏರುತ್ತಿದ್ದು, ಮುನ್ಸೂಚನೆಯ ನಿಖರತೆ ಮೇಲೂ ಅದು ಪ್ರಭಾವ ಬೀರುತ್ತಿದೆ ಎಂದು ತಜ್ಞರು ಹೇಳುತ್ತಾರೆ.

ಹವಾಮಾನ ಇಲಾಖೆ ಮುನ್ಸೂಚನೆಯ ನಿಖರತೆ ಕುರಿತು ಪ್ರಶ್ನೆಗಳಿದ್ದರೂ ವಾಡಿಕೆ ಮಳೆಯ ಆಶಾಭಾವ ವ್ಯಕ್ತವಾಗಿರುವುದರಿಂದ ಸರ್ಕಾರ ಈಗಿನಿಂದಲೇ ಮಳೆಗಾಲಕ್ಕೆ ಅಗತ್ಯವಾದ ಸಿದ್ಧತೆಯನ್ನು ಆರಂಭಿಸಬೇಕು. ರಾಜ್ಯದ ಎಲ್ಲ ಕಡೆಗಳಲ್ಲಿ ಬೀಜ ಮತ್ತು ಗೊಬ್ಬರದ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಇರುವಂತೆಯೂ ನೋಡಿಕೊಳ್ಳಬೇಕು. ಮುನ್ಸೂಚನೆಯ ಜಿಲ್ಲಾವಾರು ವಿವರಗಳನ್ನು ಅಧ್ಯಯನ ಮಾಡಿ, ಅದಕ್ಕೆ ತಕ್ಕಂತೆ ಕ್ರಿಯಾ ಯೋಜನೆಯೊಂದನ್ನು ಹಾಕಿಕೊಂಡು ಕಾರ್ಯಪ್ರವೃತ್ತವಾಗಬೇಕು. ಜುಲೈನಲ್ಲಿ ಹೇರಳವಾಗಿ ಮಳೆ ಸುರಿಯುವ ಮುನ್ಸೂಚನೆ ಇರುವುದರಿಂದ ಕೆರೆ–ಕಟ್ಟೆಗಳ ಹೂಳನ್ನು ಈಗಲೇ ತೆಗೆಯಿಸಿ, ಒಡ್ಡುಗಳನ್ನು ಸದೃಢಗೊಳಿಸಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೃಷಿ ಹೊಂಡಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸುವ ಮೂಲಕ ಮಳೆ ನೀರು ಸಂಗ್ರಹಕ್ಕೆ ಅವಕಾಶ ಮಾಡಿಕೊಳ್ಳಬೇಕು. ಬೇಸಿಗೆಯಲ್ಲಿ ಮಾಡಿಕೊಳ್ಳುವ ಇಂತಹ ಸಣ್ಣ ತಯಾರಿಗಳು ಮಳೆಗಾಲದ ಪ್ರವಾಹದ ಸಂಕಷ್ಟವನ್ನು ದೊಡ್ಡ ಪ್ರಮಾಣದಲ್ಲಿ ಕಡಿಮೆ ಮಾಡುತ್ತವೆ. ಅಲ್ಲದೆ, ನೀರಿನ ಸಂಗ್ರಹಕ್ಕೆ ದಾರಿ ಮಾಡಿಕೊಡುವ ಮೂಲಕ ಭವಿಷ್ಯದಲ್ಲಿ ಎದುರಾಗಬಹುದಾದ ಅಭಾವದ ಆತಂಕವನ್ನೂ ದೂರ ಮಾಡುತ್ತವೆ. ಮುಂಚಿತವಾಗಿ ಸಿದ್ಧತೆ ಮಾಡಿಕೊಳ್ಳಲು ಪ್ರತಿಸಲ ಎಡವುತ್ತಿರುವುದರಿಂದಲೇ ಮಹಾಪೂರದ ಬಿಸಿಯನ್ನು ನಾವು ಪದೇಪದೇ ಅನುಭವಿಸಬೇಕಾಗಿದೆ ಎನ್ನುವುದನ್ನು ಮರೆಯುವಂತಿಲ್ಲ.

12ನೇ ಶತಮಾನದಲ್ಲಿ ಕಲ್ಯಾಣವನ್ನು ಕುಟ್ಟಿ ಕೆಡವಿದ ವಿಕೃತಿ ಈಗ ಮರುಕಳಿಸುತ್ತಿದೆಯೇ?

ಅಣ್ಣಾ ಬಸವಣ್ಣ: ಕೆಟ್ಟಿತ್ತು ಕಲ್ಯಾಣ



ಗತಿಬಿಂಬ

ವೈ.ಗ.ಜಗದೀಶ್

ಅಕ್ಷರ ದೇವತೆ ಶೃಂಗೇರಿ ಶಾರದಾಂಬೆಯ ದೇಗುಲದ ಪಕ್ಕದಲ್ಲಿ ತುಂಗೆ ಹರಿಯುತ್ತಾಳೆ. ಸುಡುವ ಬಿಸಿಲಿನಲ್ಲಿ ಪರಿತಪಿಸುತ್ತಿದ್ದ ಗರ್ಭಿಣಿ ಕಪ್ಪೆಯೊಂದಕ್ಕೆ ಹಾವೊಂದು ಹೆಡೆಯನ್ನೇ ಬಿಚ್ಚಿ ನೆರಳು ನೀಡಿದ ಕತೆಯೊಂದನ್ನು ಹೇಳುವ ಶಿಲ್ಪವೊಂದು ನದಿ ತಟದಲ್ಲಿದೆ. ಇದು ಸತ್ಯವೋ ಕಲ್ಪಿತವೋ; ತನ್ನ ಆಹಾರವನ್ನೇ ತಾಯ್ತನದಿಂದ ಪೊರೆಯುವ ಔದಾರ್ಯವೊಂದನ್ನು ಇದು ಬಿಂಬಿಸುತ್ತದೆ. ಬುದ್ಧಿ ಇಲ್ಲದ ಜೀವಜಂತುಗಳೇ ತಮ್ಮ ಮಾತೃವಾತ್ಸಲ್ಯದ ನಡೆಯನ್ನು ತೋರಿದ ನಾಡಿನೊಳಗೆ ಬುದ್ಧಿಗೇಡಿಗಳಂತಿರುವ ನರರು ಕೇಡಿನ ಕಡೆಗೆ ಓಡುತ್ತಿರುವ ದಾರುಣ ಸನ್ನಿವೇಶ ಇವತ್ತು ಸೃಷ್ಟಿಯಾಗಿದೆ.

ಹಿಜಾಬ್‌ಗೆ ಶುರುವಾದ ವಿರೋಧವು ಹಲಾಲ್‌ಗೆ ಬಹಿಷ್ಕಾರ, ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನಿರಾಕರಣೆ, ಮುಸ್ಲಿಮರ ಆಟೊ ಬಳಸಬೇಡಿ, ಅಂಗಡಿಗಳಿಗೆ ಹೋಗಬೇಡಿ ಎಂದು ಕರೆ ಕೊಡುವಷ್ಟರ ಮಟ್ಟಿಗಿನ ದುರ್ದಿನಗಳನ್ನು ನಾಡು ನೋಡಿತು. ಇಂತಹ ಕ್ಷುದ್ರರು ದಿನಕ್ಕೊಂದರಂತೆ ಹೊರಡಿಸುತ್ತಿದ್ದ ಫರ್ಮಾನುಗಳನ್ನು ಕಾನೂನಿನ ಮೂಲಕ ಹತ್ತಿಕ್ಕಬೇಕಾದ ಸರ್ಕಾರ ಸತ್ತಂತೆ ನಟಿಸಿತು. ಸಂವಿಧಾನದ ಆಶಯದಂತೆ ನಡೆಯಬೇಕಾಗಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಕ್ಕೆ ಏರಿದ ಕೆಲವೇ ದಿನಗಳಲ್ಲಿ, ಮತೀಯ ಗೂಂಡಾಗಿರಿಗೆ ಬೆಂಬಲ ಕೊಡುವ ರೀತಿಯೊಳಗೆ 'ಕ್ರಿಯೆಗೆ–ಪ್ರತಿಕ್ರಿಯೆ ಸಹಜ' ಎಂದಿದ್ದರು. ಇದು ವಿಘಟನಾ ಶಕ್ತಿಗಳಿಗೆ ಕುಮ್ಮಕ್ಕು ನೀಡಿತು.


ದುರುಳರನ್ನು ಮಟ್ಟಹಾಕಿ, ಸಜ್ಜನರನ್ನು ರಕ್ಷಿಸಬೇಕಾದ ಹೊಣೆ ಆಳುವವರದ್ದು. ಅವರೇ ಖೂಳರಾಗತೊಡಗಿದರೆ ಖೂಳರು ಖಳರಾಗುತ್ತಾರೆ. ನಾಡು ಕೊಲೆಗಡುಕರ ಬೀಡಾಗುತ್ತದೆ. ಕಳೆದ ಎರಡು ತಿಂಗಳಿಂದೀಚೆಗಿನ ವಿದ್ಯಮಾನಗಳನ್ನು ನೋಡಿದರೆ, ಘಾತುಕ ಶಕ್ತಿಗಳೇ ವಿಜೃಂಭಿಸುತ್ತಿದ್ದು, ಅರಾಜಕತೆಯ ವಾತಾವರಣ ರಾಜ್ಯದಲ್ಲಿ ಸೃಷ್ಟಿಯಾಗಿದೆಯೇ ಎಂಬ ಅನುಮಾನ ಮೂಡುತ್ತದೆ. ಇದನ್ನು ನಿಭಾಯಿಸಿ, ಜನರಲ್ಲಿ ಭರವಸೆ ತುಂಬಬೇಕಾದ ಬೊಮ್ಮಾಯಿ, ಧೃತರಾಷ್ಟ್ರ ಮೌನಕ್ಕೆ ಶರಣಾಗಿರುವುದು ಅವರ ಹುದ್ದೆಗೆ ತಕ್ಕ ನಡವಳಿಕೆಯಲ್ಲ.

ಈ ಎಲ್ಲದರ ಪರಿಣಾಮವೇ, ಧಾರವಾಡದ ನುಗ್ಗಿಕೇರಿಯ ಆಂಜನೇಯ ದೇವಸ್ಥಾನದ ಎದುರು 15 ವರ್ಷಗಳಿಂದ ಹಿರೀಕರಾದ ನಬೀಸಾಬರು ಮಾರುತ್ತಿದ್ದ ಕಲ್ಲಂಗಡಿ ಹಣ್ಣುಗಳನ್ನು ಪುಡಿಗಟ್ಟಿದ್ದು. ಬೊಮ್ಮಾಯಿ ಅವರ ಕರ್ಮಭೂಮಿಯಲ್ಲಿ ನಡೆದ ಈ ದುಷ್ಕೃತ್ಯ ಅಮಾನವೀಯ. ಅದನ್ನು ನೋಡಿದಾಗ, ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಪಡೆದ ಚಿಲಿಯ ಕವಿ ಪಾಬ್ಲೋ ನೆರೂದನ 'ನೀವು ಕೇಳುತ್ತೀರಿ ನಾನೇಕೆ ಬರೆಯುವುದಿಲ್ಲ, ಕನಸುಗಳ ಬಗ್ಗೆ; ನೋಡಿ ಬೀದಿಯ ಮೇಲೆ ರಕ್ತವಿದೆ, ರಕ್ತವಿದೆ ಬೀದಿಯ ಮೇಲೆ' ಎಂಬ ವಿಷಾದದ ಪ್ರಶ್ನೆಯಷ್ಟೇ ಉಳಿಯುತ್ತದೆ.

ಈ ಥರದ ಕೇಡುಗಳು ನಾಡಿನುದ್ದಕ್ಕೂ ನಡೆಯುತ್ತಲೇ ಇವೆ. ಮತಾಂಧ ಗೂಂಡಾಗಳಿಂದ ಕೊಲೆಯಾದ ಸಂಶೋಧಕ ಎಂ.ಎಂ.ಕಲಬುರ್ಗಿ ಅವರ 'ಕೆಟ್ಟಿತ್ತು ಕಲ್ಯಾಣ' ನಾಟಕವು ಬಸವಣ್ಣನವರ ಸಾಮಾಜಿಕ ತತ್ವಜ್ಞಾನವನ್ನು, ಕಲ್ಯಾಣದ ಅವಸಾನವನ್ನು ಕಟ್ಟಿಕೊಡುತ್ತದೆ. 'ವಿಪ್ರ ಕುಲದಲ್ಲಿ ಹುಟ್ಟಿದನೆಂಬ ಹೊರೆಯ ಹೊರಿಸದಿರಯ್ಯ' ಎನ್ನುವ ಬಸವಣ್ಣನವರು ಅಗ್ರಹಾರ ಸಂಸ್ಕೃತಿಯನ್ನು ಧಿಕ್ಕರಿಸಿ, ಶರಣ ಸಂಸ್ಕೃತಿಯನ್ನು ರೂಪಿಸಿದ ಕಥಾನಕವನ್ನು ಮರುನಿರೂಪಿಸುತ್ತದೆ. ಅಗ್ರಹಾರ ಸಂಸ್ಕೃತಿಯನ್ನು ತೊರೆದ ಬಸವಣ್ಣ ಕಾಯಕಜೀವಿಗಳ ಚಳವಳಿ ಕಟ್ಟಿ, ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯೂ ಆದರು. ಪ್ರಭುತ್ವವನ್ನು ನಿಯಂತ್ರಿಸುವ ಶಕ್ತಿ ಇಟ್ಟುಕೊಂಡಿದ್ದ ಅಗ್ರಹಾರ ಸಂಸ್ಕೃತಿ, ಬಿಜ್ಜಳನ ಮನಸ್ಸು ಕೆಡಿಸುತ್ತದೆ. 'ಕಲ್ಯಾಣ' ಕರಗಿ ಹೋಗುತ್ತದೆ. ಇದು ನಾಟಕದ ಜೀವಾಳ. ಬಸವಣ್ಣನವರು ಕೂಡ, 'ಅರಸು– ವಿಚಾರ, ಸಿರಿಯು– ಶೃಂಗಾರ, ಸ್ಥಿರವಲ್ಲ ಮಾನವ! ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ!...' ಎಂದು ಅಂದೇ ಹೇಳಿದ್ದರು.

ಈ ಹೊತ್ತಿನ ವಿದ್ಯಮಾನಗಳನ್ನು ನೋಡಿದರೆ, 12ನೇ ಶತಮಾನದಲ್ಲಿ ಕಲ್ಯಾಣವನ್ನು ಕುಟ್ಟಿ ಕೆಡವಿದ ವಿಕೃತಿ 21ನೇ ಶತಮಾನದಲ್ಲಿ ಮರುಕಳಿಸುತ್ತಿದೆಯೇ ಎಂದು ಭಾಸವಾಗುತ್ತಿದೆ. ಹಿಂದೂ ರಾಷ್ಟ್ರ ಕಟ್ಟುವ ಶಪಥ ಹೊತ್ತ ಆಳುವವರು, ಇಂದು 'ಅಗ್ರಹಾರ ಸಂಸ್ಕೃತಿ'ಯ ದಾಸರಾಗಿದ್ದಾರೆ. ಸಂವಿಧಾನದತ್ತ ಹಕ್ಕನ್ನು ಪಡೆಯುವವರೆಗೆ ಶೂದ್ರರು, ಪಂಚಮರೆಂದು ಹೊರದಬ್ಬಿಸಿಕೊಂಡಿದ್ದ ಮಂದಿಯನ್ನೇ ಈ 'ಅಗ್ರಹಾರ'ದ ಮಂದಿ ಹುರಿಗಟ್ಟಿ ಹಿಂಸೆಗೆ ದೂಡುತ್ತಿದ್ದಾರೆ. ಇತಿಹಾಸದ ಪ್ರಮಾದಗಳಿಗೆ ಪ್ರತಿಯಾಗಿ ವರ್ತಮಾನವನ್ನು ಕೊಚ್ಚಿ ಆಸ್ವಾದಿಸುತ್ತಾ ಭವಿಷ್ಯವನ್ನು ಬರ್ಬರಗೊಳಿಸುವುದು ದುಷ್ಟತನ. ಸಾವಿನ ಹೆಸರಿನಲ್ಲಿ ರಾಜಕಾರಣ ಮಾಡುವುದು ಮನುಷ್ಯತ್ವಕ್ಕೆ ಮಾಡುವ ಅಪಚಾರ. ಕೋಮು ಸಂಘರ್ಷ, ರಾಜಕಾರಣಕ್ಕಾಗಿನ ಹಿಂಸೆಗಳು ನಡೆದಾಗ ಅದನ್ನು ತಡೆಯುವ ಇಚ್ಛಾಶಕ್ತಿ ಪ್ರದರ್ಶಿಸುವುದು ಸರ್ಕಾರ ನಡೆಸುವವರಿಗೆ ಸಂವಿಧಾನ ಕೊಟ್ಟ ಬಾಧ್ಯತೆ. ಅದರ ಬದಲು ಮೌನ ವಹಿಸುವುದು ಸಂವಿಧಾನಕ್ಕೆ ಮಾಡುವ ಅಪಮಾನ. ಮಸಣದ ಮೇಲೆ 'ಸೌಧ' ನಿಲ್ಲಿಸುವ ಹಪಹಪಿ ಬದಲು ಮನಸ್ಸುಗಳಲ್ಲಿ ಹೂವರಳಿಸುವ ಹಂಬಲ ಆಳುವವರಿಗೆ ಬೇಕಿದೆ.

ಹೀಗೆ ಕೋಮು ವಿಷಜ್ವಾಲೆಯನ್ನು ನಾಡಿನ ಜನರ ಭಾವಕೋಶಗಳಲ್ಲಿ ತುಂಬಿ, ರಕ್ತ ಕುದಿಯುವಂತೆ ಉದ್ವಿಗ್ನಗೊಳಿಸುತ್ತಿರುವ ಮಧ್ಯೆಯೇ, ಭ್ರಷ್ಟಾಚಾರ ಕೂಡ ಕ್ಯಾನ್ಸರ್‌ನಂತೆ ವ್ಯಾಪಿಸುತ್ತಿದೆ. ಸರ್ಕಾರಿ ಕಾಮಗಾರಿಗಳಲ್ಲಿ ಶೇ 40ರಷ್ಟು ಲಂಚದ ಆರೋಪ ಸರ್ಕಾರವನ್ನು ಸುತ್ತಿಕೊಂಡಿದೆ. ಸಚಿವ ಕೆ.ಎಸ್.ಈಶ್ವರಪ್ಪ ಅವರ ಮೇಲೆಯೇ ಆರೋಪ ಮಾಡಿದ ಗುತ್ತಿಗೆದಾರ ಸಂತೋಷ ಪಾಟೀಲ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು 'ಡಬಲ್ ಎಂಜಿನ್' ಸರ್ಕಾರವನ್ನು ಮುಜುಗರಕ್ಕೆ ದೂಡಿದೆ. ಸಾಮರಸ್ಯ ಹುಡಿ ಮಾಡುವ ಕೋಮು ಸಂಘರ್ಷ ತಡೆಯುವಲ್ಲಿ ಸರ್ಕಾರ ವಿಫಲವಾಗಿದೆ. ಮತ್ತೊಂದೆಡೆ, ಸ್ವಚ್ಛ, ಪ್ರಾಮಾಣಿಕ, ಪಾರದರ್ಶಕ ಆಡಳಿತ ನೀಡುವಲ್ಲಿ ಮುತುವರ್ಜಿ ಇಲ್ಲವೆಂಬುದನ್ನು ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ ತೋರಿಸಿದೆ. ಆಡಳಿತಾತ್ಮಕವಾಗಿ ಎಷ್ಟೇ ಯೋಜನೆಗಳನ್ನು ಘೋಷಿಸಿದರೂ ಇಂತಹ ಘಟನೆಗಳು ಸರ್ಕಾರದ ವರ್ಚಸ್ಸನ್ನು ಕುಗ್ಗಿಸುತ್ತಲೇ ಹೋಗುತ್ತವೆ. 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಡೆ/ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ/ನುಡಿಯಲೂ ಬಾರದು, ನಡೆಯಲೂ ಬಾರದು/ಲಿಂಗದೇವನೆ ದಿಬ್ಬವೊ ಅಯ್ಯಾ' ಎಂಬ ಬಸವಣ್ಣನವರ ನುಡಿ ಬೊಮ್ಮಾಯಿ ಅವರಿಗೆ ನೆನಪಾಗಲಿ.



ಕುರುಕ್ಷೇತ್ರ ಯುದ್ಧ ಮುಗಿದು, ಧರ್ಮರಾಯ ಸಿಂಹಾಸನಕ್ಕೆ ಏರುವ ಮುನ್ನ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರನ್ನು ಭೇಟಿ ಮಾಡಲು ಹೋದಾಗಿನ ಪ್ರಸಂಗ ಮಹಾಭಾರತದ ಶಾಂತಿಪರ್ವದಲ್ಲಿದೆ. 'ಧರ್ಮದ ನಡವಳಿಕೆ ಹೇಗೆ' ಎಂದು ಧರ್ಮರಾಯ ಕೇಳಿದ್ದಕ್ಕೆ ಭೀಷ್ಮ ಹೇಳಿದ್ದು ಹೀಗಿದೆ: 'ಜನಾನುರಾಗಿ ರಾಜನಾಗಿದ್ದ ಭಕ್ತ ಪ್ರಹ್ಲಾದ ಅತ್ಯಂತ ಸುಭಿಕ್ಷ, ನೆಮ್ಮದಿಯ ಆಡಳಿತ ನೀಡುತ್ತಿದ್ದ. ಹಾಗೆಯೇ ಆತ ಮುಂದುವರಿದಿದ್ದರೆ ಒಳ್ಳೆಯ ಆಡಳಿತ ನೀಡುವವರಿಗೆ ಸಿಗುವ 'ಇಂದ್ರ' ಪದವಿ ದಕ್ಕುತ್ತಿತ್ತು. ತನ್ನ ಸ್ಥಾನಕ್ಕೆ ಕುತ್ತು ಬಂದೀತೆಂಬ ಭಯ ಇಂದ್ರನಿಗೆ ಶುರುವಾಯಿತು. ಹೇಗಾದರೂ ಮಾಡಿ ಪ್ರಹ್ಲಾದನ ಹೆಸರು ಹಾಳು ಮಾಡಲು ಮುಂದಾದ ಇಂದ್ರ, ಬ್ರಾಹ್ಮಣ ವೇಷ ಧರಿಸಿ ರಾಜನ ಬಳಿ ಹೋದ. 'ಮೂರುಲೋಕದ ಒಡೆಯನಾಗಿ ಇಷ್ಟು ಉತ್ತಮ ಆಡಳಿತ ನೀಡಲು ಹೇಗೆ ಸಾಧ್ಯವಾಯಿತು' ಎಂದು ಪ್ರಶ್ನಿಸಿದ. 'ಧರ್ಮದ ನಡವಳಿಕೆ, ಸತ್ಯ, ಆತ್ಮಸಂಯಮ, ಇಂದ್ರಿಯ ನಿಗ್ರಹದ ಜತೆಗೆ ಜನದ್ವೇಷ ಇಲ್ಲದ ಆಡಳಿತವೇ ಕಾರಣ' ಎಂದು ಪ್ರಹ್ಲಾದ ಹೇಳಿದ. ನಿನ್ನ ಋಜುತ್ವವನ್ನು (ಸತ್ಯ) ಕಾಪಿಟ್ಟಿರುವ 'ಶೀಲಲಕ್ಷ್ಮಿ'ಯನ್ನು ವರವಾಗಿ ಕೊಡು ಎಂದು ಬ್ರಾಹ್ಮಣ ಕೇಳಿದ. ಅಷ್ಟೇತಾನೆ ಎಂದ ಪ್ರಹ್ಲಾದ ಅದನ್ನು ಕೊಟ್ಟ. ತಕ್ಷಣವೇ ಆತನ ದೇಹದೊಳಗಿದ್ದ ಒಂದೊಂದೇ ಪ್ರಭೆಯು ಹೊರಹೋಗತೊಡಗಿತು. ಅವನ್ನು ಕೇಳಿದಾಗ, ನಾನು ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ಗಜಲಕ್ಷ್ಮಿ, ಐಶ್ವರ್ಯಲಕ್ಷ್ಮಿ, ಜ್ಞಾನಲಕ್ಷ್ಮಿ, ವಿಜಯಲಕ್ಷ್ಮಿ ಎಂದು ಹೇಳಿ ಹೋದವು. ಎಲ್ಲವೂ ಹೋದ ಮೇಲೆ ಪ್ರಹ್ಲಾದ ಇದ್ದಿಲಿನ ರೀತಿ ಬಿದ್ದುಬಿಟ್ಟ. 'ಸದ್ಗುಣ, ಸದ್ಭಾವ, ಸಚ್ಚಾರಿತ್ರ್ಯವನ್ನು ಪ್ರತಿನಿಧಿಸುವ ಶೀಲಲಕ್ಷ್ಮಿ ಇರುವವರೆಗಷ್ಟೇ ಉಳಿದ ಲಕ್ಷ್ಮಿಯರು ಇರುತ್ತಾರೆ. ಇದರ ಬಗ್ಗೆ ಜಾಗರೂಕನಾಗಿರು' ಎಂದು ಭೀಷ್ಮ ಹೇಳುತ್ತಾರೆ.

ದೇಶ, ರಾಜ್ಯವನ್ನು ಆಳುತ್ತಿರುವ ಬಿಜೆಪಿಯ ಹಿಂದೆ ಸಂಘ ಪರಿವಾರದ ಸೂತ್ರವಿದೆ. ಭ್ರಷ್ಟಾಚಾರ ವಿರೋಧಿ, ಜನಕಲ್ಯಾಣ, ಸಚ್ಚಾರಿತ್ರ್ಯವೇ ನಮ್ಮ ಧ್ಯೇಯ ಎಂದು ಸಂಘದವರು ಮಧ್ಯಮ ವರ್ಗದವರನ್ನು ನಂಬಿಸಿದ್ದರು. ಈಗ ದೇಶ ನಡೆಯುತ್ತಿರುವುದನ್ನು ನೋಡಿದರೆ ಅಧಿಕಾರಾರೂಢರು, ಸಂಘದ ಕಟ್ಟಾಳುಗಳು ಶೀಲಲಕ್ಷ್ಮಿಯನ್ನು ಹೊರಗಟ್ಟಿದಂತೆ ತೋರುತ್ತದೆ.

ಚುರುಮುರಿ



ಬಲವಂತ ಬಾಲಬೋಧೆ!

• ಎಸ್.ಬಿ.ರಂಗನಾಥ್

'ಆದದ್ದೆಲ್ಲ ಒಳಿತೇ ಆಯಿತು. ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು...' ಎಂದು ಪಲುಕುತ್ತಿದ್ದ, ಸದಾ ಸಚಿವ ಸ್ಥಾನಾಕಾಂಕ್ಷಿ ಸೀನಿಯರ್ ಶಾಸಕರನ್ನು ಮಡದಿ ಮಾತಿಗೆಳೆದರು- 'ಇದೇನ್ರೀ, ಬೆಳ್ಳಂಬೆಳಗ್ಗೆ ಪುರಂದರದಾಸರ ಕೀರ್ತನೆ?! ಒಳ್ಳೇದು ಆಗಿರೋದು ಏನು ಮಣ್ಣು? ರಾತ್ರಿ ಕನಸಿನಲ್ಲಿ ಏನಾದ್ರೂ ಮಂತ್ರಿ ಆಗಿದ್ದಿರಾ?'

ಪ್ರಸಕ್ತ ವಿದ್ಯಮಾನಗಳಿಂದ ವಿಚಲಿತರಾದಂತಿದ್ದ ಶಾಸಕರಿಂದ ಪ್ರತಿಕ್ರಿಯೆ ಬರಲಿಲ್ಲ.

'ಯಾಕ್ರೀ, ಮಂತ್ರಿಗಿರಿಗಾಗಿ ಎರಡು ಸಾರಿ ಬೆಂಬಲಿಗರ ರ್‍ಯಾಲಿ ಮಾಡಿಸಿದಿರಿ. ದಿಲ್ಲಿ ಯಾತ್ರೆ ಮೂರು ಬಾರಿ ಆಯ್ತು. ಯತ್ನ ಮುಂದುವರಿಸೋದಲ್ವೇ? ಈಗ ಸಚಿವರ ರಾಜೀನಾಮೆಯಿಂದ ಇನ್ನೊಂದು ವೇಕೆನ್ಸಿ ಹೆಚ್ಚಾಗಿದೆ'.

'ಇದನ್ನೆಲ್ಲ ನೋಡಿಯೇ ಪರಿಸ್ಥಿತಿ ತಣ್ಣಗಾಗೋವರೆಗೂ ಸುಮ್ಮನಿರೋಣಾಂತಿದೀನಿ... ಅಲ್ದೆ ನಮ್ಮ ಸೀಎಂ ಸಹ ಆದಿತ್ಯನಾಥರ ಥರ ಮಾಡಿಬಿಟ್ರೆ ಕಷ್ಟ. ಹೈಕಮಾಂಡಿಂದ ಅವ್ರ ಮಾಡೆಲ್ ಅನುಸರಿಸೀಂತ ಆದೇಶ ಬಂದರೂ ಬರಬೌದು'.

'ಅವರ ಮಾಡೆಲ್ ಏನ್ರೀ?'

'ಅವ್ರು ಬುಲ್‌ಡೋಜರ್ ಬಾಬಾ. ವಿರೋಧಿಗಳನ್ನ ಎಲಿಮಿನೇಟ್ ಮಾಡೋದ್ರಲ್ಲಿ ಎತ್ತಿದ ಕೈ'.

'ನಮ್ಮ ಸಾಧುಪ್ರಾಣಿ ಸೀಎಂ ಕೈಲಿ ಅದು ಆಗದ ಮಾತು ಬಿಡ್ರಿ'.

'ಮತ್ತೆ ಮಂತ್ರಿಗಳನ್ನ ಸ್ಕೂಲ್ ಮಕ್ಕಳಂತ ಆದಿತ್ಯನಾಥ್ ತಿಳ್ಕೊಂಡಂತಿದೆ. ಸಮಯಕ್ಕೆ ಸರಿಯಾಗಿ ಆಫೀಸಿಗೆ ಬರಬೇಕು. ಕ್ಷೇತ್ರ ಪ್ರವಾಸ ಮಾಡ್ಬೇಕು. ಸರ್ಕಾರಿ ಪ್ರವಾಸಿ ಮಂದಿರಗಳಲ್ಲೇ ತಂಗಬೇಕು ಅಂತೆಲ್ಲ ಫರ್ಮಾನು ಹೊರಡಿಸಿದಾರೆ. ಅಂಥ ಭಾಗ್ಯಕ್ಕೆ ಯಾಕೆ ಮಂತ್ರಿಯಾಗ್ಬೇಕು?'

'ಪ್ರಧಾನಿಗಳ ಕ್ಷೇತ್ರ ವಾರಾಣಸಿಯ ವಿಧಾನಪರಿಷತ್ ಚುನಾವಣೆಯಲ್ಲಿ ಕಮಲ ಪಕ್ಷ ಸೋತಿರೋದ್ರಿಂದ ಅವರಿಗೆ ಸಿಟ್ಟು ಬಂದಿರಬೇಕು... ಅದೂ ಮಾಫಿಯಾ ಡಾನ್ ಹೆಂಡತಿ ಎದುರು'.

'ಆದರೆ, ನಮ್ಮ ಈ ಸರ್ಕಾರದ ಅವಧಿ ಉಳಿದಿರೋದು ಇನ್ನೊಂದೇ ವರ್ಷ. ಅದಕ್ಕಾಗಿ ಯಾಕಿಷ್ಟು ಕಸರತ್ತೂಂತ'.

ಯಜಮಾನರ ದೂರಾಲೋಚನೆಗೆ ಮೇಡಮ್ ಬೆರಗಾಗಿ ತಲೆದೂಗುತ್ತಿದ್ದಂತೆ, ಒಳಗಿನಿಂದ ಮೊಮ್ಮಗ ಓದಿಕೊಳ್ಳುತ್ತಿದ್ದ 'ನರಿ ಮತ್ತು ದ್ರಾಕ್ಷಿ' ಬಾಲಬೋಧೆ ಕಥೆ ಕಿವಿಗೆ ಬಿತ್ತು!

ದಿನದ ಟ್ವೀಟ್

ಹೆಮ್ಮೆ ಮೂಡಿಸುವ ನಡೆ



ಸಮನ್ವಯ ಸಾರುವ ಬೇಲೂರಿನ ಪುರಾತನ ದೇವಾಲಯದ ಸಂಪ್ರದಾಯವನ್ನು ಎತ್ತಿ ಹಿಡಿದ ಅಲ್ಲಿನ ನಾಗರಿಕ ಸಮಾಜದ ಬಗ್ಗೆ ತುಂಬಾ ಹೆಮ್ಮೆ ಎನಿಸುತ್ತದೆ. ಈ ದಿನಗಳಲ್ಲಿ ಭರವಸೆ ಮೂಡಿಸುವ ಬಲವಾದ ಸಂದೇಶವೊಂದನ್ನು ಅವರು ರವಾನಿಸಿದ್ದಾರೆ ಮತ್ತು ಕರ್ನಾಟಕ ಎಂದರೆ ಏನು ಎಂಬುದನ್ನು ಜಗತ್ತಿಗೆ ತಿಳಿಸುವ ಸಲುವಾಗಿ ರಾಷ್ಟ್ರ ಮಟ್ಟದ ಪ್ರಚಾರ ಪಡೆಯಲು ಅರ್ಹವಾದ ಸಂಗತಿ ಇದಾಗಿದೆ.

ಶ್ರೀನಿವಾಸ್ ಅಲವಿಳ್ಳಿ, ಸದಸ್ಯ, ಜನಾಗ್ರಹ ಸಂಸ್ಥೆ

ಕಿಡಿನುಡಿ



ಸರ್ಕಾರಕ್ಕೆ ವಿರುದ್ಧವಾದ ಯಾವುದೇ ಸಂದೇಶಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡದಂತೆ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ತನ್ನ ಸಿಬ್ಬಂದಿಗೆ ಮಾತ್ರವಲ್ಲದೆ ಅವರ ಕುಟುಂಬದ ಸದಸ್ಯರಿಗೂ ತಿಳಿಸಿದೆ! ಕುಟುಂಬದ ಸದಸ್ಯರನ್ನು ಸಹ ಅವರು ನೇಮಕ ಮಾಡಿಕೊಳ್ಳುತ್ತಾರೆಯೇ?

ಅಶೋಕ್ ಸ್ವೆಯ್ನ್, ಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಬುಧವಾರ, 16-4-1997

• **ರಾಷ್ಟ್ರಪತಿಗೆ ಬರೆದ ಪತ್ರ ವಾಪಸ್: ಕೇಸರಿ ಭರವಸೆ**

ನವದೆಹಲಿ, ಏ.15– ಸಂಯುಕ್ತ ರಂಗವು ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿದ ಕೂಡಲೇ ಕಾಂಗ್ರೆಸ್ ಪಕ್ಷವು ಸರ್ಕಾರ ರಚಿಸುವುದಾಗಿ ಕಳೆದ ಮಾರ್ಚ್ 31ರಂದು ರಾಷ್ಟ್ರಪತಿ ಅವರಿಗೆ ಬರೆದ ಪತ್ರವನ್ನು ಹಿಂತೆಗೆದುಕೊಳ್ಳುವುದಾಗಿ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು ರಂಗಕ್ಕೆ ಅಧಿಕೃತವಾಗಿ ತಿಳಿಸಿದ್ದಾರೆ.

• **ರಾಜ್ಯ ದಳ ಅಧ್ಯಕ್ಷತೆಗೆ ಅನ್ಯರ ನೇಮಕ– ಪಟೇಲ್ ಅಪೇಕ್ಷೆ**

ಬೆಂಗಳೂರು, ಏ.15– ಪಕ್ಷದ ಸಂಘಟನೆಯನ್ನು ಚುರುಕಾಗಿ ಮತ್ತು ದಕ್ಷತೆಯಿಂದ ನಿಭಾಯಿಸಬಲ್ಲ ಹೊಸ ಅಧ್ಯಕ್ಷರನ್ನು ಸದ್ಯವೇ ಪ್ರದೇಶ ಜನತಾದಳಕ್ಕೆ ನೇಮಿಸಬೇಕಾದ ಅಗತ್ಯವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಇಂದು ಇಲ್ಲಿ ಪ್ರತಿಪಾದಿಸಿದರು.

ಪ್ರಸ್ತುತ ಕೇಂದ್ರ ನಾಗರಿಕ ವಿಮಾನಯಾನ ಹಾಗೂ ಪ್ರಸಾರ ಖಾತೆ ಸಚಿವ ಸಿ.ಎಂ. ಇಬ್ರಾಹಿಂ ಪಕ್ಷದ ಅಧ್ಯಕ್ಷರಾಗಿದ್ದಾರೆ.

'ಪಕ್ಷದಲ್ಲಿ ಅಶಿಸ್ತು ಎನ್ನುವುದು ಅದರ ಬೇರನ್ನೇ ನುಂಗಿ ನೊಣೆಯತೊಡಗಿದೆ. ಅದನ್ನು ತಕ್ಷಣವೇ ನಿವಾರಿಸದೇ ಹೋದರೆ ಪಕ್ಷದ ಭವಿಷ್ಯಕ್ಕೆ ಭಾರಿ ಅನಾಹುತ ಕಾದಿದೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 16-4-1972

• **ಉದ್ಯೋಗವಿದ್ದವರಿಗೆ ಜಮೀನು ಒಡೆತನ ನಿಷೇಧ ಸಂಭವ**

ಬೆಂಗಳೂರು, ಏ.15– ನಿರ್ದಿಷ್ಟ ಉದ್ಯೋಗವಿರುವವರು ಜಮೀನು ಹೊಂದಿರುವುದನ್ನು ನಿಷೇಧಿಸುವ ವಿಧಿಯೊಂದು ಸರ್ಕಾರ ವಿಧಾನಮಂಡಲದ ಜೂನ್ ಅಧಿವೇಶನದಲ್ಲಿ ಮಂಡಿಸುವ ಸಮಗ್ರ ಭೂಸುಧಾರಣೆ ತಿದ್ದುಪಡಿ ವಿಧೇಯಕದಲ್ಲಿರುವ ಸಂಭವವಿದೆ.

ಇಂಥ ಕ್ರಮ ಅಗತ್ಯವೆಂದು ಭಾವಿಸುವ ಮುಖ್ಯಮಂತ್ರಿ ಶ್ರೀ ಅರಸು ಅವರ ಅಭಿಪ್ರಾಯಕ್ಕೆ ಪಕ್ಷದಲ್ಲಿ ಎಷ್ಟರಮಟ್ಟಿಗೆ ಬೆಂಬಲ ದೊರಕುತ್ತದೆ ಎಂಬುದರ ಮೇಲೆ ಈ ವಿಧಿ ಅಂತಿಮವಾಗಿ ಶಾಸನದಲ್ಲಿ ಸೇರುವುದು ಅವಲಂಬಿಸಿದೆ. 'ಬೇಸಾಯ ಮಾಡದ ಭೂ ಒಡೆತನ ಹೋಗಲೇಬೇಕೆಂದು ನನಗೆ ಮನದಟ್ಟಾಗಿದೆ' ಎಂದು ಅರಸು ಹೇಳಿದ್ದಾರೆ.

• **ನಿರುದ್ಯೋಗಿ ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಕೆಲಸ; ಸರ್ಕಾರದ ಪರಿಶೀಲನೆಯಲ್ಲಿ**

ಬೆಂಗಳೂರು, ಏ.15– ಈವರೆಗೂ ಯಾರಿಗೂ ಉದ್ಯೋಗ ದೊರೆಯದೇ ಇರುವಂಥ ಕುಟುಂಬಗಳಲ್ಲಿ ಒಬ್ಬರಿಗಾದರೂ ಉದ್ಯೋಗ ಒದಗಿಸುವ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಕಾರ್ಮಿಕ ಸಚಿವ ಶ್ರೀ ಅಜೀಜ್ ಸೇಠ್ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

'ರಾಜಕಾರಣಿಗಳ ಪ್ರಭಾವದಿಂದ ಇವತ್ತು ಅವರ ನಂಟರುಗಳಿಗೆ ಮಾತ್ರ ಕೆಲಸಗಳು ಸಿಕ್ಕಿವೆ' ಎಂದರು.

ಸಂಗತ

ದೋಷರಹಿತ ಮೌಲ್ಯಮಾಪನದ ನಿಷ್ಕರ್ಷೆ

ಉತ್ತರಪತ್ರಿಕೆಗಳ ಮೌಲ್ಯಮಾಪನದಂತಹ ಹೆಮ್ಮೆಯ, ಅಷ್ಟೇ ಜವಾಬ್ದಾರಿಯುತ ಕಾಯಕದಲ್ಲಿ ಎಷ್ಟೇ ನಿಗಾ ವಹಿಸಿದರೂ ಸಾಲದು

• ಬಿ.ಎಸ್.ಭಗವಾನ್


ಮೌಲ್ಯಮಾಪನದಲ್ಲಿ ಲೋಪ ಎಸಗಿದ ಕಾರಣಕ್ಕಾಗಿ 1,200 ಶಿಕ್ಷಕರನ್ನು ಕಪ್ಪುಪಟ್ಟಿಗೆ ಸೇರಿಸಿರುವ ಸುದ್ದಿ (ಪ್ರ.ವಾ., ಏ. 13) ಶಿಕ್ಷಕರಷ್ಟೇ ಅಲ್ಲ, ಇಡೀ ಸಮಾಜ ತನ್ನ ಕರ್ತವ್ಯಕ್ಷಮತೆ, ನಿಲುವುಗಳನ್ನು ಪರಿಷ್ಕರಿಸಿಕೊಳ್ಳಲು ಜಾಗೃತಿ, ಇಂಬು ನೀಡುತ್ತದೆ. ಬದುಕಿನ ಎಲ್ಲ ರಂಗಗಳಲ್ಲೂ ಒಂದಲ್ಲ ಒಂದು ಬಗೆಯಲ್ಲಿ ಮೌಲ್ಯಮಾಪನ ನೆರವೇರಿಯೇ ಇರುತ್ತದೆ. ಸರಿ, ತಪ್ಪುಗಳ ನಿಷ್ಕರ್ಷೆಗೆ ಒಡ್ಡಿಕೊಳ್ಳದ ಸಂಗತಿಗಳಿಲ್ಲ.

ಪರೀಕ್ಷೆ ಮತ್ತು ಮೌಲ್ಯಮಾಪನವು ಶಿಕ್ಷಣ ಕ್ರಮದ ಪರಸ್ಪರ ಅಭೇದ್ಯವಾದ ಬಹುಮುಖ್ಯ ಘಟಕಗಳು. ಯಾವುದೇ ಒಂದು ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನವು ಶೈಕ್ಷಣಿಕ ನಿಲುವು, ನಿರ್ಧಾರಗಳನ್ನು ಪುನರ್ ಅವಲೋಕಿಸುವಷ್ಟು ಮಹತ್ವದ್ದು. ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನದಲ್ಲಿ ತಪ್ಪೆಸಗಿದ ಶಿಕ್ಷಕರನ್ನು ದಂಡಸಮೇತ ಕಪ್ಪುಪಟ್ಟಿಯಲ್ಲಿ ಇರಿಸುವುದಿರಲಿ, ಪ್ರಮಾದಗಳಾಗಲು ಕಾರಣಗಳು ಯಾವ್ಯಾವು ಎಂಬುದನ್ನು ಪರಿಶೀಲಿಸುವುದು ಅಗತ್ಯ. ಮೂರು ಅಥವಾ ನಾಲ್ಕು ವರ್ಷಗಳ ಬೋಧನಾನುಭವ ಇದ್ದರಾಯಿತು, ಮೌಲ್ಯಮಾಪನ ಕರ್ತವ್ಯಕ್ಕೆ ನೇಮಿಸಿಕೊಳ್ಳಲು ಅಡ್ಡಿಯಿಲ್ಲ. ಆದರೆ ಮೌಲ್ಯಮಾಪನ ಎಂದರೇನು? ಅಂಕಗಳ ವಿತರಣೆ ಹೇಗೆ? ಅದರ ನಿರ್ವಹಣೆಗೆ ಪೂರ್ವ ತಯಾರಿ ಎಂತು?- ಈ ಕುರಿತು ಕನಿಷ್ಠ ಮೂರು ದಿನಗಳ ಅವಧಿಯ ಕಮ್ಮಟವಾದರೂ ಶಿಕ್ಷಕರಿಗೆ ಅಗತ್ಯವಿದೆ.

ಉತ್ತರಪತ್ರಿಕೆಗಳ ಮೌಲ್ಯಮಾಪನದಂತಹ ಹೆಮ್ಮೆಯ, ಅಷ್ಟೇ ಜವಾಬ್ದಾರಿಯುತ ಕಾಯಕದಲ್ಲಿ ಎಷ್ಟೇ ನಿಗಾ ವಹಿಸಿದರೂ ಸಾಲದು. ಅತಿ ವಿಶ್ವಾಸವೂ ತಪ್ಪು ಹೆಜ್ಜೆಯೆ. ಎಸ್‌ಎಸ್‌ಎಲ್‌ಸಿ, ಪಿ.ಯು., ಪದವಿ- ಪರೀಕ್ಷೆ ಯಾವುದೇ ಇರಲಿ ಮೌಲ್ಯಮಾಪನ ಕಾರ್ಯ ಅತ್ಯಂತ ಸಾವಧಾನ, ಸಮಾಧಾನದ ವಾತಾವರಣವನ್ನು ಬಯಸುತ್ತದೆ. ಶಿಕ್ಷಕರು ಮೌಲ್ಯಮಾಪನ ಕಾರ್ಯ ಪ್ರಾರಂಭಕ್ಕೆ ಒಂದು ವಾರ ಮೊದಲೇ ಪ್ರಶ್ನೆಪತ್ರಿಕೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದರೆ ಆತ್ಮವಿಶ್ವಾಸ ಮೂಡುವುದು. ಹೊಣೆ ಕಠಿಣವೆನ್ನಿಸದೆ ಹಿರಿಮೆ ಎನ್ನಿಸೀತು. ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧವಾಗುವಂತೆಯೇ ಶಿಕ್ಷಕರು ಮೌಲ್ಯಮಾಪನಕ್ಕೆ ಪೂರ್ವತಯಾರಿ ನಡೆಸಬೇಕು. ತನ್ಮೂಲಕ ಪ್ರಶ್ನೆಗಳಿಗೆ ಪರ್ಯಾಯ ಉತ್ತರಗಳನ್ನು ಆಲೋಚಿಸಲು ವ್ಯವಧಾನವಾದೀತು.

'ಈಗಾಗಲೇ ಮೌಲ್ಯಮಾಪನ ಆರಂಭಗೊಂಡಿದೆ, ಕೆಲವೇ ದಿನಗಳಲ್ಲಿ ಮುಗಿಯಲಿದೆ', 'ತ್ವರಿತವಾಗಿ ಫಲಿತಾಂಶ ಹೊರಬೀಳಲಿದೆ. ಪೋಷಕರಿಗೆ ಗಾಬರಿ ಬೇಡ' ಮುಂತಾಗಿ ಸಂಬಂಧಿಸಿದ ಇಲಾಖೆ ಅಥವಾ ವಿಶ್ವವಿದ್ಯಾಲಯ ಘೋಷಿಸಬಾರದು. ಇವು ಭರವಸೆಗಳಲ್ಲ, ಮೌಲ್ಯಮಾಪನ ಪ್ರಕ್ರಿಯೆಗೆ ಅನಗತ್ಯ ಅವಸರ ತರುವ ಒತ್ತಾಸೆ. ದಿನಕ್ಕೆ ಇಂತಿಷ್ಟು ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲೇಬೇಕೆಂಬ ಒತ್ತಾಯ ಕೂಡ ಸಲ್ಲದು. ಮೈಯೆಲ್ಲ ಕಣ್ಣಾಗಿ, ನಿಧಾನವೇ ಪ್ರಧಾನವಾಗಿ, ಮೌಲ್ಯಮಾಪನವೆಂಬ ಮಹತ್ಕಾರ್ಯ ಯಜ್ಞೋಪಾದಿಯಾಗಿ ನೆರವೇರಬೇಕಾಗುತ್ತದೆ. ಶಾಂತಿ, ನೀರವತೆಯೇ ಈ ಯಜ್ಞದ ರೂವಾರಿಗಳು. ಪೋಷಕರು ತಮ್ಮ ಆತುರ, ಕಾತರಗಳನ್ನು ಹಿಡಿದಿಟ್ಟುಕೊಳ್ಳುವುದು ಲೇಸು.

ಅಂದಹಾಗೆ ಮೌಲ್ಯಮಾಪನ ಕೇಂದ್ರಕ್ಕೆ ಹೊರಊರಿನಿಂದ ಬಂದು ಹೋಗಿ ಮಾಡುವುದು ಸಾವಕಾಶದ ಕರ್ತವ್ಯಪಾಲನೆಗೆ ತಡೆಯೊಡ್ಡುತ್ತದೆ. ಹಾಗಾಗಿ ಮೌಲ್ಯಮಾಪನ ಕೇಂದ್ರವಿರುವ ಸ್ಥಳದಲ್ಲೇ ಮೌಲ್ಯಮಾಪಕರು ತಂಗುವುದು ಸೂಕ್ತ. ಪರೀಕ್ಷಾರ್ಥಿಗಳು, ಅವರಿಗೂ ಮಿಗಿಲಾಗಿ ಅವರ ಪೋಷಕರು ಏನೆಲ್ಲ ನಿರೀಕ್ಷೆ, ಅಪೇಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ಪಾಸು, ನಪಾಸಿನ ಮಾತಿರಲಿ. ಒಂದೆರಡು ಅಂಕಗಳು ಕಡಿಮೆಯೆನ್ನಿಸಿದರೂ ಆಕಾಶವೇ ಕಳಚಿಬಿದ್ದಂತೆ ಕಂಗಾಲಾಗುವ ದುರ್ಬಲ ಮನಸ್ಸಿನವರಿರುತ್ತಾರೆ.



ಕೆಲವು ಪರೀಕ್ಷಾರ್ಥಿಗಳ ಕೈಬರಹವೋ ಓದಲಾಗದಷ್ಟು ಅಸ್ಪಷ್ಟ. ಸುಮಾರು ಆರು ದಶಕಗಳ ಹಿಂದೆ ಪ್ರಶ್ನೆಪತ್ರಿಕೆಯಲ್ಲಿ 'ದುಂಡಾದ ಮತ್ತು ಕಾಗುಣಿತ ತಪ್ಪಿರದ ಅಕ್ಷರಗಳಿಗೆ 5 ಅಂಕ ಮೀಸಲಿದೆ' ಎಂಬ ಸೂಚನೆ ಇರುತ್ತಿತ್ತು. ಹಿಗ್ಗಿನಿಂದ ಇದರ ಕೃಪೆಗೆ ಪಾತ್ರರಾಗಿ 'ಶೂನ್ಯ ಸಂಪಾದನೆ' ತಪ್ಪಿಸಿಕೊಂಡವರೆಷ್ಟೋ! ಮೌಲ್ಯಮಾಪಕರು ನಿಗ್ರಹಿಸಬೇಕಾದ ವಿಶಿಷ್ಟವೂ ಸ್ವಾರಸ್ಯಕರವೂ ಆದ ಇನ್ನೊಂದು ಸವಾಲಿದೆ. ಅದುವೇ ಪರೀಕ್ಷಾರ್ಥಿಗಳ ಕೋರಿಕೆಗಳು. ಉತ್ತರ ಬರೆಸಿಕೊಳ್ಳಬೇಕಾದ ಹಾಳೆಗಳಲ್ಲಿ ಗೋಗರೆತಗಳು! 'ದಯವಿಟ್ಟು ನನಗೆ ಕನಿಷ್ಠ ತೇರ್ಗಡೆ ಅಂಕಗಳನ್ನು ದಯಪಾಲಿಸಿ ಪುಣ್ಯ ತಂದುಕೊಳ್ಳಿ' ಎಂದೋ 'ಈ ಬಾರಿ ನಾನು ಫೇಲಾದರೆ ನನ್ನ ಆತ್ಮಹತ್ಯೆಗೆ ನೀವೇ ಕಾರಣ' ಎಂದೋ ಒಕ್ಕಣೆಗಳು. 'ಭಾವೀ ಪತಿಗೆ ಪಾಸಾಗುವುದಾಗಿ ಹೇಳಿರುವೆ' ಅಂತ ಅಳಲು ಮತ್ತೊಂದೆಡೆ. ಸಾಲದ್ದಕ್ಕೆ ಮತ್ತೆ ಕೆಲವರಿಂದ ಉತ್ತೀರ್ಣರಾದರೆ ಐನಾತಿ ಉಡುಗೊರೆಗಳ ಆಶ್ವಾಸನೆಗಳು ಬೇರೆ. ಛೇ! ಈ ಹುಚ್ಚು ನಿವೇದನೆಗಳ ಬದಲು ಶ್ರಮಪಟ್ಟು ಓದಬಹುದಿತ್ತಲ್ಲ ಎಂಬ ಉದ್ಗಾರಗಳು ಮೌಲ್ಯಮಾಪಕರಿಂದ ಹೊರಟಿರುತ್ತವೆ.

ಮೌಲ್ಯಮಾಪನ ಕೈಂಕರ್ಯದಲ್ಲಿ ಶಿಕ್ಷಕರು ಹಾಜರಿರಬೇಕಾದ್ದು ಕೇವಲ ಕರ್ತವ್ಯ ದೃಷ್ಟಿಯಿಂದಲ್ಲ. ಪಠ್ಯಕ್ರಮ ಹಾಗೂ ಬೋಧನಾ ವಿಧಾನದಲ್ಲಿ ಅನುಸರಿಸಲರ್ಹ ಸುಧಾರಣೆಗಳು, ಪರಾಮರ್ಶನ ಗ್ರಂಥಗಳ ಪರಿಚಯ, ಪಠ್ಯೇತರ ಚಟುವಟಿಕೆಗಳು- ಈ ಬಗೆಗಿನ ಸೃಜನಶೀಲ ಉಭಯಕುಶಲೋಪರಿಯೇ ಅಲ್ಲಿ ಸಾಗಿರುತ್ತದೆ. ಮೇಲಾಗಿ ಸಲಹೆ, ಮಾರ್ಗದರ್ಶನ ನೀಡುವ ಹಿರಿಯ ಗುರುವರ್ಯರ ಒಡನಾಟವೇ ಒಂದು ಸುಯೋಗ ತಾನೆ? ಎಂದಮೇಲೆ ಮೌಲ್ಯಮಾಪನ ಕೇಂದ್ರವು ಸಂತಸ, ಸಡಗರದ ತಾಣ, ಶೈಕ್ಷಣಿಕ ಅನುಭಾವ ತರುವ 'ಅನುಭವ ಮಂಟಪ'.

ವಾಚಕರ ವಾಣಿ

ಆಗ ಶಿಸ್ತುಕ್ರಮ ಕೈಗೊಳ್ಳಲಿಲ್ಲವೇಕೆ?

'ಹಿರಿಯ ರಾಜಕಾರಣಿಯಾಗಿರುವ ನನ್ನನ್ನೂ ಇಂದಿಗೂ ದೇವಸ್ಥಾನದ ಒಳಗೆ ಸೇರಿಸುವುದಿಲ್ಲ' ಎಂಬ ಕಾಂಗ್ರೆಸ್‌ನ ಹಿರಿಯ ನಾಯಕ ಡಾ. ಜಿ.ಪರಮೇಶ್ವರ ಅವರ ಮಾತು ಯಾರಿಗಾದರೂ ನೋವು ತರುವಂತಹದ್ದು. ಸಮಾನತೆಯ ಹರಿಕಾರರ ಜಯಂತಿಗಳನ್ನು ಸರ್ಕಾರಿ ಕಾರ್ಯಕ್ರಮಗಳನ್ನಾಗಿ ನಾವೆಲ್ಲರೂ ಕೂಡಿ ಅದ್ದೂರಿಯಾಗಿ ಆಚರಿಸುತ್ತೇವೆ. ಆದರೆ ಅವರ ತತ್ವ, ಆದರ್ಶಗಳನ್ನು ಮಾತ್ರ ವಕ್ರದೃಷ್ಟಿಯಿಂದ ನೋಡುತ್ತೇವೆ.

ಸಮಾಜದ ನಡವಳಿಕೆಗಳನ್ನು ಸರಿಮಾಡಲು, ಸಂವಿಧಾನದ ಆಶಯಗಳನ್ನು ಜಾರಿಗೆ ತರಲು ಪರಮೇಶ್ವರ ಅವರು ಅಧಿಕಾರದಲ್ಲಿದ್ದಾಗ ಏಕೆ ಪ್ರಯತ್ನಿಸಲಿಲ್ಲ ಎಂಬುದು ಸಹ ಅಷ್ಟೇ ಪ್ರಮುಖವಾದ ವಿಚಾರ. ಯಾವ ದೇವಸ್ಥಾನಗಳು ತಮ್ಮ ಪ್ರವೇಶಕ್ಕೆ ಅಡ್ಡಿಪಡಿಸಿದ್ದವೋ ಅಂತಹವುಗಳ ಮೇಲೆ ಅವರು ಶಿಸ್ತುಕ್ರಮ ಕೈಗೊಂಡು ಶೋಷಿತ ವರ್ಗದ ಧ್ವನಿಯಾಗಬೇಕಿತ್ತು, ಅಲ್ಲವೇ?

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಉಳ್ಳವರು ಟಿಕೆಟ್ ಕೊಳ್ಳುವರು...!

'ಉಳ್ಳವರು ಟಿಕೆಟ್ ಕೊಂಡು ಕೆಜಿಎಫ್ 2 ಚಲನಚಿತ್ರ ನೋಡುವರಯ್ಯ, ನಾ ಏನ ಮಾಡಲಿ? ನಾ ಬಡವನಯ್ಯ, ಟೀವಿಯಲ್ಲಿ ಬರುವವರೆಗೂ ಕಾಯಬೇಕಯ್ಯ' ಎಂದು ಮಧ್ಯಮವರ್ಗದ ಚಲನಚಿತ್ರ ಆಸಕ್ತರು ಪರಿತಪಿಸುವಂತಾಗಿದೆ. ಇದು ಕೇವಲ ಕೆಜಿಎಫ್ 2 ಚಿತ್ರ ಮಾತ್ರವಲ್ಲ, ಬಹುತೇಕ ಬಿಗ್ ಬಜೆಟ್ ಚಿತ್ರಗಳ ಕತೆ. ಟಿಕೆಟ್ ಬೆಲೆ ₹ 600ರಿಂದ 1000ದವರೆಗೂ ಏರುತ್ತದೆ. ಐದಾರು ಜನ ಇರುವ ಕುಟುಂಬದವರು ಒಟ್ಟಿಗೇ ಚಿತ್ರ ನೋಡಬೇಕೆಂದರೆ, ಮೂರರಿಂದ ಐದು ಸಾವಿರ ರೂಪಾಯಿಯವರೆಗೆ ವ್ಯಯಿಸಬೇಕು. ವಾರಾಂತ್ಯದಲ್ಲಂತೂ ಕೇಳುವಂತೆಯೇ ಇಲ್ಲ.

ಸಣ್ಣ ಮಕ್ಕಳಿಗೆ ಕನಿಷ್ಠ ಪಾಪ್‌ಕಾರ್ನ್ ಕೊಡಿಸೋಣ ಎಂದರೆ ಹತ್ತು ಪಟ್ಟು ಹೆಚ್ಚಿನ ದರ. ನಂತರ ಊಟ ಅಥವಾ ಉಪಾಹಾರ ಎಂದು ಹೋಟೆಲಿಗೆ ಹೋದರೆ ಅಲ್ಲೂ ದುಬಾರಿ. ಮಾಲ್‌ಗಳಲ್ಲಿರುವ ಹೋಟೆಲುಗಳ ಬೆಲೆ ನೋಡಿದರೆ ಬವಳಿ ಬರುವುದಂತೂ ಖಚಿತ. ಒಂದೆರಡು ವಾರಗಳ ನಂತರ ನೋಡೋಣ ಎಂದರೆ ಅದರ ಕ್ರೇಜ್ ಕಡಿಮೆಯಾಗಿರುತ್ತದೆ ಅಥವಾ ಥಿಯೇಟರುಗಳಲ್ಲಿ ಲಭ್ಯ ಇರದು. ಈಪಾಟಿ ಟಿಕೆಟ್ ದರ ಇದ್ದರೆ ನಮ್ಮಂತಹ ಮಧ್ಯಮವರ್ಗದವರು ಚಿತ್ರ ವೀಕ್ಷಿಸುವುದು ಅಸಾಧ್ಯ. ಈ ದಿಸೆಯಲ್ಲಿ ಸರ್ಕಾರ ನಿಗದಿತ ದರ ಗೊತ್ತುಮಾಡಲಿ. ಇಲ್ಲವಾದರೆ ಮನಸೋಇಚ್ಛೆ ದರ ಏರಿಸಿಕೊಳ್ಳುವ ಪ್ರವೃತ್ತಿಗೆ ಕಡಿವಾಣ ಬೀಳದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಶಬ್ದಮಾಲಿನ್ಯ: ಹಟಕ್ಕೆ ಬೀಳದಿರಿ

'ಆಜಾನ್ ಅನ್ನು ದಿನಕ್ಕೆ ಐದು ಬಾರಿ ಪಠಿಸಲಾಗುತ್ತಿದೆ, ಅಂತೆಯೇ ನಾವೂ ದಿನಕ್ಕೆ ಐದು ಬಾರಿ ಭಜನೆ, ವೇದಮಂತ್ರಗಳನ್ನು ಧ್ವನಿವರ್ಧಕದ ಮೂಲಕ ಪಠಿಸುತ್ತೇವೆ' ಎಂದು ಶ್ರೀ ಕಾಶಿ ವಿಶ್ವನಾಥ ಜ್ಞಾನವಾಪಿ ಆಂದೋಲನದ ಅಧ್ಯಕ್ಷರು ಹೇಳಿರುವುದಾಗಿ ವರದಿಯಾಗಿದೆ. ಆಜಾನ್ ಪಠಿಸುತ್ತಿರುವವರಿಗಾಗಲೀ ಮುಂದೆ ವೇದಮಂತ್ರಗಳನ್ನು ಪಠಿಸುತ್ತೇವೆ ಎಂದು ಹೇಳುವವರಿಗಾಗಲೀ ಸಮಾಜದಲ್ಲಿ ವಯಸ್ಸಾದವರು, ಕಾಯಿಲೆ ಕಸಾಲೆಯಿಂದ ನರಳುತ್ತಿರುವವರು, ಶಾಲಾ-ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಇದ್ದಾರೆ ಎಂಬ ಎಚ್ಚರ ಇರುವಂತೆ ಕಾಣಿಸುತ್ತಿಲ್ಲ.

ಈಗಾಗಲೇ ಅಸಂಖ್ಯ ವಾಹನಗಳ ಓಡಾಟದಿಂದ ಶಬ್ದಮಾಲಿನ್ಯ ಪರಾಕಾಷ್ಠೆ ತಲುಪಿರುವಾಗ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ನಿಶ್ಶಬ್ದವನ್ನು ಕಾಪಾಡಿಕೊಳ್ಳಬೇಕಾದ ಅನಿವಾರ್ಯ ಇದೆ. ಇಂತಲ್ಲಿ, ಹಟಕ್ಕೆ ಬಿದ್ದವರಂತೆ ಶಬ್ದಮಾಲಿನ್ಯ ಹೆಚ್ಚಿಸುವ ಕೆಲಸವನ್ನು ಯಾರೂ ಮಾಡಬಾರದು. ಶಬ್ದಮಾಲಿನ್ಯ ನಿಯಂತ್ರಿಸುವ ದಿಸೆಯಲ್ಲಿ ಸರ್ಕಾರ ನಿಷ್ಪಕ್ಷಪಾತ ಹಾಗೂ ನಿರ್ದಾಕ್ಷಿಣ್ಯವಾದ ಕ್ರಮ ಕೈಗೊಂಡು ಜನರು ನೆಮ್ಮದಿಯಾಗಿ ಬದುಕಲು ಅನುವು ಮಾಡಿಕೊಡಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಅತಿಯಾದ ಹುಮ್ಮಸ್ಸಿಗೆ ಬೆಲೆ ತೆರುವವರು...

ಯುವ ಹುಮ್ಮಸ್ಸೇ ಅಂತಹುದು. ಗೊತ್ತಿದ್ದೂ ಹಾಳು ಬಾವಿಗೆ ಹಾರುವ ಧಾವಂತ. ತನ್ನ ಎದುರಿಗೆ ನಿಂತ ನಾಯಕ ಹೇಳಿದ್ದೆಲ್ಲವನ್ನೂ ವೇದವಾಕ್ಯ ಎಂದು ತಿಳಿದು, ಆತನಿಗೆ ತನ್ನ ಭಕ್ತಿ, ಗೌರವ ತೋರುವ ಭರದಲ್ಲಿ, ಸರ್ಕಾರಿ ನಿಯಮಗಳು ಏನು ಹೇಳುತ್ತವೆ, ಏನು ಮಾಡಿದರೆ ತಾನು ಮಾಡುವ ಕೆಲಸಕ್ಕೆ ಮಾನ್ಯತೆ ಸಿಗುತ್ತದೆ ಎಂದೇ ಯೋಚಿಸದ ಮನಸ್ಸು. ಹೀಗಾಗಿ ತಾನು ಖರ್ಚು ಮಾಡುವ ಹಣಕ್ಕೆ ಖಾತರಿಯ ಭದ್ರತೆ ಎಷ್ಟರಮಟ್ಟಿಗೆ ಇರುತ್ತದೆ ಎಂಬುದರ ಕಡೆ ಗಮನವನ್ನೇ ಕೊಡದೆ ಮುನ್ನುಗ್ಗುತ್ತದೆ ಆ ಯುವ ಮನಸ್ಸು. ಅಂತಹ ಉದಾಹರಣೆ ನಮ್ಮ ಸಂತೋಷ ಪಾಟೀಲ. ತನ್ನೂರ ದೇವಿ ಜಾತ್ರೆಯೇ ಮುಳುವಾಗಬೇಕೆ ಆತನಿಗೆ?

ಜಾತ್ರೆಯಲ್ಲಿ ತನ್ನೂರು ಸುಂದರವಾಗಿ ಕಾಣಬೇಕು, ತಾನು ಆರಾಧಿಸುವ ನಾಯಕಮಣಿಗಳು ತನ್ನೂರಿಗೆ ಆಗಮಿಸಬೇಕು, ತಾನು ನಿಸ್ಪೃಹವಾಗಿ ದುಡಿದದ್ದನ್ನ ತನ್ನ ಜನರ ಮುಂದೆ ಹೊಗಳಬೇಕು... ಇಂತಹ ಕನಸುಗಳ ಕಾರಣಕ್ಕಾಗಿಯೇ ರಸ್ತೆ ಮುಂತಾದ ಕಾಮಗಾರಿಗಳಿಗೆ ಆತ ಎದೆಯೊಡ್ಡಿ ನಿಂತ. ಸಾಲ ಮಾಡಿ ಕೋಟ್ಯಂತರ ರೂಪಾಯಿಗಳನ್ನು ತೊಡಗಿಸಿದ. ಊರು ಸುಂದರವಾಯಿತಾದರೂ ತನ್ನ ಸಂಸಾರವನ್ನು ತೀವ್ರ ಸಂಕಷ್ಟಕ್ಕೆ ಈಡುಮಾಡಿ ಜೀವ ಚೆಲ್ಲಿದ.

ವರ್ಕ್ ಆರ್ಡರ್ ಅನ್ನುವ ದಾಖಲೆ ನಿಮ್ಮ ಬಳಿ ಇಲ್ಲದಿದ್ದರೆ ದಯವಿಟ್ಟು ಯಾವ ಕೆಲಸಗಳನ್ನೂ ಮಾಡಬಾರದು. ವರ್ಕ್ ಆರ್ಡರ್ ಇಲ್ಲದೆಯೇ ಒಂದೆರಡು ಸಾಂಸ್ಕೃತಿಕ ಕೆಲಸಗಳನ್ನು ಮಾಡಿದ ನಂತರ ಕೈಸುಟ್ಟುಕೊಂಡ ನಾನು ಸ್ವ ಅನುಭವದಿಂದ ನಾಡಿನ ಯುವ ಮನಸ್ಸುಗಳಿಗೆ ತಿಳಿ ಹೇಳುತ್ತಿದ್ದೇನೆ. ಕಷ್ಟ ಬಂದಾಗ ವ್ಯವಸ್ಥೆಯಲ್ಲಿನ ಯಾರು ಕೂಡ ನಿಮ್ಮ ಜೊತೆ ಬರುವುದಿಲ್ಲ. ವ್ಯವಸ್ಥೆಯ ನೇತಾರರು, ಅಧಿಕಾರಿಗಳು ಸಹ ಈ ತರನ ಕೆಲಸಗಳಿಗೆ ಕುಮ್ಮಕ್ಕು ಕೊಡಬಾರದು. ಮುಖ್ಯಮಂತ್ರಿ ಈ ಕುರಿತು ಒಂದು ಸುತ್ತೋಲೆ ಹೊರಡಿಸುವುದು ಒಳಿತು.

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವನ್ಯ ಮೃಗಗಳು ಸತ್ತಾಗ ಅವುಗಳನ್ನು ಸುಡುವುದು ಅಥವಾ ಹೂಳುವುದರ ಬದಲು ಹಾಗೆಯೇ ಕೊಳೆಯಲು ಬಿಡಬೇಕೇ?

ಪ್ರಾಣಿ ಸತ್ತರೂ ಜೀವ ಪರಿಸರದಲ್ಲಿ ಜೀವಂತ!



ಕೃಪಾಕರ ಸೇನಾನಿ

ಸಹಜ ವಿಘಟನೆಯಿಂದ ಉತ್ಪತ್ತಿಯಾಗುವ ಜೈವಿಕ ರಾಸಾಯನಿಕಗಳು ಮಣ್ಣಿನಲ್ಲಿ ಪೋಷಕಾಂಶಗಳ ಖಜಾನೆಯನ್ನು ಸೃಷ್ಟಿಸಿ ಹುಲ್ಲು ಮತ್ತು ಇತರ ಕುರುಚಲು ಸಸ್ಯಗಳ ಗುಣಮಟ್ಟವನ್ನು ಹೆಚ್ಚಿಸುತ್ತವೆ. ಇದರ ನೇರ ಪರಿಣಾಮ ಅವುಗಳನ್ನು ಅವಲಂಬಿಸಿರುವ ಸಸ್ಯಾಹಾರಿ ಪ್ರಾಣಿಗಳ ಮೇಲೆ ಉಂಟಾಗುತ್ತದೆ

• ಕೃಪಾಕರ ಸೇನಾನಿ

ಅದಿನ ಮುಂಜಾನೆ ಮನೆಯ ಗೇಟಿನ ಬಳಿಕ ಬಡಿಯುತ್ತಾ 'ಸಾರ್... ಸಾರ್... ಸಾರ್' ಎಂದು ಯಾರೋ ಗಟ್ಟಿಯಾಗಿ ಕೂಗುತ್ತಿದ್ದಾಗ ಏನೋ ಅನಾಹುತವಾಗಿರಬಹುದೆಂದು ಹೊರಬಂದೆವು. ಗೇಟಿನ ಬಳಿ ಭಾರಿ ಗಾತ್ರದ ಹಗ್ಗಗಳನ್ನು, ಗರಗಸಗಳನ್ನು ಹಿಡಿದು ಕಟ್ಟುಮಸ್ತಾದ ಐದಾರು ಮಂದಿ ನಿಂತಿದ್ದಾಗ ಭಯವಾಯಿತು. ಅವರನ್ನು ಎದುರುಗೊಂಡಾಗ ಅವರು ಏನನ್ನೂ ಮಾತನಾಡದೆ ನಮ್ಮ ಬೆನ್ನ ಹಿಂದೆ ಆಕಾಶದತ್ತ ಮುಖ ಮಾಡಿ ನಿಂತರು. ಅವರು ಏನನ್ನು ನೋಡುತ್ತಿರಬಹುದು ಎಂದು ಅತ್ತ ತಿರುಗಿ ಮತ್ತೆ ಅವರನ್ನು ನೋಡಿದೆವು. ಅವರೆಲ್ಲ ಏಕಾಗ್ರತೆಯಿಂದ ಅದೇ ದಿಕ್ಕಿಗೆ ದೃಷ್ಟಿ ಹರಿಸಿ ಸ್ತಬ್ಧವಾಗಿಯೇ ನಿಂತಿದ್ದರು.

ಮೌನ ಮುರಿದು 'ಏನು ವಿಷಯ' ಎಂದು ಪ್ರಶ್ನಿಸಿದ್ದಕ್ಕೆ, 'ಎಲ್ಲಾ ಕಡೆ ಆರು ಸಾವಿರ ತೆಗೆದುಕೊಳ್ಳುತ್ತಾರೆ. ನಾವು ಮೂರು ಸಾವಿರಕ್ಕೆ ಮುಗಿಸಿ ಬಿಡುತ್ತೇವೆ' ಎಂದಾಗ ಇನ್ನಷ್ಟು ದಿಗಿಲಾಯಿತು.

'ಮತ್ತೆ ಏನು' ಎಂಬ ಪ್ರಶ್ನೆಗೆ, ಮನೆಯ ಅಂಗಳದಲ್ಲಿ ವಯಸ್ಸಾಗಿ ಗಗನಕ್ಕೇರಿದ್ದ ಕಂಬವಾಗಿ ನಿಂತಿದ್ದ ತೆಂಗಿನಮರವನ್ನು ತೋರಿಸಿದರು. ಅದು ಬೇಡವೆಂದಾಗ 'ಅಶುಭ ಸಾರ್, ಮನೆ ಸಮೃದ್ಧಿಯಾಗಲ್ಲ' ಎಂದು ಶಕುನ ನುಡಿದು ಹೊರನಡೆದರು. ಮುಂದಿನ ಹಲವಾರು ವಾರಗಳ ಕಾಲ ಒಬ್ಬರಲ್ಲ ಒಬ್ಬರು ಒಣಗಿ ನಿಂತ ತೆಂಗಿನಮರ ಮನೆಯಲ್ಲಿ ಇರಬಾರದೆಂದು ಸಲಹೆ ನೀಡುತ್ತಲೇ ಇದ್ದರು.

ಮಳೆಗಾಲ ಬಂದಾಗ, ರುಂಡವಿಲ್ಲದ ಮರದ ನೆತ್ತಿಯಲ್ಲಿ ಬಗೆಬಗೆಯ ಶಿಲೀಂಧ್ರಗಳ ವಿವಿಧ ಸ್ವರೂಪಗಳಲ್ಲಿ ಹೂವಾಗಿ ಅರಳಿದವು. ಕನಿಷ್ಠ ನಾಲ್ಕು ಜೋಡಿ ಗಿಳಿಗಳು ಬೆಳಿಗ್ಗೆ ಮತ್ತು ಸಂಜೆಯಲ್ಲಿ ಬಂದು ಸಕ್ರಮವಾಗಿಯೇ ಅಪ್ಪಿಹಿಡಿದು ತಮ್ಮ ಎಲ್ಲಾ ಬಣ್ಣಗಳನ್ನು ಪ್ರದರ್ಶಿಸುತ್ತಿದ್ದವು. ಜೊತೆಗೆ ಪರಸ್ಪರ ಏನನ್ನೋ ಮಾತನಾಡಿಕೊಳ್ಳುತ್ತಿದ್ದವು. ಚಳಿಗಾಲಕ್ಕೆ ಬಾರ್ಬೆಟ್ ಹಕ್ಕಿಗಳು ಮರದಲ್ಲಿ ಪೊಟರೆ ಕೊರೆದವು. ಗೂಡಿನ ಕೆಲಸ ನಡೆಯುತ್ತಿದ್ದಾಗ ನಡುನಡುವೆ ವಿಕಾರ ಹಕ್ಕಿಗಳು ದಾರದಂತಹ ನಾರುಗಳನ್ನು ಕದ್ದು ಗಿಡಗಳಲ್ಲಿ ಗೂಡು ಹೆಣೆದವು.

ಬಾರ್ಬೆಟ್‌ಗಳ ಪೊಟರೆ ಸಿದ್ಧವಾಗುತ್ತಿದ್ದಂತೆಯೇ ಮೈನಾಗಳು, ಗಿಳಿಗಳು ಬಂದವು. ಬಾರ್ಬೆಟ್ ಮರಿ ಮಾಡಿದ ಬಳಿಕ ಆ ಗೂಡು ತಗ್ಗಿನ ಜಗಳಾಡಿದವು. ಮರಿಗಳೊಂದಿಗೆ ಬಾರ್ಬೆಟ್ ಹೊರನಡೆದಾಗ ಮೈನಾ, ಬಳಿಕ ಗಿಳಿಗಳು ಅಲ್ಲಿ ಸಂಸಾರ ಹೂಡಿದವು.


ಮರುವರ್ಷ ಮಳೆ ನೀರು ಪೊಟರೆಗಳಲ್ಲಿ ಇಳಿದಾಗ ನೆತ್ತಿಯ ಸ್ವಲ್ಪ ಭಾಗ ಕುಸಿಯಿತು. ಮತ್ತೆ ಹೂ ಮುಡಿಸಿದಂತೆ ಶಿಲೀಂಧ್ರಗಳ ದರ್ಬಾರು. ಬಾರ್ಬೆಟ್‌ಗಳ ಆಗಮನ. ಗರಿಗಳೆಲ್ಲ ಮಾಯವಾಗಿ ನೆಲಕ್ಕೆ ಬಿದ್ದ ಚೆಕ್ಕೆಗಳ ಸಂದಿಗಳ ಮರದೊಳಗಿನ ಬಳ್ಳಿಗಳಿಂದ ಬಣ್ಣ ಬಣ್ಣದ ಹೂವುಗಳು ಅರಳಿದವು. ಚಿಟ್ಟೆಗಳ ಹಾರಾಟ ಜೇನುಗಳ ಝೇಂಕಾರ ಮುಂದುವರಿಯಿತು.

ಕ್ರಮೇಣ ಐದು ವರ್ಷಗಳಲ್ಲಿ ಹಂತ ಹಂತವಾಗಿ ಕುಸಿದು ಬಿದ್ದ ಮರವನ್ನು ಹುಳುಗಳು ಅವಶೇಷ ಇಲ್ಲದಂತೆ ಕರಗಿಸಿಬಿಟ್ಟವು.

ನಂತರ ಆ ಮಣ್ಣಿನಲ್ಲಿ ಹುಳು ಹುಪ್ಪಟೆಗಳ ಸಂಸಾರ. ಆ ಹುಳುಗಳನ್ನು ಹೆಕ್ಕಲು ಬಂದ ಹಕ್ಕಿಗಳ ಪಾಲಿಗೆ ಯಥೇಚ್ಛ ಆಹಾರ.

ಕಾಡಿನಲ್ಲಿ ಒಣಗಿ ನಿಂತ, ನೆಲಕ್ಕುರುಳಿದ ಮರಗಳು ನಿರುಪಯುಕ್ತ, ಅವುಗಳನ್ನು ಮಾರುಕಟ್ಟೆಗೆ ಒಯ್ಯುವುದು ಆರ್ಥಿಕ ಲಾಭ ಎಂಬ ಬಗ್ಗೆ ಚರ್ಚೆ ದಶಕಗಳ ಹಿಂದೆ ನಡೆದಿತ್ತು. ಜೀವಪರಿಸರದಲ್ಲಿ ಲಾಭ ನಷ್ಟ, ಉಪಯುಕ್ತತೆಗಳನ್ನು ಅಂದಾಜಿಸುವ ಮಾನದಂಡ ಯಾವುದು? ಹೇಗೆ? ಎಂಬ ಪ್ರಶ್ನೆಗೆ ಬದುಕು ಪೂರೈಸಿ ಒಣಗಿ ನಿಂತ ತೆಂಗಿನಮರದ ಸುತ್ತ ಜರುಗುವ ಚಟುವಟಿಕೆ ಉದಾಹರಣೆಯಾಗಬಲ್ಲದು.

ಇದೇ ರೀತಿ ಜೀವಪರಿಸರದಲ್ಲಿ ಸತ್ತ ಪ್ರಾಣಿ–ಪಕ್ಷಿಗಳ ಮೃತದೇಹಗಳ ಪಾತ್ರಗಳನ್ನು ಮೇಲ್ನೋಟದಲ್ಲಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಅವುಗಳ ಪಾತ್ರ ಸಹಜವಾಗಿ ಮತ್ತು ಸಂಕೀರ್ಣವಾಗಿ ವಿನ್ಯಾಸಗೊಂಡಿರುತ್ತದೆ. ಕಾಡಿನಲ್ಲಿ ಸತ್ತ ಜೀವಿಗಳನ್ನು ಇದ್ದಂತೆಯೇ ಬಿಟ್ಟುಬಿಡಬೇಕೆಂಬ ಆದೇಶ ಮೇಲಿನ ಉದಾಹರಣೆಗೆ ಪೂರಕವಾಗಿದೆ.



ಈ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ವಿವರಿಸಬಹುದಾದರೆ, ಬದುಕಿರುವ ಅಥವಾ ಸತ್ತಿರುವ ಯಾವುದೇ ಜೀವಿಯು ಸಂಕೀರ್ಣವಾದ ಆಹಾರಜಾಲಗಳ ಮತ್ತು ಪೌಷ್ಟಿಕಾಂಶ ಸರಬರಾಜು ಸರಪಣಿಯ ಒಂದು ಭಾಗ.

ಬ್ಯಾಕ್ಟೀರಿಯಾ, ಏಕಕೋಶ ಜೀವಿಗಳು, ಕೀಟಗಳು ಮತ್ತು ಜಂತುಗಳ ಅಸಂಖ್ಯಾತ ಪ್ರಭೇದಗಳು ಮತ್ತು ಶಿಲೀಂಧ್ರವರ್ಗದ ಕೆಲವು ಪ್ರಭೇದಗಳು ವಸ್ತುವನ್ನು ಒಡೆಯುವ ಅಥವಾ ಕೊಳೆಯಿಸುವ ಕಾರ್ಯದಲ್ಲಿ ಭಾಗಿಯಾಗುತ್ತವೆ. ಅಂದರೆ, ವಸ್ತುಗಳನ್ನು ರಾಸಾಯನಿಕ ಮೂಲ ವಸ್ತು ಇಲ್ಲವೇ ಸಂಯುಕ್ತ ವಸ್ತುಗಳನ್ನಾಗಿ ಒಡೆದು ಜೀವವ್ಯವಸ್ಥೆಯ ಭಾಗವಾಗುವಂತೆ ಮರಳಿ ಅದಕ್ಕೆ ಸೇರಿಸುತ್ತವೆ. ಬೇಟೆಗಾರ ಪ್ರಾಣಿಗಳು ಸಹ ಸಾಂದರ್ಭಿಕವಾಗಿ ಕಡಿಮೆ ಶಕ್ತಿ ವ್ಯಯಿಸಿ ಆಹಾರ ಸಂಪಾದಿಸುವ ಈ ಸ್ವಭಾವವನ್ನು ಮೈಗೂಡಿಸಿಕೊಂಡಿರುತ್ತವೆ.

ಉದಾಹರಣೆಗೆ ಹುಲಿ, ಚಿರತೆ, ಕಾಡುನಾಯಿಗಳೆಲ್ಲ ಬೇಟೆಗಾರ ಪ್ರಾಣಿಗಳಾದರೂ, ಅವಕಾಶ ಸಿಕ್ಕಾಗ ಸತ್ತಪ್ರಾಣಿಗಳನ್ನು ತಿನ್ನುತ್ತವೆ. ಕಾರಣವಿಷ್ಟೆ, ಬೇಟೆ ಇವುಗಳ ಕಲೆ ಮತ್ತು ಕಸುಬಾದರೂ ಪರಿಶ್ರಮ, ಅಪಾಯವಿಲ್ಲದೆ ದಕ್ಕುವ ಆಹಾರ ಯಾರಿಗೆ ಬೇಕಿಲ್ಲ?

ಜೀವರಾಸಾಯನಿಕವಾಗಿ ಯಾವುದೇ ಜೀವಪರಿಸ್ಥಿತಿ ವ್ಯವಸ್ಥೆಯು ಪೂರ್ಣ ಮುಕ್ತವಾಗಿರುವುದಿಲ್ಲ. ಅಂದರೆ ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್‌ನಂಥ ಕೆಲವು ವಸ್ತುಗಳನ್ನು ಹೊರಗಿನ ವ್ಯವಸ್ಥೆಯಿಂದ ಪಡೆಯುತ್ತವೆ. ಅಲ್ಲದೆ ಅಗತ್ಯವಿರುವ ಪೋಷಕಾಂಶಗಳನ್ನು ಜೀವರಾಸಾಯನಿಕ ಕ್ರಿಯೆಗಳಿಂದ ವಿಘಟಿಸುವ ಜೀವಿಗಳು ಉತ್ಪಾದಿಸುತ್ತವೆ. ಒಟ್ಟಾರೆ, ಪ್ರಕೃತಿಯಲ್ಲಿ ಪೋಷಕಾಂಶಗಳು ಮತ್ತು ಶಕ್ತಿಯ ಪುನರ್ಬಳಕೆಯಾಗುವ ವರ್ತುಲಕ್ಕೆ ಮೃತ ಪದಾರ್ಥಗಳ ವಿಘಟನೆ ಒಂದು ಬಹುಮುಖ್ಯ ಪ್ರಕ್ರಿಯೆ.

ಸಹಜ ವಿಘಟನೆಯಿಂದ ಉತ್ಪತ್ತಿಯಾಗುವ ಜೈವಿಕ ರಾಸಾಯನಿಕಗಳು ಮಣ್ಣಿನಲ್ಲಿ ಪೋಷಕಾಂಶಗಳ ಖಜಾನೆಯನ್ನು ಸೃಷ್ಟಿಸಿ ಹುಲ್ಲು ಮತ್ತು ಇತರ ಕುರುಚಲು ಸಸ್ಯಗಳ ಗುಣಮಟ್ಟವನ್ನು ಹೆಚ್ಚಿಸುತ್ತವೆ. ಇದರ ನೇರ ಪರಿಣಾಮ ಅವುಗಳನ್ನು ಅವಲಂಬಿಸಿರುವ ಸಸ್ಯಾಹಾರಿ ಪ್ರಾಣಿಗಳ ಮೇಲೆ ಉಂಟಾಗುತ್ತದೆ.

ಹಾಗಾಗಿ ಅಂತ್ರಾಕ್ಸ್ ತರಹದ ಕೆಲವು ಸಾಂಕ್ರಾಮಿಕ ರೋಗಗಳಿಂದ ಸತ್ತ ಪ್ರಾಣಿಗಳನ್ನು ಹೊರತಾಗಿ ಉಳಿದ ಪ್ರಾಣಿಗಳ ಮೃತದೇಹ ಪ್ರಕೃತಿಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ.

ಸೂಕ್ಷ್ಮಜೀವಿಗಳು, ಕೊಲಿಯೊಪ್ಟೆರಾನ್‌ಗಳಿಂದ ಹಿಡಿದು ಹಲವಾರು ಮಾಂಸಾಹಾರಿ ಪ್ರಾಣಿಗಳಿಗೆ ಮೃತದೇಹಗಳು ನೇರವಾದ ಆಹಾರ. ಯುರೋಪಿನ ಬೈಸನ್‌ಗಳ ಮೇಲೆ ನಡೆದಿರುವ ವೈಜ್ಞಾನಿಕ ಸಂಶೋಧನೆಗಳು ಹಲವಾರು ಕುತೂಹಲಕಾರಿ ಅಂಶಗಳನ್ನು ಬೆಳಕಿಗೆ ತಂದಿವೆ. ಬೈಸನ್‌ಗಳ ಮೃತದೇಹಗಳನ್ನು ಸಹಜವಾಗಿ ವಿಘಟನೆ ಹೊಂದಲು ಬಿಟ್ಟಾಗ ಅಲ್ಲಿನ ಭೂಮಿಯಲ್ಲಿ ನೈಟ್ರೇಟ್ ಅಂಶ ಹೆಚ್ಚಾಗಿ ಅದು ಮುಂದಿನ ಒಂದು ವರ್ಷದವರೆಗೆ ಇರುವುದೆಂದು ತಿಳಿದು ಬಂದಿತು. ಅಲ್ಲದೆ, ಮಣ್ಣಿನಲ್ಲಿ ಕ್ಯಾಲ್ಸಿಯಂ ಅಂಶ ಹೆಚ್ಚಿ ಮುಂದಿನ ಏಳು ವರ್ಷಗಳ ಕಾಲ ಉಳಿದು ಬಂದಿರುವುದು ದಾಖಲಾಗಿದೆ.

ಫಲ ನೀಡುವವರೆಗೆ ಕಲ್ಪವೃಕ್ಷವಾಗಿ, ಸತ್ತಾಗ ಅಪಶಕುನದ ಸಂಕೇತವಾಗಿ ಕಾಣುವ ತೆಂಗಿನಮರ ಜೀವಪರಿಸರದೊಂದಿಗೆ ನಡೆಸಿದ ಸಂವಾದದಂತೆ ಸತ್ತ ಪ್ರಾಣಿ–ಪಕ್ಷಿಗಳ ದೇಹಗಳು ಸಹ ಪ್ರಕೃತಿಯಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತಿರುತ್ತವೆ. ಜೀವಪರಿಸರದಲ್ಲಿ ಅದು ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸತ್ತ ಜೀವಿಗಳನ್ನು ಕಾಡಿನಲ್ಲಿ ಇದ್ದಂತೆಯೇ ಬಿಟ್ಟುಬಿಡಬೇಕೆಂಬ ಅರಣ್ಯ ಇಲಾಖೆಯ ಆದೇಶ ವೈಜ್ಞಾನಿಕ ಮತ್ತು ವಿವೇಕದ ನಿರ್ಧಾರ. ಎಂದೋ ಆಗಬೇಕಿದ್ದ ಈ ತೀರ್ಮಾನ ತಡವಾಗಿಯಾದರೂ ಸಾಧ್ಯವಾಗಿದ್ದು ಸ್ವಾಗತಾರ್ಹ.

ಲೇಖಕರು: ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತರು , ವನ್ಯಜೀವಿ ತಜ್ಞರು



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 96

ಶಿವಭಕ್ತನಿಗೆ ಒಳ್ಳೆಯ ಸಿದ್ಧಿ ಲಭ್ಯ

ಶಿವನ ಮುಂದೆ ವಿಧಿವತ್ತಾಗಿ, ಹಾಲು, ಮೊದಲು, ತುಪ್ಪ, ಜೇನು, ಸಕ್ಕರೆ ಎಂಬ ಪಂಚಗವ್ಯಗಳನ್ನು ಪಾತ್ರೆಯಲ್ಲಿ ಇಡಬೇಕು. ಪ್ರಣವದಿಂದ ಅಭಿಮಂತ್ರಣವನ್ನು ಮಾಡಿ, ಹಸುವಿನ ಹಾಲು, ಮೊಸರುಗಳಿಂದಲೂ ತುಪ್ಪ, ಜೇನು, ಸಕ್ಕರೆಗಳಿಂದಲೂ ಸುವಾಸಿತವಾದ ಗಂಧೋದಕದಿಂದ ಮನೋರಥಗಳೆಲ್ಲವನ್ನೂ ನೀಡುವ ಮಹಾದೇವನನ್ನು ಪುಣ್ಯಕರವಾದ ದ್ರವ್ಯಗಳಿರುವ ಶುದ್ಧವಾದ ಜಲದಿಂದ ಪ್ರಣವವನ್ನು ಉಚ್ಚರಿಸುತ್ತಾ ಅಭಿಷೇಕಮಾಡಬೇಕು.

ಅಭಿಷೇಕದ ನಂತರ ಬಿಳಿಯದಾದ ಬಟ್ಟೆಯಿಂದ ಚೆನ್ನಾಗಿ ಒರೆಸಬೇಕು. ನಂತರ ಮೊನೆ ಮುರಿಯದಿರುವ ಅಕ್ಕಿಯ ಕಾಳುಗಳಿಂದ ಶಂಕರನನ್ನು ಪೂಜಿಸಬೇಕು. ದರ್ಭೆ, ಉತ್ತರಣಿ, ಕರ್ಪೂರ, ಜಾಜೀ, ಸಂಪಿಗೆ, ಪಾದರಿ, ದಾಸವಾಳ, ಮಲ್ಲಿಗೆ, ಕಮಲ, ನೈದಿಲೆ ಮೊದಲಾದ ಅರಳಿದ ಹೂವುಗಳಿಂದಲ್ಲದೆ ಇತರೆ ಅಪರೂಪದ ಪುಷ್ಪಗಳಿಂದಲೂ ಗಂಧಾದಿಗಳಿಂದಲೂ ಪೂಜಿಸಬೇಕು. ಶಿವನ ಮೇಲೆ ಸತತವಾಗಿ ಧಾರಾಕಾರವಾಗಿ ನೀರು ಬೀಳುವಂತೆ ಮಾಡಬೇಕು. ವಿಧವಿಧವಾದ ಪಾತ್ರೆಗಳಿಂದ ಮಹೇಶ್ವರನಿಗೆ ಸ್ನಾನಮಾಡಿಸಬೇಕು.

ಓ ನಾರದ! ನಿನ್ನ ಕೋರಿಕೆಗಳು ಈಡೇರಲೆಂದು ಆ ಶಿವಮಂತ್ರಗಳೆಲ್ಲವನ್ನೂ ನಿನಗೆ ಸಂಗ್ರಹವಾಗಿ ತಿಳಿಸುವೆನು. ಪಾಠ್ಯಮಾನ, ವಾಙ್ಮಯಕ, ರುದ್ರ, ನೀಲರುದ್ರ, ಸುಶುಕ್ಲ, ಶುಭ, ಹೋತಾರ, ಅಥರ್ವಶೀರ್ಷ, ಶಾಂತಿಗಳು, ವಾರುಣ, ಅರುಣ, ಮತ್ತು ಅರ್ಥಾಭೀಷ್ಟ. ದೇವವ್ರತ, ರಥಂತರ ಎಂಬ ಸಾಮಗಳು. ಪುಷ್ಪಸೂಕ್ತ, ಮೃತ್ಯುಂಜಯ, ಪಂಚಾಕ್ಷರಮಂತ್ರಗಳು – ಎಂದು ಶಿವಮಂತ್ರಗಳನ್ನು ಬ್ರಹ್ಮ ತಿಳಿಸುತ್ತಾನೆ.

ವೇದಮಂತ್ರಗಳನ್ನಾಗಲೀ, ಶಿವನ ಸಹಸ್ರನಾಮಗಳನ್ನಾಗಲೀ, ನೂರೊಂದು ನಾಮಗಳನ್ನಾಗಲಿ, ಜಪಿಸುತ್ತಾ ಶಿವನ ತಲೆಯ ಮೇಲೆ ಧಾರಾಕಾರವಾಗಿ ನೀರು ಬೀಳುವಂತೆ ಮಾಡಬೇಕು. ಆಮೇಲೆ ಗಂಧಪುಷ್ಪಾದಿಗಳನ್ನು ಶಿವನ ಮೇಲೆ ಧರಿಸಬೇಕು. ಪ್ರಣವದಿಂದಲೇ ಮುಖವು ಸುವಾಸನೆಯಿಂದ ಕೂಡಿರಲನುವಾಗುವಂತೆ ತಾಂಬೂಲಾದಿಗಳನ್ನು ಅರ್ಪಿಸಬೇಕು. ಬ್ರಹ್ಮ-ಇಂದ್ರ-ವಿಷ್ಣು ಮೊದಲಾದ ದೇವತೆಗಳಿಗೂ ಅಗೋಚರನೂ, ವೇದವಿದ್ವಾಂಸರಿಂದಲೂ ಅಗೋಚರನೆಂದು ಸ್ಮರಿಸಲ್ಪಡುವವನೂ ಆದ, ಆದಿ ಮಧ್ಯ ಅಂತ್ಯಗಳೊಂದೂ ಇಲ್ಲದ, ಔಷಧಸ್ವರೂಪನೂ ಆದಂಥ ಶಿವನ ಶಿವತತ್ವವೆಂಬ ಶಿವಲಿಂಗವನ್ನು ಭಾವಿಸಬೇಕು.

ನಂತರ ಪ್ರಣವಮಂತ್ರದಿಂದಲೇ, ಸುಂದರವಾದ ಧೂಪದೀಪಗಳಿಂದ, ನೈವೇದ್ಯ ತಾಂಬೂಲಗಳಿಂದ, ಮಂಳಾರತಿಯಿಂದ, ನಮಸ್ಕಾರಗಳಿಂದ, ಮಂತ್ರಗಳಿಂದ ಶಿವಲಿಂಗವನ್ನು ಪೂಜಿಸಬೇಕು. ಅರ್ಘ್ಯವನ್ನಿತ್ತು, ಪಾದಗಳಿಗೆ ಹೂಗಳನ್ನರ್ಪಿಸಿ, ಶಿವನನ್ನಾರಾಧಿಸಬೇಕು. 'ಓ ಶಂಕರ, ಜ್ಞಾನವಿಲ್ಲದೆಯೋ ಜ್ಞಾನಪೂರ್ವಕವಾಗಿಯೋ, ನಾನು ಮಾಡಿದ, ಜಪಪೂಜಾದಿಗಳೆಲ್ಲವೂ ನಿನ್ನ ಕರುಣೆಯಿಂದ ಸಫಲವಾಗಲಿ' ಎಂದು ಹೇಳಿ ಹೂಗಳನ್ನು ಶಿವನ ಮೇಲಿಡಬೇಕು. ಸ್ವಸ್ತಿಮಂತ್ರಗಳಿಂದ, ಸ್ತೋತ್ರಗಳಿಂದ ಶಿವನನ್ನರ್ಚಿಸಬೇಕು.


ಶಿವನ ಮೇಲೆ ಪುನಃ ಮಾರ್ಜನೆಯನ್ನು ಮಾಡಬೇಕು. ನಂತರ ನಮಸ್ಕಾರ, ಕ್ಷಮಾಪ್ರಾರ್ಥನೆಯನ್ನೂ ಮಾಡಿ, ಮತ್ತೆ ಆಚಮನೀಯವನ್ನು ನೀಡಬೇಕು. ಪಾಪನಾಶಕವಾದ ಮಂತ್ರಗಳನ್ನುಚ್ಚರಿಸುತ್ತಾ ಪುನಃ ನಮಸ್ಕರಿಸಿ, ಸರ್ವಭಾವಗಳಿಂದಲೂ ಮತ್ತೊಮ್ಮೆ 'ಜನ್ಮಜನ್ಮದಲ್ಲಿಯೂ ಶಿವನಲ್ಲಿ ಭಕ್ತಿಯುಂಟಾಗಲಿ, ಹರನಲ್ಲಿ ಭಕ್ತಿಯು ಶಾಶ್ವತವಾಗಿರಲಿ. ಎಲೈ ಹರನೇ, ನನಗೆ ನೀನೊಬ್ಬನೇ ದಿಕ್ಕು ನೀನೇ ಕಾಪಾಡಬೇಕು' ಎಂದು ಪ್ರಾರ್ಥಿಸಬೇಕು.

ಹೂಗಳನ್ನು ಕೈಲಿ ಹಿಡಿದು, ಬದ್ಧಾಂಜಲಿಯಾಗಿ ಮತ್ತೆ ಸರ್ವಸಿದ್ಧಿಗಳನ್ನೂ ಕೊಡುವ ಕರುಣಾಳುವಾದ ಆ ದೇವನನ್ನು ಪ್ರಾರ್ಥಿಸಬೇಕು. ಅತಿಶಯಿತವಾದ ಭಕ್ತಿಯಿಂದ, ಭಾವಪೂರಿತ ಗದ್ಗದ ಕಂಠದಿಂದ ಪೂಜಿಸಬೇಕು. ಪ್ರಮಥಾದಿ ಪರಿವಾರ ಮತ್ತು ದೇವತೆಗಳೊಡಗೂಡಿದ ಶಿವನನ್ನು ನಮಸ್ಕರಿಸಿ ಬಳಿಕ ಅಮಿತಾನಂದದಿಂದ ತನ್ನ ಕೆಲಸದಲ್ಲಿ ತೊಡಗಬೇಕು.

ಈ ರೀತಿಯಾಗಿ ಯಾರು ನಿತ್ಯವೂ ಕೇವಲ ಶಿವಭಕ್ತಿಯುಳ್ಳವನಾಗಿ ಪೂಜಿಸುತ್ತ ಬರುವರೋ, ಅವರಿಗೆ ಹೆಜ್ಜೆಹೆಜ್ಜೆಗೂ ಸಿದ್ಧಿಗಳೆಲ್ಲವೂ ಉಂಟಾಗುವುವು. ಅಲ್ಲದೆ, ರೋಗರುಜಿನಗಳು, ಸಂಕಟ, ಪೀಡೆ, ವ್ಯಸನ, ಹೃದಯದೌರ್ಬಲ್ಯ, ಮರೆ, ಮೋಸ, ವಂಚನೆ, ವಿಷ, ಮೊದಲಾದ ಎಷ್ಟು ಕಷ್ಟಗಳು ಸಂಭವಿಸಿದರೂ, ಆ ಸಂಕಟಗಳೆಲ್ಲವನ್ನೂ ಶಿವ ನಾಶಮಾಡುವನು. ಶಿವಪೂಜೆ ಮಾಡುವ ಮನುಷ್ಯನಿಗೆ ಸದಾ ಒಳ್ಳೆಯದೇ ಆಗುವುದು. ಶಂಕರನನ್ನು ಪೂಜಿಸುವವರು ಶುಕ್ಲಪಕ್ಷದ ಚಂದ್ರನಂತೆ ಗುಣಶಾಲಿಯಾಗಿ ದಿನೇ ದಿನೇ ಪ್ರವರ್ಧಮಾನರಾಗುವರು.

ನಾರದ, ಈ ರೀತಿ ಶಿವನ ಪೂಜಾವಿಧಾನವನ್ನು ನಿನಗೆ ವಿವರಿಸಿದುದಾಯಿತು. ಮತ್ತೇನನ್ನು ಕೇಳಬೇಕೆಂದಿರುವೆ, ಕೇಳು, ಹೇಳುವೆನು – ಎಂದು ಬ್ರಹ್ಮ ನುಡಿಯುವಲ್ಲಿಗೆ ಶಿವಪೂಜಾವಿಧಿವರ್ಣನ ಎಂಬ ಹನ್ನೊಂದನೆಯ ಅಧ್ಯಾಯ ಮುಗಿಯುತ್ತದೆ.

ವನ್ಯಜೀವಿಗಳ ಕೊರಳಿಗೆ ಕುತ್ತು ಖಚಿತ



ಒಂದು ಚಿರತೆ ಅಥವಾ ಕರಡಿ ಮೃತಪಟ್ಟಾಗ ಅದನ್ನು ಸುಡದೇ ಹಾಗೆಯೇ ಬಿಟ್ಟರೆ, ಅದರ ಹಲ್ಲು, ಉಗುರು, ಚರ್ಮ ಇತ್ಯಾದಿಗಳು ವನ್ಯಜೀವಿಗಳ ಕಾಳಸಂತೆಕೋರರಿಗೆ ಸುಲಭವಾಗಿ ಲಭ್ಯವಾಗುತ್ತವೆ. ಆನೆಯ ದಂತಕ್ಕೆ ಎಷ್ಟು ಬೆಲೆಯಿದೆಯೋ ಅಷ್ಟೇ ಬೆಲೆ ಅದರ ಮೂಳೆಗೂ ಇದೆ

• ಅಖಿಲೇಶ್ ಚಿಪ್ಪಳಿ

ಇದೇ ಏಪ್ರಿಲ್ ಆರರಂದು ಕರ್ನಾಟಕ ರಾಜ್ಯದ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗ ಒಂದು ಸುತ್ತೋಲೆಯನ್ನು ಹೊರಡಿಸಿತು. ವನ್ಯಜೀವಿ ತಜ್ಞರೊಬ್ಬರ ಪತ್ರವನ್ನು ಉಲ್ಲೇಖಿಸಿ ಸದರಿ ಆದೇಶವನ್ನು ಹೊರಡಿಸಲಾಗಿತ್ತು. ಕಾಡಿನಲ್ಲಿ ಸತ್ತ ಪ್ರಾಣಿಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಸುಟ್ಟುಹಾಕುತ್ತಾರೆ. ಇದು ಸರಿಯಾದ ಕ್ರಮವಲ್ಲ. ಕಾಡು ಪ್ರಾಣಿಗಳ ಮೃತದೇಹವನ್ನು ಹಾಗೆಯೇ ಕೊಳೆಯಲು ಬಿಡಬೇಕು. ಅದು ಹದ್ದಿನಂತಹ ಜಾಡಮಾಲಿ ಪಕ್ಷಿಗಳಿಗೆ, ಹಲವು ತರಹದ ಸೂಕ್ಷ್ಮಾಣು ಜೀವಿಗಳಿಗೆ ಆಹಾರವಾಗುತ್ತದೆ. ಪ್ರಾಣಿಗಳ ದೇಹವನ್ನು ಸುಡುವುದರಿಂದ, ಅದನ್ನೇ ಅವಲಂಬಿಸಿದ ಹಲವು ಜೀವಿಗಳು ಅಳಿದೇ ಹೋಗಬಹುದು ಎಂಬುದು ಆ ತಜ್ಞರ ವಾದವಾಗಿತ್ತು.

ಒಂದು ಸಿದ್ಧಾಂತವಾಗಿ ಮೇಲ್ನೋಟಕ್ಕೆ ಇದು ಸರಿಯೆಂದು ತೋರಬಹುದಾದರೂ, ಪ್ರಾಯೋಗಿಕವಾಗಿ ಇದು ಜಾರಿಯಾದಲ್ಲಿ ವನ್ಯಜೀವಿಗಳಿಗೆ ಕಂಟಕ ತಪ್ಪಿದ್ದಲ್ಲ. ವನ್ಯಜೀವಿಗಳ ಅಂಗಾಂಗ ಮಾರಾಟದ ವಹಿವಾಟಿನ ಮೊತ್ತ ಜಾಗತಿಕವಾಗಿ ₹1 ಲಕ್ಷ ಕೋಟಿಗೂ ಹೆಚ್ಚಿದೆ, ಮುಖ್ಯವಾಗಿ ಅಮೆರಿಕ, ಚೀನಾ ದೇಶಗಳ ಜನರ ಮೂಢನಂಬಿಕೆಯ ಉರುಳಿಗೆ ಏಷ್ಯಾದ ರಾಷ್ಟ್ರಗಳ ವನ್ಯಜೀವಿಗಳು ಬಲಿಯಾಗುತ್ತಿವೆ. ಈ ಬೃಹತ್ ಅಕ್ರಮ ವಹಿವಾಟಿನಲ್ಲಿ ಭಾರತದ್ದೂ ಸಿಂಹ ಪಾಲಿದೆ. ವನ್ಯಜೀವಿಗಳ ಯಾವ ಅಂಗಾಂಗವನ್ನೂ ಕಳ್ಳ ಸಾಗಾಣಿಕೆದಾರರು ಬಿಡುವುದಿಲ್ಲ, ಅದು ಮುಂಗುಸಿಯ ಕೂದಲಿರಬಹುದು ಅಥವಾ ಚಿಪ್ಪುಹಂದಿಯ ಚಿಪ್ಪಿರಬಹುದು; ಸುತ್ತೋಲೆಯನ್ನು ಯಥಾವತ್ ಜಾರಿ ಮಾಡಿದಲ್ಲಿ ನಿಶ್ಚಿತವಾಗಿ ವನ್ಯಜೀವಿಗಳ ಅಂಗಾಂಗ ಕಳ್ಳ ಮಾರಾಟಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಬಂಡೀಪುರ, ನಾಗರಹೊಳೆ, ಭದ್ರಾದಂತಹ ಅಭಯಾರಣ್ಯಗಳ ತೀರಾ ಒಳಭಾಗದಲ್ಲಿ ಯಾವುದಾದರೂ ಪ್ರಾಣಿಗಳು ಸತ್ತರೆ, ಅಲ್ಲಿ ನರನ ಪ್ರವೇಶ ಇಲ್ಲದಿದ್ದರೆ, ಸತ್ತ ಪ್ರಾಣಿಯನ್ನು ನಿಸರ್ಗವೇ ಮಣ್ಣಿಗೆ ಸೇರಿಸುತ್ತದೆ. ಅದಕ್ಕೆ ಯಾವ ಸುತ್ತೋಲೆಯ ಅವಶ್ಯಕತೆ ಇಲ್ಲ. ಸರ್ಕಾರಿ ಆದೇಶಗಳಾಗಲೀ ಅಥವಾ ಸುತ್ತೋಲೆಗಳಾಗಲೀ ಏಕವ್ಯಕ್ತಿಯ ಮುಖವಾಣಿಯಾಗಿ ಜಾರಿಯಾಗುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದದು. ರಾಷ್ಟ್ರೀಯ ಪ್ರಾಣಿ ಹುಲಿಯೊಂದನ್ನು ಹೊರತುಪಡಿಸಿ, ಮಿಕ್ಕೆಲ್ಲಾ ವನ್ಯಪ್ರಾಣಿಗಳ ಕಳೇಬರವನ್ನು ಹಾಗೆಯೇ ಕೊಳೆಯಲು ಅಥವಾ ಇನ್ನಿತರ ಜಾಡಮಾಲಿ ಪ್ರಾಣಿ-ಪಕ್ಷಿಗಳಿಗೆ ಆಹಾರವಾಗಿ ಬಿಡಬೇಕು ಎಂದು ಸುತ್ತೋಲೆ ಹೇಳುತ್ತದೆ. ಆದರೆ, ಇದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ. ಹುಲಿಗೆ ಅನ್ವಯವಾಗುವ ಎಲ್ಲಾ ಕಾನೂನು, ನಿಯಮಗಳು ಚಿರತೆಗೂ ಅನ್ವಯವಾಗುತ್ತವೆ. ಆದರೆ, ಚಿರತೆಯನ್ನು ಸುಡುವ ಹಾಗಿಲ್ಲ ಹಾಗೆಯೇ ಕೊಳೆಯಲು ಬಿಡಬೇಕು ಎಂದು ಸುತ್ತೋಲೆಯಲ್ಲಿ ಪೂರ್ವನಿಯೋಜಿತವಾಗಿ ತೀರ್ಮಾನಿಸಲಾಗಿದೆ.

ಕಳ್ಳಬೇಟೆಗಾರರು ವನ್ಯಜೀವಿಗಳ ಯಾವುದೊಂದು ಅಂಗವನ್ನೂ ಬಿಡದೇ ಮಾರಾಟ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಒಂದು ಚಿರತೆ ಅಥವಾ ಕರಡಿ ಮೃತಪಟ್ಟಾಗ ಅದನ್ನು ಸುಡದೇ ಹಾಗೆಯೇ ಬಿಟ್ಟರೆ, ಅದರ ಹಲ್ಲು, ಉಗುರು, ಚರ್ಮ ಇತ್ಯಾದಿಗಳು ವನ್ಯಜೀವಿಗಳ ಕಾಳಸಂತೆಕೋರರಿಗೆ ಸುಲಭವಾಗಿ ಲಭ್ಯವಾಗುತ್ತವೆ. ಆನೆಯ ದಂತಕ್ಕೆ ಎಷ್ಟು ಬೆಲೆಯಿದೆಯೋ ಅಷ್ಟೇ ಬೆಲೆ ಅದರ ಮೂಳೆಗೂ ಇದೆ. ಹಾಗೂ ಆನೆ ದೇಹ ಕೊಳೆಯಲು ಸುಮಾರು ಒಂದೂಕಾಲು ತಿಂಗಳು ಬೇಕಾಗುತ್ತದೆ. ಅಂದರೆ, ಸಂಪೂರ್ಣ ಕೊಳೆಯುವವರೆಗೂ, ಅಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯ ನಿಗಾ ಇರಬೇಕಾಗುತ್ತದೆ. ತೀವ್ರ ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಅರಣ್ಯ ಇಲಾಖೆಗೆ ಇದನ್ನು ನಿರ್ವಹಣೆ ಮಾಡಲು ಸಾಧ್ಯವೇ? ದೊಡ್ಡದೇಹಿ ಆನೆಯ ದಂತ ಮತ್ತು ಮೂಳೆಗಳು ಸುಲಭವಾಗಿ ಕಳ್ಳರ ಪಾಲಾಗುತ್ತವೆ. ಕಳ್ಳ ವಹಿವಾಟನ್ನು ಇಲಾಖೆಯೇ ಉತ್ತೇಜಿಸಿದಂತಾಗುತ್ತದೆ. ಅದು ಸ್ವಾಭಾವಿಕವಾಗಿ ಸತ್ತ ಪ್ರಾಣಿಯ ಉಗುರೋ ಅಥವಾ ಉದ್ದೇಶಪೂರ್ವಕವಾಗಿ ಕೊಂದು ತಂದ ಉಗುರೋ ಎಂಬುದನ್ನು ಪತ್ತೆಹಚ್ಚಲು ಇಲಾಖೆಗೆ ಸಾಧ್ಯವಾಗುವುದಿಲ್ಲ. ಈ ದುರ್ಬಲ ಅಂಶವು ಕಾನೂನಿನ ಕುಣಿಕೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಕಳ್ಳರಿಗೆ ಅಸ್ತ್ರವಾಗುತ್ತದೆ.

ರಾಜ್ಯದ ಯಾವುದೇ ಪ್ರದೇಶವನ್ನು ತೆಗೆದುಕೊಂಡರೂ ಅರಣ್ಯ ಇಲಾಖೆ ಹಾಗೂ ಸಾರ್ವಜನಿಕರ ನಡುವೆ ಮಧುರ ಭಾಂದವ್ಯ ಇರುವ ಒಂದೇ ಒಂದು ಉದಾಹರಣೆ ನಮಗೆ ಸಿಗುವುದಿಲ್ಲ. ವನ್ಯಜೀವಿ-ಮಾನವ ಸಂಘರ್ಷವಿದ್ದಂತೆ, ಸಾರ್ವಜನಿಕರು, ರಾಜಕಾರಣಿ-ಅರಣ್ಯ ಇಲಾಖೆಯ ನಡುವೆ ಬಹುದೊಡ್ಡ ಸಂಘರ್ಷವಿದೆ. ಕಂದಾಯ ಅಥವಾ ಬೇರೆ ಯಾವುದೋ ಇಲಾಖೆಯ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ತುಟಿ ಬಿಚ್ಚದ ರಾಜಕಾರಣಿಗಳು, ಅರಣ್ಯ ಪ್ರದೇಶದಲ್ಲಿ ಒತ್ತುವರಿ ತೆರವುಗೊಳಿಸುವ ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ರಾತ್ರೋರಾತ್ರಿ ನೀರಿಲ್ಲದ ಜಾಗಕ್ಕೆ ವರ್ಗಾವಣೆ ಮಾಡಿದ/ಮಾಡುತ್ತಿರುವ ಅನೇಕ ಉದಾಹರಣೆಗಳಿವೆ. ವಾಸ್ತವಾಂಶ ಹೀಗಿರುವಾಗ ಕೊಳೆಯಲು ಬಿಟ್ಟ ವನ್ಯಜೀವಿ ಕಳೇಬರಗಳಿಗೆ ದುಷ್ಕರ್ಮಿಗಳು ವಿಷಪ್ರಾಶನ ಮಾಡುವ ಸಾಧ್ಯತೆ ತೀರಾ ಹೆಚ್ಚಿದೆ. ಕೊಳೆಯಲು ಬಿಟ್ಟ ಕಳೇಬರಕ್ಕೆ ಯಾರಾದರೂ ವಿಷಪ್ರಾಶನ ಮಾಡಿದಲ್ಲಿ, ಅದನ್ನು ತಿಂದ ಹುಲಿಯೋ ಅಥವಾ ಹದ್ದುಗಳ ಗುಂಪೋ ನಾಶವಾದರೆ, ಇದರ ಹೊಣೆ ಯಾರದು? ಅಸ್ಸಾಂನಲ್ಲಿ ತೀರಾ ಇತ್ತೀಚೆಗೆ ಮೂರು ಬೇರೆ ಬೇರೆ ಪ್ರಕರಣಗಳಲ್ಲಿ ಅಳಿವಿನಂಚಿನಲ್ಲಿರುವ ಇನ್ನೂರಕ್ಕೂ ಹೆಚ್ಚು ರಣಹದ್ದುಗಳ ಮಾರಣ ಹೋಮವಾಗಿದೆ. ಇದಕ್ಕೆ ಮುಖ್ಯವಾದ ಕಾರಣ, ಸತ್ತ ಕಳೇಬರಗಳ ಮೇಲೆ ಸ್ಥಳೀಯರು ವಿಷಪ್ರಾಶನ ಮಾಡಿದ್ದು ಎಂದು ವರದಿ ಹೇಳಿದೆ. ವನ್ಯಜೀವಿಗಳಿಗೆ ಕಾಯಿಲೆಗಳು ಬರುವುದು ಅಪರೂಪವಾದರೂ, ಕೆಲವೊಂದು ಬಾರಿ ವಿದ್ಯಮಾನ ಅತಿರೇಕಕ್ಕೆ ತಲುಪಿ, ಒಂದು ಪ್ರದೇಶದ ಒಂದು ಪ್ರಭೇದವೇ ವಿನಾಶದಂಚಿಗೆ ತಲುಪಿದ ಉದಾಹರಣೆಗಳಿವೆ. 1980-90ರ ದಶಕದಲ್ಲಿ ಭದ್ರಾ ವನ್ಯಜೀವಿ ಅಭಯಾರಣ್ಯದಲ್ಲಿ ಕಾಟಿಗಳಿಗೆ ದೊಡ್ಡರೋಗ (ರಿಂಡರ್ ಪೆಸ್ಟ್) ತಗುಲಿ ಸಂಪೂರ್ಣ ನಾಶವಾಗುವ ಹಂತ ತಲುಪಿತ್ತು. ನೈಸರ್ಗಿಕವಾಗಿಯೇ ಕೊಳೆತು ಹೋಗಲಿ ಎಂಬ ಈ ಸುತ್ತೋಲೆಯನ್ನು ಜಾರಿ ಮಾಡಲು ಹೊರಟಲ್ಲಿ, ಈ ತರಹದ ಅಪಾಯಗಳನ್ನು ಎದುರಿಸಬೇಕಾಗುತ್ತದೆ.

ಈಗ, ವನ್ಯಜೀವಿಗಳಿಗೆ ಸಂಬಂಧಿಸಿ ನಡೆಯುವ ಅಪರಾಧಗಳಲ್ಲಿ ಶೇ 25ರಷ್ಟು ಮಾತ್ರ ಪತ್ತೆಯಾಗುತ್ತಿವೆ. ಅದರಲ್ಲೂ ಶೇ 5ರಿಂದ 10ರಷ್ಟು ಪ್ರಕರಣಗಳು ಮಾತ್ರ ಮೊಕದ್ದಮೆಯ ಹಂತಕ್ಕೆ ಹೋಗುತ್ತವೆ. ಮಾಂಸಕ್ಕಾಗಿಯೋ ಅಥವಾ ಅದರ ಅಂಗಾಂಗಗಳಿಗಾಗಿಯೋ ವನ್ಯಜೀವಿಯನ್ನು ಬೇಟೆಯಾಡುವುದು ಹಾಗೂ ಇಲಾಖೆಯ ಕಣ್ಣಿಗೆ ಸಿಕ್ಕಿಬಿದ್ದು, ಶಿಕ್ಷೆಗೊಳಗಾಗುವುದು ಶೇ 5ರಷ್ಟು ಪ್ರಕರಣಗಳಲ್ಲಿ ಮಾತ್ರ. ಬೇಟೆಗೊಳಗಾದ ವನ್ಯಪ್ರಾಣಿಗಳನ್ನು ನೈಸರ್ಗಿಕವಾಗಿಯೇ ಮರಣಹೊಂದಿದ್ದು ಎಂದು ಬಿಂಬಿಸುವ ಸಾಧ್ಯತೆಯಿದೆ. ಇನ್ನು, ಇಲಾಖೆಯ ಸಿಬ್ಬಂದಿಗಳೇ ಮರಕೊಯ್ದು ಮಾರಾಟ ಮಾಡುವುದು, ವನ್ಯಜೀವಿಗಳ ಬೇಟೆಯಾಡಿದ ಪ್ರಕರಣಗಳು ಹೊರಬರುವುದೇ ಇಲ್ಲ. ಇತ್ತೀಚೆಗೆ, ತೀರ್ಥಹಳ್ಳಿ ತಾಲ್ಲೂಕಿನ ಗ್ರಾಮಪಂಚಾಯಿತ್ತಿಯ ಮಾಜಿ ಉಪಾಧ್ಯಕ್ಷರಾದ ಕಾಂತರಾಜ್ ಎನ್ನುವವರು ಗುಂಡು ತಗುಲಿ ಪ್ರಾಣ ಕಳೆದುಕೊಂಡ ಪ್ರಕರಣ ಕಳ್ಳಬೇಟೆ ಎಂಬ ಆರೋಪ ಇದೆ. ಈ ಪ್ರಕರಣದಲ್ಲಿ, ಅರಣ್ಯ ಇಲಾಖೆಯ ಗಾರ್ಡ್ ಕಳ್ಳಬೇಟೆಯಲ್ಲಿ ಭಾಗಿಯಾಗಿದ್ದಾನೆ ಎಂಬ ಸಂಶಯವಿದೆ.

ವನ್ಯಜೀವಿಗಳು ಮತ್ತದರ ಆವಾಸಸ್ಥಾನಗಳಾದ ಅರಣ್ಯಗಳು, ಮರಗಿಡಬಳ್ಳಿಗಳು, ಕೆರೆ-ಸರೋವರಗಳು, ನದಿ- ತೊರೆಗಳು ಸಾರ್ವಜನಿಕ ಆಸ್ತಿ. ಯಾರೋ ಒಬ್ಬರಿಗೆ ಸೇರಿದ್ದಲ್ಲ. ಯಾವುದೇ ಪೂರ್ವಾಪರ ಯೋಚನೆಯಿಲ್ಲದೆ, ವನ್ಯಜೀವಿ ತಜ್ಞರ ಜೊತೆ ಸಮಾಲೋಚನೆಯೂ ಇಲ್ಲದೆ, ಏಕಾಏಕಿ ಸುತ್ತೋಲೆ ಹೊರಡಿಸಿರುವುದರ ಹಿಂದಿನ ಮರ್ಮವೇನು ಎಂಬುದು ಎಲ್ಲರಿಗೂ ತಿಳಿಯಬೇಕಾಗಿದೆ. ಇಪ್ಪತ್ತು ವರ್ಷಗಳ ಹಿಂದೆಯೂ ಈ ಪ್ರಸ್ತಾಪ ಅರಣ್ಯ ಇಲಾಖೆಯ ಮುಂದೆ ಬಂದಿತ್ತು. ಆಗಿನ ಅಧಿಕಾರಿಗಳು ಇದರ ಸಾಧಕ-ಭಾದಕಗಳನ್ನು ತೀರ್ಮಾನಿಸಲು, ಒಂದು ಸಮಿತಿಯನ್ನು ರಚಿಸಿದ್ದರು. ಸುದೀರ್ಘ ಚರ್ಚೆ ನಡೆದು, ಕ್ಷೇತ್ರ ಪ್ರವಾಸ ಮಾಡಿ ಆ ಪ್ರಸ್ತಾಪವನ್ನು ಕೈಬಿಟ್ಟಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈ ಲೇಖನವನ್ನು ಬರೆಯುವ ಹೊತ್ತಿಗೆ ಅತ್ತ ಅರಣ್ಯ ಭವನದ ಎದುರು ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿರುವ ಮೂರು ಸಾವಿರ ಜನರು ತಮಗೆ ಇಲಾಖೆಯಿಂದ ಸಂಬಳವೇ ಬಂದಿಲ್ಲವೆಂದು ಧರಣಿ ಕುಳಿತಿದ್ದಾರೆ.

ಲೇಖಕ: ಪರಿಸರಪರ ಹೋರಾಟಗಾರ

ಪದಬಂಧ 4929 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ದುಡ್ಡಿಲ್ಲದವನು (5)
3.ಲಂಗ ಧರಿಸಿದವಳು ಕೊಟ್ಟಿರುವ ಸಾಂಬಾರದ್ರವ್ಯ (3)
5.ಅಪರಾಧವನ್ನೇ ಮಾಡದವನು (5)
7.ನೆನಪಿಗೆ ಬಾರದಿರುವಿಕೆ (3)
8.ನವ ಬಾಳಿದು (5)
10.ಅಂತಃಕರಣವೂ ಆಗಿರುವ ಪಚನಾಂಗ (3)
11.ಪಾಕಕ್ಕೆ ದೊರೆತ ಬಹುಮಾನ (5)
14.ನಿಯಮಾನುಸಾರ ಕೊಡತಕ್ಕ ಹಣ (3)
15.ಯುದ್ಧದ ಹುಲಿಯಿದು (5)

ಮೇಲಿಂದ ಕೆಳಕ್ಕೆ

1.ರಕ್ತ ಹರಿಯುವ ನಾಳ (3)
2.ಮಿತಿ ಮೀರಿದ ಕೋಪ (3)
4.ಈಕೆ ಪತಿವ್ರತೆ (3)
6.ರಾಯರಿಂದ ಬಂದಿರುವ ನಿರೂಪ (3)
7.ಕಾಡು ಇಲ್ಲಿ ಕಾಣುತ್ತಿದೆ (3)
8.ನಾಭಿ ಇಲ್ಲಿದೆ (3)
9.ಬಳ್ಳಿ ಇಲ್ಲಿಯೇ ಹಬ್ಬಿದೆಯಲ್ಲಾ? (3)
10.ಧಾನ್ಯದ ತೆನೆ (3)
12.ಅಸ್ತವ್ಯಸ್ತವಾಗಿರುವ ತೋರಣ (3)
13.ಜಗಳಕ್ಕೊಂದು ಪರ್ಯಾಯ ಪದ (3)

4928ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ವರ್ಚಸ್ವಿ 4.ಹಮ್ಮೀರ
5.ಸಡಗರ 6.ದರಕಾರ
8.ಣೆಹ 10.ರವಿ
13.ವಾತಾಯನ
14.ಜಾತಿವಾದಿ 15.ಯಾತ್ರಿಕ
16.ಅಧ್ವಾನ

ಮೇಲಿಂದ ಕೆಳಕ್ಕೆ:
1.ಮಹಜರುನಾಮೆ
2.ವರದಕ್ಷಿಣೆ 3.ಮಗಳು
5.ಸರದಾರ
7.ಐತಿಹಾಸಿಕತೆ
9.ಹಟವಾದಿ
11.ವಿಮಾನಯಾನ
12.ವಂತಿಗೆ

ಸುಡೊಕು 5315

9		1			7		3	
			2			1		5
5		2		1	8			7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	


5314 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು – ಮೇಷ ಮಾಸದ 02 ನೇ ದಿನ ತಿಥಿ: (ಚೈತ್ರ ಶುದ್ಧ) ಪೂರ್ಣಿಮಾ ಗಂ. 24-25 ನಕ್ಷತ್ರ: ಹಸ್ತ ಗಂ. 08-40 ಯೋಗ: ಹರ್ಷಣ ಗಂ. 26-44, ಕರಣ: ವಿಷ್ಟಿ ಗಂ. 13-29. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-21 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 14 ರಂಜಾನ್ ದಿನ ವಿಶೇಷ : ಚೈತ್ರ ಪೂರ್ಣಿಮಾ, ಓಳಿ ಮುಕ್ತಾಯ (ಜೈನ್), ಹನುಮಜಯಂತಿ (ದ.ಭಾರತ), ಈಸ್ಟರ್(ಹೋಳಿ) ಶನಿವಾರ ಅದೃಷ್ಟ ಸಂಖ್ಯೆ: 5, 9

ಮೇಷ: ಸರ್ಕಾರಿ ಕಾನೂನುಗಳಿಗೆ ಬೆಲೆ ಕೊಡುವ ಮನೋಭಾವವನ್ನು ಬೆಳೆಸಿಕೊಳ್ಳಿರಿ. ಸಹೋದ್ಯೋಗಿಗಳನ್ನು ಹುರಿದುಮ್ಮಿಸುವ ಕೆಲಸವನ್ನು ಮಾಡಿ. ಬಾಲ್ಯ ಸ್ನೇಹಿತರ ಆಕಸ್ಮಿಕ ಭೇಟಿಯಿಂದ ಮನಸ್ಸಿಗೆ ಸಂತಸ.

ವೃಷಭ: ದೇವರ ಆಭರಣ ತಯಾರಿಕೆ ಅಥವಾ ದೇವಾಲಯದ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವ. ಅಕ್ಕಪಕ್ಕದವರಿಂದ ನಿಮ್ಮ ಹೆಸರು ಹಾಳುಮಾಡುವ ಪ್ರಯತ್ನ ನಡೆಯಬಹುದು.

ಮಿಥುನ: ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಸಹೋದರರಲ್ಲಿ ಪುನಃ ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ದುರ್ಗಾದೇವಿ ಆರಾಧನೆಯಿಂದ ಶುಭ ಪ್ರಾಪ್ತಿ.

ಕರ್ಕಾಟಕ: ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕಥೆ ನಡೆಯುವುದು. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ದಿನದ ಅಂತ್ಯದಲ್ಲಿ ನಾಳೆಯ ಕೆಲಸಗಳ ಬಗ್ಗೆ ಗಮನ ಹರಿಸಿ.

ಸಿಂಹ: ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ.

ಕನ್ಯಾ: ಕೆಲವು ಬಾರಿ ಆತಂಕ ಎದುರಾಗುವ ಸಾಧ್ಯತೆ. ಆದರೂ ಜೀವನದಲ್ಲಿ ಸೋಮಾರಿತನವನ್ನು ಜೊತೆಯಲ್ಲಿ ಅಹಂಕಾರವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈ ಹಾಕಿದರೂ ಸಮಸ್ಯೆ ಆಗುವುದಿಲ್ಲ.

ತುಲಾ: ಹಲವಾರು ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಆದರೆ ಅಣ್ಣ-ತಮ್ಮಂದಿರು ಒಂದೇ ವ್ಯವಹಾರದಲ್ಲಿ ಸಂಯಮದಿಂದ ನಡೆದುಕೊಂಡರೆ ವ್ಯಾವಹಾರಿಕ ಲಾಭ ಹೊಂದಬಹುದು.

ವೃಶ್ಚಿಕ: ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳಾವಕಾಶದ ಹುಡುಕಾಟ ಆರಂಭಿಸುವಿರಿ. ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯವಾಗುತ್ತದೆ.

ಧನು: ಮಗಳಿಂದ ಶುಭ ಸುದ್ದಿಯೊಂದನ್ನು ತಿಳಿಯುವಿರಿ. ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಇನ್ನೊಬ್ಬರಿಗೆ ಬೆಲೆ ಕೊಟ್ಟು ನೀವು ಬೆಲೆ ಸಂಪಾದಿಸುವುದನ್ನು ಅಭ್ಯಸಿಸಿ. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು.

ಮಕರ: ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಶತ್ರುಗಳ ಗಾಳಕ್ಕೆ ಸಿಕ್ಕಿಕೊಳ್ಳದಂತೆ ಈ ದಿನ ನೀವು ಎಚ್ಚರವಹಿಸಬೇಕು.

ಕುಂಭ: ವ್ಯಾವಹಾರಿಕ ಜೀವನದ ಕೆಲವು ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಇಂದು ಸೂಕ್ತವಾದ ದಿನವಾಗಿದೆ. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ನಿರಂತರತೆ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳಿ.

ಮೀನ: ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಲು ತಯಾರಿ ನಡೆಸುವಿರಿ. ವೈದ್ಯ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ. ಜವಳಿ ವ್ಯಾಪಾರಿಗಳು ವಿಶೇಷ ರಿಯಾಯಿತಿಯಂತಹ ಮಾರಾಟಗಳಿಂದ ಹೆಚ್ಚಿನ ಲಾಭ ಪಡೆಯುವಿರಿ.

‘ಮಾವು ಸಂಸ್ಕರಣಾ ಘಟಕ ಸ್ಥಾಪನೆಗೆ ಕ್ರಮ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿನ ಮಾವು ಬೆಳೆಗಾರರ ಅನುಕೂಲಕ್ಕಾಗಿ ಮಾವು ಸಂಸ್ಕರಣಾ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿ) ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ ಮಾವು ಖರೀದಿದಾರರು ಮತ್ತು ಮಾರಾಟಗಾರರ ಮಾರುಕಟ್ಟೆ ಸಂಪರ್ಕ ಸಮಾವೇಶದಲ್ಲಿ ಅವರು ಮಾತನಾಡಿದರು.

‘ರಾಮನಗರದಲ್ಲಿ ಮಾವು ಮಾರುಕಟ್ಟೆ ನಿರ್ಮಿಸುವ ಸಂಬಂಧ ಅಲ್ಲಿನ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಲಾಗಿದೆ. ಮಾವು ಬೆಳೆಗಾರರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು’ ಎಂದರು.

ಆರೋಗ್ಯ ಸಚಿವ ಕೆ.ಸುಧಾಕರ್, ‘ಜಿಲ್ಲಾ ಮಟ್ಟದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು. ಅವುಗಳಿಗೆ ರೈತರೇ ಮಾಲೀಕರಾಗಬೇಕು. ಬೆಳೆಗಾರರು ಖರೀದಿದಾರರ ಹಿಡಿತಕ್ಕೆ ಸಿಲುಕದಂತೆ ಕ್ರಮ ವಹಿಸಬೇಕು’ ಎಂದರು.

ದೆಹಲಿ, ಕೋಲ್ಕತ್ತ ಸೇರಿದಂತೆ ಹೊರ ರಾಜ್ಯಗಳ ಮಾವು ಮಾರುಕಟ್ಟೆಗಳಿಂದ ಮಾರಾಟಗಾರರು, ಪೂರೈಕೆದಾರರು, ಇ-ಕಾಮರ್ಸ್ ಸಂಸ್ಥೆಗಳು ಹಾಗೂ 150ಕ್ಕೂ ಹೆಚ್ಚು ಮಂದಿ ಮಾವು ಬೆಳೆಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇದೇ ವೇಳೆ ಮಾವು ಪೂರೈಕೆದಾರರು ಮತ್ತು ಮಾರಾಟಗಾರರ ನಡುವೆ ಮಾವು ಖರೀದಿ ಸಂಬಂಧ ಒಪ್ಪಂದಗಳು ನಡೆದವು. ಕಾರ್ಯಕ್ರಮದಲ್ಲಿ ನಿಗಮದ ಮಾಹಿತಿ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

ಕೆಎಸ್‌ಎಂಡಿಎಂಸಿ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ.ನಾಗರಾಜ್, ಅಧ್ಯಕ್ಷ ಕೆ.ವಿ.ನಾಗರಾಜ್, ಅಧಿಕಾರಿಗಳಾದ ಜೆ.ಗುಣವಂತ, ಲಲಿತಾ ಇದ್ದರು.

ನಿಗಮಕ್ಕೆ ₹4 ಕೋಟಿ ಅನುದಾನ: ಭರವಸೆ

‘ಅನುದಾನದ ಕೊರತೆಯಿಂದಾಗಿ ಮಾವು ನಿಗಮದಿಂದ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ. ಮಾವಿನ ಕಾಲ ಆರಂಭವಾಗಿರುವುದರಿಂದ ನೆರವಿನ ಅಗತ್ಯವಿದೆ. ಇದಕ್ಕಾಗಿ ನಿಗಮಕ್ಕೆ ಅನುದಾನ ಕೊಟ್ಟರೆ ಅನುಕೂಲ’ ಎಂದು ಸಮಾವೇಶದಲ್ಲಿ ಭಾಗವಹಿಸಿದ್ದ ಮಾವು ಬೆಳೆಗಾರರು ಸಚಿವ ಮುನಿರತ್ನ ಅವರಿಗೆ ಮನವಿ ಮಾಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಮುನಿರತ್ನ,‘ಮಾವು ನಿಗಮಕ್ಕೆ ₹4 ಕೋಟಿ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ದೇಶದಲ್ಲಿ ಆರ್ಥಿಕ ಅಸಮಾನತೆ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದ ಸಮಾನತೆಯ ಸಿದ್ಧಾಂತವನ್ನು ಸಮಾಜ ಇಂದಿಗೂ ತಿರಸ್ಕಾರದಿಂದಲೇ ನೋಡುತ್ತಿದೆ. ಸಮಾಜದಲ್ಲಿ ಸಮಾನ ಅವಕಾಶ ಸಿಕ್ಕಾಗ ಮಾತ್ರ ಅಂಬೇಡ್ಕರ್ ಜಯಂತಿ ಅರ್ಥಪೂರ್ಣ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಎಸ್.ಆರ್.ಕೇಶವ ಹೇಳಿದರು.

ನಾಗರಬಾವಿಯ ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೇಶದ ಶೇ 33ರಷ್ಟು ಆಸ್ತಿಯು ಶೇ 1ರಷ್ಟು ಜನರ ಬಳಿ ಕ್ರೋಢೀಕರಣಗೊಂಡಿದೆ. ದೇಶ ಆರ್ಥಿಕ ಅಸಮಾನತೆಯಿಂದ ಬಳಲುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಅಂಬೇಡ್ಕರ್ ಅವರ ಹೆಸರಿನಲ್ಲಿ ಲಾಭ ಪಡೆಯುವ ರಾಜಕೀಯ ಪಕ್ಷಗಳು ಅವರ ಆಶಯಗಳನ್ನು ಕಾರ್ಯಗತಗೊಳಿಸುವತ್ತ ಗಮನ ನೀಡಿದರೆ ಸಮಾಜಕ್ಕೆ ಒಳಿತಾಗುತ್ತದೆ. ಸಂವಿಧಾನ ರಚನೆಯಾಗಿರುವುದು ಸಮಾಜ ಹಾಗೂ ಎಲ್ಲ ಧರ್ಮದವರ ಅಭ್ಯುದಯಕ್ಕಾಗಿಯೇ ಹೊರತು ನಿರ್ದಿಷ್ಟ ಜಾತಿ, ಧರ್ಮಕ್ಕಲ್ಲ. ಹೆಚ್ಚು ವಿಷಯಗಳಲ್ಲಿ ಪಾಂಡಿತ್ಯ ಹೊಂದಿದ್ದ ಅಂಬೇಡ್ಕರ್ ಅವರನ್ನು ದಲಿತ ನಾಯಕನೆಂದು ಸೀಮಿತಗೊಳಿಸುವುದು ಸರಿಯಲ್ಲ’ ಎಂದೂ ಬೇಸರ ವ್ಯಕ್ತಪಡಿಸಿದರು.

ಪಾಂಚಜನ್ಯ ವಿದ್ಯಾಪೀಠ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಟ್ರಸ್ಟಿ ಶಿವಮಲ್ಲು,‘ಮೀಸಲಾತಿ ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಅದು ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ ಜನರ ಅಭಿವೃದ್ಧಿ, ಸಮಾಜದ ಮುಖ್ಯ ವಾಹಿನಿಗೆ ತರಲು ಜನಸಂಖ್ಯೆಗೆ ಅನುಗುಣವಾಗಿ ನೀಡಿರುವ ಪ್ರಾತಿನಿಧ್ಯ’ ಎಂದರು.

‘ಆಳುವ ವರ್ಗದ ಹುನ್ನಾರದಿಂದ ಜಾತೀಯತೆ ಸೃಷ್ಟಿಯಾಯಿತು. ಸಾಮಾಜಿಕ ಸ್ವಾಸ್ಥ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಮಾರಕವಾದ ಅಸ್ಪೃಶ್ಯತೆಯನ್ನು ಬುಡ ಸಮೇತ ಕಿತ್ತೊಗೆದರೆ, ದೇಶದ ಬೆಳವಣಿಗೆಯ ವೇಗ ಹೆಚ್ಚಾಗಲಿದೆ’ ಎಂದು ಹೇಳಿದರು.

ಟ್ರಸ್ಟ್‌ನ ಕಾರ್ಯದರ್ಶಿ ಎ.ಆರ್.ಕೃಷ್ಣಮೂರ್ತಿ, ‘ಅಂಬೇಡ್ಕರ್ ಹೇಳಿದಂತೆ ಶಿಕ್ಷಣ, ಸಂಘಟನೆ, ಹೋರಾಟದಿಂದ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಬಹುದು. ಅದರಂತೆ ಶಿಕ್ಷಣ ದಾಸೋಹದ ಉದ್ದೇಶದೊಂದಿಗೆ ಆರಂಭಗೊಂಡಿರುವ ಟ್ರಸ್ಟ್ ಸಾವಿರಾರು ವಿದ್ಯಾವಂತರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿದೆ’ ಎಂದರು.

ಖಜಾಂಚಿ ಬಿ.ಎನ್.ಉಮೇಶ್, ಕಾಲೇಜಿನ ಪ್ರಾಂಶುಪಾಲರಾದ ಮೀನಾಕ್ಷಿ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Ganganagar

GANDHINAGAR OPPOSITE KANISHKA HOTEL Suitable for LODGING HOTEL 40X75 SITE FOR SALE. Contact: 9945079777

Gnanabharathi

BDA SITE For Sale 20x30 East Facing at Gnanabharthi 1st Block. Contact: 6363496142 7676900174

HBR Layout

HBR LAYOUT 4th Block, 40X60 East Facing, 40 Feet Road Site Sale, 16,500/- PSqft. 9945724472.

Hosur Road

"SALE: SITE, Building, Residential, Commercial 20x30, 30x40, 40x60, 50x80 HOSA Road, HSR, Koramangala, Nagarabhavi. 9880080388"

Hebbal

SITES FOR sale 30x40 'A'Katha sites,at Dasarahalli, Mariyanpalya main road, near Shobha moonstone apartment,9880670200,9343001602.

Hanumanthnagar

SALE BDA Allotted 30x41 North Facing Srinivasanagar 14,000 SFT, direct registration, No Brokers whatsapp 7760320891.

HSR Layout

HSR SALE Sites 40x60, 50x80 Building 30x45, 5 Floor 3.25 20x30, 1.75 Cr. Contact: 9900966336

Indiranagar

INDIRANAGAR 30/40, 40/60, 50/80 , 60/90. All facings available for sale. Broker Excuse. 8660189539.

Isro Layout

"40X60 EAST Facing Site for Sale 40 feet Road at ISRO Layout, Good Location. 9945070268"

J P Nagar

J.P.NAGAR EXCELLENT Residential 40x60 South, 45x60 North, 45x65 East and Jayanagar T Block 40x63 East Murali: 9845232711

J.P.NAGAR 7TH Phase, Navodaya Nagara, 29x43 North Facing, Vacant Site For Sale. Brokers Excuse. 9845189191.

"40X60 SOUTH Facing Site, Developed Locality, Sreenidhi Layout, near Konanakunte, 6300/- P.Sqft. Owner: 9845088449, 9845249799"

40X43 NORTH West Corner Site Also 30x40,40x60,20x30 Residential Also 100feet Ring Road 80x120 60x90 40x60 Prime-Comercial Site Sale Call:9845760178

J.P.NAGAR 9TH Phase, II Block BDA Site 40x62.5 East, 30x40 North 40 feet road. 9845286583.

Kanakapura Road

NANDA PRAKRUTI Gated-Community 40x60 BMRDA Approved Sites Rs.2990/- Per sft off Kanakapura Road Before Ravishankar ashram Call:9901011122 7892035229

BALAJI LAYOUT, Vajarahalli 28x40 SITE SALE 8,750/- Sqft, S/F, 40 Feet Road, Walkable Metro Station/ Bus-Stop. 9945724472, 7829830333.

"BDA 40X60 W/F Site Jayanagar Society, Gubbalala, Near Vajrahalli Metro, 7250/- P.Sqft, Owner- 9845088449/ 9845249799"

Kempegowda Layout

30X40 BDA Approved West Facing Site KNS Layout Nada Prabhu Kempegowda Layout 4500/- Psft: 9845488488

30X40 NORTH Facing Bheemakuppe 7th Block, 1st Sector Nada Prabhu Kempegowda Layout 5000/- Psft: 9845488488

SITES FOR SALE Nadaprabhu Kempegowda Layout Genuine Buyers. 20x30, 30x40, 40x60, 50x80. Manjunatha.S. 9742568746, 9663346666.

SITE SALE EF 30X40 BDA Rs. 4500 sftNegotiable 1st Block K Sector Nadaprabhu Kempegowda Layout 9164164544

Mysore Road

EAGLETON GOLF RESORT, Mysore Road, 40X75 North Facing Site Sale, Gated Community, 3,800/- PSqft. 9945724472.

Nagarabhavi

NAGARABHAVI BDA Complex back side 9th Block 40x60 North 40'feet Road, Semi-Commercial/ Residential. 9448432633

125X72.5 SQFT. Full Site OR Partly Site Sale, Annapoorneshwari Nagar, Attached Health Layout. 9845848516.

Peenya

4800SQ.FT VACANT land near Shivapura, Nellagadaranahall for sale. Genuine buyers, Please contact 9902030976

Rajarajeshwari Nagar

40X60 EAST, 30x50 South SITES. 3 BHK 2150 Sft FLATS, BEML 5th Stage. 8884378079, 9480337879.

Sarjapur Road

SALE 10,000 Sft Plot, East Facing, at Sarjapura Road, Kodathi Gate Close to Wipro. Contact: 9341253949, 9845005855

Vishweshwariah Layout

BDA SITE Sale Vishweshwaraiah 30x40 1st Block North 9000, 30x40 4th Block North 5800 Negotiable. 50x80 6th Block 60ft Road:- 8892901567/ 9341733480

"50X80 RESIDENCIAL 2nd Block, 50x80 Commercial 80 Feet Road 6th Block Vishweshwaraiah Layout Sale. 7338328879"

AVAILABLE VISHWESHWARAIAH Layout 6th Block 30X40 East & 7th Block 30X40 East Good Location: 8553908699

COMMERCIAL 50X80 Site South Face Sale, Vishweswaraiah Layout 1st Block, 100 Feet Road, Near KHB Apartments/ Shirke Circle. 9986869996.

SALE-BDA, VISHWESHWARAIAH Layout, 6th Block,40x60,WF, 40 Feet Road, Near KLE Law College. 9900152106, 8970680106

Villas/Bunglows

RMV

BDA 4500SFT North Face Bunglow/ Plot Sale @ Near RMV CLUB. Contact: 8050276328

REAL ESTATE BUYING

Sites

Multiple Locations

"ANJANAPURA, ARKAVATHI, Banashankari 6th Stage, Sir M Vishweshwariah Layout, Kempegowda Layout. Any BDA sites Wanted. Contact: Saptagiri: 9900268073/ 9448068073"

RENTAL PROPERTIES

Accommodation Available

Commercial

COMMERCIAL SPACE for Rent @ Uttarahalli Main Road & KumaraSwamy Layout Main Road. CONTACT: 8971660799.

BRIGADE BUSINESS Suite Available to-rent as Office/ Commercial space near Ashoka-Pillar, Jayanagar,with 875.Sq.ft of super built-up area.South facing unit,fully air conditioned, with power back and 24hrs security.Pls Contact: 9606826101

OFFICE/ SHOWROOM SPACE Rent, Seshadripuram Main Road, G/F, F/F- 630 Sq.Ft Each. Contact:- 9900095047

AVAILABLE FOR Rent 1650 & 250 sqft, Suitable for Ware house/ Office Near Mahalakshmi Layout Metro: 9845333246

Industrial And Factory

14500 SQFT. Industrial Godown for rent in Doddaballapur. Call: 9986716677.

FOR RENT
Warehouse space
15,275 sq.ft. available for RENT in Singasandra
opp to AECS LAYOUT near Dakshinhonda showroom on Hosur Main Road, Kudlu.
Interested contact
9844013677

House

5 BHK Villa at elite Dollars Colony, RajaMahal Vilas 2nd Stage 1st Block, near Makery Circle. Brand New Kitchen, Bathrooms & Lighting. Pet & Child Friendly. Huge Parking & Garden area. Domestic help quarters. Close to International Schools, Upscale dining & healthcare. Ready to Occupy. Rent Rs1.2 Lakh pm. Can also Furnish. satyakolala@gmail.com 9901587535/ 9341846801

KANAKAPURA ROAD House Rent/ Lease 1and 3BHK, Decent Locality Aishwarya Layout Doddakallasandra Near Metro Car-Parking: 7090466137

RENT: 2BHK GF, 1BHK 1st & 2nd Floor, Hanumanthnagar Semifurnished, Ready Occupation. Owner: 78925-30410/ 94488-09902

BASAVESHWARNAGAR KIRLOSKAR COLONY 1 BHK, Ground East Facing, Rent with Carparking Vegetarian Only: 9900072628

BUILDERS ESSENTIAL

Building Contractors

CONSTRUCT YOUR DREAM HOME AT LOWEST PRICE, BEAUTIFUL DESIGN, BEST QUALITY WITH TRUST. CONTACT: 9845583070

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS.9448572697

LEAKAGE... LEAKAGE... Old/New Building,Sump, Bathroom, Wallcrack, Skylight, Terrace Waterproofing done by NewTechnology- 9880916988

JOB OPPORTUNITIES

Walk-in

JOB ALERT!
For our Hubli & Karwar Restaurant Team,
We are Hiring !
Tandoor Chefs
Tandoor Chef Helpers
Indian Chefs
Indian Chef Helpers
Frying Section Chefs
Captains
Steward & Waiters
House Keeping Staff
Walk-in-Interview: on 13th & 14th April 2022
Between 3.30 pm to 5.30 pm
8928786988
8373996660

Marketing & Sales

REQUIRE SALES PERSONNEL FOR A REPUTED PATCH INDUSTRY FOR KARNATAKA. SEND YOUR RESUME BEFORE 30.4.22 TO sbr1@unipatch.com

Multiple Vacancy

REQUIRED TEAMLEADER, Telecaller, & Field Executive for For Banking Loan collection (salary 15,000-to-20,000). Direct recruitment to Company Contact: 9620206756, 9620200756.

Wanted

REQUIRED DATA ENTRY OPERATORS Graduates with good English apply online @ www.bidocean.com/employment.php

PUBLIC NOTICE

PUBLIC NOTICE

Public are informed that our client intends to purchase following

Item No. 1 : Agricultural land in **Sy.No.109/4** measuring **20 Guntas** (out of 1 Acre 1 Gunta), situated at Chambenahalli Village, Sarjapura Hobli, Anekal Taluk and bounded on the:

East by : Land in Sy.No.39
West by : Land in Sy.No.39;
North by : Land in Sy.No.109/3;
South by : Remaining Portion of Sy.No.109/4;

From its Owner **Sri.C.M. Subramani, son of Sri.C.G. Muniswamy and others.**

Item No. 2 : Agricultural land in **Sy.No.39/P3** measuring **20 Guntas,** situated at Chambenahalli Village, Sarjapura Hobli, Anekal Taluk and bounded on the:

East by : Road;
West by : Land in Sy.No.144/1;
North by : Land in Sy.No.39;
South by : Land in Sy.No.39;

From its Owner **Sri. A. C.Yellappa, son of Late Sri.Annayappa**

Persons having any right over the said property may lodge their objections / claims with documentary evidence within **7 days** from the date of this publication, to the undersigned.

Geetha Halliyal, Advocate
42 High Street, No.775, 2nd Floor, 100 feet Road, Indiranagar, Bangalore-38. M : 9980519476
Mail: geethahalliyal@gmail.com
Bangalore Date: 16.04.2022

BUSINESS

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/9606701007

PERSONAL

Change of Name

I, RAJANI KULKARNI W/o. SANJEEV KULKARNI R/o. Flat #F10, A-Block Shreepadam Nivas Apartment, 9th Cross, Basavanapura Main Road, K.R.Puram Bengaluru-560036 Have Changed My Name From RAJANI DESAI D/o. RANGANATH DESAI to RAJANI KULKARNI W/o. SANJEEV KULKARNI vide Affidavit Dated: 13.4.2022 Before Notary Appasaheb B Sunagar Kalaburgi

I, GANGOTHRI KHANAPURI.E- spouse of No.7785071K, NK(MP), Santosh Mahantesh Kotabagi R/a CMP Centre & School, D&M wing, Bangalore-25, have changed my name from GANGOTHRI KHANAPURI.E to GANGOTHRI SANTOSH KOTABAGI vide Affidavit dt:14/04/2022 before Notary B.M.Chandrashekar, Bangalore.

I, CHOKSI HARDIK KUMAR HARSHAD KUMAR Residing at No. A-508, SMR Vinya Galaxy, Hoodi Circle, Bangalore- 560048, have changed my name to HARDIK CHOKSI, vide affidavit dated 14.04.2022, before notary M Rajendra, Bangalore. Henceforth I Shall be called HARDIK CHOKSI, Bangalore.

I, MUMTAZ BEGUM residing No.2, 2nd Cross, Maruthi Layout Doddabidarakallu, Nagasandra Post, Bengaluru-560073 have changed my name to MAHIKA vide affidavit dated 14/02/2022 sworn before notary N.Mahesha, Bangalore

I, NO.7781580L, HAV(MP), Irappa Dundi R/a #4, D&M Wing, CMP Centre & School, Bangalore-25 have changed my minor son's name from AKSHAY KUMAR to AKSHAY KUMAR DUNDI vide affidavit dt:14/04/2022 before Notary B.M.Chandrashekar, Bangalore.

I, NO.7781580L, HAV(MP), Irappa Dundi R/a #4, D&M Wing, CMP Centre & School, Bangalore-25 have changed my minor daughter's name from ARPITA to ARPITA DUNDI vide affidavit dt:14/04/2022 before Notary B.M.Chandrashekar, Bangalore.

I, HEMAMTHINI PRAKASH W/o. D.M. Prakash (Late) R/a 1st Cross V.P Extention Chitradurga- 577501 Have Changed My Name to HEMANTHINI PRAKASH vide Affidavit Dated: 12.4.2022 Before Notary S Jayanth, Bangalore

LATA SINHA W/O 6492892M HAV DIPAK KUMAR R/A RAMPUR LAKHISARAI BIHAR MY NAME LATA SINHA TO LATA DEVI Notary KV MANI Bangalore

14825793W HAV/MT AMIT NARAIN PRASAD 2ATC My FATHER Name records SHEO SHANKAR PRASAD Instead of SHIV SHANKAR PRASAD KUSWAHA Notary KV MANI Bangalore

14825793W HAV/MT AMIT NARAIN PRASAD 2ATC My MOTHER Name records SHOSHILA DEVI Instead of SUSHILA DEVI Notary KV MANI Bangalore

JC673403A NB/SUB UMESWAR SANTRA 2ATC My MOTHER Name records BAKUL Instead of BAKUL SANTRA Notary K.V MANI Bangalore

Lost

LOST
I, Abhishek. S residing at #120, 1st main, 2nd cross, Robertson block, Ramchandrapuram, Bangalore. Have lost Register Land Documents of Survey No.110/*/1 & 111/*/2. Situated at Hosahalli village, Sasalu Hobli, Doddaballapura Talluk, Bangalore Rural District, Registered in the name of M. Shanthi. Finders please **Contact- 7975843001** or inform nearby Police Station.

MORE Classifieds Ads on Subsequent Pages





ಭೂಮಿಕಾ ಓದಿರಿ

'30ರಿಂದ ಕಿರು ನಾಟಕೋತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಹಾಗೂ ಅಶ್ವಘೋಷ ಥಿಯೇಟರ್ ಟ್ರಸ್ಟ್ ಸಹಯೋಗದ ಎರಡನೇ ಆವೃತ್ತಿಯ ಕಿರು ನಾಟಕೋತ್ಸವಕ್ಕೆ ಇದೇ 30ರಂದು ಚಾಲನೆ ಸಿಗಲಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ನಾಟಕೋತ್ಸವದ ನಿರ್ದೇಶಕ ಹನುರಾಮ ಸಂಜೀವ, 'ಏಪ್ರಿಲ್ 30 ಮತ್ತು ಮೇ 1ರಂದು ಪ್ರಾಥಮಿಕ ಹಂತದ ಸ್ಪರ್ಧೆಗಳು ನಡೆಯಲಿವೆ. ಮೇ 15ರಂದು ಕೊನೆಯ ಹಂತದ ಸ್ಪರ್ಧೆ ಆಯೋಜಿಸಲಾಗಿದೆ' ಎಂದು ತಿಳಿಸಿದರು.

'ಕೋವಿಡ್ ವೈರಸ್‌ನಿಂದಾಗಿ ರಂಗಭೂಮಿ ಚಟುವಟಿಕೆಗಳಿಗೆ ಹಿನ್ನಡೆ ಉಂಟಾಗಿದೆ. ಕಲಾವಿದರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ರಂಗಕರ್ಮಿಗಳನ್ನು ಒಂದೆಡೆ ಸೇರಿಸಲು ಹಾಗೂ ರಂಗಭೂಮಿ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬಲು ಕಿರು ನಾಟಕೋತ್ಸವ ಸಹಕಾರಿಯಾಗಲಿದೆ' ಎಂದು ಮತ್ತೊಬ್ಬ ನಿರ್ದೇಶಕ ನಂದೀಶ ದೇವ್ ಹೇಳಿದರು.

ಧರ್ಮರಾಯ ದೇವಸ್ಥಾನಕ್ಕೆ ಮಲ್ಲಿಗೆ ಹೂವಿನಿಂದ ಶೃಂಗಾರ

ಬೆಂಗಳೂರು ಕರಗ ಉತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದ ಎರಡು ವರ್ಷ ಸರಳವಾಗಿ ನಡೆದಿದ್ದ ಐತಿಹಾಸಿಕ ಕರಗ ಉತ್ಸವ ಈ ಬಾರಿ ವಿಜೃಂಭಣೆಯಿಂದ ನಡೆಯಲಿದ್ದು, ಉತ್ಸವಕ್ಕೆ ಕ್ಷಣಗಣನೆ ಆರಂಭವಾಗಿದೆ.

ರಥೋತ್ಸವ ಮತ್ತು ಧ್ವಜಾರೋಹಣ ನೆರವೇರಿಸುವ ಮೂಲಕ ಏ.4ರಂದು ಉತ್ಸವಕ್ಕೆ ಚಾಲನೆ ನೀಡಲಾಗಿದ್ದು, ಅಂದಿನಿಂದ ಪ್ರತಿದಿನ ಧಾರ್ಮಿಕ ವಿಧಿ ವಿಧಾನಗಳು ನೆರವೇರುತ್ತಿವೆ. ಇಡೀ ಉತ್ಸವದ ಕೇಂದ್ರ ಬಿಂದು ಆಗಿರುವ ಕರಗ ಶಕ್ತ್ಯೋತ್ಸವವು ಚೈತ್ರ ಪೂರ್ಣಿಮೆಯ ಶನಿವಾರ ರಾತ್ರಿ 12.30ಕ್ಕೆ ನಡೆಯಲಿದೆ.

ಧರ್ಮರಾಯಸ್ವಾಮಿ ದೇವಸ್ಥಾನವನ್ನು ಮಲ್ಲಿಗೆ ಹೂವಿನಿಂದ ಶೃಂಗರಿಸಲಾಗಿದೆ. ಕರಗ ಸಾಗುವ ದಾರಿಯುದ್ದಕ್ಕೂ ಸ್ವಚ್ಛಗೊಳಿಸಿ, ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿದೆ. ಎ.ಜ್ಞಾನೇಂದ್ರ ಅವರು ಈ ಬಾರಿ ಕರಗ ಹೊರಲಿದ್ದಾರೆ.

ಹಲಸೂರುಪೇಟೆ ಆಂಜನೇಯ ಸ್ವಾಮಿ ಮತ್ತು ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿದ ನಂತರ ನಗರ್ತಪೇಟೆಯ ವೇಣುಗೋಪಾಲಸ್ವಾಮಿ, ಸಿದ್ದಣ್ಣಗಲ್ಲಿಯ ಭೈರೇದೇವರ ದೇವಸ್ಥಾನ, ಕಬ್ಬನ್ ಪೇಟೆಯ ರಾಮಸೇವಾ ಮಂದಿರ, ಮಕ್ಕಳ ಬಸವನಗುಡಿ, ಗಾಣಿಗರಪೇಟೆಯ ಚನ್ನರಾಯಸ್ವಾಮಿ, ಚಾಮುಂಡೇಶ್ವರಿ ದೇವಸ್ಥಾನದ ಮೂಲಕ ನಗರದ ನಾಲ್ಕೂ ದಿಕ್ಕುಗಳಲ್ಲಿ ಕರಗ ಸಂಚರಿಸಲಿದೆ.

ಕರಗ ಉತ್ಸವ ನೋಡಲು 1 ಲಕ್ಷಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆ ಇದೆ. ಹಜರತ್ ತವಕ್ಕಲ್ ಮಸ್ತಾನ್ ಷಾ ದರ್ಗಾಕ್ಕೆ ಕರಗ ಭೇಟಿ ನೀಡುವುದು ಪ್ರತೀತಿಯಾಗಿದ್ದು, ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಕೆಲವರು ಬೆದರಿಕೆ ಹಾಕಿದ್ದರು. ಈ ಸಲವೂ ಕರಗ ಅಲ್ಲಿಗೆ ತೆರಳಲಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ಹಸೀ ಕರಗ

ಕರಗ ಉತ್ಸವದಲ್ಲಿ ಮುಖ್ಯ ಭಾಗವಾದ 'ಹಸೀ ಕರಗ' ಉತ್ಸವ ಗುರುವಾರ ತಡರಾತ್ರಿಯಿಂದ ಶುಕ್ರವಾರ ಬೆಳಿಗ್ಗೆ ತನಕ ನಡೆಯಿತು.

ಪೂಜಾರಿ ಮನೆತನದವರು ದೊಡ್ಡ ತೇರಿನ ಕಳಸಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ದೇವರ ಮೂರ್ತಿಗಳಿಗೆ ಅಲಂಕಾರ ಮಾಡಿ ಸಂಪ್ರದಾಯದಂತೆ ಪೂಜೆ ನೆರವೇರಿಸಿ ಕಬ್ಬನ್ ಉದ್ಯಾನದಲ್ಲಿನ ಸಂಪಂಗಿಕೆರೆ ಅಂಗಳದ ಶಕ್ತಿ ಪೀಠಕ್ಕೆ ತೆರಳಿದರು.
ಬಳಿಕ ನಡೆದ ಹಸೀ ಕರಗ ಉತ್ಸವವನ್ನು ಸಾವಿರಾರು ಮಂದಿ ಕಣ್ತುಂಬಿಕೊಂಡರು.



ಸಂಪಂಗಿ ಕೆರೆ ಅಂಗಳದ ಶಕ್ತಿ ಪೀಠದಲ್ಲಿ ಶುಕ್ರವಾರ ಬೆಳಿಗ್ಗೆ ಹಸೀ ಕರಗ ಉತ್ಸವ ನಡೆಯಿತು –ಪ್ರಜಾವಾಣಿ ಚಿತ್ರ

ಸಂಚಾರ ನಿಷೇಧ: ಪರ್ಯಾಯ ಮಾರ್ಗ

ಶನಿವಾರ ಶಕ್ತ್ಯೋತ್ಸವ ನಡೆಯುವುದರಿಂದ ಕೆಲವು ಮಾರ್ಗಗಳಲ್ಲಿ ಸಂಚಾರ ನಿರ್ಬಂಧಿಸಿ ಪರ್ಯಾಯ ಮಾರ್ಗಗಳನ್ನು ಸಂಚಾರ ಪೊಲೀಸರು ಸೂಚಿಸಿದ್ದಾರೆ.

ಶನಿವಾರ ಸಂಜೆ 4 ಗಂಟೆಯಿಂದ ಭಾನುವಾರ ಬೆಳಿಗ್ಗೆ 8 ಗಂಟೆ ತನಕ ಸಂಚಾರ ನಿರ್ಬಂಧ ಇರಲಿದೆ. ಸಿಟಿ ಮಾರುಕಟ್ಟೆ ಕಡೆಯಿಂದ ಬಂದು ಎಸ್‌ಜೆಪಿ ಜಂಕ್ಷನ್‌ನಲ್ಲಿ ಪಿ.ಕೆ.ಲೇನ್ ಮೂಲಕ ಓಟಿಸಿ ರಸ್ತೆಯ ಮಾರ್ಗವಾಗಿ ಎನ್.ಆರ್.ರಸ್ತೆ ಹಾಗೂ ಸುಣ್ಣಕಲ್ಲುಪೇಟೆಗೆ ಹೋಗಲು ಎಡ ತಿರುವ ಪಡೆಯುತ್ತಿದ್ದ ಎಲ್ಲ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಇದಕ್ಕೆ ಪರ್ಯಾಯವಾಗಿ ಎಲ್ಲಾ ವಾಹನಗಳು ನೇರವಾಗಿ ಪುರಭವನ ವೃತ್ತಕ್ಕೆ ಹೋಗಿ ಎನ್.ಆರ್. ರಸ್ತೆ ಮೂಲಕ ಮುಂದೆ ಸಾಗಬೇಕು.

ಪಿ.ಕೆ.ಲೇನ್, ಓಟಿಸಿ, ನಗರ್ತಪೇಟೆ ರಸ್ತೆ, ಎಸ್.ಪಿ.ರಸ್ತೆ ಮತ್ತು ಎಸ್.ಪಿ. ರಸ್ತೆಯ ಅಡ್ಡರಸ್ತೆಗಳು ಹಾಗೂ ಸುಣ್ಣಕಲ್ಲುಪೇಟೆ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ. ಅದಕ್ಕೆ ಬದಲಾಗಿ ಪುರಭವನ, ರವೀಂದ್ರ ಕಲಾಕ್ಷೇತ್ರ, ಮೈ ಶುಗರ್ ಕಟ್ಟಡ, ಎನ್.ಆರ್. ರಸ್ತೆ ಎಡಭಾಗ, ಕುಂಬಾರ ಗುಂಡಿ ರಸ್ತೆಯ ಎಡಭಾಗ, ಜೆ.ಸಿ. ರಸ್ತೆಯ ಎಡಭಾಗ, ಎಸ್‌ಜೆಪಿ ರಸ್ತೆಯಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಜಂಟಿ ಪೊಲೀಸ್ ಆಯುಕ್ತ(ಸಂಚಾರ) ಬಿ.ಆರ್.ರವಿಕಾಂತೇಗೌಡ ಕೋರಿದ್ದಾರೆ.



ಆರಗ ಜ್ಞಾನೇಂದ್ರ ಅವರು ಮುನಿರಾಜ ರೆಂಜಾಳ ಅವರಿಗೆ 'ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ' ಪ್ರದಾನ ಮಾಡಿದರು. (ಎಡದಿಂದ) ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ ಅಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್, ಸ್ಥಾಪಕ ಅಧ್ಯಕ್ಷ ಡಿ.ಸುರೇಂದ್ರ ಕುಮಾರ್, ಪತ್ರಕರ್ತ ಪದ್ಮರಾಜ ದಂಡಾವತಿ ಮತ್ತು ನರಸಿಂಹರಾಜಪುರದ ಸಿಂಹನಗದ್ದೆ ಬಸ್ತಿ ಮಠದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಇದ್ದರು . – ಪ್ರಜಾವಾಣಿ ಚಿತ್ರ

'ಮಲೆನಾಡಿನ ಒಕ್ಕಲಿಗರೆಲ್ಲ ಜೈನರಾಗಿದ್ದೆವು'

ಬೆಂಗಳೂರು: 'ಒಂದು ಕಾಲದಲ್ಲಿ ಮಲೆನಾಡು ಭಾಗದ ಒಕ್ಕಲಿಗರೆಲ್ಲ ಜೈನರಾಗಿದ್ದೆವು. ಈಗಲೂ ನಮ್ಮ ಮನೆಗಳಲ್ಲಿ ಹಬ್ಬದ ಸಂದರ್ಭದಲ್ಲಿ 'ಜೈನ ಎಡೆ' ಇಡುವ ಪ್ರತೀತಿ ಇದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ 35ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಕಾರ್ಕಳದ ನಿವೃತ್ತ ಶಿಕ್ಷಕ ಮುನಿರಾಜ ರೆಂಜಾಳ ಅವರಿಗೆ 'ಮಹಾಕವಿ ರತ್ನಾಕರವರ್ಣಿ' ಪ್ರಶಸ್ತಿ ಪ್ರದಾನ ಮಾಡಿ ಶುಕ್ರವಾರ ಮಾತನಾಡಿದರು.

'ನಾನು ಜೈನ ಸಮುದಾಯಕ್ಕೆ ಸೇರಿದವನು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಭಾವಿಸಿದ್ದರು. ನನ್ನ ಹೆಸರು ನೋಡಿ ಅವರಿಗೆ ಹಾಗನಿಸಿತ್ತು. ಈ ಕುರಿತು ಒಮ್ಮೆ ಕರೆದು ಕೇಳಿದ್ದರು' ಎಂದು ಹೇಳಿದರು.

'ಜೈನ ಸಮುದಾಯದವರು ಸಾಹಿತ್ಯ ಹಾಗೂ ವಿದ್ವತ್ ಲೋಕಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ರತ್ನಾಕರವರ್ಣಿಯವರು ನಮ್ಮ ನಡುವಣ ಕವಿ. ಸಮಾಜವು ತನ್ನ ಕೃತಿ ಸ್ವೀಕರಿಸಲಿಲ್ಲ ಎಂದು ನೊಂದು ಅವರು ಜೈನ ಸಮುದಾಯವನ್ನೇ ತ್ಯಜಿಸಲು ನಿರ್ಧರಿಸಿದ್ದರಂತೆ' ಎಂದರು.

ಪ್ರಶಸ್ತಿ ಪುರಸ್ಕೃತ ಮುನಿರಾಜ ರೆಂಜಾಳ, 'ಯಾವ ವಿದ್ಯಾಪೀಠದಿಂದ ವಿದ್ಯೆ ಕಲಿತು, ಧರ್ಮದ ಶಿಕ್ಷಣ ಸ್ವೀಕರಿಸಿದ್ದೆನೋ ಅಂತಹ ಗುರುಪೀಠದ ಗುರುಗಳ ಸಾನಿಧ್ಯದಲ್ಲಿ ಪ್ರಶಸ್ತಿ ಸ್ವೀಕರಿಸಿರುವುದು ನನ್ನ ಪಾಲಿನ ಸೌಭಾಗ್ಯ' ಎಂದು ಸಂತಸ ವ್ಯಕ್ತಪಡಿಸಿದರು.

ಜಯಲಕ್ಷ್ಮಿ ಅಭಯಕುಮಾರ್ ಅವರ 'ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ಪುರಸ್ಕೃತರು' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಪತ್ರಕರ್ತ ಪದ್ಮರಾಜ ದಂಡಾವತಿ, 'ರತ್ನಾಕರವರ್ಣಿ ಪ್ರಶಸ್ತಿ ಪುರಸ್ಕೃತರೆಲ್ಲರೂ ಜೈನ ಸಮುದಾಯದ ಶಿರೋಮಣಿಗಳು. ಈವರೆಗೆ ಪ್ರಶಸ್ತಿ ಪಡೆದ 17 ಮಂದಿಯ ಮಾಹಿತಿಯನ್ನು ಈ ಪುಸ್ತಕ ಒಳಗೊಂಡಿದೆ' ಎಂದು ತಿಳಿಸಿದರು.



ದಯಾನಂದ ಸಾಗರ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವತಿಯಿಂದ ಎನ್. ರಂಗನಾಥ್ ಅವರನ್ನು ಸನ್ಮಾನಿಸಲಾಯಿತು. ಎಚ್.ಕೆ. ರಾಮರಾಜು, ದಯಾನಂದ ಸಾಗರ ಶಿಕ್ಷಣ ಸಂಸ್ಥೆಯ ಜಂಟಿ ಕಾರ್ಯದರ್ಶಿ ತಿಂತಿಶಾ ಎಚ್. ಸಾಗರ್ ಹಾಗೂ ಕಾಲೇಜಿನ ಪ್ರಾಂಶುಪಾಲ ಸಿ.ಪಿ.ಎಸ್. ಪ್ರಕಾಶ್ ಇದ್ದಾರೆ.

'ಜಲ ಮೂಲಗಳ ರಕ್ಷಣೆ ಅವಶ್ಯಕ'

ಬೆಂಗಳೂರು: 'ಭೂಮಿಯ ಮೇಲಿನ ಪ್ರತಿಯೊಂದು ಜೀವಿಗೂ ಗಾಳಿ, ನೀರು ಅತ್ಯವಶ್ಯಕವಾಗಿದ್ದು, ಇವುಗಳು ಮಲಿನವಾಗದಂತೆ ಕಾಪಾಡಿಕೊಳ್ಳಬೇಕು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ತಿಳಿಸಿದರು.

ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಜಲ ಸಂಪನ್ಮೂಲಗಳ ನಿರ್ಲಕ್ಷಿಸುವಿಕೆ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಹವಾಮಾನದ ಬದಲಾವಣೆ, ಜನಸಂಖ್ಯೆ ಹೆಚ್ಚಳ, ನಗರೀಕರಣ ಸೇರಿ ವಿವಿಧ ಕಾರಣಗಳಿಂದ ನೀರಿನ ಕೊರತೆ ಎದುರಾಗುತ್ತಿದೆ. ನೀರಿನ ಮೂಲಗಳ ಪುನಶ್ಚೇತನಕ್ಕೆ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪರಿಸರ ಕಲುಷಿತವಾಗದಂತೆ ಸುರಕ್ಷಿತವಾಗಿ ಇಟ್ಟುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ' ಎಂದರು.

ಐಐ ಟೆಕ್ನಾಲಜೀಸ್ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎನ್. ರಂಗನಾಥ್, 'ಸರ್ಕಾರದ ಮಾಹಿತಿ ಪ್ರಕಾರ ರಾಜ್ಯಕ್ಕೆ ಲಭ್ಯವಿರುವ ಒಟ್ಟು ನೀರು 1,212.75 ಟಿಎಂಸಿ ಅಡಿ. ಆದರೆ, ರಾಜ್ಯಕ್ಕೆ 3,221 ಟಿಎಂಸಿ ಅಡಿ ನೀರಿನ ಅಗತ್ಯ ಇದೆ. ನೀರಿನ ಮೂಲಗಳನ್ನು ಸಂರಕ್ಷಣೆ ಮಾಡಬೇಕು' ಎಂದು ತಿಳಿಸಿದರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಚ್.ಕೆ. ರಾಮರಾಜು, 'ಕೈಗಾರೀಕರಣ, ನಗರೀಕರಣದಿಂದಾಗಿ ನೀರಿಗೆ ಬೇಡಿಕೆ ಹೆಚ್ಚಿದೆ. ಇಂದಿನ ಪೀಳಿಗೆ ನೀರಿನ ಮಿತ ಬಳಕೆಗೆ ಆದ್ಯತೆ ನೀಡಬೇಕು' ಎಂದು ಹೇಳಿದರು.

ಸಮಾಜವನ್ನು ಒಡೆಯುವುದು ಅಧರ್ಮ –ಮಹಾಕುಂಭಾಭಿಷೇಕ ನೆರವೇರಿಸಿದ ಹರಿಹರಪುರದ ಸ್ವಾಮೀಜಿ ಅಭಿಮತ

‘ಸಮಾನತೆಯ ರಕ್ಷಣೆ ಮಠ, ಪೀಠಗಳ ಕರ್ತವ್ಯ’

ಪ್ರಜಾವಾಣಿ ವಾರ್ತೆ

ಕೊಪ್ಪ: ‘ಏಕತೆ, ಸಮಾನತೆಯನ್ನು ಎತ್ತಿ-ಹಿಡಿಯುವುದು, ಮಠಗಳ, ಧರ್ಮ ಪೀಠಗಳ ಕರ್ತವ್ಯ’ ಎಂದು ಹರಿಹರಪುರ ಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹರಿಹರಪುರ ಮಠದಲ್ಲಿರುವ ಲಕ್ಷ್ಮೀನರಸಿಂಹ ಸ್ವಾಮಿ, ಶಾರದಾ ಪರಮೇಶ್ವರಿ ನೂತನ ದೇವಸ್ಥಾನದಲ್ಲಿ ಶುಕ್ರವಾರ ಪುನರ್ ಪ್ರತಿಷ್ಠಾಪನೆ, ಮಹಾಕುಂಭಾಭಿಷೇಕ ನೆರವೇರಿಸಿದ ಬಳಿಕ ಧರ್ಮಸಭೆಯ-ಲ್ಲಿ ಸ್ವಾಮೀಜಿ ಆಶೀರ್ವಚನ ನೀಡಿ, ‘ಸಮಾಜವನ್ನು ಒಗ್ಗೂಡಿಸುವುದು ಧರ್ಮ, ಸಮಾಜವನ್ನು ಒಡೆಯುವುದು ಅಧರ್ಮ’ ಎಂದರು.

‘ತನಗಿಂತ ಬೇರೆಯವರು ಭಿನ್ನರಲ್ಲ, ಎಲ್ಲರೂ ಸಮಾನರು ಎಂಬುದೇ ಅದ್ವೈತ. ವಿವಿಧತೆಯಲ್ಲಿ ಏಕತೆ ಇದ್ದಾಗ ಮಾತ್ರ ಸಂಸ್ಕೃತಿ ಬಲಗೊಳ್ಳುತ್ತದೆ, ಸಮಾಜ ಒಗ್ಗೂಡುತ್ತದೆ. ಹೆಜ್ಜೆ ಹೆಜ್ಜೆಗೂ ನಾವು ಸಮಾಜವನ್ನು ಒಂದುಗೂಡಿಸುವ ಕೆಲಸ ಮಾಡುತ್ತೇವೆಯೇ ಹೊರತು, ಒಡೆಯುವ ಕೆಲಸಕ್ಕೆ ಎಂದಿಗೂ ಕೈ ಹಾಕುವುದಿಲ್ಲ’ ಎಂದರು.

‘ಭಗವಂತನ ಪ್ರೇರಣೆಯಿಂದ ನಾವು 11 ವರ್ಷಗಳ ಹಿಂದೆ ಸಂಕಲ್ಪ ಮಾಡಿದ ಕಾರ್ಯಕ್ರಮವನ್ನು ನೀವು (ಭಕ್ತರು) ಸಾಕಾರಗೊಳಿಸಿದ್ದೀರಿ. ಎಲ್ಲರಲ್ಲೂ ದೇವರನ್ನು ಕಂಡು, ಎಲ್ಲವನ್ನೂ ದೇವರಿಗಾಗಿ ಮಾಡಿದಾಗ ಮಾತ್ರ ನಮ್ಮಲ್ಲಿ ಸಕಾರಾತ್ಮಕ ಚಿಂತನೆ ಬಲಗೊ-ಳ್ಳುತ್ತದೆ. ನಾವು ಸಮಾನತೆ, ಏಕತೆ, ವೈವಿಧ್ಯವನ್ನು ಒಪ್ಪುತ್ತೇವೆ. ತಾರತಮ್ಯ-ವನ್ನು ಎಂದಿಗೂ ಒಪ್ಪುವುದಿಲ್ಲ’ ಎಂದು ಸ್ಪಷ್ಟವಾಗಿ ಹೇಳಿದರು.

ಮಹಾಕುಂಭಾಭಿಷೇಕ ಮಹೋತ್ಸವದ ಸ್ವಾಗತ ಸಮಿತಿ ಅಧ್ಯಕ್ಷ, ಹೊರನಾಡು ಅನ್ನಪೂ-ರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ಜಿ.ಭೀಮೇಶ್ವರ ಜೋಶಿ ಮಾತನಾಡಿ, ‘ನನ್ನ ಜೀವನದಲ್ಲಿ ಅತ್ಯಮೂಲ್ಯ ಕಾರ್ಯ-ಕ್ರಮದಲ್ಲಿ ಪಾಲ್ಗೊಂಡು ಧನ್ಯನಾಗಿದ್ದೇನೆ. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಆಣತಿಯಂತೆ ಗ್ರಾಮಾಭಿವೃದ್ಧಿ ಯೋಜನೆ ಪದಾಧಿಕಾರಿಗಳು ಈ ಕಾರ್ಯಕ್ರಮದ ಯಶಸ್ವಿಗಾಗಿ ಸೇವೆ ಸಲ್ಲಿಸಿದ್ದಾರೆ’ ಎಂದು ಸ್ಮರಿಸಿದರು.

ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಮಾತನಾಡಿ, ‘ಲಕ್ಷಾಂತರ ಮಂದಿ ಆಗಮಿಸುವ ಮಹಾಕುಂಭಾಭಿಷೇಕ ಮಹೋತ್ಸವ ಯಶಸ್ವಿಗಾಗಿ ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಿದ್ದಾರೆ. ಕುಟುಂ-ಬದವರೊಂದಿಗೆ ನಾವು ಈ ಕಾರ್ಯಕ್ರ-ಮದಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ’ ಎಂದರು.

ಶಾಸಕ ಟಿ.ಡಿ. ರಾಜೇಗೌಡ ಮಾತನಾಡಿ, ‘ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಜಾತಿ ಭೇದವಿಲ್ಲದೇ 30 ಲಕ್ಷ ಮಂದಿಗೆ ಶಿವದೀಕ್ಷೆ ನೀಡಿದ್ದಾರೆ. ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಮೂಲಕ ಸ್ವಾಮೀಜಿ ಮಾದರಿಯಾ-ಗಿದ್ದಾರೆ. ಇಂದಿನ ಕಾರ್ಯಕ್ರಮ ಹರಿಹರಪುರ ಇತಿಹಾಸದಲ್ಲಿ ದಾಖಲಾಗುವ ಕಾರ್ಯಕ್ರಮವಾಗಿದೆ’ ಎಂದು ಬಣ್ಣಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಿ.ಎನ್.ಜೀವರಾಜ್, ‘ಶಂಕರಾಚಾರ್ಯರು ಸ್ಥಾಪಿಸಿದ ಪೀಠ ಇದು. 1989ರಿಂದ ಶ್ರೀಮಠದೊಂದಿಗೆ ಸಂಪರ್ಕ ಹೊಂದಿದ್ದೇನೆ. ಇಲ್ಲಿನ ಆಗು ಹೋಗುಗಳು ನನಗೆ ಗೊತ್ತಿವೆ. ಮಠಕ್ಕೆ ಜಾಗವನ್ನು ಕೊಂಡುಕೊಂಡು ಅದನ್ನು ಅಭಿವೃದ್ಧಿಪಡಿಸಲಾಗಿದೆ. ಇದೊಂದು ಅದ್ಧೂರಿ ಮತ್ತು ಅಚ್ಚುಕಟ್ಟಾದ ಕಾರ್ಯ-ಕ್ರಮವಾಗಿದೆ’ ಎಂದರು.

ತಿರುವಣ್ಣಮಲೈನ ಬ್ರಹ್ಮಾತ್ಮನಂದ ಸ್ವಾಮೀಜಿ, ಮಹಾಕುಂಭಾಭಿಷೇಕ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ಮಠದ ಆಡಳಿತಾಧಿಕಾರಿ ಡಾ. ಬಿ.ಎಸ್. ರವಿಶಂಕರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೀವ್, ಸ್ವಾಗತ ಸಮಿತಿಯ ಎಸ್.ಎನ್. ರಾಮಸ್ವಾಮಿ, ರಾಘವೇಂದ್ರ ಭಟ್ ಇದ್ದರು.


ಕೊಪ್ಪ ತಾಲ್ಲೂಕು ಹರಿಹರಪುರ ಮಠದ ದೇವಸ್ಥಾನದಲ್ಲಿ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಶುಕ್ರವಾರ ಮಹಾಕುಂಭಾಭಿಷೇಕ ನೆರವೇರಿಸಿದರು

ಮುಖ್ಯಾಂಶಗಳು

- 11 ವರ್ಷಗಳ ಹಿಂದೆ ಮಾಡಿದ ಸಂಕಲ್ಪ ಕಾರ್ಯಕ್ರಮ ಸಾಕಾರ
- ವೈವಿಧ್ಯತೆ ಒಪ್ಪುತ್ತೇವೆ, ತಾರತಮ್ಯ ಒಪ್ಪುವುದಿಲ್ಲ
- ಸಮಾಜವನ್ನು ಸೇರಿಸುವುದು ಧರ್ಮ, ಒಡೆಯುವುದು ಅಧರ್ಮ

‘ಇನ್ನುಮುಂದೆ ಸಮಾಜಮುಖಿ ಕೆಲಸದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತೇವೆ. ನಮ್ಮ ಮಠಕ್ಕೆ ಬರುವವರು ಜಾತಿ, ಪಕ್ಷವನ್ನು ಬಿಟ್ಟು ಬರಬೇಕು’

ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ


ಯಲಹಂಕ ಸಮೀಪದ ಅಮೃತಹಳ್ಳಿಯ ಶ್ರೀರಾಮ ದೇವಾಲಯದಲ್ಲಿ 14ನೇ ವರ್ಷದ ರಾಮನವಮಿಯ ಪ್ರಯುಕ್ತ ಶ್ರೀರಾಮದೇವರ ರಥೋತ್ಸವ ನಡೆಯಿತು

ಶ್ರೀರಾಮದೇವರ ರಥೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಅಮೃತಹಳ್ಳಿ ಗೋವಿಂದಪ್ಪ ಬಡಾವಣೆಯ ಶ್ರೀರಾಮ ದೇವಾಲಯದಲ್ಲಿ 14ನೇ ವರ್ಷದ ರಾಮನವಮಿ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆದವು.

ಸೀತಾರಾಮ ದೇವರಿಗೆ ಪಂಚಾಮೃತ ಅಭಿಷೇಕ, ವಿಶೇಷ ಹೂವಿನ ಅಲಂಕಾರ, ವಿಷ್ಣು ಸಹಸ್ರನಾಮ ಪಾರಾಯಣ, ಶ್ರೀರಾಮ ಭಜನಾಮಂಡಳಿ ಹಾಗೂ ಉಭಯ ಮಾರಮ್ಮ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮಗಳು ನಡೆದವು.

ಶ್ರೀರಾಮ ಸಂಗೀತಶಾಲಾ ವಿದ್ಯಾರ್ಥಿಗಳಿಂದ ಭಕ್ತಿಸಂಗೀತ, ಡಾ.ಸುಹಾಸಿನಿ ಅರುಣಾಚಲಂ ಮತ್ತು ತಂಡದಿಂದ ಭಕ್ತಿಗೀತೆಗಳು ಹಾಗೂ ಕ್ರಿಶ್ವಿ ಆರ್ಟ್ ಫೌಂಡೇಷನ್ ವಿದುಷಿ ಭವ್ಯ ಮಂಜುನಾಥ್ ಶಿಷ್ಯವೃಂದದವರಿಂದ ಭರತನಾಟ್ಯ ಕಾರ್ಯಕ್ರಮ ಏರ್ಪಡಿಸ-ಲಾಗಿತ್ತು. ಅಮೃತಹಳ್ಳಿಯ ಮುಖ್ಯರಸ್ತೆ-ಯಲ್ಲಿ ಶ್ರೀರಾಮದೇವರ ರಥೋತ್ಸವ ನಡೆಯಿತು. ಭಕ್ತಾದಿಗಳು ದೇವರಿಗೆ ಹಣ್ಣು-ಕಾಯಿ ಸಮರ್ಪಿಸಿ, ದರ್ಶನ ಪಡೆದರು.

ಶಾಸಕ ಕೃಷ್ಣಬೈರೇಗೌಡ, ಪಾಲಿಕೆ ಮಾಜಿ ಸದಸ್ಯ ಪಿ.ವಿ. ಮಂಜುನಾಥಬಾಬು, ಶ್ರೀರಾಮ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಎಂ.ಕೋದಂಡರಾಮ, ಕಾರ್ಯದರ್ಶಿ ಎಂ.ಲೋಕೇಶ್, ಖಜಾಂಚಿ ಎಂ.ಲಕ್ಷ್ಮೀ-ನಾರಾಯಣ ಇದ್ದರು.

ಶ್ರದ್ಧಾ ಭಕ್ತಿಯ ಶುಭ ಶುಕ್ರವಾರ ಆಚರಣೆ

ಯೇಸುವಿನ ತ್ಯಾಗ ಸ್ಮರಣೆ: ವಿಶೇಷ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಕ್ರೈಸ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೇಸುವಿನ ತ್ಯಾಗ, ಕರುಣೆ ಸಂಕೇತದ ‘ಗುಡ್ ಫ್ರೈಡೇ’ ಅಥವಾ ‘ಶುಭ ಶುಕ್ರವಾರ’ವನ್ನು ಕ್ರೈಸ್ತರು ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಶ್ರದ್ಧಾ ಭಕ್ತಿಯಿಂದ ನಗರದಲ್ಲಿ ಆಚರಿಸಿದರು.

ಯೇಸುವನ್ನು ಶಿಲುಬೆಗೇರಿಸಿದ ದಿನ ‘ಗುಡ್ ಫ್ರೈಡೇ’. ಶಿಲುಬೆಯು ಕ್ರೈಸ್ತರ ಪವಿತ್ರ ಮತ್ತು ಪ್ರಮುಖ ಸಂಕೇತ. ಚರ್ಚ್‌ಗಳಲ್ಲಿ ಯೇಸುವಿನ ಆರಾಧನೆಗಾಗಿ ಸಾಮೂಹಿಕ ಪ್ರಾರ್ಥನೆಗಳು ನಡೆದವು. ಚರ್ಚ್‌ಗಳಲ್ಲಿ ಯೇಸುವಿನ ಉಪದೇಶಗಳು, ಗುಣಗಳು, ಅವರು ಜೀವಿಸಿದ ರೀತಿಯನ್ನು ತಿಳಿಸಲಾಯಿತು.

ಕಳೆದ ಎರಡು ವರ್ಷಗಳ ಕಾಲ ಕೋವಿಡ್ ಕಾರಣಕ್ಕೆ ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸುವುದಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಹೀಗಾಗಿ, ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಸ್ತರು ಪ್ರಾರ್ಥನೆ ಸಲ್ಲಿಸಲು ಸೇರಿದ್ದರು. ಕೆಲವು ಚರ್ಚ್‌ಗಳಲ್ಲಿ ವಿವಿಧ ಸಮಯಗಳಲ್ಲಿ ವಿವಿಧ ಭಾಷೆಗಳಲ್ಲಿ ಪ್ರಾರ್ಥನೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್, ರಿಚ್ಮಂಡ್ ರಸ್ತೆಯ ಸೆಕ್ರೆಡ್ ಹಾರ್ಟ್ ಚರ್ಚ್ ಸೇರಿದಂತೆ ನಗರದೆಲ್ಲೆಡೆ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು.

ಭಾನುವಾರ ಈಸ್ಟರ್ ದಿನವನ್ನು ಸಮುದಾಯದವರು ಸಂಭ್ರಮದಿಂದ ಆಚರಿಸಲಿದ್ದಾರೆ. ಭಾನುವಾರವು ವಿಶೇಷ ಪ್ರಾರ್ಥನೆಗೆ ಚರ್ಚ್‌ಗಳಲ್ಲಿ ಸಿದ್ಧ-ತೆಗಳನ್ನು ಕೈಗೊಳ್ಳಲಾಗಿದೆ. ಮ್ಯೂಸಿಯಂ ರಸ್ತೆಯ ಸಂತ ಪ್ಯಾಟ್ರಿಕ್ ಚರ್ಚ್‌ನಲ್ಲಿ ಭಾನುವಾರ ಬೆಳಿಗ್ಗೆ 6.15ಕ್ಕೆ ಕನ್ನಡ, 7.30ಕ್ಕೆ ತಮಿಳು ಹಾಗೂ 8.45ಕ್ಕೆ, 10 ಗಂಟೆಗೆ, 11.15ಕ್ಕೆ ಮತ್ತು ಸಂಜೆ 6ಕ್ಕೆ ಇಂಗ್ಲಿಷ್‌ನಲ್ಲಿ ಪ್ರಾರ್ಥನೆಗಳು ನಡೆಯಲಿವೆ.

ಮುಖ್ಯಾಂಶಗಳು

- ವಿವಿಧ ಭಾಷೆಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ
- ಭಾನುವಾರ ಈಸ್ಟರ್ ದಿನ ಆಚರಣೆಗೆ ಸಿದ್ಧತೆ


ಶಿವಾಜಿನಗರದಲ್ಲಿರುವ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ಶುಕ್ರವಾರ ಕ್ರೈಸ್ತ ಸಮುದಾಯದವರು ಪ್ರಾರ್ಥನೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಶ್ರೀರಾಮ ರಥಯಾತ್ರೆ ಮತ್ತು ಶ್ರೀರಾಮ ನವಮಿ ಉತ್ಸವ: ಉದ್ಘಾಟನೆ–ಸಚಿವ ವಿ.ಸೋಮಣ್ಣ, ಭಾಷಣ–ದೋ.ಕೇಶವಮೂರ್ತಿ, ಸ್ಥಳ–ಶನಿಮಹಾತ್ಮ ದೇವಸ್ಥಾನ, ಟೋಲ್ ಗೇಟ್, ಬೆಳಿಗ್ಗೆ 7ರಿಂದ

ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಬಿಸಿನೆಸ್ ಆ್ಯಂಡ್ ರೀಸರ್ಚ್ (ಐಎಸ್‌ಬಿಆರ್) ಘಟಿಕೋತ್ಸವ: ಅತಿಥಿಗಳು–ಎನ್‌ಬಿಎ ಅಧ್ಯಕ್ಷ ಕೆ.ಕೆ.ಅಗರ್ವಾಲ್, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್, ಮೈಕ್ರೊಸಾಫ್ಟ್ ವೆಂಚರ್ಸ್ ಕ್ಯಾಪಿಟಲ್‌ನ ಲತಿಕಾ ಪೈ, ಸ್ಥಳ–ನಿಮ್ಹಾನ್ಸ್ ಸಮಾವೇಶ ಕೇಂದ್ರ, ಹೊಸೂರು ರಸ್ತೆ, ಬೆಳಿಗ್ಗೆ 9.30

ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಸಂಪಾದಕತ್ವದ ವಡ್ಡರ್ಸೆ ರಘುರಾಮ ಶೆಟ್ಟರ ಬರಹಗಳ ಸಂಕಲನ ‘ಬೇರೆಯೇ ಮಾತುಗಳು’ ಬಿಡುಗಡೆ: ದೇವನೂರ ಮಹಾದೇವ, ಅಧ್ಯಕ್ಷತೆ–ಸಿದ್ದರಾಮಯ್ಯ, ಅತಿಥಿಗಳು–ಕೆ.ಮರುಳಸಿದ್ದಪ್ಪ, ಕೆ.ಪುಟ್ಟಸ್ವಾಮಿ, ಆಯೋಜನೆ–ಜನನುಡಿ ಬಳಗ ಮತ್ತು ಅಹರ್ನಿಶಿ ಪ್ರಕಾಶನ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 11

‘ಪಟೇಲ ಕರೇರಂಗೇಗೌಡರ ಮನೆತನ’ ಪುಸ್ತಕ ಬಿಡುಗಡೆ: ಮಹೇಶ್ ಜೋಶಿ, ಪುಸ್ತಕ ಕುರಿತು–ಬೈರಮಂಗಲ ರಾಮೇಗೌಡ, ಆಯೋಜನೆ–ಶ್ರೀರಂಗ ಪ್ರಕಾಶನ, ಸ್ಥಳ–ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಳಿಗ್ಗೆ 11

ದೇಸೀ ದಿಬ್ಬಣ: ಅಧ್ಯಕ್ಷತೆ–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉದ್ಘಾಟನೆ–ಶಾಸಕ ಶಾಮನೂರು ಶಿವಶಂಕರಪ್ಪ, ಪ್ರಶಸ್ತಿ ಪ್ರದಾನ–ಶಾಸಕ ಎಂ.ಬಿ.ಪಾಟೀಲ, ಪುಸ್ತಕ ಬಿಡುಗಡೆ–ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, ದೇಸಿ ದಿಬ್ಬಣ ಸಾಹಿತ್ಯ ಪ್ರಶಸ್ತಿ ಪ್ರದಾನ–‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗೌರವ ಸಮರ್ಪಣೆ–ರಂಗಪ್ಪ, ಅಶೋಕ್ ಪಟ್ಟಣ, ಆಯೋಜನೆ–ಅಕ್ಕನಮನೆ ಪ್ರತಿಷ್ಠಾನ, ಸ್ಥಳ–ಸಾಂಸ್ಕೃತಿಕ ಸಮುಚ್ಛಯ ಕಲಾಗ್ರಾಮ, ಮಲ್ಲತ್ತಹಳ್ಳಿ ರಸ್ತೆ, ಜ್ಞಾನಭಾರತಿ, ಸಂಜೆ 4

‘ಕೋಮಲ ಗಾಂಧಾರ’ ನಾಟಕ ಪ್ರದರ್ಶನ: ಆಯೋಜನೆ–ಮೀನಾಕ್ಷಿ ಕಲಾವೃಂದ, ಸ್ಥಳ–ಉದಯಭಾನು ಕಲಾಸಂಘ, ಗವಿಪುರ, ಸಂಜೆ 4

ಅಭಿನಯ ತರಂಗ ಸಂಭ್ರಮಾಚರಣೆ–‘ಸಮಕಾಲೀನ ನಟನೆಯ ಪರಿಕಲ್ಪನೆ’ ವಿಚಾರ ಸಂಕಿರಣ: ಉದ್ಘಾಟನೆ–ಅರುಂಧತಿ ರಾವ್, ಅತಿಥಿಗಳು–ವಿಜಯಾ, ಸುರೇಶ್ ಆನಗಳ್ಳಿ, ಆಯೋಜನೆ–ಅಭಿನಯ ತರಂಗ, ಸ್ಥಳ–ಸುರಾನ ಕಾಲೇಜು, ಸೌತ್‌ಎಂಡ್ ವೃತ್ತ, ಬಸವನಗುಡಿ, ಸಂಜೆ 4

ಶ್ರಮಿಕರ ಕ್ಲಿನಿಕ್ ಉದ್ಘಾಟನೆ: ಎ.ಕೆ.ಪದ್ಮನಾಭನ್, ಅತಿಥಿಗಳು–ಸಿ.ಎನ್.ಮಂಜುನಾಥ್, ಮೀನಾಕ್ಷಿ ಸುಂದರಂ, ಕೆ.ಎನ್.ಉಮೇಶ್, ಎಚ್.ಎನ್. ಗೋಪಾಲಗೌಡ, ಅಧ್ಯಕ್ಷತೆ–ಕೆ.ಪ್ರಕಾಶ್, ಆಯೋಜನೆ–ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ, ಸ್ಥಳ–ಜ್ಯೋತಿಬಸು ಭವನದ ಮುಂಭಾಗ, ಬಸವನಗುಡಿ, ಸಂಜೆ 4

‘ಕೊರಟಿ ಶ್ರೀನಿವಾಸರಾವ್ ಅವರ ಐತಿಹಾಸಿಕ ಸಣ್ಣ ಕಥೆಗಳು’ ಉಪನ್ಯಾಸ: ಎಲ್.ರಾಜೇಶ್, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 4.30

ಅಕ್ಕಮಹಾದೇವಿ ಜಯಂತಿ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಲಾರ್ಪಣೆ–ಸಚಿವ ವಿ.ಸುನಿಲ್ ಕುಮಾರ್, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5

ಅರ್ಕಧ್ಯಾನ ಮತ್ತು ಅದರ ಉಪಯೋಗ ಕುರಿತು ಉಪನ್ಯಾಸ: ಅರ್ಕ ಶ್ರೀನಿವಾಸ ಯೋಗಿ, ಅತಿಥಿಗಳು–ಹೇಮಲತಾ ಸತೀಶ್ ಶೇಟ್, ರವಿಶಂಕರ್ ಆರ್ಯ, ಆಯೋಜನೆ–ಅರ್ಕ ಫೌಂಡೇಷನ್ ಇಂಡಿಯಾ, ಸ್ಥಳ–ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 5

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ‘ಎಸ್.ವಿ.ಎನ್. ಗ್ಲೋಬಲ್ ಮ್ಯೂಸಿಕ್ ಪ್ರಶಸ್ತಿ’ ಪ್ರದಾನ, ಸಂಗೀತ ಕಾರ್ಯಕ್ರಮ–ಕುಮರೇಶ್ ಮತ್ತು ಗಣೇಶ್, ಪತ್ರಿ ಸತೀಶ್ ಕುಮಾರ್, ಜಯಚಂದ್ರ ರಾವ್, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5.15ರಿಂದ


ಶ್ರೀರಾಮನವಮಿ ಉತ್ಸವ– ಗಣೇಶ್, ಕುಮರೇಶ್

ಭರತನಾಟ್ಯ ರಂಗಪ್ರವೇಶ: ವಿ.ಎಸ್.ಮೋಕ್ಷಿತ, ಅತಿಥಿಗಳು–ಪೂರ್ಣಿಮಾ ಶ್ರೀನಿವಾಸ್, ಕನ್ಯಾ ರಾಮಚಂದ್ರನ್, ರಕ್ಷಾ ಕಾರ್ತಿಕ್, ಆಯೋಜನೆ–ಶಿವಪ್ರಿಯ ನೃತ್ಯ ಶಾಲೆ, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 5.30

ಸಂಗೀತ ಕಾರ್ಯಕ್ರಮ: ಅಭಿಲಾಷ್ ಗಿರಿಪ್ರಸಾದ್, ವಾದ್ಯ ಸಹಕಾರ–ಎಸ್.ಶೇಷಗಿರಿರಾವ್, ಹರಿನಾರಾಯಣ, ಫಣೀಂದ್ರ, ಆಯೋಜನೆ–ಸಮೀರ ಸಮಯ ಸಂಜೀವಿನಿ ಸಂಸತ್ ಸಭಾ, ಸ್ಥಳ–ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 5.30

ಹುಣ್ಣಿಮೆ ಹಾಡು ಮತ್ತು ರಾಜು ಗಾನೋತ್ಸವ: ಅತಿಥಿಗಳು–ಎಸ್.ಬಾಲಿ, ಎನ್.ಎಸ್.ಪ್ರಸಾದ್, ಲಹರಿ ವೇಲು, ವಿ.ಮನೋಹರ್, ಶ್ರೀಧರ್ ರಾಘವೇಂದ್ರ, ಸಂಗೀತ ಕಾರ್ಯಕ್ರಮ–ಕಾರ್ತಿಕ್ ಪಾಂಡವಪುರ, ಮಧು ಮನೋಹರ್, ಆಯೋಜನೆ–ಕಾಡುಮಲ್ಲೇಶ್ವರ ಗೆಳೆಯರ ಬಳಗ, ನಾಕುತಂತಿ ಸಂಗೀತ ಗುಚ್ಛ, ಸ್ಥಳ–ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

ವಾಸ್ತವ್ಯ ಮಾಡಿದ ಗ್ರಾಮದ ಅಭಿವೃದ್ಧಿಗೆ ₹1 ಕೋಟಿ ವಿಶೇಷ ಅನುದಾನ

'ಫೋನ್ ಮೂಲಕ ಪಿಂಚಣಿ'

ಪ್ರಜಾವಾಣಿ ವಾರ್ತೆ



ಅಂಕೋಲಾ ತಾಲ್ಲೂಕಿನ ಅಚವೆಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾದ ಗ್ರಾಮ ವಾಸ್ತವ್ಯದ ಅಂಗವಾಗಿ ಕಂದಾಯ ಸಚಿವ ಆರ್. ಅಶೋಕ್, ಸಮೀಪದ ಅಂಗಡಿಬೈಲ್‌ನಲ್ಲಿ ಸಿದ್ದಿ ಕಾಲೊನಿಗೆ ಭೇಟಿ ನೀಡಿ ಕೃಷಿ ಚಟುವಟಿಕೆ ವೀಕ್ಷಿಸಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕಿ ರೂಪಾಲಿ ನಾಯ್ಕ ಇದ್ದಾರೆ —ಪ್ರಜಾವಾಣಿ ಚಿತ್ರ

ಅಚವೆ (ಕಾರವಾರ): 'ಫೋನ್ ಮೂಲಕ ಪಿಂಚಣಿಯನ್ನು ಫಲಾನುಭವಿಗಳಿಗೆ ತಲುಪಿಸುವ ಕಾರ್ಯಕ್ರಮವನ್ನು 10 ದಿನಗಳಲ್ಲಿ ಉದ್ಘಾಟಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಅಂಕೋಲಾ ತಾಲ್ಲೂಕಿನ ಅಚವೆ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾದ 'ಕಂದಾಯ ಸಚಿವರ ಗ್ರಾಮ ವಾಸ್ತವ್ಯ' ಕಾರ್ಯಕ್ರಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಇದಕ್ಕಾಗಿ ನಾಲ್ಕು ಅಂಕಿಗಳ ಟೋಲ್ ಫ್ರೀ ನಂಬರ್ ನೀಡಲಾಗುವುದು. ಅದಕ್ಕೊಂದು ನಿಯಂತ್ರಣ ಕೊಠಡಿ ರಚಿಸಲಾಗುವುದು. ಫಲಾನುಭವಿಗಳು ಅದಕ್ಕೆ ಕರೆ ಮಾಡಿ ತಮ್ಮ ಹೆಸರು, ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆ ನಂಬರ್ ತಿಳಿಸಿದರೆ ಸಾಕು. 10 ನಿಮಿಷದಲ್ಲಿ ತಹಶೀಲ್ದಾರ್ ಹಾಗೂ ಗ್ರಾಮಲೆಕ್ಕಿಗರಿಗೆ ಏಕಕಾಲದಲ್ಲಿ ಮಾಹಿತಿ ರವಾನೆ ಆಗುತ್ತದೆ. ಅದಾಗಿ 72 ಗಂಟೆಗಳ ಒಳಗೆ ಕಂದಾಯ ಸಿಬ್ಬಂದಿ ಫಲಾನುಭವಿಗಳ ಮನೆಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಿಸುತ್ತಾರೆ. ಬಳಿಕ ಅವರಿಗೆ ಪಿಂಚಣಿ ವಿತರಣೆ ಮಾಡಲಾಗುವುದು. ಜನರಿದ್ದಲ್ಲೇ ಸರ್ಕಾರ, ಜನರದ್ದೇ ಸರ್ಕಾರ ಎಂಬ ಪರಿಕಲ್ಪನೆಯಲ್ಲಿ ಕೆಲಸ ಮಾಡಲಾಗುತ್ತಿದೆ' ಎಂದರು.

'ಕೆಲವು ಜಿಲ್ಲಾಧಿಕಾರಿಗಳು ಗ್ರಾಮ ವಾಸ್ತವ್ಯದ ಸಂದರ್ಭ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡಿದ ದೂರುಗಳಿವೆ. ಈ ಬಗ್ಗೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಹಾಗೆ ಮಾಡದಂತೆ ಸೂಚಿಸಲಾಗಿದೆ. ಸ್ಥಳೀಯ ಸಮಸ್ಯೆಗಳ ಬಗ್ಗೆ ಅರಿತುಕೊಳ್ಳಲು ಅವರು ಸರ್ಕಾರಿ ಶಾಲೆ, ಸರ್ಕಾರಿ ವಸತಿ ನಿಲಯಗಳಲ್ಲೇ ವಾಸ್ತವ್ಯ ಮಾಡುವಂತೆ ಸೂಚಿಸಲಾಗಿದೆ' ಎಂದರು.

ವಿಶೇಷ ಅನುದಾನ: 'ಅಚವೆಯಲ್ಲಿ ನನ್ನ ಗ್ರಾಮ ವಾಸ್ತವ್ಯ ಸೇರಿ ಆರನೆಯದು. ನಾನು ವಾಸ್ತವ್ಯ ಹೂಡಿದ ಗ್ರಾಮಗಳ ಅಭಿವೃದ್ಧಿಗೆ ಇಲಾಖೆಯಿಂದ ₹1 ಕೋಟಿ ವಿಶೇಷ ಅನುದಾನ ನೀಡಲಾಗುವುದು. ಆ ಊರಿನ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

'ಹಿಂದಿನ ಮೂರು ಗ್ರಾಮ ವಾಸ್ತವ್ಯಗಳಲ್ಲಿ 90 ಸಾವಿರ ಅರ್ಜಿಗಳು ಬಂದಿವೆ. ಎಲ್ಲವನ್ನೂ ವಿಲೇವಾರಿ ಮಾಡಲಾಗಿದೆ. ಅಧಿಕಾರಿಗಳೇ ಗ್ರಾಮಕ್ಕೆ ಹೋಗುವುದರಿಂದ ಜನರ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲವಾಗುತ್ತದೆ' ಎಂದರು.

> **ಈ ಯೋಜನೆ ದೇಶದಲ್ಲಿಯೇ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ. ರಾಜ್ಯದ ಏಳು ಲಕ್ಷ ಜನರಿಗೆ ಪಿಂಚಣಿ ಪತ್ರ ಕೊಡುವ ಗುರಿ ಹೊಂದಲಾಗಿದೆ**
> **ಆರ್.ಅಶೋಕ,** ಕಂದಾಯ ಸಚಿವ

ಕಾಂಗ್ರೆಸ್ ನಡೆ ಆಪಾದನೆ ಕಡೆ: ಅಶೋಕ ಟೀಕೆ

ಅಚವೆ (ಕಾರವಾರ): 'ಚುನಾವಣೆ ಹತ್ತಿರವಾಗುತ್ತಿದೆ. ಹಾಗಾಗಿ ಕಾಂಗ್ರೆಸ್‌ನವರು ಪ್ರತಿದಿನ ಯಾವುದಾದರೂ ವಿಷಯವನ್ನು ಇಟ್ಟುಕೊಂಡು ಸರ್ಕಾರದ ವಿರುದ್ಧ ಆಪಾದನೆ ಮಾಡುವುದು ಅವರಿಗೆ ಪರಿಪಾಠವಾಗಿದೆ. ಇದು ಮುಂದಿನ ದಿನಗಳಲ್ಲಿ ಇನ್ನೂ ಜಾಸ್ತಿಯಾಗುತ್ತದೆ. ಕಾಂಗ್ರೆಸ್‌ನ ನಡೆ ಆಪಾದನೆಗಳ ಕಡೆ ಎಂಬಂತಾಗಿದೆ. ಅಧಿಕಾರದಲ್ಲಿದ್ದಾಗ ನೀವೇನು ಮಾಡಿದ್ದೀರಿ ಎಂದು ಕೇಳಿದರೆ, ನಾವು ತಪ್ಪು ಮಾಡಿದ್ದೇವೆ ಬಿಡ್ರಿ. ನೀವು ಒಳ್ಳೆಯ ಕೆಲಸ ಮಾಡಿ ಎಂದು ವಿಧಾನಸಭೆ ಕಲಾಪದಲ್ಲೇ ನಮಗೆ ಉಪದೇಶ ಮಾಡುತ್ತಾರೆ' ಎಂದರು.

'ಭಾವೈಕ್ಯ ದಿನ'ವಾಗಿ ಸಿದ್ಧಲಿಂಗ ಶ್ರೀ ಜನ್ಮದಿನ

ಗದಗಿನ ತೋಂಟದಾರ್ಯ ಮಠದಲ್ಲಿ ಸಿಎಂ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ



ಗದುಗಿನ ತೋಂಟದಾರ್ಯ ಮಠದ ಆವರಣದಲ್ಲಿ ನಿರ್ಮಾಣಗೊಂಡಿರುವ ಐಕ್ಯತಾ ಮಂಟಪವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ತೋಂಟದ ಸಿದ್ಧರಾಮ ಶ್ರೀಗಳು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಸಿ.ಸಿ.ಪಾಟೀಲ ಇದ್ದಾರೆ

ಗದಗ: 'ತೋಂಟದಾರ್ಯ ಮಠದ ಲಿಂಗೈಕ್ಯ ಡಾ. ಸಿದ್ಧಲಿಂಗ ಸ್ವಾಮೀಜಿ ಅವರ ಜನ್ಮದಿನವಾದ ಫೆ.21 ಅನ್ನು ಭಾವೈಕ್ಯತಾ ದಿನವನ್ನಾಗಿ ಆಚರಿಸಲು ಸರ್ಕಾರದಿಂದ ಶೀಘ್ರದಲ್ಲೇ ಅಧಿಕೃತ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗದುಗಿನ ತೋಂಟದಾರ್ಯ ಮಠದಲ್ಲಿ ನಿರ್ಮಾಣಗೊಂಡಿರುವ ತ್ರಿವಿಧ ದಾಸೋಹಿ ಲಿಂಗೈಕ್ಯ ಸಿದ್ಧಲಿಂಗ ಸ್ವಾಮೀಜಿ ಐಕ್ಯಮಂಟಪವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಶ್ರೀಗಳ ಐಕ್ಯಮಂಟಪವನ್ನು ಲೋಕಾರ್ಪಣೆ ಮಾಡುವ ಅವಕಾಶ, ಹಿಂದೆ ಶ್ರೀಗಳ ಒಡನಾಟ ಸಿಕ್ಕಿದ್ದು ನನ್ನ ಪೂರ್ವಜನ್ಮದ ಪುಣ್ಯ. ತೋಂಟದಾರ್ಯ ಮಠದೊಂದಿಗೆ 35 ವರ್ಷಗಳ ಒಡನಾಟವಿದೆ. ನಾನು ಇಲ್ಲಿಗೆ ಮುಖ್ಯಮಂತ್ರಿಯಾಗಿ ಬರದೇ ಭಕ್ತನಾಗಿ ಬಂದಿದ್ದೇನೆ' ಎಂದರು.

'ಫೆಬ್ರುವರಿ 21 ಅನ್ನು ಭಾವೈಕ್ಯತಾ ದಿನವನ್ನಾಗಿ ಆಚರಿಸಬೇಕು ಎಂಬುದು ಮಠದ ಭಕ್ತರ ಬಹುದಿನಗಳ ಬೇಡಿಕೆಯಾಗಿತ್ತು. ಈ ಸಂಬಂಧ ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ತೋಂಟದಾರ್ಯ ಜಾತ್ರಾ ಮಹೋತ್ಸವದ ದಿನದಂದೇ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದು ಹರ್ಷ ತಂದಿದೆ' ಎಂದು ಭಕ್ತರು ಸಂಭ್ರಮ ವ್ಯಕ್ತಪಡಿಸಿದರು.

ಹೋರಾಟದಲ್ಲಿ ಅರಳಿದ ನಾಯಕ

• ಡಿ.ಎಂ.ಕುರ್ಕೆ ಪ್ರಶಾಂತ್



ಸಿಪಿಎಂ ಸಮಾವೇಶದಲ್ಲಿ ಶ್ರೀರಾಮರೆಡ್ಡಿ

ಚಿಕ್ಕಬಳ್ಳಾಪುರ: 'ಅನೇಕ ರಾಜಕಾರಣಿಗಳು ಭ್ರಷ್ಟಾಚಾರದ ಕಾರಣಕ್ಕೆ ಜೈಲಿಗೆ ಹೋದರೆ ನಾನು ಕೃಷಿ ಕೂಲಿ ಕಾರ್ಮಿಕರ ಪರವಾಗಿ ಮತ್ತು ಭೂಮಾಲೀಕರ ವಿರುದ್ಧದ ಹೋರಾಟಕ್ಕಾಗಿ ಜೈಲಿಗೆ ಹೋಗಿದ್ದೇ ಹೆಚ್ಚು...'

– 2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬಾಗೇಪಲ್ಲಿಯಲ್ಲಿ ನಡೆದ ಸಿಪಿಎಂ ಸಭೆಯಲ್ಲಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದ್ದ ಮಾತಿದು.

ಕರ್ನಾಟಕ ರಾಜಕಾರಣದಲ್ಲಿ ಕೃಷಿ ಕೂಲಿಕಾರ್ಮಿಕರು, ಬಗರ್ ಹುಕುಂ ಹಿಡುವಳಿದಾರರು... ಹೀಗೆ ಧ್ವನಿ ಇಲ್ಲದ ಜನರ ಪರವಾಗಿ ಅವಿರತ ಹೋರಾಟ ನಡೆಸಿದ ರಾಜಕಾರಣಿಗಳಲ್ಲಿ ಜಿ.ವಿ. ಶ್ರೀರಾಮರೆಡ್ಡಿ ಪ್ರಮುಖರು. ರಾಜ್ಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದ ಮಡೆ ಮಡೆಸ್ನಾನದ ವಿರುದ್ಧ ಹೋರಾಟ ಸೇರಿದಂತೆ ಹಲವು ಜನಪರ ಚಳವಳಿಗಳನ್ನು ಅವರು ಮುನ್ನಡೆಸಿದ್ದರು.

ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿನ ಕಮ್ಯುನಿಸ್ಟ್ ಹೋರಾಟಗಳಿಗೆ 1950ರಿಂದಲೂ ಹೆಜ್ಜೆ ಗುರುತುಗಳಿವೆ. ಆಂಧ್ರದ ನಕ್ಸಲ್ ಹೋರಾಟಗಾರ ಕೊಂಡಪಲ್ಲಿ ಸೀತಾರಾಮಯ್ಯ ಅವರ ದಟ್ಟ ಪ್ರಭಾವ ಈ ನೆಲದಲ್ಲಿತ್ತು. ಇಂತಹ ನೆಲದಲ್ಲಿ ಎಡಪಂಥೀಯ ಮತ್ತು ರೈತ, ಕೂಲಿ ಕಾರ್ಮಿಕರ ಪರ ಹೋರಾಟಗಳನ್ನು ಇಂದಿನವರೆಗೂ ಕಾಪಿಟ್ಟುಕೊಂಡು ಬಂದವರು ಶ್ರೀರಾಮರೆಡ್ಡಿ.

ಹಲವು ದಶಕಗಳ ಸಾರ್ವಜನಿಕ ಮತ್ತು ರಾಜಕಾರಣದ ಬದುಕಿನಲ್ಲಿ ಸೈದ್ಧಾಂತಿಕವಾಗಿ ಎಂದಿಗೂ ರಾಜಿ ಆಗದ ವ್ಯಕ್ತಿ. ಆ ಬದ್ಧತೆಯೇ ಅವರನ್ನು 'ಜನಪರ ನಾಯಕ'ನನ್ನಾಗಿಸಿತು.

ಅವರ ಹೋರಾಟದ ಹಿಂದೆ ಗಟ್ಟಿಯಾದ ಕೌಟುಂಬಿಕ ಹಿನ್ನೆಲೆಯೂ ಇದೆ. ಚಿಂತಾಮಣಿ ತಾಲ್ಲೂಕಿನ ಬೈರೇಬಂಡ ಗ್ರಾಮದಲ್ಲಿ ಸ್ಥಿತಿವಂತರ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಓಬಿರೆಡ್ಡಿ ಪ್ರಭಾವಿ ರೈತ. ಚಿಂತಾಮಣಿ ಕ್ಷೇತ್ರದ ಶಾಸಕರಾಗಿದ್ದ ಟಿ.ಕೆ.ಗಂಗಿರೆಡ್ಡಿ, ಶ್ರೀರಾಮರೆಡ್ಡಿ ಅವರ ಹತ್ತಿರದ ಸಂಬಂಧಿ.

ಅವರ ಅಣ್ಣ ಜಿ.ವಿ.ಅಶ್ವತ್ಥನಾರಾಯಣರೆಡ್ಡಿ ಅವಿಭಜಿತ ಕೋಲಾರ ಜಿಲ್ಲೆಯ ಕಮ್ಯುನಿಸ್ಟ್ ನಾಯಕರಲ್ಲಿ ಅಗ್ರಗಣ್ಯರು. ಚಿಂತಾಮಣಿ ಕ್ಷೇತ್ರದಿಂದ ಮೂರು ಬಾರಿ ಸಿಪಿಎಂ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅಂದಿನ ಸಮಯದಲ್ಲಿಯೇ ಜನಪರ ಹೋರಾಟ ಕಟ್ಟುವಲ್ಲಿ ಈ ಸಹೋದರರು ಯಶಸ್ಸು ಕಂಡಿದ್ದರು. ಹೀಗೆ ಎಡಪಂಥೀಯ ವಿಚಾರಗಳಿಂದ ಪ್ರಭಾವಿತವಾಗಿದ್ದ ಕೌಟುಂಬಿಕ ಹಿನ್ನೆಲೆ ಶ್ರೀರಾಮರೆಡ್ಡಿ ಅವರದ್ದು.

ವಿದ್ಯಾರ್ಥಿ ನಾಯಕನಾಗಿ ಅವರು ಹೋರಾಟದ ಬದುಕು ಪ್ರವೇಶಿಸಿದರು. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸ್ಥಾಪಕ ಸದಸ್ಯರು. ಅವಿಭಜಿತ ಕೋಲಾರ ಜಿಲ್ಲೆಯನ್ನು ಹೋರಾಟ ನೆಲವನ್ನಾಗಿಸಿಕೊಂಡಿದ್ದ ಈ ವಿದ್ಯಾರ್ಥಿ ನಾಯಕ ಸಿಪಿಎಂ ಕೇಂದ್ರ ನಾಯಕರ ಕಣ್ಣಿಗೆ ಬೀಳುತ್ತಲೇ ಬೆಂಗಳೂರಿಗೆ ಹೆಜ್ಜೆಯಿಟ್ಟರು.

ಬಾಗೇಪಲ್ಲಿ ಸಿಪಿಎಂ ಶಾಸಕರಾಗಿದ್ದ ಎ.ವಿ.ಅಪ್ಪಸ್ವಾಮಿ ರೆಡ್ಡಿ 1983ರ ಸುಮಾರಿಗೆ ಪಕ್ಷ ತೊರೆದರು. ಆ ಸಂದರ್ಭದಲ್ಲಿ ಪಕ್ಷವು ಶ್ರೀರಾಮರೆಡ್ಡಿ ಅವರನ್ನು ಬಾಗೇಪಲ್ಲಿಗೆ ಕಳುಹಿಸಿತು. ಅಂದಿನಿಂದ ಜೀವಿತದ ಕೊನೆಯವರೆಗೂ ಬಾಗೇಪಲ್ಲಿಯೇ ಅವರ ರಾಜಕೀಯ ಕರ್ಮಭೂಮಿ ಆಯಿತು.

ಸಿಪಿಎಂನಿಂದ ಹೊರಕ್ಕೆ: ಶ್ರೀರಾಮರೆಡ್ಡಿ, ರಾಜಕಾರಣದಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದಾರೆ. ಭೂವ್ಯವಹಾರ, ಹಣಕಾಸು ದುರುಪಯೋಗ, ಅನುಚಿತ ವರ್ತನೆಯ ಆರೋಪಗಳ ಕಾರಣದಿಂದ 2018ರಲ್ಲಿ ಅವರನ್ನು ಸಿಪಿಎಂ ಕೇಂದ್ರ ಸಮಿತಿ ಸದಸ್ಯ ಸ್ಥಾನದಿಂದ ತೆಗೆದುಹಾಕಲಾಯಿತು.

ಸಿಪಿಎಂನಿಂದ ಹೊರಹಾಕಿದ ನಂತರ ಪ್ರಜಾ ಸಂಘರ್ಷ ಸಮಿತಿ (ಪಿಎಸ್‌ಎಸ್) ಸ್ಥಾಪಿಸಿದರು. ಸಮಿತಿಯ ಮೂಲಕ ಚಳವಳಿಗಳನ್ನು ಮುಂದುವರಿಸಿದ್ದರು. 70ರ ಪ್ರಾಯದಲ್ಲಿಯೂ ಹೋರಾಟದ ಕಸುವು ಬತ್ತಿರಲಿಲ್ಲ. ಇತ್ತೀಚೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಗರ್ ಹುಕುಂ ಸಾಗುವಳಿ ಹೋರಾಟವನ್ನು ಗ್ರಾಮ ಮಟ್ಟಕ್ಕೆ ಕೊಂಡೊಯ್ದಿದ್ದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆ ಸಹ ನಡೆಸಿದ್ದರು. ಪಿಎಸ್‌ಎಸ್ ಮೂಲಕ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಚಿಂತಿಸಿದ್ದರು. ಅವರ ನಿಧನದ ಮೂಲಕ ಜನಪರ ಹೋರಾಟದ ಶಕ್ತಿಯೊಂದು ಈ ನೆಲದಿಂದ ಕಳಚಿದೆ.

ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಇನ್ನಿಲ್ಲ

ಪ್ರಜಾವಾಣಿ ವಿಶೇಷ

ಚಿಕ್ಕಬಳ್ಳಾಪುರ: ಪ್ರಜಾ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಹಾಗೂ ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ (70) ಶುಕ್ರವಾರ ಬಾಗೇಪಲ್ಲಿಯ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರು ಅವಿವಾಹಿತರಾಗಿದ್ದರು. 1985ರಿಂದ 2018ರವರೆಗೆ ಒಟ್ಟು ಎಂಟು ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಎಂ ಅಭ್ಯರ್ಥಿಯಾಗಿ ಬಾಗೇಪಲ್ಲಿಯಿಂದ ಸ್ಪರ್ಧಿಸಿದ್ದರು. ಆರು ಚುನಾವಣೆಗಳಲ್ಲಿ ಸೋಲು ಅನುಭವಿಸಿದ್ದರು. 1994 ಮತ್ತು 2004ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ, ಸಿಪಿಎಂ ಕೇಂದ್ರ ಸಮಿತಿ ಸದಸ್ಯರಾಗಿಯೂ ಕೆಲಸ ಮಾಡಿದ್ದರು. ಪಕ್ಷವು ಅವರನ್ನು ಉಚ್ಚಾಟಿಸಿದ ನಂತರ ಪ್ರಜಾ ಸಂಘರ್ಷ ಸಮಿತಿ ಸ್ಥಾಪಿಸಿದರು.

2021ರ ಮೇನಲ್ಲಿ ಶ್ರೀರಾಮರೆಡ್ಡಿ ಅವರಿಗೆ ಕೋವಿಡ್ ತಗುಲಿತ್ತು. ಅಂದಿನಿಂದ ಅವರು ದೈಹಿಕವಾಗಿ ಬಳಲಿದ್ದರು. ಇತ್ತೀಚೆಗೆ ಎರಡು ಮೊಣಕಾಲುಗಳ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವರು, ವಿಶ್ರಾಂತಿಯಲ್ಲಿ ಇದ್ದರು.

'ಶ್ರೀರಾಮರೆಡ್ಡಿ ಅವರ ಸ್ವಗ್ರಾಮ ಚಿಂತಾಮಣಿ ತಾಲ್ಲೂಕಿನ ಬೈರೇಬಂಡದಲ್ಲಿ ಶನಿವಾರ (ಏ.16) ಬೆಳಿಗ್ಗೆ 11ಕ್ಕೆ ಅಂತ್ಯಕ್ರಿಯೆ ಜರುಗಲಿದೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಸಬೇಕು ಎನ್ನುವುದು ಅವರ ಕುಟುಂಬದ ಅಭಿಪ್ರಾಯ ಮತ್ತು ಮನವಿಯೂ ಆಗಿದೆ' ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನಿವೆಂಕಟಪ್ಪ ತಿಳಿಸಿದ್ದಾರೆ.

ಕಾರ್ಯಕಾರಿಣಿಯ ಹುರುಪು ಕಸಿದ ಈಶ್ವರಪ್ಪ ರಾಜೀನಾಮೆ

ಒಂದನೇ ಪುಟದಿಂದ...

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಕುರಿತು ಪ್ರಚಾರ, ಬೆಲೆ ಏರಿಕೆ ವಿರುದ್ಧದ ಆಕ್ರೋಶ ತಣಿಸಲು ಕಾರ್ಯತಂತ್ರ ರೂಪಿಸುವುದು ಸೇರಿದಂತೆ ಚುನಾವಣೆಯನ್ನೇ ಕೇಂದ್ರೀಕರಿಸಿಕೊಂಡು ಕಾರ್ಯಕಾರಿಣಿಯಲ್ಲಿ ಚರ್ಚಿಸಲು ಕಾರ್ಯಸೂಚಿ ಸಿದ್ಧಪಡಿಸಿಕೊಂಡಿದ್ದರು.

ಮತಗಟ್ಟೆ ಹಂತದಿಂದ ರಾಜ್ಯ ಮಟ್ಟದವರೆಗೆ ಪಕ್ಷ ಸಂಘಟನೆ ಬಲಪಡಿಸಲು ಪಕ್ಷದ ಮುಖಂಡರನ್ನು ಅಣಿಗೊಳಿಸುವ ಮಹತ್ವಾಕಾಂಕ್ಷೆಯೊಂದಿಗೆ ಕಾರ್ಯಕಾರಿಣಿ ಸಭೆ ನಿಗದಿಪಡಿಸಲಾಗಿತ್ತು. ಆದರೆ, ಈ ಹೊತ್ತಿನಲ್ಲೇ ಗುತ್ತಿಗೆದಾರನ ಆತ್ಮಹತ್ಯೆಗೆ ಕಾರಣರಾದ ಆರೋಪಕ್ಕೆ ಗುರಿಯಾಗಿ ಸಚಿವ ಸ್ಥಾನದಿಂದ ಈಶ್ವರಪ್ಪ ಕೆಳಕ್ಕಿಳಿದಿರುವುದು ಬಿಜೆಪಿ ನಾಯಕರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾಮಗಾರಿಗಳ ಮೊತ್ತದ ಶೇಕಡ 40ರಷ್ಟನ್ನು ಲಂಚವಾಗಿ ನೀಡಬೇಕಾದ ಸ್ಥಿತಿ ಇದೆ' ಎಂದು ಆರೋಪಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ 2021ರ ನವೆಂಬರ್‌ನಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ದೂರು ನೀಡಿದ್ದ ವಿಷಯ ಮತ್ತೆ ಚರ್ಚೆಯ ಮುನ್ನೆಲೆಗೆ ಬಂದಿದೆ. ಇನ್ನಷ್ಟು ಸಚಿವರು ಮತ್ತು ಶಾಸಕರ ವಿರುದ್ಧ ಭ್ರಷ್ಟಾಚಾರದ ಆರೋಪಗಳೂ ಕೇಳಿಬರುತ್ತಿವೆ. ಈ ಎಲ್ಲವೂ ಕಾರ್ಯಕಾರಿಣಿಯ ಚರ್ಚೆಯ ದಿಕ್ಕು ಬದಲಿಸುವ ಸಾಧ್ಯತೆ ಇದೆ' ಎನ್ನುತ್ತವೆ ಬಿಜೆಪಿ ಮೂಲಗಳು.

ಪ್ರತಿಭಟನೆಯ ಬಿಸಿ: ಅತ್ತ ಬಿಜೆಪಿ ಕಾರ್ಯಕಾರಿಣಿ ನಡೆಯುತ್ತಿರುವಾಗಲೇ ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ರಾಜ್ಯದ ವಿವಿಧೆಡೆ ಸರಣಿ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಮುಂದಾಗಿದೆ. ಕಾರ್ಯಕಾರಿಣಿ ನಡೆಯಲಿರುವ ಹೊಸಪೇಟೆಯಲ್ಲಿ ಶಾಸಕ ಎಚ್.ಕೆ. ಪಾಟೀಲ ನೇತೃತ್ವದ ತಂಡ ಪ್ರತಿಭಟನೆ ನಡೆಸಲಿದೆ.



ಹೊಸಪೇಟೆಯಲ್ಲಿ ಶನಿವಾರದಿಂದ ಆರಂಭಗೊಳ್ಳಲಿರುವ ಎರಡು ದಿನಗಳ ಬಿಜೆಪಿ ರಾಜ್ಯ ಕಾರ್ಯಕಾರಿಣಿಗೆ ಸಂಪೂರ್ಣ ಸಿದ್ಧತೆ ನಡೆದಿದ್ದು, ಕಾರ್ಯಕ್ರಮ ನಡೆಯಲಿರುವ ನಗರದ ಭಟ್ರಹಳ್ಳಿ ಆಂಜನೇಯ ದೇವಸ್ಥಾನದ ಬಳಿ ಹಂಪಿ ವಾಸ್ತುಶಿಲ್ಪ ಹೋಲುವ ಬೃಹತ್ ಸ್ವಾಗತ ಕಮಾನು ನಿರ್ಮಿಸಲಾಗಿದೆ —ಪ್ರಜಾವಾಣಿ ಚಿತ್ರ

ಆಕಾಂಕ್ಷಿಗಳಲ್ಲಿ ಗರಿಗೆದರಿದ ನಿರೀಕ್ಷೆ

ರಾಜ್ಯ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಕುರಿತು ಕಾರ್ಯಕಾರಿಣಿ ವೇಳೆಯಲ್ಲೇ ಚರ್ಚಿಸಿ, ಅಂತಿಮ ತೀರ್ಮಾನಕ್ಕೆ ಬರಬಹುದು ಎಂಬ ನಿರೀಕ್ಷೆ ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಗರಿಗೆದರಿದೆ.

'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ರಾಜ್ಯ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳಲು ಬಂದಾಗಲೇ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು. ಆ ಕುರಿತ ತೀರ್ಮಾನ ಕಾರ್ಯಕಾರಿಣಿ ವೇಳೆ ಹೊರಬೀಳಬಹುದು ಎಂದು ಸಚಿವ ಸ್ಥಾನದ ಆಕಾಂಕ್ಷಿಗಳು ಕಾಯುತ್ತಿದ್ದಾರೆ.

ನಡ್ಡಾ ಜೊತೆ ಚರ್ಚಿಸಿ ಸಂಪುಟ ವಿಸ್ತರಣೆ ನಿರ್ಧಾರ: ಸಿಎಂ

ಬಾಗಲಕೋಟೆ: 'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ರಾಜ್ಯಕ್ಕೆ ಬರಲಿದ್ದಾರೆ. ಅವರೊಂದಿಗೆ ಚರ್ಚಿಸಿದ ನಂತರ ಸಚಿವ ಸಂಪುಟ ವಿಸ್ತರಣೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಳಕಲ್ ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಪುಟ ವಿಸ್ತರಣೆ ಕುರಿತ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಅಪಾಯಕ್ಕೆ ಸಿಲುಕಿದ ಪ್ರವಾಸಿಗರ ರಕ್ಷಣೆ

ಒಂದನೇ ಪುಟದಿಂದ...

ಸುರಕ್ಷತೆ ಕ್ರಮಕ್ಕೆ ಆದ್ಯತೆ ನೀಡದ ಆರೋಪ: ಸೂಪಾ ಅಣೆಕಟ್ಟೆಯ ಕೆಳಭಾಗದಿಂದ ದಾಂಡೇಲಿಯವರೆಗೆ ಎಂಟಕ್ಕೂ ಹೆಚ್ಚು ಸಂಸ್ಥೆಗಳು ರಿವರ್ ರ‍್ಯಾಫ್ಟಿಂಗ್, ಕಯಾಕಿಂಗ್ ಸೇರಿದಂತೆ ಜಲಸಾಹಸ ಕ್ರೀಡೆ ನಡೆಸುತ್ತಿವೆ. ಈ ಪೈಕಿ ಕೆಲವರು ಸುರಕ್ಷತೆಗೆ ಆದ್ಯತೆ ನೀಡುತ್ತಿಲ್ಲ ಎಂಬುದು ಪ್ರವಾಸಿಗರ ಆರೋಪ.

ರ‍್ಯಾಫ್ಟಿಂಗ್ ನಡೆಸಲು ಅನುಕೂಲವಾಗುವಂತೆ ಸೂಪಾ ಅಣೆಕಟ್ಟೆಯಿಂದ ಹೆಚ್ಚು ನೀರು ಬಿಡಲಾಗುತ್ತಿದೆ. ಇದಕ್ಕೆ ಜಲಸಾಹಸ ಕ್ರೀಡೆ ನಡೆಸುವ ಸಂಸ್ಥೆ ಮತ್ತು ಕೆಲ ಕೆಪಿಸಿ ಅಧಿಕಾರಿಗಳ ನಡುವೆ ಒಳಒಪ್ಪಂದವೂ ಇದೆ ಎಂಬುದು ಸ್ಥಳೀಯರ ದೂರು.

ಇದನ್ನು ಅಲ್ಲಗಳೆದಿರುವ ಕೆಪಿಸಿ ಮುಖ್ಯ ಎಂಜಿನಿಯರ್ ನಿಂಗಣ್ಣ, 'ಸೂಪಾ ಅಣೆಕಟ್ಟೆಯಿಂದ ವಿದ್ಯುತ್ ಉತ್ಪಾದನೆಗೆ ಅಗತ್ಯವಿದ್ದಷ್ಟೆ ನೀರು ಬಿಡಲಾಗುತ್ತಿದೆ. ಅನಗತ್ಯವಾಗಿ ನೀರು ಬಿಡುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಸುರಕ್ಷತಾ ಕ್ರಮ ಅನುಸರಿಸಿ ರಿವರ್ ರ‍್ಯಾಫ್ಟಿಂಗ್ ಚಟುವಟಿಕೆ ನಡೆಸುತ್ತಿದ್ದೇವೆ. ಇದೇ ಕಾರಣಕ್ಕೆ ಎರಡು ವರ್ಷಗಳಿಂದ ಯಾವುದೇ ಅವಘಡ ಸಂಭವಿಸಿಲ್ಲ. ಸಣ್ಣಪುಟ್ಟ ದೋಷಗಳನ್ನು ತಿದ್ದಿಕೊಳ್ಳಲಾಗುವುದು' ಎಂದು ಸೂಪಾ ಅಡ್ವೆಂಚರ್ ಸ್ಪೋರ್ಟ್ಸ್ ಪ್ರಮುಖ ಜಿಗ್ನೇಶ್ ತಿಳಿಸಿದ್ದಾರೆ.

ಘಟನೆ ಕುರಿತು ಪ್ರತಿಕ್ರಿಯೆ ಪಡೆಯಲು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಲು 'ಪ್ರಜಾವಾಣಿ' ಪ್ರಯತ್ನಿಸಿದರೂ, ಅವರು ಲಭ್ಯರಾಗಲಿಲ್ಲ.

ರ‍್ಯಾಫ್ಟಿಂಗ್ ಬೋಟ್ ಮುಳುಗಡೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 'ಕಾಳಿ ಅಡ್ವೆಂಚರ್ಸ್' ವಿರುದ್ಧ ರಾಮನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ಈ ಅವಘಡ ಗಮನಕ್ಕೆ ಬಂದಿದೆ. ದೃಶ್ಯಾವಳಿಗಳನ್ನು ಪರಿಶೀಲಿಸಿ ತನಿಖೆ ನಡೆಸಿ, ಆಯೋಜಕರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ**
> **ವಿನೋದ್ ಎಸ್.ಕೆ.** ಎಸ್ಐ, ರಾಮನಗರ, ಜೋಯಿಡಾ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ತಲೆದಂಡದಲ್ಲೂ ಶಕ್ತಿ ಪ್ರದರ್ಶನ

ಒಂದನೇ ಪುಟದಿಂದ

ಶುಕ್ರವಾರ ರಾಜೀನಾಮೆ ನೀಡುವುದಾಗಿ ಗುರುವಾರ ಸಂಜೆ ಪ್ರಕಟಿಸಿದ್ದ ಈಶ್ವರಪ್ಪ, ಶಿವಮೊಗ್ಗದಲ್ಲೇ ಉಳಿದಿದ್ದರು.

ಹಲವು ಸಭೆಗಳಲ್ಲಿ ಭಾಗಿ: ಶುಕ್ರವಾರ ಬೆಳಿಗ್ಗೆ ಮನೆಯಿಂದ ಹೊರಟ ಈಶ್ವರಪ್ಪ, ಶಿವಮೊಗ್ಗ ನಗರ ಮತ್ತು ಗ್ರಾಮಾಂತರ ಬಿಜೆಪಿ ಕಚೇರಿಗಳನ್ನು ಉದ್ಘಾಟಿಸಿದರು. ತಮ್ಮ ಕುಟುಂಬದ ಒಡೆತನದ ಶುಭಶ್ರೀ ಕಲ್ಯಾಣ ಮಂಟಪವನ್ನೂ ಉದ್ಘಾಟಿಸಿದರು. ಬಳಿಕ ಬಿಜೆಪಿ ಕಾರ್ಯಕರ್ತರನ್ನು ಭೇಟಿಯಾದರು.

ಮಧ್ಯಾಹ್ನ ಶಿವಮೊಗ್ಗದಿಂದ ಹೊರಟ ಈಶ್ವರಪ್ಪ ಅವರ ಹಿಂದೆ ಬಿಜೆಪಿ ಬಾವುಟ ಕಟ್ಟಿದ್ದ 150ಕ್ಕೂ ಹೆಚ್ಚು ವಾಹನಗಳಲ್ಲಿ ಬೆಂಬಲಿಗರೂ ಬಂದರು. ಬೆಂಗಳೂರಿನವರೆಗೂ ಶಕ್ತಿ ಪ್ರದರ್ಶನ ಮಾಡುತ್ತಾ ಪ್ರಯಾಣಿಸಿದರು. ಮಾರ್ಗ ಮಧ್ಯದಲ್ಲಿ ತಿಪಟೂರಿನಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ನಿವಾಸಕ್ಕೆ ಭೇಟಿ ನೀಡಿದರು. ತುಮಕೂರು ಸಿದ್ದಗಂಗಾ ಮಠಕ್ಕೆ ತೆರಳಿ ಆಶೀರ್ವಾದ ಪಡೆದು ಬಂದರು.

ಬೆಂಬಲಿಗರ ಪ್ರತಿಭಟನೆ: ರಾತ್ರಿ 8.15ರ ಸುಮಾರಿಗೆ ಈಶ್ವರಪ್ಪ ಅವರು ರೇಸ್ ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರಿ ನಿವಾಸ ತಲುಪಿದರು. ಗದಗ ಜಿಲ್ಲಾ ಪ್ರವಾಸದಲ್ಲಿದ್ದ ಮುಖ್ಯಮಂತ್ರಿಯವರೂ ವಿಶೇಷ ವಿಮಾನದಲ್ಲಿ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದು, ಅಲ್ಲಿಂದ ನಿವಾಸಕ್ಕೆ ಬಂದರು.

ಶಿವಮೊಗ್ಗದಿಂದ ಬಂದಿದ್ದ ಈಶ್ವರಪ್ಪ ಅವರ ನೂರಾರು ಬೆಂಬಲಿಗರು ಮುಖ್ಯಮಂತ್ರಿ ನಿವಾಸದ ಎದುರು ಜಮಾಯಿಸಿದರು. ಪೊಲೀಸರು ಬ್ಯಾರಿಕೇಡ್ ಹಾಕಿ ಅವರನ್ನು ತಡೆದರು. ಈಶ್ವರಪ್ಪ ರಾಜೀನಾಮೆ ಸಲ್ಲಿಕೆಗೆ ಮುಂದಾಗುತ್ತಿದ್ದಂತೆಯೇ ಹೊರಗೆ ಸೇರಿದ್ದ ಬೆಂಬಲಿಗರು ಘೋಷಣೆ ಕೂಗಲಾರಂಭಿಸಿದರು. ರಾಜೀನಾಮೆ ನೀಡದಂತೆ ಒತ್ತಾಯಿಸಿದರು. ಈಶ್ವರಪ್ಪ ಅವರಿಗೆ ಜೈಕಾರ ಹಾಕಿದ ಬೆಂಬಲಿಗರು, 'ಜೈ ಶ್ರೀರಾಮ್', 'ಹಿಂದೂ ಹುಲಿ' ಮತ್ತಿತರ ಘೋಷಣೆ ಹಾಕಿದರು. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಧಿಕ್ಕಾರವನ್ನೂ ಕೂಗಿದರು.

ಬೆಂಬಲಿಗರ ಘೋಷಣೆಗಳ ಅಬ್ಬರದ ನಡುವೆಯೇ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಈಶ್ವರಪ್ಪ, 'ಸ್ವಇಚ್ಛೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ' ಎಂಬ ಒಂದು ಸಾಲಿನ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಶಿವಮೊಗ್ಗದಿಂದ ಬಂದವರ ಪೈಕಿ ಶಿವಮೊಗ್ಗ ಮಹಾನಗರ ಪಾಲಿಕೆ ಮೇಯರ್ ಸುನೀತಾ ಅವರಿಗೆ ಮಾತ್ರ ಮುಖ್ಯಮಂತ್ರಿ ನಿವಾಸದೊಳಕ್ಕೆ ಪ್ರವೇಶ ನೀಡಲಾಗಿತ್ತು. ಸಚಿವರಾದ ಬೈರತಿ ಬಸವರಾಜ, ಎಂ.ಟಿ.ಬಿ. ನಾಗರಾಜು, ಆರಗ ಜ್ಞಾನೇಂದ್ರ, ಶಾಸಕ ರಮೇಶ ಜಾರಕಿಹೊಳಿ ಅವರು ಈಶ್ವರಪ್ಪ ಅವರ ಜತೆಗಿದ್ದರು.

ಈಶ್ವರಪ್ಪ ಅವರ ಜತೆಗೇ ಹೊರಬಂದು ಸುದ್ದಿಗಾರರ ಜತೆ ಮಾತನಾಡಿದ ಬಸವರಾಜ ಬೊಮ್ಮಾಯಿ, 'ಈಶ್ವರಪ್ಪ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದೇನೆ' ಎಂದರು.

ಸೋಮವಾರ ಅಂಗೀಕಾರ ಸಾಧ್ಯತೆ

ಸಚಿವ ಸ್ಥಾನಕ್ಕೆ ಕೆ.ಎಸ್. ಈಶ್ವರಪ್ಪ ಸಲ್ಲಿಸಿರುವ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಂಗೀಕಾರಕ್ಕಾಗಿ ಶುಕ್ರವಾರ ರಾತ್ರಿಯೇ ರಾಜಭವನಕ್ಕೆ ಕಳುಹಿಸಿದ್ದಾರೆ. ಆದರೆ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗುಜರಾತ್ ಪ್ರವಾಸದಲ್ಲಿದ್ದಾರೆ. ಪೂರ್ವನಿಗದಿತ ಪ್ರವಾಸ ಕಾರ್ಯಕ್ರಮದ ಪ್ರಕಾರ ಸೋಮವಾರ ಬೆಳಿಗ್ಗೆ ಅವರು ರಾಜಭವನಕ್ಕೆ ಹಿಂದಿರುಗುವರು. ಸೋಮವಾರವೇ ಈಶ್ವರಪ್ಪ ರಾಜೀನಾಮೆಗೆ ಅಂಗೀಕಾರ ದೊರೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

29 ಪಿಡಿಒಗಳ ವರ್ಗಾವಣೆಗೆ ಆದೇಶ

ಮೈಸೂರು ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 29 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆ ಆದೇಶ ಗುರುವಾರ ರಾತ್ರಿ ಹೊರಬಿದ್ದಿದೆ. ವರ್ಗಾವಣೆ ಆದೇಶ ಏಪ್ರಿಲ್ 12ರಂದು ಹೊರಡಿಸಲಾಗಿದೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಈಶ್ವರಪ್ಪ ಗುರುವಾರ ಸಂಜೆ ಹೇಳಿಕೆ ನೀಡಿದ ಕೆಲ ಗಂಟೆಗಳ ಬಳಿಕ ಈ ಆದೇಶದ ಪ್ರತಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತು.

ಹೆಣ್ಣು ಮಕ್ಕಳ ರಕ್ಷಣೆಯಲ್ಲಿ ಮಮತಾ ಬ್ಯಾನರ್ಜಿ ಸರ್ಕಾರ ವಿಫಲ: ಆರೋಪ



ಪಶ್ಚಿಮ ಬಂಗಾಳದಲ್ಲಿ ಅತ್ಯಾಚಾರ ಮತ್ತು ಹತ್ಯೆಗೀಡಾದ ಸಂತ್ರಸ್ತೆಯ ಕುಟುಂಬ ಭೇಟಿ ಮಾಡಿದ ಬಿಜೆಪಿಯ ಸತ್ಯಶೋಧನಾ ತಂಡ. ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿ ಇತ್ತೀಚೆಗೆ ಸಾಮೂಹಿಕ ಅತ್ಯಾಚಾರಕ್ಕೀಡಾಗಿ ಮೃತಪಟ್ಟ ಅಪ್ರಾಪ್ತ ಬಾಲಕಿಯ ಕುಟುಂಬ ಸದಸ್ಯರನ್ನು ಬಿಜೆಪಿಯ 'ಸತ್ಯ ಪರಿಶೋಧನಾ' ತಂಡ ಶುಕ್ರವಾರ ಭೇಟಿ ಮಾಡಿದೆ. ಈ ವೇಳೆ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ರಕ್ಷಣೆ ನೀಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದೆ.

ಸಾಮೂಹಿಕ ಅತ್ಯಾಚಾರಕ್ಕೀಡಾದ ಸಂತ್ರಸ್ತೆಯ ಕುಟುಂಬವನ್ನು ಭೇಟಿ ಮಾಡಿದ ಬಿಜೆಪಿಯ ಸತ್ಯ ಶೋಧನಾ ತಂಡದ ಸದಸ್ಯರು, ಈ ಘಟನೆಯ ವಾಸ್ತವಾಂಶಗಳನ್ನು ಕಲೆ ಹಾಕಿದ್ದಾರೆ. ಈ ಕುರಿತಾದ ಮಾಹಿತಿಯನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಸಲ್ಲಿಸಲಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಈ ತಂಡವು, 'ಪಶ್ಚಿಮ ಬಂಗಾಳದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಪದಗಳಿಗೆ ನಿಲುಕದ್ದಾಗಿದೆ. ಅಪ್ರಾಪ್ತ ಬಾಲಕಿಯ ಮೇಲೆ ಭೀಕರವಾಗಿ ಅತ್ಯಾಚಾರವೆಸಗಿ, ಕೊಂದು ಹಾಕಲಾಗಿದೆ. ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಮತ್ತು ರಕ್ಷಣೆ ಇಲ್ಲ ಎಂಬುದನ್ನು ಈ ಘಟನೆ ಸಾಬೀತುಪಡಿಸಿದೆ. ಇದು ನಾಚಿಕೆಗೇಡಿನ ಸಂಗತಿ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಈ ತಂಡದಲ್ಲಿ ಬಿಜೆಪಿ ನಾಯಕಿ ಖುಷ್ಬು ಸುಂದರ್, ಬಿಜೆಪಿಯ ಮಹಿಳಾ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷೆ ವನತಿ ಶ್ರೀನಿವಾಸನ್ ಸೇರಿದಂತೆ ಇತರರು ಇದ್ದಾರೆ.

ಮಳೆ: ಎರಡು ಎಕರೆ ಬಾಳೆಗೆ ಹಾನಿ



ನೆಲಕ್ಕುರುಳಿರುವ ಬಾಳೆ ಬೆಳೆ

ಮೈಸೂರು: ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಸುತ್ತಮುತ್ತ ಶುಕ್ರವಾರ ಸಂಜೆ ಧಾರಾಕಾರ ಮಳೆ ಸುರಿದು, ಬೆಳಗನಹಳ್ಳಿಯಲ್ಲಿ ಮಾದೇಗೌಡ ಎಂಬುವರ ಎರಡು ಎಕರೆ ಬಾಳೆ ಸಂಪೂರ್ಣ ನೆಲಕಚ್ಚಿತು.

ಮೈಸೂರು–ಮಾನಂದವಾಡಿ ಹೆದ್ದಾರಿಯ ಹೈರಿಗೆ, ಮಟಕೆರೆ, ಬೆಳಗನಹಳ್ಳಿಯಲ್ಲಿ ಭಾರಿ ಗಾತ್ರದ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿ, ಸಂಚಾರಕ್ಕೆ ಅಡ್ಡಿಯಾಗಿತ್ತು.

ಮಳೆ–ಗಾಳಿಗೆ ಎತ್ತಿನ ಗಾಡಿಯ ಮೇಲೆ ಮರದ ಕೊಂಬೆ ಬಿದ್ದು, ಹೈರಿಗೆ ಗ್ರಾಮದ ಜವರಯ್ಯ ಎಂಬುವವರ ಎತ್ತು ಸ್ಥಳದಲ್ಲೇ ಮೃತಪಟ್ಟಿತು. ಎತ್ತಿನಗಾಡಿ ಸಂಪೂರ್ಣ ಜಖಂಗೊಂಡಿತು. ಎತ್ತಿನ ಮೌಲ್ಯ ಸುಮಾರು ₹ 50 ಸಾವಿರ ಎಂದು ಸ್ಥಳೀಯರು ತಿಳಿಸಿದ್ದಾರೆ.

ಹುಣಸೂರು ತಾಲ್ಲೂಕಿನ ಚಿಲ್ಕುಂದ ಗ್ರಾಮದಲ್ಲಿ ತೆಂಗಿನ ಮರಗಳಿಗೆ ಸಿಡಿಲು ಬಡಿದು ಬೆಂಕಿ ಹೊತ್ತಿ ಉರಿಯಿತು. ಸಿಂಡೇನಹಳ್ಳಿ, ಕಟ್ಟೆಮಳಲವಾಡಿ, ಬಿಳಿಗೆರೆ, ಹಿರಿಕ್ಯಾತನಹಳ್ಳಿ ಭಾಗದಲ್ಲಿ ಭಾರಿ ಮಳೆಯಾಯಿತು.

'ಕಳ್ಳಿಕೊಪ್ಪಲು ಗ್ರಾಮದಲ್ಲಿ ಮಳೆ–ಗಾಳಿಗೆ 20 ಮನೆಗಳ ಹೆಂಚು ಹಾರಿ ಹೋದವು. ತೆಂಗಿನ ಮರ ಉರುಳಿ ಬಿದ್ದು, ಮನೆ ಭಾಗಶಃ ಜಖಂಗೊಂಡಿತು. ಮನೆಗಳಿಗೆ ಮಳೆ ನೀರು ನುಗ್ಗಿದ್ದು ಪಡಿತರ ನಷ್ಟವಾಗಿದೆ' ಎಂದು ಗ್ರಾಮ ಲೆಕ್ಕಾಧಿಕಾರಿ ಅಜ್ಮಲ್ ತಿಳಿಸಿದ್ದಾರೆ.

ಬೆಲೆ ಏರಿಕೆ ಬಗ್ಗೆ ಚರ್ಚಿಸಲು ಧ್ವನಿವರ್ಧಕ ಬಳಸಿ: ಆದಿತ್ಯ ಠಾಕ್ರೆ



ಆದಿತ್ಯ ಠಾಕ್ರೆ

ಮುಂಬೈ: ಧ್ವನಿವರ್ಧಕಗಳಲ್ಲಿ 'ಹನುಮಾನ್ ಚಾಲೀಸಾ' ಪಠಣದ ವಿವಾದವು ಮಹಾರಾಷ್ಟ್ರದ ರಾಜಕಾರಣದಲ್ಲಿ ಮತ್ತಷ್ಟು ಕಾವೇರಿಸಿದ್ದು, ವಿವಾದಕ್ಕೆ ಸಂಬಂಧಿಸಿದಂತೆ ಸಚಿವ ಆದಿತ್ಯ ಠಾಕ್ರೆ ಅವರು, 'ಅಗತ್ಯ ವಸ್ತುಗಳ ಬೆಲೆ ಏರಿಕೆಯ ಹಿಂದಿನ ಕಾರಣಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಧ್ವನಿವರ್ಧಕಗಳನ್ನು ಬಳಸಬೇಕು' ಎಂದು ಶುಕ್ರವಾರ ಸಲಹೆ ನೀಡಿದ್ದರೆ, ಶಾಸಕ ರವಿರಾಣಾ ಅವರು, 'ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಶನಿವಾರ ತಮ್ಮ ನಿವಾಸದಲ್ಲಿ ಹನುಮಾನ್ ಚಾಲೀಸಾ ಪಠಿಸಬೇಕು' ಎಂದು ಹೇಳಿದ್ದಾರೆ.

'ಮಹಾರಾಷ್ಟ್ರದ ಮಸೀದಿಗಳಿಂದ ಮೇ 3ರೊಳಗೆ ರಾಜ್ಯ ಸರ್ಕಾರವು ಧ್ವನಿವರ್ಧಕಗಳನ್ನು ತೆಗೆದುಹಾಕದಿದ್ದರೆ ತಮ್ಮ ಪಕ್ಷದ ಕಾರ್ಯಕರ್ತರು ಹೆಚ್ಚಿನ ಡೆಸಿಬಲ್ ಮಟ್ಟದಲ್ಲಿ 'ಹನುಮಾನ್ ಚಾಲೀಸಾ' ಪಠಿಸಲು ಪ್ರಾರಂಭಿಸುವರು' ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನಾ ಮುಖ್ಯಸ್ಥ ರಾಜ್ ಠಾಕ್ರೆ ಹೇಳಿದ್ದರು.

ಇದಕ್ಕೆ ಆದಿತ್ಯ ಠಾಕ್ರೆ ಪ್ರತಿಕ್ರಿಯಿಸಿದ್ದಾರೆ. ಶಾಸಕ ರವಿರಾಣಾ, 'ಹನುಮಾನ್ ಜಯಂತಿಯಂದು ಉದ್ಧವ್ ಠಾಕ್ರೆ ಅವರು ತಮ್ಮ ನಿವಾಸ 'ಮಾತೋಶ್ರೀ'ಯಲ್ಲಿ ಹನುಮಾನ್ ಚಾಲೀಸಾ ಪಠಿಸಬೇಕು' ಎಂದಿದ್ದಾರೆ.

ಮುಳುಗಿದ 'ಮೊಸ್ಕವಾ' ಸಮರ ನೌಕೆ ● ತೀವ್ರಗೊಂಡ ರಷ್ಯಾದ ಪ್ರತೀಕಾರ ● 3ನೇ ವಿಶ್ವಸಮರಕ್ಕೆ ಮುನ್ನುಡಿ?

ಕಲಿಬ್ ಕ್ಷಿಪಣಿಗೆ ಸೇನಾ ಕಾರ್ಖಾನೆ ಧ್ವಂಸ



ಕೀವ್‌ನ ಉಪನಗರ ವೈಶ್ನೆವ್ ಪಟ್ಟಣದಲ್ಲಿನ ಉಕ್ರೇನ್ ಮಿಲಿಟರಿ ಉಪಕರಣಗಳ ಕಾರ್ಖಾನೆ ರಷ್ಯಾದ ಕ್ಷಿಪಣಿ ದಾಳಿಗೆ ಸಂಪೂರ್ಣ ಹಾನಿಗೀಡಾಗಿದೆ – ಎಎಫ್‌ಪಿ ಚಿತ್ರ

ಮಾಸ್ಕೊ (ಎಎಫ್‌ಪಿ): ರಷ್ಯಾ ಪಡೆಗಳು ಸಮುದ್ರದಿಂದ ಉಡಾಯಿಸುವ ದೀರ್ಘ ಶ್ರೇಣಿಯ ಕಲಿಬ್ ಕ್ಷಿಪಣಿಗಳನ್ನು ಬಳಸಿ ಕೀವ್ ಹೊರ ವಲಯದ ವಿಶ್ನೆವೆ ಪಟ್ಟಣದಲ್ಲಿನ ಉಕ್ರೇನ್ ಸೇನಾ ಸಾಧನಗಳ ಕಾರ್ಖಾನೆಯನ್ನು ಗುರುವಾರ ತಡರಾತ್ರಿ ಧ್ವಂಸಗೊಳಿಸಿವೆ.

'ವಿಜಾರ್' ಕಂಪನಿಯ ರಕ್ಷಣಾ ಉಪಕರಣ ತಯಾರಿಕೆಯ ಸಂಕೀರ್ಣದಲ್ಲಿರುವ ಕಾರ್ಖಾನೆ ಧ್ವಂಸವಾಗಿದೆ. ವಿಮಾನ ಹೊಡೆದುರುಳಿಸುವ ದೀರ್ಘ ಶ್ರೇಣಿಯ ಮತ್ತು ಮಧ್ಯಮ ಶ್ರೇಣಿಯ ಕ್ಷಿಪಣಿ ವ್ಯವಸ್ಥೆಗಳ ಉತ್ಪಾದನೆ ಮತ್ತು ದುರಸ್ತಿ ಕಾರ್ಯಾಗಾರ ಹಾಗೂ ಹಡಗು ಹೊಡೆದುರುಳಿಸುವ ಕ್ಷಿಪಣಿಗಳನ್ನು ನಾಶಪಡಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ರಷ್ಯಾದ ಕಪ್ಪು ಸಮುದ್ರದ ನೌಕಾ ಪಡೆಯ ಯುದ್ಧನೌಕೆ 'ಮಾಸ್ಕವಾ' ಮೇಲೆ ಉಕ್ರೇನ್ ಪ್ರಯೋಗಿಸಿರುವ ನೆಪ್ಚೂನ್ ಕ್ಷಿಪಣಿಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿತ್ತು.

ಬ್ರಿಯಾನ್‌ಸ್ಕ್ ಪ್ರಾಂತ್ಯದ ಕಿಮೊವೊದಲ್ಲಿ ಗುರುವಾರ ನಾಗರಿಕರ ಮೇಲೆ ಬಾಂಬ್ ದಾಳಿ ನಡೆಸಿದ್ದ ಉಕ್ರೇನಿನ ಎಂಐ-8 ಹೆಲಿಕಾಪ್ಟರ್ ಅನ್ನು ಎಸ್–400 ಕ್ಷಿಪಣಿಯಿಂದ ಹೊಡೆದುರುಳಿಸಲಾಗಿದೆ ಎಂದು ಅದು ಹೇಳಿದೆ.

'ಹಾರ್ಕಿವ್ ನಗರ ಸಮೀಪದ ಇಝ್ಯುಯುಮ್‌ಸ್ಕೊ ಗ್ರಾಮದಲ್ಲಿ ನಡೆಸಿದ ಕ್ಷಿಪಣಿ ದಾಳಿಗೆ ಪೋಲೆಂಡ್‌ನ 30 ಬಾಡಿಗೆ ಸೈನಿಕರು ಹತರಾಗಿದ್ದಾರೆಎಂದು ಪ್ರತ್ಯೇಕ ಹೇಳಿಕೆಯಲ್ಲಿ ಅದು ತಿಳಿಸಿದೆ.

ಗಡಿ ಪಟ್ಟಣಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿರುವುದಕ್ಕೆ ಮತ್ತು 'ಮಾಸ್ಕವಾ' ನೌಕೆ ಮುಳುಗಿಸಿದಕ್ಕೆ ಪ್ರತೀಕಾರವಾಗಿ ಕೀವ್ ಮೇಲೆ ಕ್ಷಿಪಣಿ ದಾಳಿ ತೀವ್ರಗೊಳಿಸುವುದಾಗಿ ರಷ್ಯಾ ಶುಕ್ರವಾರ ಎಚ್ಚರಿಕೆ ನೀಡಿದೆ.

ಫಿನ್ಲೆಂಡ್, ಸ್ವೀಡನ್‌ಗೆ ಎಚ್ಚರಿಕೆ: ಫಿನ್ಲೆಂಡ್ ಮತ್ತು ಸ್ವೀಡನ್ ನ್ಯಾಟೊ ಸೇರಿದರೆ ಅವು ಊಹಿಸಲಾಗದಂತಹ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ರಷ್ಯಾ ಶುಕ್ರವಾರ ಕಠಿಣ ಎಚ್ಚರಿಕೆ ನೀಡಿದೆ.

ನೆರೆಯ ರಾಷ್ಟ್ರ ಉಕ್ರೇನ್ ಮೇಲೆ ರಷ್ಯಾದ ವಿನಾಶಕಾರಿ ಆಕ್ರಮಣದ ನಂತರ ಉಭಯ ದೇಶಗಳು ನ್ಯಾಟೊ ಸೇರಲು ಮುಂದಾಗಿವೆ.

'ಆಯ್ಕೆ ಸ್ವೀಡನ್ ಮತ್ತು ಫಿನ್ಲೆಂಡ್ ಅಧಿಕಾರಿಗಳಿಗೆ ಬಿಟ್ಟದ್ದು' ಎಂದು ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾರಿಯಾ ಜಖರೋವಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಉಕ್ರೇನ್‌ಗೆ ಶಸ್ತ್ರಾಸ್ತ್ರ ಕೊಡಬೇಡಿ'

ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸುವುದನ್ನು ಸ್ಥಗಿತಗೊಳಿಸಬೇಕೆಂದು ರಷ್ಯಾ ಅಮೆರಿಕಕ್ಕೆ ಶುಕ್ರವಾರ ಎಚ್ಚರಿಕೆ ನೀಡಿದೆ.

ರಷ್ಯಾ ಕಳುಹಿಸಿದ ರಾಜತಾಂತ್ರಿಕ ಟಿಪ್ಪಣಿಯ ಪ್ರತಿಯನ್ನು ಅಮೆರಿಕ ಸ್ವೀಕರಿಸಿದೆ. ಅಮೆರಿಕ ಮತ್ತು ನ್ಯಾಟೊ ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸುತ್ತಿರುವುದು ಊಹಿಸಲಾಗದ ಪರಿಣಾಮಕ್ಕೆ ದಾರಿ ಮಾಡಿಕೊಡಲಿದೆ ಎಂದು ರಷ್ಯಾ ಎಚ್ಚರಿಕೆ ನೀಡಿರುವುದಾಗಿ 'ವಾಷಿಂಗ್ಟನ್ ಪೋಸ್ಟ್' ವರದಿ ಮಾಡಿದೆ.

25 ದೇಶಗಳಿಂದ ಶಸ್ತ್ರಾಸ್ತ್ರ ಪೂರೈಕೆ: ನ್ಯಾಟೊದ 21 ದೇಶಗಳು ಸೇರಿ 25 ರಾಷ್ಟ್ರಗಳಿಂದ ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿದೆ ಎಂದು ರಷ್ಯಾದ ತನಿಖಾ ಸಮಿತಿ ಹೇಳಿರುವುದಾಗಿ 'ಟಾಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಸೆರೆ ಸಿಕ್ಕಿರುವ ಬ್ರಿಟನ್ ಪ್ರಜೆ ಐಡೆನ್ ಆಸ್ಲಿನ್ ಸೇರಿ ಅಮೆರಿಕ, ಬ್ರಿಟನ್, ನಾರ್ವೆ ಮತ್ತು ಕೆನಡಾದ ಬಾಡಿಗೆ ಸೈನಿಕರು ಸಂಘರ್ಷದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದ್ದು, ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ತನಿಖಾ ಸಮಿತಿ ಹೇಳಿದೆ.

51ನೇ ದಿನದ ಬೆಳವಣಿಗೆಗಳು

- ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರ ಜತೆ ಉಕ್ರೇನ್ ಸಂಘರ್ಷದ ಜಾಗತಿಕ ಪರಿಣಾಮ ಮತ್ತು ಅಫ್ಗಾನಿಸ್ತಾನ ಹಾಗೂ ಮ್ಯಾನ್ಮಾರ್ ಪರಿಸ್ಥಿತಿಯ ಬಗ್ಗೆ ವಿಸ್ತೃತ ಚರ್ಚೆ ನಡೆಸಿದರು
- 'ಉಕ್ರೇನಿನಲ್ಲಿರುವ ರಾಷ್ಟ್ರೀಯತಾವಾದಿ ಬೆಟಾಲಿಯನ್‌ಗಳ ನಿರ್ಮೂಲನೆ ಮತ್ತು ಉಕ್ರೇನ್ ವಿಮೋಚನೆ ಮಾಸ್ಕೊದ ಪ್ರಮುಖ ಆದ್ಯತೆ- ಕ್ರೆಮ್ಲಿನ್ ವಕ್ತಾರ ಡೆಮಿಟ್ರಿ ಪೆಸ್ಕೊವ್
- ಹಾರ್ಕಿವ್ ಬಳಿ ಇರುವ ಬೊರೊವಾಯಾ ಗ್ರಾಮದಲ್ಲಿ ನಾಗರಿಕರನ್ನು ಸ್ಥಳಾಂತರಿಸುತ್ತಿದ್ದ ಬಸ್‌ಗಳ ಮೇಲೆ ರಷ್ಯಾ ಪಡೆಗಳು ಗುಂಡಿನ ದಾಳಿ ನಡೆಸಿದ್ದು, ಏಳು ಮಂದಿ ಮೃತಪಟ್ಟು, 27 ಮಂದಿ ಗಾಯಗೊಂಡಿದ್ದಾರೆ- ಪ್ರಾದೇಶಿಕ ಗವರ್ನರ್ ಕಚೇರಿ ವಕ್ತಾರರ ಹೇಳಿಕೆ
- ಉಕ್ರೇನ್‌ನ ಮೇಲಿನ ರಷ್ಯಾದ ಆಕ್ರಮಣ ಬೆಂಬಲಿಸಿದ್ದಕ್ಕಾಗಿ ಚೀನಾ ಬರುವ ದಿನಗಳಲ್ಲಿ ಹೆಚ್ಚಿನ ಬೆಲೆ ತೆರಲಿದೆ. ಏನೇ ಬಂದರೂ ಅಮೆರಿಕ ತೈವಾನ್ ಬೆಂಬಲಕ್ಕೆ ನಿಲ್ಲಲಿದೆ- ತೈವಾನ್ ಪ್ರವಾಸದಲ್ಲಿ ಅಮೆರಿಕದ ಹಿರಿಯ ಸೆನೆಟರ್ ಲಿಂಡ್ಸೆ ಗ್ರಹಾಂ
- ಲುಹಾನ್‌ಸ್ಕ್ ಮತ್ತು ಡೊನೆಟ್‌ಸ್ಕ್ ಪ್ರದೇಶಗಳನ್ನು ನಾಶಪಡಿಸುವ ಗುರಿ ಹೊಂದಿರುವ ರಷ್ಯಾ ಪಡೆಗಳು, ಶುಕ್ರವಾರ ನಡೆಸಿದ ದಾಳಿಯಲ್ಲಿ ಐವರು ನಾಗರಿಕರನ್ನು ಕೊಂದಿವೆ- ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ

ಮೂರನೇ ವಿಶ್ವ ಸಮರ ಪ್ರಾರಂಭ?

ಮಾಸ್ಕೊ: ರಷ್ಯಾದ ಕೀರ್ತಿ ಪತಾಕೆಯಂತಿದ್ದ 'ಮಾಸ್ಕವಾ' ಸಮರನೌಕೆಯು ಉಕ್ರೇನಿನ ನೆಪ್ಚೂನ್ ಕ್ಷಿಪಣಿ ದಾಳಿಗೆ ಸಿಕ್ಕಿ, ಕಪ್ಪು ಸಮುದ್ರದಲ್ಲಿ ಮುಳುಗಿದ ನಂತರ 'ಮೂರನೇ ವಿಶ್ವಸಮರ ಈಗಾಗಲೇ ಅಧಿಕೃತವಾಗಿ ಪ್ರಾರಂಭವಾಗಿದೆ' ಎಂದು ರಷ್ಯಾದ ಸರ್ಕಾರಿ ಸ್ವಾಮ್ಯದ ದೂರದರ್ಶನ 'ಓಗಾ ಸ್ಕಬೀವಾ' ಶುಕ್ರವಾರ ಘೋಷಿಸಿದೆ.

'ನೆಪ್ಚೂನ್ ಕ್ಷಿಪಣಿಯ ಮೂಲಕ ರಷ್ಯಾದ ಪ್ರಮುಖ ನೌಕೆಯನ್ನು ನಾಶಪಡಿಸಲಾಗಿದೆ' ಎಂದು ಉಕ್ರೇನ್ ಹೇಳಿಕೊಂಡಿದೆ. ಮರು ದಿನವೇ, ಮುಳುಗುತ್ತಿರುವ 'ಮಾಸ್ಕವಾ'ದ ಚಿತ್ರವಿರುವ 'ಸ್ಮರಣಾರ್ಥ ಸ್ಟ್ಯಾಂಪ್' ಅನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬಿಡುಗಡೆ ಮಾಡಿ, ತಮ್ಮ ಸೇನಾ ಪಡೆಗಳ ಶೌರ್ಯವನ್ನು ಪ್ರಶಂಸಿಸಿದ್ದಾರೆ.

ಕ್ರೆಮ್ಲಿನ್ ಮುಖವಾಣಿ 'ಓಗಾ ಸ್ಕಬೀವಾ' ಟಿ.ವಿಯ ನಿರೂಪಕರು, ಯುದ್ಧ ನೌಕೆ ಮುಳುಗಿದ ಸುದ್ದಿಯನ್ನು ವೀಕ್ಷಕರಿಗೆ ತಿಳಿಸುವಾಗ 'ಮೂರನೇ ಮಹಾಯುದ್ಧ ಈಗಾಗಲೇ ಶುರುವಾಗಿದೆ' ಎಂದು ಘೋಷಿಸಿದರು.

10 ವರ್ಷಗಳಲ್ಲಿ ವೈದ್ಯರ ಸಂಖ್ಯೆ ಹೆಚ್ಚಳ– ಮೋದಿ

ಭುಜ್: 'ಪ್ರತಿ ಜಿಲ್ಲೆಗೊಂದು ಕನಿಷ್ಠ ಒಂದು ವೈದ್ಯಕೀಯ ಕಾಲೇಜು ಸ್ಥಾಪಿಸುವ ಕೇಂದ್ರ ಸರ್ಕಾರದ ನೀತಿಯಿಂದಾಗಿ ಮುಂದಿನ 10 ವರ್ಷಗಳಲ್ಲಿ ದೇಶವು ದಾಖಲೆಯ ಸಂಖ್ಯೆಯಲ್ಲಿ ವೈದ್ಯರನ್ನು ಹೊಂದಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಗುಜರಾತನ್ ಕಛ್ ಜಿಲ್ಲೆಯ ಭುಜ್‌ನಲ್ಲಿ 200 ಹಾಸಿಗೆ ಸಾಮರ್ಥ್ಯದ ಕೆ.ಕೆ. ಪಟೇಲ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, 'ಕೊರೊನಾ ವೈರಸ್ ಇನ್ನೂ ಸುಪ್ತವಾಗಿ ಅಡಗಿದ್ದು, ಜನರು ಈ ಬಗ್ಗೆ ಲಘುವಾಗಿ ಪರಿಗಣಿಸದೇ ಜಾಗ್ರತೆಯಿಂದ ಇರಬೇಕು' ಎಂದು ಸಲಹೆ ನೀಡಿದರು.

'ವೈದ್ಯಕೀಯ ಶಿಕ್ಷಣವನ್ನು ಎಲ್ಲರೂ ಪಡೆಯುವಂತಾಗಲು ಸರ್ಕಾರದಿಂದ ಪ್ರತಿ ಜಿಲ್ಲೆಯಲ್ಲೂ ಕನಿಷ್ಠ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಎರಡು ದಶಕಗಳ ಹಿಂದೆ, ಗುಜರಾತ್‌ನಲ್ಲಿ ಸುಮಾರು 1,100 ಎಂಬಿಬಿಎಸ್ ಸೀಟುಗಳೊಂದಿಗೆ ಕೇವಲ 9 ವೈದ್ಯಕೀಯ ಕಾಲೇಜುಗಳಿದ್ದವು. ಆದರೆ,ಈಗ ಗುಜರಾತ್‌ನಲ್ಲಿ ಒಂದು ಏಮ್ಸ್ ಮತ್ತು ಮೂರು ಡಜನ್ ಗಳಿಗಿಂತಲೂ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ' ಎಂದು ಹೇಳಿದರು.

'ಈ ಹಿಂದೆ ಗುಜರಾತಿನ ವೈದ್ಯಕೀಯ ಕಾಲೇಜುಗಳಲ್ಲಿ ಕೇವಲ ಒಂದು ಸಾವಿರ ವಿದ್ಯಾರ್ಥಿಗಳಷ್ಟೇ ಪ್ರವೇಶ ಪಡೆಯುತ್ತಿದ್ದರು. ಆದರೆ, ಈಗ 6 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯುವಂತಾಗಿದೆ. 2021ರಲ್ಲಿ ರಾಜ್‌ಕೋಟ್‌ನಲ್ಲಿ ಏಮ್ಸ್ ಆರಂಭವಾದಾಗಿನಿಂದ 50 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ' ಎಂದರು.

'ಕೋವಿಡ್ ಬಂದ ಬಳಿಕ ಜಗತ್ತಿನಾದ್ಯಂತ ಜನರಿಗೆ ಅರಿಶಿನದ ಆರೋಗ್ಯಕರ ಗುಣಗಳ ಕುರಿತು ಅರಿವಾಗಿದೆ. ಹಾಗಾಗಿ, ಭಾರತದಿಂದ ಅರಿಶಿನದ ರಫ್ತು ಹೆಚ್ಚಾಗಿದೆ ಎಂದು ಹೇಳಿದ್ದಾರೆ.

ಒಂದೇ ವಾರದಲ್ಲಿ ಪಾಸಿಟಿವಿಟಿ ದರ ಶೇ 3.95ಕ್ಕೆ ಜಿಗಿತ

ದೆಹಲಿಯಲ್ಲಿ ಮತ್ತೆ ಹೆಚ್ಚಿದ ಕೊರೊನಾ ಆತಂಕ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಶೇ 2ಕ್ಕಿಂತ ಹೆಚ್ಚಾಗಿದ್ದು, ಕಳೆದೊಂದು ವಾರದಲ್ಲಿ ಮನೆಯಲ್ಲಿ ಕ್ವಾರಂಟೈನ್ ಆಗಿರುವವರ ಸಂಖ್ಯೆ ಶೇ 48ರಷ್ಟಿದೆ ಎಂದು ಸರ್ಕಾರದ ದತ್ತಾಂಶಗಳು ತಿಳಿಸಿವೆ. ಶುಕ್ರವಾರ ಒಂದೇ ದಿನ 366 ಕೋವಿಡ್ ಪ್ರಕರಣಗಳು ಪತ್ತೆಯಾಗಿ, ಪಾಸಿಟಿವಿಟಿ ದರವು ಶೇ 3.95ರಷ್ಟಾಗಿತ್ತು. ಇನ್ನು ಸೋಂಕಿಗೆ ತುತ್ತಾಗಿ 574 ಮಂದಿ ಮನೆಯಲ್ಲೇ ಪ್ರತ್ಯೇಕವಾಗಿದ್ದುಕೊಂಡು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಮುನ್ನೆಚ್ಚರಿಕಾ ಡೋಸ್ ಉಚಿತ: ದೆಹಲಿಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿರುವ ಬೆನ್ನಲ್ಲೇ, ಕೊರೊನಾ ಲಸಿಕೆಯ ಮುನ್ನೆಚ್ಚರಿಕಾ ಡೋಸ್‌ಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಶೀಘ್ರವೇ ಉಚಿತವಾಗಿ ನೀಡಲಾಗುತ್ತದೆ ದೆಹಲಿ ಸರ್ಕಾರ ಘೋಷಣೆ ಮಾಡಿದೆ.

18 ವರ್ಷ ಮೇಲ್ಪಟ್ಟ ಎಲ್ಲಾ ಅರ್ಹರಿಗೆ ಖಾಸಗಿ ಕೇಂದ್ರಗಳಲ್ಲಿ ಮುನ್ನೆಚ್ಚರಿಕಾ ಕೋವಿಡ್ ಡೋಸ್ ನೀಡಿಕೆಯನ್ನು ಭಾನುವಾರದಿಂದ ಆರಂಭಿಸಲಾಗಿದೆ. ಲಸಿಕೆಯ 2ನೇ ಡೋಸ್ ಪಡೆದು 9 ತಿಂಗಳು ಪೂರೈಸಿದ ಎಲ್ಲರೂ ಸಹ ಮುನ್ನೆಚ್ಚರಿಕಾ ಡೋಸ್‌ಗೆ ಅರ್ಹವಾಗಿರಲಿದ್ದಾರೆ.

ಸೋಂಕು ಪತ್ತೆಯಾದ ತರಗತಿ ಮುಚ್ಚಿ: ಡಿಸಿಎಂ

ದೆಹಲಿಯ ಹೆಚ್ಚಿನ ಮಕ್ಕಳಲ್ಲಿ ಶುಕ್ರವಾರ ಕೊರೊನಾ ಸೋಂಕು ಪತ್ತೆಯಾಗಿದ್ದು, ಇದು ಪೋಷಕರ ಕಳವಳಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಕಡೆಗಳಲ್ಲಿ ಶಾಲಾ ತರಗತಿಗಳು ಮತ್ತು ನಿಗದಿತ ಭಾಗಗಳನ್ನು ಮುಚ್ಚುವಂತೆ ದೆಹಲಿ ಸರ್ಕಾರ ಶಾಲೆಗಳಿಗೆ ಸೂಚನೆ ನೀಡಿದೆ.

ಅಂಬೇಡ್ಕರ್ ಜಯಂತಿ, ಗುಡ್ ಫ್ರೈಡೆ ಹಾಗೂ ವಾರಾಂತ್ಯ ಸೇರಿದಂತೆ ಒಟ್ಟಾರೆ 4 ದಿನಗಳ ಕಾಲ ಶಾಲೆಗಳಿಗೆ ರಜೆ ನೀಡಲಾಗಿದೆ. ಈ ನಡುವೆ ಕಳೆದ ವಾರ ವಸಂತ ಕುಂಜ್ ಎಂಬಲ್ಲಿರುವ ಖಾಸಗಿ ಶಾಲೆಯ ಐವರು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಸೋಂಕು ದೃಢಪಟ್ಟಿದ್ದು, ಪೋಷಕರನ್ನು ಆತಂಕಕ್ಕೀಡು ಮಾಡಿದೆ. ಈ ಹಿನ್ನೆಲೆಯಲ್ಲಿ ಸೋಂಕು ಪತ್ತೆಯಾದ ತರಗತಿ ಅಥವಾ ಶಾಲೆಯ ಆ ಭಾಗವನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಶಾಲೆಗಳಿಗೆ ಸೂಚಿಸಲಾಗಿದೆ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ತಿಳಿಸಿದ್ದಾರೆ.

ಕೋವಿಡ್: ದೆಹಲಿಯಲ್ಲಿ 'ಮನೆಯಲ್ಲಿ ಪ್ರತ್ಯೇಕವಾಸ' ಪ್ರಕರಣಗಳ ಸಂಖ್ಯೆ ಏರಿಕೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಳೆದ ವಾರ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದ್ದು, ಕೋವಿಡ್ ದೃಢ ಪ್ರಮಾಣ (ಪಾಸಿಟಿವಿಟಿ ದರ) ಶೇ 2ರ ಗಡಿ ದಾಟಿದೆ.

ಕಳೆದ ವಾರ 'ಮನೆಯಲ್ಲಿಯೇ ಪ್ರತ್ಯೇಕವಾಸ'ದ ಪ್ರಕರಣಗಳ ಸಂಖ್ಯೆಯಲ್ಲಿ ಶೇ 48ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ.

ಗುರುವಾರ ಕೊನೆಗೊಂಡ ಅವಧಿಯಲ್ಲಿ 'ಮನೆಯಲ್ಲಿ ಪ್ರತ್ಯೇಕವಾಸ'ಕ್ಕೆ ಒಳಗಾಗಿರುವವರ ಸಂಖ್ಯೆ 574 ಇತ್ತು. ಏಪ್ರಿಲ್ 1ರಂದು ಶೇ 0.57ರಷ್ಟಿದ್ದ ಪಾಸಿಟಿವಿಟಿ ದರ ಏ. 14ರಂದು ಶೇ 2.39ಕ್ಕೆ ಏರಿಕೆಯಾಗಿದೆ ಎಂದು ಮೂಲಗಳು ಹೇಳಿವೆ.

'ಆತಂಕ ಪಡುವಂತಹ ಸ್ಥಿತಿ ಇಲ್ಲ. ನಿತ್ಯವೂ ವರದಿಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಕಡಿಮೆಯೇ ಇದೆ. ಆದರೆ, ಕೋವಿಡ್‌ಗೆ ಸಂಬಂಧಿಸಿದ ಮಾರ್ಗಸೂಚಿಗಳ ಪಾಲನೆ ನಿಲ್ಲಿಸಬಾರದು' ಎಂದು ವೈದ್ಯರು ಎಚ್ಚರಿಸಿದ್ದಾರೆ.

ಉತ್ತರ ಪ್ರದೇಶ: 16 ಮಕ್ಕಳಿಗೆ ಸೋಂಕು

ನೋಯ್ಡಾ (ಪಿಟಿಐ): ಉತ್ತರ ಪ್ರದೇಶದ ಗೌತಮ ನಗರದಲ್ಲಿ 43 ಹೊಸ ಕೋವಿಡ್ ಪ್ರಕರಣಗಳು ಪತ್ತೆಯಾಗಿದೆ. ಈ ಪೈಕಿ 16 ಮಕ್ಕಳಲ್ಲಿ ಸೋಂಕು ಇರುವುದು ದೃಢಪಟ್ಟಿದೆ ಎಂದು ಜಿಲ್ಲಾ ಆರೋಗ್ಯ ಇಲಾಖೆ ಗುರುವಾರ ಹೇಳಿದೆ.

ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳು 156 ತಲುಪಿದೆ. ಕಳೆದ ಒಂದು ವಾರದಿಂದ ವರದಿಯಾಗುತ್ತಿರುವ ಶೇ 25 ರಷ್ಟು ಪ್ರಕರಣಗಳು ಮಕ್ಕಳಲ್ಲಿ ಕಂಡು ಬಂದಿವೆ ಎಂದಿದೆ.

'18 ವರ್ಷಕ್ಕಿಂತ ಕೆಳಗಿನ 16 ಮಕ್ಕಳಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿವೆ. ಕಳೆದ ಒಂದು ವಾರದಲ್ಲಿ ವರದಿಯಾದ 127 ಹೊಸ ಪ್ರಕರಣಗಳಲ್ಲಿ ಶೇ 26.3 ಅಂದರೆ 44 ಮಕ್ಕಳಲ್ಲಿ ಕಾಣಿಸಿಕೊಂಡಿವೆ' ಎಂದು ಮುಖ್ಯ ವೈದ್ಯಕೀಯ ಅಧಿಕಾರಿ ಡಾ.ಸುನೀಲ್ ಕುಮಾರ್ ಶರ್ಮಾ ಹೇಳಿದರು.

ಜೆಎನ್‌ಯು ಮುಖ್ಯದ್ವಾರದ ಸಮೀಪ ಪೋಸ್ಟರ್

ಕೇಸರಿಗೆ ಅವಮಾನಿಸಿದರೆ ಕಠಿಣ ಕ್ರಮ: ಎಚ್ಚರಿಕೆ

ನವದೆಹಲಿ: ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಮುಖ್ಯದ್ವಾರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಿಂದೂ ಸೇನಾ ಸಂಘಟನೆಯು ಪೋಸ್ಟರ್‌ಗಳನ್ನು ಅಂಟಿಸಿ, ಕೇಸರಿ ಧ್ವಜಗಳನ್ನು ನೆಟ್ಟಿದ್ದು, 'ಕೇಸರಿಗೆ ಅವಮಾನ ಮಾಡಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದೂ ಶುಕ್ರವಾರ ಎಚ್ಚರಿಕೆ ನೀಡಿದೆ.

ಶ್ರೀರಾಮನವಮಿಯಂದು ಜೆಎನ್‌ಯುನ ಹಾಸ್ಟೆಲ್‌ನಲ್ಲಿ ಮಾಂಸಾಹಾರ ನೀಡಿದ ಆರೋಪದ ಮೇರೆಗೆ ಘರ್ಷಣೆ ನಡೆದಿತ್ತು. ಇದಾಗಿ ಒಂದು ವಾರದ ನಂತರ ಈ ರೀತಿಯ ಘಟನೆ ನಡೆದಿದೆ.

'ಬಲಪಂಥೀಯ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಸುರ್ಜಿತ್ ಸಿಂಗ್ ಯಾದವ್ ಅವರು 'ಭಾಗವಾ (ಕೇಸರಿ) ಜೆಎನ್‌ಯು' ಶೀರ್ಷಿಕೆಯ ಪೋಸ್ಟರ್‌ಗಳನ್ನು ಹಚ್ಚಿದ್ದಾರೆ' ಎಂದು ಹಿಂದೂ ಸೇನಾ ಸಂಘಟನೆಯ ಮುಖ್ಯಸ್ಥ ವಿಷ್ಣು ಗುಪ್ತಾ ಹೇಳಿದ್ದಾರೆ.

ವ್ಯಾಟ್ಸ್‌ಆ್ಯಪ್ ವಿಡಿಯೊದಲ್ಲಿ ಗುಪ್ತಾ ಅವರು ಹಿಂದಿ ಭಾಷೆಯಲ್ಲಿ, 'ಜೆಎನ್‌ಯು ಕ್ಯಾಂಪಸ್‌ನಲ್ಲಿ ನಿತ್ಯವೂ ಕೇಸರಿ ಬಣ್ಣಕ್ಕೆ ಅವಮಾನ ಮಾಡಲಾಗುತ್ತಿದೆ. ಇದನ್ನು ಮಾಡುತ್ತಿರುವವರಿಗೆ ಎಚ್ಚರಿಕೆ ನೀಡಲು ನಾವು ಬಯಸುತ್ತೇವೆ. ನಾವು ಇದನ್ನು ಸಹಿಸುವುದಿಲ್ಲ. ನಾವು ನಿಮ್ಮ ಸಿದ್ಧಾಂತ ಮತ್ತು ಪ್ರತಿಯೊಂದು ಧರ್ಮವನ್ನೂ ಗೌರವಿಸುತ್ತೇವೆ. ಆದರೆ, ಕೇಸರಿಗೆ ಅವಮಾನ ಮಾಡಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ್ದಾರೆ.

'ಜೆಎನ್‌ಯು ರಸ್ತೆ ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಿ ಕೆಲವು ಧ್ವಜಗಳನ್ನು ಹಾಕಿರುವುದು ಗಮನಕ್ಕೆ ಬಂದಿತು. ಇತ್ತೀಚಿನ ಘಟನೆಯ ಕಾರಣ ಅವುಗಳನ್ನು ತಕ್ಷಣವೇ ತೆಗೆದುಹಾಕಲಾಗಿದೆ' ಎಂದು ಉಪ ಪೊಲೀಸ್ ಆಯುಕ್ತ (ನೈರುತ್ಯ) ಮನೋಜ್ ಸಿ. ತಿಳಿಸಿದ್ದಾರೆ.

ಆದರೆ, 'ಧ್ವಜ ಕೀಳಲು ಪೊಲೀಸರು ಅವಸರ ಪಡಬಾರದು. ಕೇಸರಿ ಬಣ್ಣವು ಭಯೋತ್ಪಾದನೆಯ ಸಂಕೇತವಲ್ಲ, ಕೇಸರಿ ಮತ್ತು ಹಿಂದುತ್ವವನ್ನು ರಕ್ಷಿಸುವುದು ಕಾನೂನಿನ ಅಡಿಯಲ್ಲಿ ಹಕ್ಕಿನ ವಿಷಯವಾಗಿದೆ' ಎಂದು ಹಿಂದೂ ಸೇನಾ ಸಂಘಟನೆ ಹೇಳಿದೆ.



ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಬಳಿ ಅಂಟಿಸಲಾಗಿದ್ದ ಕೇಸರಿ ಬಾವುಟ ಮತ್ತು ಪೋಸ್ಟರ್‌ಗಳನ್ನು ದೆಹಲಿ ಪೊಲೀಸರು ಶುಕ್ರವಾರ ತೆರವುಗೊಳಿಸಿದರು –ಪಿಟಿಐ ಚಿತ್ರ

ಉಗ್ರರ ದಾಳಿಗೆ ಸರಪಂಚ ಬಲಿ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲ ಜಿಲ್ಲೆಯ ಪಠಣ್ ಪ್ರದೇಶದಲ್ಲಿ ಶುಕ್ರವಾರ ಅಪರಿಚಿತ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಸರಪಂಚರೊಬ್ಬರು ಹತ್ಯೆಯಾಗಿದ್ದಾರೆ. ಗೋಶ್‌ಬುಗ್ ಪ್ರದೇಶದ ನಿವಾಸಿ ಮನ್ಸೂರ್ ಅಹ್ಮದ್ ಬಂಗ್ರೂ ದಾಳಿಗೆ ಬಲಿಯಾದವರು.

'ಪಠಣ್‌ನ ರಾಖ್ ಪ್ರದೇಶ ಹಣ್ಣಿನ ತೋಟವೊಂದರಲ್ಲಿ ಗುಂಡಿನ ದಾಳಿಗೆ ಒಳಗಾಗಿ ಬಿದ್ದಿದ್ದ ಮನ್ಸೂರ್ ಅವರು ಆಸ್ಪತ್ರೆಗೆ ಕರೆತರುವ ವೇಳೆಗೆ ಮೃತಪಟ್ಟಿದ್ದರು' ಎಂದು ವೈದ್ಯರು ತಿಳಿಸಿದ್ದಾರೆ.

'ಬಾರಾಮುಲ್ಲದ ಪಠಣ್ ಪ್ರದೇಶದಲ್ಲಿ ನಡೆದ ಉಗ್ರರ ಗುಂಡಿನ ದಾಳಿಯಲ್ಲಿ ಸ್ವತಂತ್ರ ಸರಪಂಚರೊಬ್ಬರು ಮೃತಪಟ್ಟಿದ್ದು, ದಾಳಿಯ ಪ್ರದೇಶವನ್ನು ಸುತ್ತುವರೆಯಲಾಗಿದ್ದು, ಉಗ್ರರ ವಿರುದ್ಧ ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಬರಲಿದೆ 'ದಿ ದೆಹಲಿ ಫೈಲ್ಸ್'

ಮುಂಬೈ: 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ಮೂಲಕ ಹಲವು ಬಾರಿ ಚರ್ಚೆಗೆ ಗ್ರಾಸವಾಗಿರುವ ನಿರ್ದೇಶಕ ವಿವೇಕ್ ರಂಜನ್ ಅಗ್ನಿಹೋತ್ರಿ ಅವರು ತಮ್ಮ ಮುಂದಿನ ಸಿನಿಮಾದ ಶೀರ್ಷಿಕೆ ಬಹಿರಂಗ ಪಡಿಸಿದ್ದಾರೆ. 'ದಿ ಕಾಶ್ಮೀರ್ ಫೈಲ್ಸ್' ನಿರ್ದೇಶಕ ಅಗ್ನಿಹೋತ್ರಿ ಅವರು ಹೊಸ ಸಿನಿಮಾ 'ದಿ ದೆಹಲಿ ಫೈಲ್ಸ್' ತಯಾರಿ ಶುರು ಮಾಡಿರುವುದಾಗಿ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.



ಬಂಗಾಳಿಯರ ನೂತನ ವರ್ಷ 'ಪೊಯ್ಲಾ ಬೈಸಾಕ್' ಅನ್ನು ಶುಕ್ರವಾರ ಕೋಲ್ಕತ್ತದಲ್ಲಿ ಬಂಗಾಳಿ ಸಮುದಾಯದವರು ನೃತ್ಯದೊಂದಿಗೆ ಸಂಭ್ರಮದಿಂದ ಬರಮಾಡಿಕೊಂಡರು –ಪಿಟಿಐ ಚಿತ್ರ

ಸೋಂಕಿತರಿಗೆ ಮನೆ ಬಿಟ್ಟುಕೊಡಿ: ಆದೇಶಕ್ಕೆ ಶಾಂಘೈನಲ್ಲಿ ಆಕ್ರೋಶ

ಶಾಂಘೈ (ಎಎಫ್‌ಪಿ): ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ಕೋವಿಡ್ ಸೋಂಕಿತರ ಆರೈಕೆಗೆ ತಮ್ಮ ಮನೆಗಳನ್ನು ಒಪ್ಪಿಸುವಂತೆ ಆದೇಶಿಸಿರುವ ಪೊಲೀಸರ ವಿರುದ್ಧ ಅಲ್ಲಿನ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಪೊಲೀಸರೊಂದಿಗೆ ಜಗಳವಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ನಗರದಲ್ಲಿ ದಿನನಿತ್ಯ 20 ಸಾವಿರ ಪ್ರಕರಣಗಳು ವರದಿಯಾಗುತ್ತಿದ್ದು, ರೋಗಿಗಳ ಆರೈಕೆಗೆ 10 ಸಾವಿರ ಹಾಸಿಗೆ ಸಾಮರ್ಥ್ಯವುಳ್ಳ ತಾತ್ಕಾಲಿಕ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ. ಆದರೂ ಎಲ್ಲ ರೋಗಿಗಳಿಗೆ ಹಾಸಿಗೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ರೋಗಿಗಳಿಗೆ ಚಿಕಿತ್ಸೆ ನೀಡಲು 39 ಕುಟುಂಬಗಳಿಗೆ ಮನೆ ಖಾಲಿ ಮಾಡುವಂತೆ ಆದೇಶಿಸಲಾಗಿದೆ. ಇದರಿಂದ ಸ್ಥಳೀಯರು ಮತ್ತು ಪೊಲೀಸರ ನಡುವೆ ವಾಗ್ವಾದ ಆರಂಭಗೊಂಡಿದೆ.

ನಿವಾಸಿಗಳನ್ನು ಪೊಲೀಸರು ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದಕ್ಕಾಗಿಯೇ ಹಲವು ಮಂದಿಯನ್ನು ಬಂಧಿಸಲಾಗಿದೆ ಎಂಬುದು ವಿಡಿಯೊ ಒಂದರಿಂದ ತಿಳಿದು ಬಂದಿದೆ.

ಶಾಂಘೈನಲ್ಲಿ ಮೂರನೇ ವಾರ ಲಾಕ್‌ಡೌನ್ ಮುಂದುವರಿದಿದ್ದು, ಜನರು ನಿರಂತರವಾಗಿ ಹತಾಶೆ ಮತ್ತು ಆಕ್ರೋಶವನ್ನು ಹೊರ ಹಾಕುತ್ತಿದ್ದಾರೆ. ಸೋಂಕು ನಿಯಂತ್ರಣದಲ್ಲಿ ಅಧಿಕಾರಿಗಳ ವೈಫಲ್ಯ, ಆಹಾರ ಕೊರತೆ, ಸಾಕು ಪ್ರಾಣಿಗಳನ್ನು ಕೊಲ್ಲುವ ಹಾಗೂ ಸೋಂಕಿತ ಮಕ್ಕಳನ್ನು ಪೋಷಕರಿಂದ ಬೇರ್ಪಡಿಸುವ ಆರೋಗ್ಯ ಕಾರ್ಯಕರ್ತರ ಅತಿರೇಕದ ಕ್ರಮ ಹಾಗೂ ಕಠಿಣ ನಿರ್ಬಂಧಗಳು ಜನರನ್ನು ಕಂಗಾಲಾಗಿಸಿವೆ.

ಯೋಗಿ ಭೇಟಿಯಾದ ಎಸ್‌ಪಿ ಸಂಸದ ಸುಖರಾಮ್ ಸಿಂಗ್

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ರಾಜ್ಯಸಭಾ ಸದಸ್ಯ ಸುಖರಾಮ್ ಸಿಂಗ್ ಯಾದವ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಇಲ್ಲಿ ಭೇಟಿ ಮಾಡಿದ್ದಾರೆ.

ಗುರುವಾರ ಇಲ್ಲಿ ಮುಖ್ಯಮಂತ್ರಿಗಳ ನಿವಾಸದಲ್ಲಿ ನಡೆದ ಸಭೆಯಲ್ಲಿ ಯಾದವ್ ಅವರು ಇತ್ತೀಚೆಗೆ ಬಿಜೆಪಿ ಸೇರಿದ ತಮ್ಮ ಪುತ್ರ ಮೋಹಿತ್ ಸೇರಿ ಕುಟುಂಬ ಸದಸ್ಯರೊಂದಿಗೆ ಭಾಗವಹಿಸಿದ್ದರು.

ಯಾದವ್ ಅವರ ರಾಜ್ಯಸಭಾ ಸದಸ್ಯತ್ವದ ಅವಧಿಯು ಶೀಘ್ರದಲ್ಲೇ ಕೊನೆಗೊಳ್ಳಲಿದೆ. ಯಾದವ್ ಅವರು ಮತ್ತೊಂದು ಅವಧಿಗೆ ಬಿಜೆಪಿಯಿಂದ ರಾಜ್ಯಸಭೆಗೆ ಆಯ್ಕೆಯಾಗುವ ನಿರೀಕ್ಷೆಯಲ್ಲಿದ್ದು, ಈ ಸಭೆಗೆ ಮಹತ್ವ ಬಂದಿದೆ.

ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಜತೆಗೆ ಭಿನ್ನಾಭಿಪ್ರಾಯ ಹೊಂದಿರುವ ಪಕ್ಷದ ಹಿರಿಯ ನಾಯಕರಾದ ಸುಖರಾಮ್ ಸಿಂಗ್ ಯಾದವ್ ಅವರು ಸದ್ಯದಲ್ಲೇ ಬಿಜೆಪಿ ಸೇರುವ ಊಹಾಪೋಹಗಳು ರಾಜಕೀಯ ವಲಯಗಳಲ್ಲಿ ಕೇಳಿಬರುತ್ತಿವೆ.

ಆದರೆ, ಯಾದವ್ ಅವರು 'ಇಂತಹ ಊಹಾಪೋಹಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಭೇಟಿಯ ಉದ್ದೇಶದ ಬಗ್ಗೆ ಕೇಳಿದಾಗ, ಮಾರ್ಚ್‌ನಲ್ಲಿ ನಡೆದ ಅವರ ಪ್ರಮಾಣವಚನ ಸಮಾರಂಭದ ನಂತರ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಹಾಗಾಗಿ, ಈಗ ಅವರನ್ನು ಅಭಿನಂದಿಸಲು ಹೋಗಿದ್ದೆ ಎಂದು ಯಾದವ್ ಶುಕ್ರವಾರ ಪಿಟಿಐಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

500 ಕಾನೂನು ಕಾಲೇಜುಗಳಿಗೆ ಹಠಾತ್ ಭೇಟಿ

ನವದೆಹಲಿ (ಪಿಟಿಐ): ದಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಕಳಪೆ ಗುಣಮಟ್ಟದ 500 ಕಾನೂನು ಕಾಲೇಜುಗಳಿಗೆ ಹಠಾತ್ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಲಿದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮಾಜಿ ನ್ಯಾಯಾಧೀಶರ ಅಥವಾ ಹಿರಿಯ ವಕೀಲರ ಒಂದು ಉನ್ನತ ಸಮಿತಿಯನ್ನು ರಚಿಲಾಗುವುದು. ಈ ಸಮಿತಿಯು ರಾಷ್ಟ್ರದಾದ್ಯಂತ ಕಳಪೆ ಅಥವಾ ಕಡಿಮೆ ಗುಣಮಟ್ಟದವುಗಳೆಂದು ಗುರುತಿಸಲಾದ ಕಾಲೇಜುಗಳಿಗೆ ದಿಢೀರ್ ಭೇಟಿ ನೀಡಿ ಅಲ್ಲಿ ಪರಿಸ್ಥಿತಿ ಪರಿಶೀಲಿಸುವುದು. ಒಂದು ವೇಳೆ ಕಾಲೇಜುಗಳು ಮೂಲಭೂತ ಸೌಕರ್ಯಗಳು, ಅಧ್ಯಾಪಕರ ಕೊರತೆ ಸೇರಿ ಹಲವು ಕೊರತೆ ಅನುಭವಿಸುತ್ತಿದ್ದರೆ, ಅಂಥ ಕಾಲೇಜುಗಳನ್ನು ಮುಚ್ಚಲಾಗುವುದು.

ಕಾನೂನು ಶಿಕ್ಷಣದಲ್ಲಿ ಗುಣಮಟ್ಟದ ಪರಿವರ್ತನೆ ತರಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಸಿಐ ಸುಪ್ರೀಂ ಕೋರ್ಟ್‌ಗೆ ತನ್ನ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಪಾಕ್ ಆಕ್ರಮಿತ ಕಾಶ್ಮೀರದ ಪ್ರಧಾನಿ ರಾಜೀನಾಮೆ

ಇಸ್ಲಾಮಾಬಾದ್(ಪಿಟಿಐ): ಆಡಳಿತರೂಢ ಪಕ್ಷ ತೆಹ್ರೀಕ್ ಎ–ಇನ್ಸಾಫ್‌ದಲ್ಲಿ (ಪಿಟಿಐ) ಬಂಡಾಯ ಉಂಟಾದ ಕಾರಣ ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಪ್ರಧಾನಿ ಸರ್ದಾರ್ ಅಬ್ದುಲ್ ಖಯಾಮ್ ನಿಯಾಜಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಪಕ್ಷದ ವರಿಷ್ಠ ಇಮ್ರಾನ್ ಖಾನ್ ಅವರಿಂದ ಆಯ್ಕೆಯಾಗಿದ್ದ ನಿಯಾಜಿ ಸ್ಥಾನಕ್ಕೆ ಅದೇ ಪಕ್ಷದ ಪ್ರಾದೇಶಿಕ ಅಧ್ಯಕ್ಷ ಸರ್ದಾರ್ ತನ್ವೀರ್ ಇಲ್ಯಾಸ್ ಅವರನ್ನು ತರಲು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ ಹಿನ್ನೆಲೆಯಲ್ಲಿ ರಾಜೀನಾಮೆ ಸಲ್ಲಿಸಿದ್ದಾರೆ. ನಿಯಾಜಿ ಅವರ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ಅಧ್ಯಕ್ಷರ ವ್ಯವಹಾರಗಳ ಕಾರ್ಯದರ್ಶಿ ಡಾ.ಆಸಿಫ್ ಹುಸೇನ್ ತಿಳಿಸಿದ್ದಾರೆ.

'ವ್ಯಾಪಾರಿಗಳು ರಾತ್ರಿಯಿಡೀ ಸರಕು ಇಡುವಂತಿಲ್ಲ'

ನವದೆಹಲಿ (ಪಿಟಿಐ): 'ಮಾರುಕಟ್ಟೆ ಪ್ರದೇಶದಲ್ಲಿ ತಾವು ವ್ಯಾಪಾರ ವಹಿವಾಟು ನಡೆಸುವ ನಿರ್ದಿಷ್ಟ ಸ್ಥಳದಲ್ಲೇ ರಾತ್ರಿಯಿಡೀ ಸರಕುಗಳನ್ನು ಇಡಲು ಅವಕಾಶ ಕಲ್ಪಿಸುವಂತೆ ಪಟ್ಟುಹಿಡಿಯುವ ಹಕ್ಕು ವ್ಯಾಪಾರಿಗಳಿಗೆ ಇಲ್ಲ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ವ್ಯಾಪಾರಿಗಳು ಸಂಬಂಧಿತ ನೀತಿಗೆ ಅನುಗುಣವಾಗಿಯೇ ಕಾರ್ಯನಿರ್ವಹಿಸಬೇಕು ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಬಿ.ವಿ.ನಾಗರತ್ನ ಅವರಿದ್ದ ಪೀಠವು ಸ್ಪಷ್ಟಪಡಿಸಿತು.

ಸರೋಜಿನಿ ನಗರ ಮಾರ್ಕೆಟ್ ಪ್ರದೇಶದಲ್ಲಿ ವ್ಯಾಪಾರ ನಡೆಸುವ ಅರ್ಜಿದಾರರು, ಈ ಸಂಬಂಧ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ವಜಾ ಮಾಡಿದ ಹೈಕೋರ್ಟ್ ಕ್ರಮ ಸೂಕ್ತವಾದುದು ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿತು.

'ವ್ಯಾಪಾರಿಗಳು ತಮಗೆ ನಿಗದಿಯಾದ ಸ್ಥಳದಲ್ಲಿ ನಿರ್ದಿಷ್ಟ ಅವಧಿಯಲ್ಲಿ ವಹಿವಾಟು ನಡೆಸಿ, ಸಮಯ ಮುಗಿದ ನಂತರ ತಮ್ಮ ಸರಕಗಳ ಜೊತೆಗೆ ನಿರ್ಗಮಿಸಬೇಕು ಎಂಬುದು ವ್ಯಾಪಾರಿಗಳ ನೀತಿಯಾಗಿದೆ' ಎಂದು ಹೈಕೋರ್ಟ್ ಉಲ್ಲೇಖಿಸಿತ್ತು.

ನೆರವು ಆಗ್ರಹಿಸಿ ಕ್ರಿಕೆಟಿಗ ಧಮ್ಮಿಕಾ ಪ್ರಸಾದ್ ಉಪವಾಸ

ಕೊಲಂಬೊ (ಪಿಟಿಐ): ಮೂರು ವರ್ಷಗಳ ಹಿಂದೆ ಈಸ್ಟರ್ ದಿನ ಸಂಭವಿಸಿದ ಭಯೋತ್ಪಾದಕ ದಾಳಿ ಸಂತ್ರಸ್ತರು ಮತ್ತು ದೇಶದ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಜನರಿಗೆ ದೇಶದ ನಾಯಕರು ನ್ಯಾಯ ಒದಗಿಸುವಂತೆ ಆಗ್ರಹಿಸಿ ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ಆಟಗಾರ ಧಮ್ಮಿಕಾ ಪ್ರಸಾದ್ ಅವರು ಶುಕ್ರವಾರ ಒಂದು ದಿನದ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಪ್ರಸಾದ್ ಅವರು ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಕಚೇರಿ ಬಳಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಸೇರಿಕೊಂಡಿದ್ದಾರೆ.

ಪ್ರಧಾನಿಯಿಂದ ಹನುಮನ ಪ್ರತಿಮೆ ಅನಾವರಣ

ನವದೆಹಲಿ (ಪಿಟಿಐ): ಹನುಮ ಜಯಂತಿ ಪ್ರಯುಕ್ತ ಶನಿವಾರ ಗುಜರಾತ್‌ನಲ್ಲಿ 108 ಅಡಿ ಎತ್ತರದ ಹನುಮಂತನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಅನಾವರಣಗೊಳಿಸಲಿದ್ದಾರೆ ಎಂದು ಪ್ರಧಾನಿ ಕಚೇರಿ (ಪಿಎಂಒ) ಹೇಳಿದೆ.

ಹನುಮಂತನಿಗೆ ಸಂಬಂಧಿಸಿದ ನಾಲ್ಕು ಧಾಮ ಯೋಜನೆಯ ಭಾಗವಾಗಿ ದೇಶದಾದ್ಯಂತ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಲಾದ ನಾಲ್ಕು ಪ್ರತಿಮೆಗಳಲ್ಲಿ ಇದು ಎರಡನೆಯದ್ದಾಗಿದೆ. ಇದು ಪಶ್ಚಿಮದಲ್ಲಿದ್ದು ಮೊರ್ಬಿಯಲ್ಲಿನ ಬಾಬು ಕೇಶವಾನಂದ ಅವರ ಆಶ್ರಮದಲ್ಲಿ ನಿರ್ಮಿಸಲಾಗಿದೆ.

ಇಂದಿನಿಂದ 1 ಲಕ್ಷ ಕೇಂದ್ರಗಳಲ್ಲಿ 'ಇ– ಸಂಜೀವಿನಿ'

ನವದೆಹಲಿ: ಏಪ್ರಿಲ್ 16ರಿಂದ ದೇಶದ 1 ಲಕ್ಷ ಆಯುಷ್ಮಾನ್ ಭಾರತ್ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಲ್ಲಿ (ಎಬಿ–ಎಚ್‌ಡಬ್ಲ್ಯುಸಿ) ಟೆಲಿ ಸಮಾಲೋಚನೆ ಸೌಲಭ್ಯ 'ಇ–ಸಂಜೀವಿನಿ' ಆರಂಭವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಶುಕ್ರವಾರ ತಿಳಿಸಿದ್ದಾರೆ.

ಎಬಿ-ಎಚ್‌ಡಬ್ಲ್ಯುಸಿಗಳು ಮತ್ತು ಟೆಲಿ- ಕನ್ಸಲ್ಟೇಶನ್ ಸೇವೆಗಳ ಕಾರ್ಯಾಚರಣೆಯ ಸ್ಥಿತಿಯನ್ನು ಪರಿಶೀಲಿಸಲು ಎಲ್ಲ ರಾಜ್ಯಗಳ ಆರೋಗ್ಯ ಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಿರಿಯ ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆಯಲ್ಲಿ ಪಾಲ್ಗೊಂಡಿದ್ದ ಮಾಂಡವೀಯಾ, 'ಇ-ಸಂಜೀವಿನಿಯಿಂದಾಗಿ ಈಗ ಸಾಮಾನ್ಯ ನಾಗರಿಕರು ಕೂಡ ದೇಶದ ದೊಡ್ಡ ವೈದ್ಯರನ್ನು ಸಂಪರ್ಕಿಸಲು ಸಾಧ್ಯವಾಗಲಿದೆ' ಎಂದರು.

'ಆಯುಷ್ಮಾನ್ ಭಾರತ್ ಆರೋಗ್ಯ ಮತ್ತು ಸ್ವಾಸ್ಥ ಕೇಂದ್ರಗಳ 4ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ಇ– ಸಂಜೀವಿನಿ ಟೆಲಿ ಸಮಾಲೋಚನೆಗೆ ಏ. 16ರಂದು ಚಾಲನೆ ನೀಡಲಾಗುವುದು.' ಎಂದು ಟ್ವೀಟ್ ಮಾಡಿದ್ದಾರೆ.

ಪಿಎಫ್‌ಐ ಕಾರ್ಯಕರ್ತನ ಹತ್ಯೆ

ಪಾಲಕ್ಕಾಡ್, ಕೇರಳ (ಪಿಟಿಐ): ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಪ್ಯಾಪುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಸ್ಥಳೀಯ ಕಾರ್ಯಕರ್ತ ಸುಬೈರ್ (43) ಎಂಬುವವರನ್ನು ಇರಿದು ಹತ್ಯೆ ಮಾಡಲಾಗಿದೆ.

'ಮಸೀದಿಯಿಂದ ಬೈಕ್‌ನಲ್ಲಿ ಹಿಂದಿರುಗುತ್ತಿದ್ದ ವೇಳೆ ಕಾರಿನಲ್ಲಿ ಬಂದು ಸುಬೈರ್‌ನನ್ನು ಅಡ್ಡಗಟ್ಟಿದ ಹಂತಕರು ಹರಿತವಾದ ಕತ್ತಿಯಿಂದ ಇರಿದಿದ್ದಾರೆ. ಇದು ರಾಜಕೀಯ ಹತ್ಯೆ ಆಗಿರಬಹುದು' ಎಂದು ಪೊಲೀಸರು ಶಂಕಿಸಿದ್ದಾರೆ.

ಈ ಹತ್ಯೆಯನ್ನು ಆರ್‌ಎಸ್‌ಎಸ್ ಮಾಡಿದೆ ಎಂದು ಪಿಎಫ್‌ಐ ಆರೋಪಿಸಿದೆ. ಆದರೆ ಈ ಆರೋಪಕ್ಕೆ ಆರ್‌ಎಸ್‌ಎಸ್ ಪ್ರತಿಕ್ರಿಯೆ ನೀಡಿಲ್ಲ.

'ಅಂಬೇಡ್ಕರ್ ಸ್ಮಾರಕ 2024ಕ್ಕೆ ಪೂರ್ಣ'

ಮುಂಬೈ: ಮುಂಬೈ: ಭಾರತ ರತ್ನ, ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಭವ್ಯ ಸ್ಮಾರಕವು ಮಾರ್ಚ್ 2024ರ ಹೊತ್ತಿಗೆ ಪೂರ್ಣಗೊಳ್ಳಲಿದೆ ಎಂದು ಮುಂಬೈ ಮೆಟ್ರೊಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಎಂಎಂಆರ್‌ಡಿಎ) ತಿಳಿಸಿದೆ. ಮಾಹಿತಿ ಹಕ್ಕು ಕಾಯ್ದೆಯ ಕಾರ್ಯಕರ್ತ ಅನಿಲ್ ಗಲಗಲಿ ಎಂಬುವವರು ಅಂಬೇಡ್ಕರ್ ಸ್ಮಾರಕದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿ ಎಂಎಂಆರ್‌ಡಿಎಗೆ ಆರ್‌ಟಿಐಗೆ ಅರ್ಜಿ ಸಲ್ಲಿಸಿದ್ದರು.

ಹೊಸ ಎರ್ಟಿಗಾ ಬೆಲೆ ₹ 8.35 ಲಕ್ಷದಿಂದ ಆರಂಭ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ದೇಶದ ಮಾರುಕಟ್ಟೆಗೆ ಶುಕ್ರವಾರ ಹೊಸ ಎರ್ಟಿಗಾ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 8.35 ಲಕ್ಷದಿಂದ ₹ 12.79 ಲಕ್ಷದವರೆಗೆ ಇದೆ.

ಈ ಮಾದರಿಯು 1.5 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದ್ದು, ಮ್ಯಾನುಯಲ್ ಮತ್ತು ಆಟೊಮೆಟಿಕ್ ಟ್ರಾನ್ಸ್‌ಮಿಷನ್ ಆಯ್ಕೆ ಒಳಗೊಂಡಿದೆ.

ಪೆಟ್ರೋಲ್ ಮತ್ತು ಸಿಎನ್‌ಜಿ ಆಯ್ಕೆಗಳಲ್ಲಿ ಇದು ಲಭ್ಯವಿದ್ದು, ಪ್ರತಿ ಲೀಟರ್ ಪೆಟ್ರೋಲ್‌ಗೆ 20.51 ಕಿಲೋ ಮೀಟರ್ ಮತ್ತು ಪ್ರತಿ ಕೆ.ಜಿ. ಸಿಎನ್‌ಜಿಗೆ 26.11 ಕಿಲೋ ಮೀಟರ್ ಮೈಲೇಜ್ ನೀಡಲಿದೆ ಎಂದು ಕಂಪನಿ ಹೇಳಿದೆ.

ಪೆಡಲರ್ ಶಿಫ್ಟರ್‌ನೊಂದಿಗೆ ಸುಧಾರಿತ 6 ಸ್ಪೀಡ್ ಆಟೊಮೆಟಿಕ್ ಟ್ರಾನ್ಸ್‌ಮಿಷನ್ ಹೊಂದಿದೆ.

₹ 1,370 ಕೋಟಿ ಬಂಡವಾಳ ಸಂಗ್ರಹಿಸಿದ ರ್‍ಯಾಪಿಡೊ



ನವದೆಹಲಿ (ಪಿಟಿಐ): ಬೈಕ್ ಟ್ಯಾಕ್ಸಿ ಸೇವೆ ಒದಗಿಸುವ ರ್‍ಯಾಪಿಡೊ ಕಂಪನಿಯು 'ಸಿರೀಸ್ ಡಿ' ಸುತ್ತಿನಲ್ಲಿ ಹೂಡಿಕೆದಾರರಿಂದ ಒಟ್ಟಾರೆ ₹ 1,370 ಕೋಟಿ ಬಂಡವಾಳ ಸಂಗ್ರಹ ಮಾಡಿರುವುದಾಗಿ ಶುಕ್ರವಾರ ತಿಳಿಸಿದೆ.

ಆಹಾರ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಕಂಪನಿಯು ಹೂಡಿಕೆದಾರರ ಸಾಲಿಗೆ ಹೊಸದಾಗಿ ಸೇರಿಕೊಂಡಿದೆ. ಟಿವಿಎಸ್ ಮೋಟರ್ ಕಂಪನಿ ಸೇರಿದಂತೆ ಹಾಲಿ ಹೂಡಿಕೆದಾರರಾದ ವೆಸ್ಟ್‌ಬ್ರಿಡ್ಜ್, ಶೆಲ್ ವೆಂಚರ್ಸ್ ಮತ್ತು ನೆಕ್ಸಸ್ ವೆಂಚರ್ಸ್ ಕಂಪನಿಗಳು ಸಹ ಹೂಡಿಕೆ ಮಾಡಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ತಂತ್ರಜ್ಞಾನ ಅಳವಡಿಕೆ, ತಂಡವನ್ನು ಬಲಪಡಿಸುವುದು ಹಾಗೂ ಮೆಟ್ರೊ ಒಳಗೊಂಡು ಒಂದು, ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಲ್ಲಿ ಪೂರೈಕೆಯನ್ನು ಹೆಚ್ಚಿಸಲು ಈ ಬಂಡವಾಳವನ್ನು ಬಳಸಿಕೊಳ್ಳುವುದಾಗಿ ರ್‍ಯಾಪಿಡೊ ಹೇಳಿದೆ.

'ವಾಟ್ಸ್‌ಆ್ಯಪ್: 2 ಜಿ.ಬಿ. ವರೆಗಿನ ಕಡತ ಹಂಚಿಕೊಳ್ಳಿ'

ನವದೆಹಲಿ (ಪಿಟಿಐ): ಗ್ರೂಪ್ ಕರೆ ಸೌಲಭ್ಯದ ಮೂಲಕ ಒಂದೇ ಬಾರಿಗೆ 32 ಜನರಿಗೆ ಕರೆ ಮಾಡುವ ಅವಕಾಶವನ್ನು, ಒಂದೇ ಬಾರಿಗೆ 2 ಜಿ.ಬಿ.ವರೆಗಿನ ಕಡತವನ್ನು ಹಂಚಿಕೊಳ್ಳುವ ಅವಕಾಶವನ್ನು ಬಳಕೆದಾರರಿಗೆ ನೀಡುವುದಾಗಿ ವಾಟ್ಸ್‌ಆ್ಯಪ್ ಹೇಳಿದೆ.

ಈಗಿನ ನಿಯಮಗಳ ಪ್ರಕಾರ ವಾಟ್ಸ್‌ಆ್ಯಪ್ ಗ್ರೂಪ್ ಕರೆಗಳ ಸಂದರ್ಭದಲ್ಲಿ ಒಂದು ಬಾರಿಗೆ ಎಂಟು ಜನರಿಗೆ ಮಾತ್ರ ಕರೆ ಮಾಡಬಹುದು. ವಾಟ್ಸ್‌ಆ್ಯಪ್ ಮೂಲಕ ಹಂಚಿಕೊಳ್ಳುವ ಕಡತಗಳ ಗಾತ್ರವು 1 ಜಿ.ಬಿ.ಗಿಂತ ಹೆಚ್ಚಿರುವಂತೆ ಇಲ್ಲ.

ಚ್ಯಾಟ್ ಗ್ರೂಪ್‌ನ ಅಡ್ಮಿನ್‌ಗೆ ಸಂದೇಶವನ್ನು ಯಾವುದೇ ಸಂದರ್ಭದಲ್ಲಿ ಡಿಲೀಟ್ ಮಾಡುವ ಅಧಿಕಾರ ಸಿಗಲಿದೆ. ಡಿಲೀಟ್ ಮಾಡಿದ ಸಂದೇಶವು ಗ್ರೂಪ್‌ನ ಯಾವ ಸದಸ್ಯರಿಗೂ ನೋಡಲು ಸಿಗುವುದಿಲ್ಲ ಎಂದು ಕಂಪನಿಯ ವಕ್ತಾರರು ಹೇಳಿದ್ದಾರೆ.

ಕಂಪನಿಯ ನಿಯಂತ್ರಣವು ವಿಕೇಂದ್ರಿತ ಆಗಬೇಕು: ಫ್ರೆಡ್ ವಿಲ್ಸನ್

ಟ್ವಿಟರ್ ಖರೀದಿ: ಪರಿಣತರ ಆತಂಕ

ವಾಷಿಂಗ್ಟನ್ (ಎಎಫ್‌ಪಿ): ಟ್ವಿಟರ್ ಕಂಪನಿಯನ್ನು ಖರೀದಿಸಿ, ಅದನ್ನು ಖಾಸಗಿ ಕಂಪನಿಯನ್ನಾಗಿ ಪರಿವರ್ತಿಸುವ ಎಲಾನ್ ಮಸ್ಕ್ ಪ್ರಸ್ತಾವದ ಬಗ್ಗೆ ತಂತ್ರಜ್ಞಾನ ಜಗತ್ತಿನ ಪರಿಣತರು ಆತಂಕ ವ್ಯಕ್ತಪಡಿಸಿದ್ದಾರೆ.

'ಟ್ವಿಟರ್ ಕಂಪನಿಯನ್ನು ಒಬ್ಬ ವ್ಯಕ್ತಿ ನಿಯಂತ್ರಿಸುವಂತೆ ಆಗಬಾರದು. ಅದರ ಬದಲಿಗೆ, ಅದರ ನಿಯಂತ್ರಣವು ವಿಕೇಂದ್ರಿತ ಆಗಬೇಕು' ಎಂದು ವೆಂಚರ್ ಕ್ಯಾಪಿಟಲಿಸ್ಟ್ ಆಗಿರುವ ಫ್ರೆಡ್ ವಿಲ್ಸನ್ ಹೇಳಿದ್ದಾರೆ.

ಟ್ವಿಟರ್ ಅನುಸರಿಸುವ ನಿಯಮಗಳು (ಅಲ್ಗಾರಿದಂ) ಯಾವುವು ಎಂಬುದನ್ನು ಸಾರ್ವಜನಿಕರಿಗೆ ಪರಿಶೀಲನೆಗೆ ಮುಕ್ತವಾಗಿಸಲಾಗುತ್ತದೆ ಎಂದು ಮಸ್ಕ್ ಹೇಳಿದ್ದಾರೆ. ಆ ನಿಯಮಗಳಲ್ಲಿ ಬದಲಾವಣೆಗಳನ್ನು ಸೂಚಿಸಲು ಕೂಡ ಸಾರ್ವಜನಿಕರಿಗೆ ಅವಕಾಶ ಇರುತ್ತದೆ ಎಂದು ಅವರು ಹೇಳಿದ್ದಾರೆ.

ಟ್ವಿಟರ್ ವೇದಿಕೆಯಲ್ಲಿನ ವಸ್ತು-ವಿಷಯಗಳನ್ನು ಹೆಚ್ಚು ನಿಯಂತ್ರಣ ಮುಕ್ತವಾಗಿಸುವುದು ತಮ್ಮ ನಿಲುವು ಎಂಬುದನ್ನು ಮಸ್ಕ್ ಮತ್ತೊಮ್ಮೆ ಹೇಳಿದ್ದಾರೆ. ಮಸ್ಕ್ ಅವರು ತಮ್ಮನ್ನು ತಾವು 'ಪರಿಪೂರ್ಣ ಹಾಗೂ ಮುಕ್ತವಾದ ಅಭಿವ್ಯಕ್ತಿ ಸ್ವಾತಂತ್ರ್ಯ'ದ ಪರ ಇರುವವರು ಎಂದು ಗುರುತಿಸಿಕೊಂಡಿದ್ದಾರೆ.

'ಟ್ವಿಟರ್ ಕಂಪನಿಯನ್ನು ಮಸ್ಕ್ ಅವರು ಸ್ವಾಧೀನಕ್ಕೆ ತೆಗೆದುಕೊಂಡರೆ ಸಮಾಜ ಮತ್ತು ರಾಜಕೀಯದ ಮೇಲೆ ಆಗಬಹುದಾದ ಪರಿಣಾಮಗಳು ಭಯ ಹುಟ್ಟಿಸುತ್ತಿವೆ. ಸಾಮಾಜಿಕ ಜಾಲತಾಣಗಳ ಮೂಲಕ ಏನನ್ನೂ ಬೇಕಿದ್ದರೂ ಹೇಳಬಹುದು ಎಂದು ಅವರು ನಂಬಿರುವಂತಿದೆ. ಆದರೆ, ಪ್ರಜಾತಂತ್ರ ಉಳಿಯಬೇಕು ಎಂದಾದರೆ ವಸ್ತು-ವಿಷಯಗಳ ಮೇಲೆ ಹೆಚ್ಚು ನಿಗಾ ಇರಿಸಬೇಕು' ಎಂದು ವಾಷಿಂಗ್ಟನ್ ಪೋಸ್ಟ್‌ನ ಅಂಕಣಕಾರ ಮ್ಯಾಕ್ಸ್ ಬೂಟ್ ಹೇಳಿದ್ದಾರೆ.

ಯಾರೂ ಒತ್ತೆಯಾಳು ಮಾಡಿಕೊಂಡಿಲ್ಲ (ರಾಯಿಟರ್ಸ್ ವರದಿ): ಟ್ವಿಟರ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪರಾಗ್ ಅಗರ್ವಾಲ್ ಅವರು ನೌಕರರಿಗೆ, 'ಕಂಪನಿಯನ್ನು ಯಾರೂ ಒತ್ತೆಯಾಳು ಮಾಡಿಕೊಂಡಿಲ್ಲ' ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

'ಕಂಪನಿಯ ನೌಕರರಾಗಿ ಇಲ್ಲಿ ಏನಾಗುತ್ತದೆ ಎಂಬುದು ನಮ್ಮ ನಿಯಂತ್ರಣದಲ್ಲಿರುತ್ತದೆ' ಎಂದೂ ಅಗರ್ವಾಲ್ ಹೇಳಿದ್ದಾರೆ. ಕಂಪನಿಯನ್ನು ಖರೀದಿಸುವುದಾಗಿ ಮಸ್ಕ್ ಹೇಳಿದ ನಂತರದಲ್ಲಿ ಈ ಬೆಳವಣಿಗೆ ನಡೆದಿದೆ.

ಮಸ್ಕ್ ಅವರಿಗೆ ಕಂಪನಿಯ ಆಡಳಿತ ಮಂಡಳಿಯಲ್ಲಿ ಸ್ಥಾನ ನೀಡುವ ತೀರ್ಮಾನವನ್ನು ಕಂಪನಿ ತೆಗೆದುಕೊಂಡಿದ್ದು ಹೇಗೆ, ಶತಕೋಟ್ಯಾಧೀಶರನ್ನೆಲ್ಲ ಆಡಳಿತ ಮಂಡಳಿಗೆ ಆಹ್ವಾನಿಸಲಾಗುತ್ತದೆಯೇ ಎಂಬ ಪ್ರಶ್ನೆಗಳು ಕೂಡ ಅಗರ್ವಾಲ್ ಅವರಿಗೆ ನೌಕರರ ಕಡೆಯಿಂದ ಎದುರಾದವು ಎಂದು ಗೊತ್ತಾಗಿದೆ.

ಈ ಪ್ರಶ್ನೆಗಳಿಗೆ ಅಗರ್ವಾಲ್ ಅವರು, ಷೇರುದಾರರ ಹಿತ ಕಾಯುವ ಇರಾದೆಯೊಂದಿಗೆ ಆಡಳಿತ ಮಂಡಳಿ ಕಾರ್ಯ ನಿರ್ವಹಿಸುತ್ತಿದೆ ಎಂದು ಉತ್ತರಿಸಿದ್ದಾರೆ.

ಷೇರುದಾರ ಅಲ್ವಲೀದ್ ವಿರೋಧ

ಬೆಂಗಳೂರು: ಎಲಾನ್ ಮಸ್ಕ್ ಅವರು ಟ್ವಿಟರ್ ಕಂಪನಿಯನ್ನು ₹ 3.12 ಲಕ್ಷ ಕೋಟಿಗೆ ಖರೀದಿಸುವ ಪ್ರಸ್ತಾವ ಇರಿಸಿದ್ದಾರೆ. ಆದರೆ, 'ಅವರು ನಿಗದಿ ಮಾಡಿರುವ ಮೊತ್ತವು ಟ್ವಿಟರ್ ಕಂಪನಿಯ ಮೌಲ್ಯಕ್ಕೆ ಹತ್ತಿರ ಬರುವುದಿಲ್ಲ ಎಂಬುದು ನನ್ನ ನಂಬಿಕೆ' ಎಂದು ಸೌದಿ ಅರೇಬಿಯಾದ ರಾಜಕುಮಾರ ಅಲ್ವಲೀದ್ ತಲಾಲ್ ಟ್ವೀಟ್ ಮಾಡಿದ್ದಾರೆ.

'ಟ್ವಿಟರ್‌ನ ಅತಿದೊಡ್ಡ ಹಾಗೂ ದೀರ್ಘಾವಧಿಯ ಷೇರುದಾರರಲ್ಲಿ ಒಬ್ಬನಾಗಿರುವ ನಾನು ಈ ಪ್ರಸ್ತಾವವನ್ನು ತಿರಸ್ಕರಿಸುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ.

ಹೂಡಿಕೆ ಸಂಸ್ಥೆಯಾಗಿರುವ ಕಿಂಗ್ಡಮ್ ಹೋಲ್ಡಿಂಗ್ ಕಂಪನಿ ಮತ್ತು ತಾವು ಒಟ್ಟಾಗಿ ಟ್ವಿಟರ್‌ನಲ್ಲಿ ಶೇ 5.2ರಷ್ಟು ಷೇರು ಹೊಂದಿರುವುದನ್ನು ವಿವರಿಸುವ ಹಳೆಯ ಟ್ವೀಟ್ ಒಂದನ್ನು ಕೂಡ ಅವರು ಹಂಚಿಕೊಂಡಿದ್ದಾರೆ.

ಸೆನ್ಕೊ ಗೋಲ್ಡ್ ಐಪಿಒ: ಸೆಬಿಗೆ ಕರಡು ದಾಖಲೆಪತ್ರ

ನವದೆಹಲಿ (ಪಿಟಿಐ): ಸೆನ್ಕೊ ಗೋಲ್ಡ್ ಕಂಪನಿಯು ₹ 525 ಕೋಟಿ ಮೊತ್ತದ ಐಪಿಒಗಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿದೆ.

ಈ ಐಪಿಒದಲ್ಲಿ, ₹ 325 ಕೋಟಿ ಮೊತ್ತದ ಹೊಸ ಷೇರುಗಳು ಹಾಗೂ ₹ 200 ಕೋಟಿ ಮೊತ್ತದ ಒಎಫ್‌ಎಸ್ ಒಳಗೊಂಡಿದೆ.

ಹೊಸ ಷೇರುಗಳನ್ನು ಮಾರಾಟ ಮಾಡುವುದರಿಂದ ಬರುವ ಮೊತ್ತದಲ್ಲಿ ₹ 240 ಕೋಟಿಯನ್ನು ದುಡಿಯುವ ಬಂಡವಾಳದ ಅಗತ್ಯಗಳಿಗೆ ಬಳಸಿಕೊಳ್ಳಲು ಕಂಪನಿ ಉದ್ದೇಶಿಸಿದೆ. ಇನ್ನುಳಿದ ಮೊತ್ತವನ್ನು ಇತರೆ ಕಾರ್ಪೊರೇಟ್ ಉದ್ದೇಶಗಳಿಗೆ ವಿನಿಯೋಗಿಸಲಿದೆ.

ಸಂಕ್ಷಿಪ್ತ ಸುದ್ದಿ

ಈಜಿಪ್ಟ್‌ಗೆ ಭಾರತದಿಂದ ಗೋಧಿ

ನವದೆಹಲಿ (ಪಿಟಿಐ): ಭಾರತದಿಂದ ಗೋಧಿ ಆಮದು ಮಾಡಿಕೊಳ್ಳಲು ಈಜಿಪ್ಟ್ ಒಪ್ಪಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧದ ಕಾರಣದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಗೋಧಿಯ ಲಭ್ಯತೆ ಕಡಿಮೆಯಾಗಿದೆ. ಉಕ್ರೇನ್ ಮತ್ತು ರಷ್ಯಾ ಗೋಧಿಯನ್ನು ಭಾರಿ ಪ್ರಮಾಣದಲ್ಲಿ ರಫ್ತು ಮಾಡುತ್ತವೆ.

ಈಜಿಪ್ಟ್ ದೇಶವು ಭಾರತದಿಂದ 10 ಲಕ್ಷ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳಲಿದೆ. ಏಪ್ರಿಲ್‌ನಲ್ಲಿಯೇ 2.40 ಲಕ್ಷ ಟನ್ ಗೋಧಿ ಖರೀದಿಸಲಿದೆ.

ಬಾಂಡ್ ಮಾರಾಟ: ₹ 5.88 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳು ಕಾರ್ಪೊರೇಟ್ ಬಾಂಡ್ ಮಾರಾಟ ಮಾಡುವ ಮೂಲಕ 2021–22ನೇ ಹಣಕಾಸು ವರ್ಷದಲ್ಲಿ ₹ 5.88 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ.

2015–16ನೇ ಹಣಕಾಸು ವರ್ಷದ ಬಳಿಕ ಸಂಗ್ರಹ ಆಗಿರುವ ಅತ್ಯಂತ ಕನಿಷ್ಠ ಮೊತ್ತ ಇದಾಗಿದೆ. ಆ ಅವಧಿಯಲ್ಲಿ ₹ 4.58 ಲಕ್ಷ ಕೋಟಿ ಸಂಗ್ರಹ ಆಗಿತ್ತು. 2020–21ನೇ ಹಣಕಾಸು ವರ್ಷದಲ್ಲಿ ₹ 7.72 ಲಕ್ಷ ಕೋಟಿ ಬಂಡವಾಳ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ 2021–22ರಲ್ಲಿ ಶೇಕಡ 24ರಷ್ಟು ಕಡಿಮೆ ಸಂಗ್ರಹ ಆದಂತಾಗಿದೆ.

ಏರ್ ಇಂಡಿಯಾದಲ್ಲಿ ಬದಲಾವಣೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ಹಿರಿಯ ಅಧಿಕಾರಿಗಳ ಹುದ್ದೆಯಲ್ಲಿ ಬದಲಾವಣೆ ತರಲಾಗಿದೆ. ನಿಪುನ್ ಅಗರ್ವಾಲ್ ಅವರನ್ನು ಮುಖ್ಯ ವಾಣಿಜ್ಯ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಸುರೇಶ್ ದತ್ ತ್ರಿಪಾಠಿ ಅವರನ್ನು ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಏರ್ ಇಂಡಿಯಾದ ಮಾಲೀಕತ್ವ ಹೊಂದಿರುವ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು ಈ ನೇಮಕಗಳ ಸಂಬಂಧ ಆದೇಶ ಹೊರಡಿಸಿದ್ದಾರೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1600)
ಸೋಯಾ (ರಿಫೈನ್ಡ್)	₹1510 (1537)
ಸೂರ್ಯಕಾಂತಿ (ರಿಫೈನ್ಡ್)	₹1740 (1740)
ಪಾಮೋಲಿನ್	₹1495 (1492)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹455
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹457

ಮುಂಬೈ ಧಾರಣೆ

ಶೇಂಗಾ

15-4-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1610)
ಒಂದು ವಾರದ ಡೆಲಿವರಿ	1625 (1605)
ಸೋಯಾ ಕಚ್ಚಾ	1515 (1500)
ಪಾಮ್ ವಾರದ ಡೆಲಿವರಿ	1493 (1490)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,850 (52,850)
ಬೆಳ್ಳಿ ಕೆ.ಜಿ 69,450 (69,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚೀನಾಗೆ ರಕ್ಷಣಾ ಸಚಿವ ರಾಜನಾಥ್ ಸ್ಪಷ್ಟ ಎಚ್ಚರಿಕೆ

'ಅಪಾಯ ಒಡ್ಡಿದರೆ ಭಾರತ ಯಾರನ್ನೂ ಬಿಡುವುದಿಲ್ಲ'

ವಾಷಿಂಗ್ಟನ್ (ಪಿಟಿಐ): 'ಭಾರತವು ಈಗ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿದೆ. ತನಗೆ ಅಪಾಯ ಒಡ್ಡಿದರೆ ಯಾರನ್ನೂ ಸುಮ್ಮನೆ ಬಿಡುವುದಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಲ್ಲಿ ಕಟುವಾಗಿ ಹೇಳಿದ್ದು, ಈ ಮೂಲಕ ನೆರೆ ರಾಷ್ಟ್ರ ಚೀನಾಗೆ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ.

'ಭಾರತದ ಸೇನೆ ಏನು ಮಾಡಿತು, ಭಾರತ ಸರ್ಕಾರ ಯಾವ ನಿರ್ಧಾರ ಕೈಗೊಂಡಿತ್ತು ಎಂಬುದನ್ನು ನಾನು ಇಲ್ಲಿ ಬಹಿರಂಗವಾಗಿ ಹೇಳಲು ಬಯಸುವುದಿಲ್ಲ. ಆದರೆ, ಭಾರತಕ್ಕೆ ಅಪಾಯ ಒಡ್ಡಿದರೆ, ಯಾರನ್ನೂ ಬಿಡುವುದಿಲ್ಲ ಎಂಬ ಸಂದೇಶವಂತೂ ಸ್ಪಷ್ಟವಾಗಿ ಚೀನಾಗೆ ತಲುಪಿದೆ' ಎಂದರು.

ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಶುಕ್ರವಾರ ಭಾರತ–ಅಮೆರಿಕನ್ನರ ಸಮುದಾಯವನ್ನು ಉದ್ದೇಶಿಸಿ ಅವರು ಮಾತನಾಡಿದರು. ಭಾರತ ಮತ್ತು ಅಮೆರಿಕ ನಡುವಣ 2+2 ಸಚಿವರ ಹಂತದ ಮಾತುಕತೆಗಾಗಿ ರಾಜನಾಥ್ ಸಿಂಗ್ ಇಲ್ಲಿಗೆ ಆಗಮಿಸಿದ್ದಾರೆ.

'ಪ್ರಧಾನಿ ಮೋದಿ ನೇತೃತ್ವದಲ್ಲಿ ಭಾರತ, ಆರ್ಥಿಕತೆಯಲ್ಲಿ ವಿಶ್ವದಲ್ಲಿಯೇ ಉನ್ನತ ಮೂರು ರಾಷ್ಟ್ರಗಳಲ್ಲಿ ಒಂದಾಗುವ ಹಾದಿಯಲ್ಲಿದೆ. ಶೂನ್ಯ ಲೆಕ್ಕಾಚಾರ'ದ ರಾಜತಾಂತ್ರಿಕ ವ್ಯವಹಾರದಲ್ಲಿ ಭಾರತಕ್ಕೆ ನಂಬಿಕೆ ಇಲ್ಲ. ಒಂದು ರಾಷ್ಟ್ರದ ಬಾಂಧವ್ಯವನ್ನು ಬಲಿಕೊಟ್ಟು, ಇನ್ನೊಂದು ರಾಷ್ಟ್ರದ ಜೊತೆಗೆ ಬಾಂಧವ್ಯ ಹೊಂದಲೂ ಬಯಸುವುದಿಲ್ಲ' ಎಂದೂ ಇದೇ ಸಂದರ್ಭದಲ್ಲಿ ಅಮೆರಿಕಕ್ಕೂ ಪರೋಕ್ಷವಾಗಿ ಸಂದೇಶ ರವಾನಿಸಿದರು.

ಉಕ್ರೇನ್–ರಷ್ಯಾ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾ ಕುರಿತಂತೆ ಅಮೆರಿಕವು ದೇಶದ ಮೇಲೆ ಒತ್ತಡ ಹೇರುತ್ತಿರುವುದನ್ನು ನೇರವಾಗಿ ಉಲ್ಲೇಖ ಮಾಡದ ಅವರು, 'ಭಾರತಕ್ಕೆ ಶೂನ್ಯ ಲೆಕ್ಕಾಚಾರದ ರಾಜ ತಾಂತ್ರಿಕತೆಯಲ್ಲಿ ನಂಬಿಕೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಒಂದು ದೇಶದೊಂದಿಗೆ ಭಾರತ ಉತ್ತಮವಾದ ಬಾಂಧವ್ಯವನ್ನು ಹೊಂದಿದೆ ಎಂಬುದರ ಅರ್ಥ, ಇನ್ನೊಂದು ದೇಶದ ಜೊತೆಗಿನ ಬಾಂಧವ್ಯ ಕಳೆದುಕೊಳ್ಳಲು ಸಿದ್ಧವಿದೆ ಎಂಬುದಲ್ಲ. ಇಂತಹ ರಾಜತಾಂತ್ರಿಕತೆಯನ್ನು ಭಾರತ ಎಂದಿಗೂ ಪಾಲಿಸಿಲ್ಲ' ಎಂದು ನಿಲುವು ಖಚಿತಪಡಿಸಿದರು.

'ಉಭಯ ದೇಶಗಳಿಗೂ ಪರಸ್ಪರ ಲಾಭವಾಗುವಂತೆ ದ್ವಿಪಕ್ಷೀಯ ಬಾಂಧವ್ಯವನ್ನು ಹೊಂದುವುದನ್ನು ಭಾರತ ಬಯಸುತ್ತದೆ. ಈಗ ವಿಶ್ವ ಮಟ್ಟದಲ್ಲಿ ಭಾರತದ ವರ್ಚಸ್ಸು ಬದಲಾಗಿದೆ. ಪ್ರತಿಷ್ಠೆಯೂ ಎತ್ತರಕ್ಕೇರಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ಆರ್ಥಿಕತೆಯಲ್ಲಿ ಭಾರತವು ವಿಶ್ವದ ಮೊದಲ ಮೂರು ರಾಷ್ಟ್ರಗಳಲ್ಲಿ ಒಂದಾಗುವುದನ್ನು ಜಗತ್ತಿನ ಯಾವುದೇ ಶಕ್ತಿಯೂ ತಡೆಯಲಾಗದು' ಎಂದು ಹೇಳಿದರು.

'ಜಗತ್ತಿನ ಯಾವುದೇ ದೇಶವು ಅಭ್ಯುದಯ ಸಾಧಿಸಲು ಬಯಸಿದಲ್ಲಿ, ಖಂಡಿತವಾಗಿಯೂ ಅದು ಭಾರತದ ಜೊತೆಗೆ ಉಜ್ವಲವಾದ ವಾಣಿಜ್ಯ ವಹಿವಾಟು ಹೊಂದರಲು ಬಯಸುತ್ತದೆ' ಎಂದು ರಾಜನಾಥ್ ಸಿಂಗ್ ಪ್ರತಿಪಾದಿಸಿದರು.

ಭಾರತ–ಚೀನಾ ಗಡಿಯಲ್ಲಿ ಲಡಾಖ್ ಬಳಿ ಮೇ 5, 2020ರ ಘರ್ಷಣೆ ಬಳಿಕ ಭಾರತ–ಚೀನಾ ನಡುವಿನ ಬಾಂಧವ್ಯಕ್ಕೆ ಧಕ್ಕೆಯಾಗಿದೆ. ಜೂನ್ 15, 2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ನಡೆದಿದ್ದ ಘರ್ಷಣೆಯಲ್ಲಿ 20 ಭಾರತೀಯ ಯೋಧರು ಮೃತಪಟ್ಟಿದ್ದರು. ಬಾಂಧವ್ಯ ಸುಧಾರಣೆ ಕ್ರಮವಾಗಿ ಉಭಯ ದೇಶಗಳ ನಡುವೆ ಸೇನಾ ಹಂತದಲ್ಲಿಯೇ ಸುಮಾರು 15 ಸುತ್ತಿನ ಮಾತುಕತೆ ನಡೆದಿದೆ.

ಮತ್ತಷ್ಟು ಹದಗೆಟ್ಟ ಆರ್ಥಿಕ ಸ್ಥಿತಿ, ಬಂಕ್‌ಗಳಲ್ಲಿ ಸಾಲು

ಶ್ರೀಲಂಕಾ: ಪಡಿತರದಲ್ಲಿ ಇಂಧನ ವಿತರಣೆ ಆರಂಭ



ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ವಿರೋಧಿಸಿ ಕೊಲಂಬೊದಲ್ಲಿ ಅಧ್ಯಕ್ಷರ ಕಚೇರಿಯ ಹೊರಗೆ ಜನರು ಸರ್ಕಾರಿ ವಿರೋಧಿ ಫಲಕಗಳನ್ನು ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ಕೊಲಂಬೊ (ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟಿರುವ ಶ್ರೀಲಂಕಾದಲ್ಲಿ ಶುಕ್ರವಾರದಿಂದ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಪಡಿತರದಲ್ಲಿ ನೀಡಲು ಆರಂಭಿಸಲಾಗಿದೆ.

ದ್ವಿಚಕ್ರ ವಾಹನಗಳಿಗೆ ಗರಿಷ್ಠ 4 ಲೀಟರ್, ಮೂರು ಚಕ್ರದ ವಾಹನಗಳಿಗೆ 5 ಲೀಟರ್ ಇಂಧನ ಮಿತಿಗೊಳಿಸಲಾಗಿದೆ. ಖಾಸಗಿ ಕಾರುಗಳು, ವ್ಯಾನ್‌ಗಳು ಮತ್ತು ಎಸ್‌ಯುವಿಗಳಿಗೆ ಗರಿಷ್ಠ 19.5 ಲೀಟರ್ ಪೆಟ್ರೋಲ್ ಅಥವಾ ಡೀಸೆಲ್ ನಿಗದಿಪಡಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಎಂದು ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ (ಸಿಪಿಸಿ) ತಿಳಿಸಿದೆ.

ಕ್ಯಾನ್‌ಗಳಲ್ಲಿ ಇಂಧನ ತುಂಬಿಸಿಕೊಳ್ಳುವುದಕ್ಕೆ ನಿಷೇಧ ಹೇರಲಾಗಿದೆ.

ಬಹುತೇಕ ಬಂಕ್‌ಗಳಲ್ಲಿ ಈಗಾಗಲೇ ಪೆಟ್ರೋಲ್ ಖಾಲಿಯಾಗಿದೆ. ಇಂಧನ ಇರುವ ಕೆಲವು ಬಂಕ್‌ಗಳು ತೆರೆದಿದ್ದು, ಅಲ್ಲಿ ಉದ್ದನೆಯ ಸರತಿ ಸಾಲು ಕಂಡು ಬರುತ್ತಿದೆ. ಒಂದು ತಿಂಗಳಿನಿಂದ ಈ ದೃಶ್ಯ ಸಾಮಾನ್ಯವಾಗಿದ್ದು, ಸರತಿ ಸಾಲಿನಲ್ಲೇ ನಿಂತು ಬಸವಳಿದು 8 ಮಂದಿ ಮೃತಪಟ್ಟಿದ್ದಾರೆ. ಲಂಕಾ ಐಒಸಿ ಸಹ ಇದೇ ಕ್ರಮ ಅನುಸರಿಸಬೇಕು ಎಂದು ಇಂಧನ ಸಚಿವಾಲಯ ತಿಳಿಸಿದ್ದು, ಐಒಸಿಯಿಂದ ಇದರ ಬಗ್ಗೆ ಸದ್ಯ ಯಾವುದೇ ಹೇಳಿಕೆ ಹೊರಬಿದ್ದಿಲ್ಲ.

ನವಾಜ್‌ಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ನಕಾರ

ಇಸ್ಲಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್‌ಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ನೀಡಬಾರದು. ನವಾಜ್ ಲಂಡನ್‌ನಿಂದ ಮರಳಿದ ಕೂಡಲೇ ಅವರನ್ನು ಬಂಧಿಸಬೇಕು ಎಂದು ಇಸ್ಲಾಮಾಬಾದ್ ಹೈಕೋರ್ಟ್ ಪಾಕ್ ಪ್ರಧಾನಿ ಶೆಹಬಾಝ್ ಷರೀಫ್ ಅವರಿಗೆ ಸೂಚನೆ ನೀಡಿದೆ.

ನವಾಜ್ ಸಹೋದರ ಶೆಹಬಾಝ್ ಪಾಕ್ ಪ್ರಧಾನಿಯಾದ ಬೆನ್ನಲ್ಲೇ, ನವಾಜ್ ಅವರಿಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ನೀಡಲು ಸಿದ್ಧತೆ ನಡೆಯುತ್ತಿವೆ ಎಂದು ಡಾನ್ ಪತ್ರಿಕೆ ವರದಿ ಮಾಡಿತ್ತು. ಈ ವರದಿಯನ್ನು ಆಧರಿಸಿ ನಯೀಮ್ ಹೈದರ್ ಪಂಜುತಾ ಎಂಬ ವಕೀಲರು, ನವಾಜ್ ಷರೀಫ್ ಅವರು ಘೋಷಿತ ಅಪರಾಧಿಯಾಗಿದ್ದು ಅವರಿಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ನೀಡಬಾರದು. ಅವರನ್ನು ಬಂಧಿಸಬೇಕು ಎಂದು ಕೋರಿದ್ದರು.

ಪನಾಮ ಪೇಪರ್ಸ್ ಪ್ರಕರಣ ಸೇರಿದಂತೆ ಇನ್ನೂ ಹಲವು ಪ್ರಕರಣಗಳಲ್ಲಿ ನವಾಜ್ ವಿಚಾರಣೆ ಎದುರಿಸಿದ್ದರು. ನಂತರ ಅವರು ಅಪರಾಧಿಯಾಗಿ ಸಾಬೀತಾಗಿದ್ದರಿಂದ ಜೈಲಿಗೂ ಹೋಗಿದ್ದರು. ಆದರೆ ಈಗ ನವಾಜ್ ಅನಾರೋಗ್ಯದ ಕಾರಣದಿಂದ ಚಿಕಿತ್ಸೆಗೆಂದು ಲಂಡನ್‌ಗೆ ತೆರಳಿದ್ದಾರೆ.

ಮತ್ತಷ್ಟು ಉಡುಗೊರೆ ಮಾರಾಟ ಮಾಡಿದ ಇಮ್ರಾನ್: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ 14 ಕೋಟಿ ರೂಪಾಯಿ ಮೌಲ್ಯದ ವಜ್ರದ ಆಭರಣಗಳು, ಬ್ರೇಸ್‌ಲೆಟ್‌ಗಳು, ವಾಚ್‌ಗಳು ಹಾಗೂ ಇತರ ಬೆಲೆಬಾಳುವ ಉಡುಗೊರೆಗಳನ್ನು 'ಉಡುಗೊರೆ ಭಂಡಾರ'ದಲ್ಲಿ ಇರಿಸುವ ಬದಲಿಗೆ ದುಬೈನಲ್ಲಿ ಮಾರಾಟ ಮಾಡಿದ್ದಾರೆ, ಈ ಮೂಲಕ ದೇಶದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂದು ಪಾಕ್ ಪ್ರಧಾನಿ ಶಹಬಾಝ್ ಷರೀಫ್ ಆರೋಪಿಸಿದ್ದಾರೆ.

ಇಲ್ಲಿ ಶುಕ್ರವಾರ ಪತ್ರಕರ್ತರೊಡನೆ ಮಾತನಾಡಿದ ಅವರು, 'ಯಾವುದೇ ವಿದೇಶಿ ಗಣ್ಯರಿಂದ ಪಡೆದುಕೊಂಡ ಉಡುಗೊರೆಗಳನ್ನು 'ಉಡುಗೊರೆ ಭಂಡಾರ'ದಲ್ಲಿ ಇರಿಸಬೇಕು ಎಂಬ ನಿಯಮವನ್ನು ಗಾಳಿಗೆ ತೂರಿದ್ದಾರೆ ಎಂದು 'ದಿ ನ್ಯೂಸ್ ಇಂಟರ್‌ನ್ಯಾಷನಲ್' ವರದಿ ಮಾಡಿದೆ.

ಚಂದ್ರಯಾನ ರಾಕೆಟ್‌ನಲ್ಲಿ ಇಂಧನ ಸೋರಿಕೆ

ಫ್ಲಾರಿಡಾ (ಎಪಿ): ಚಂದ್ರನಲ್ಲಿಗೆ ಮನುಷ್ಯರನ್ನು ಕರೆದೊಯ್ಯುವ ಎರಡನೇ ಪ್ರಯತ್ನಕ್ಕೆ ಪೂರ್ವಭಾವಿಯಾಗಿ ಇದೇ ಜೂನ್‌ನಲ್ಲಿ ಖಾಲಿ ರಾಕೆಟ್ ಅನ್ನು ಉಡಾಯಿಸುವ ಸಲುವಾಗಿ ರಾಕೆಟ್‌ಗೆ ಇಂಧನ ಭರ್ತಿ ಮಾಡುವ ಕೆಲಸವನ್ನು 'ನಾಸಾ' ಆರಂಭಿಸಿದ್ದು, ಇಂಧನ ಸೋರಿಕೆಯಾಗುತ್ತಿರುವುದು ಹೊಸ ತಲೆನೋವಾಗಿ ಪರಿಣಮಿಸಿದೆ.

ರಾಕೆಟ್‌ಗೆ ಇಂಧನ ತುಂಬಿಸುವ ಬಹುಮುಖ್ಯವಾದ ಹಂತದಲ್ಲಿ ಸೋರಿಕೆ ಆಗಿದೆ. 322 ಅಡಿ ಎತ್ತರದ (98 ಮೀಟರ್) ಎಸ್‌ಎಲ್‌ಎಸ್ ರಾಕೆಟ್‌ನಲ್ಲಿ ಓರಿಯನ್ ಕ್ಯಾಪ್ಸೂಲ್ ಇರಲಿದೆ. ನಾಲ್ಕರಿಂದ ಆರು ವಾರಗಳ ಪಯಣದಲ್ಲಿ ಚಂದ್ರನಲ್ಲಿಗೆ ತೆರಳಿ ಭೂಮಿಗೆ ಮರಳಲಿದೆ.

ಈ ಯೋಜನೆಯ ಫಲಶ್ರುತಿಯ ಆಧಾರದಲ್ಲಿ 2024ರಲ್ಲಿ ಗಗನಯಾನಿಗಳು ಮೊದಲಿಗೆ ಚಂದ್ರನ ಕಕ್ಷೆಗೆ ತೆರಳಲಿದ್ದು, 2025ರಲ್ಲಿ ಚಂದ್ರನ ನೆಲದ ಮೇಲೆ ಇಳಿಯುವ ಯೋಜನೆ ಸಿದ್ಧವಾಗಲಿದೆ.



ಸನ್‌ರೈಸರ್ಸ್ ಹೈದರಾಬಾದ್‌ಗೆ ಮಣಿದ ಕೋಲ್ಕತ್ತ ನೈಟ್ ರೈಡರ್ಸ್

ರಾಹುಲ್–ಏಡನ್ ಅಮೋಘ ಆಟ

ಮುಂಬೈ (ಪಿಟಿಐ): ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದ ರಾಹುಲ್ ತ್ರಿಪಾಠಿ ಮತ್ತು ಏಡನ್ ಮರ್ಕರಮ್ ಅವರ ಅಮೋಘ ಜೊತೆಯಾಟ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸನ್‌ರೈಸರ್ಸ್ 7 ವಿಕೆಟ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಜಯ ಗಳಿಸಿತು. ಈ ಮೂಲಕ ಗೆಲುವಿನ ಹ್ಯಾಟ್ರಿಕ್ ಸಾಧಿಸಿತು.

176 ರನ್‌ಗಳ ಜಯ ಗುರಿ ಬೆನ್ನತ್ತಿದ ಸನ್‌ರೈಸರ್ಸ್ 3 ರನ್ ಗಳಿಸುವಷ್ಟರಲ್ಲಿ ಮೊದಲ ವಿಕೆಟ್ ಕಳೆದುಕೊಂಡಿತು. 39 ರನ್ ಗಳಿಸಿದ್ದಾಗ ಮತ್ತೊಂದು ಆಘಾತಕ್ಕೆ ಒಳಗಾಯಿತು. ಈ ವೇಳೆ ರಾಹುಲ್ (71; 37 ಎಸೆತ, 4 ಬೌಂಡರಿ, 6 ಸಿಕ್ಸರ್) ಮತ್ತು ಏಡನ್ (68; 36 ಎ, 4 ಬೌಂ, 6 ಸಿ) ಜೊತೆಗೂಡಿ 94 ರನ್‌ಗಳನ್ನು ಸೇರಿಸಿದರು. ರಾಹುಲ್ ಔಟಾದ ನಂತರವೂ ಏಡನ್ ಆಟ ಮುಂದುವರಿಯಿತು.

ಪ್ಯಾಟ್ ಕಮಿನ್ಸ್ ಹಾಕಿದ 18ನೇ ಓವರ್‌ನ ಕೊನೆಯ ಮೂರು ಎಸೆತಗಳಲ್ಲಿ ಒಂದು ಬೌಂಡರಿ ಮತ್ತು ಸತತ ಎರಡು ಸಿಕ್ಸರ್ ಸಿಡಿಸಿ ಮರ್ಕರಮ್ ತಂಡಕ್ಕೆ ಸುಲಭ ಜಯ ತಂದುಕೊಟ್ಟರು. 13 ಎಸೆತ ಬಾಕಿ ಇರುವಾಗಲೇ ತಂಡ 3 ವಿಕೆಟ್ ಕಳೆದುಕೊಂಡು 176 ರನ್ ಗಳಿಸಿತು.

ನಟರಾಜನ್, ಜಾನ್ಸೆನ್ ಪರಿಣಾಮಕಾರಿ ದಾಳಿ: ಟಾಸ್ ಗೆದ್ದ ಸನ್‌ರೈಸರ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿಗಳಾದ ಟಿ.ನಟರಾಜನ್, ಮಾರ್ಕೊ ಜಾನ್ಸೆನ್ ಮತ್ತು ಉಮ್ರಾನ್ ಮಲಿಕ್ ದಾಳಿಗೆ ಕೋಲ್ಕತ್ತ ಆರಂಭದಲ್ಲೇ ಆಘಾತ ಅನುಭವಿಸಿತು. ಈ ಸಂದರ್ಭದಲ್ಲಿ ನಿತೀಶ್ ರಾಣಾ ಮತ್ತು ಆ್ಯಂಡ್ರೆ ರಸೆಲ್ ಆಸರೆಯಾದರು. ಹೀಗಾಗಿ ತಂಡಕ್ಕೆ 8 ವಿಕೆಟ್ ಕಳೆದುಕೊಂಡು 175 ರನ್ ಗಳಿಸಲು ಸಾಧ್ಯವಾಯಿತು.

31 ರನ್ ಗಳಿಸುವಷ್ಟರಲ್ಲಿ ಆರಂಭಿಕ ಜೋಡಿ ಆ್ಯರನ್ ಫಿಂಚ್ ಮತ್ತು ವೆಂಕಟೇಶ್ ಅಯ್ಯರ್, ನಾಲ್ಕನೇ ಕ್ರಮಾಂಕದ ಸುನಿಲ್ ನಾರಾಯಣ್ ಮರಳಿದ್ದರು. ಈ ಸಂದರ್ಭದಲ್ಲಿ ನಾಯಕ ಶ್ರೇಯಸ್ ಅಯ್ಯರ್ ಜೊತೆಗೂಡಿದ ನಿತೀಶ್ ರಾಣಾ, ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದರು. 39 ರನ್‌ಗಳ ಜೊತೆಯಾಟವಾಡಿದ ಶ್ರೇಯಸ್ ಅವರು ಉಮ್ರಾನ್ ಮಲಿಕ್ ವೇಗದ ದಾಳಿಗೆ ವಿಕೆಟ್ ಕಳೆದುಕೊಂಡರು.

ಶೆಲ್ಡನ್ ಜಾಕ್ಸನ್ ಜೊತೆಗೂಡಿ ನಿತೀಶ್ ರಾಣಾ ಬ್ಯಾಟಿಂಗ್ ವೈಭವ ಮುಂದುವರಿಸಿದರು. ಇಬ್ಬರೂ ಸೇರಿ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು. ಜಾಕ್ಸನ್ ಔಟಾದ ನಂತರ ನಿತೀಶ್ ಭರ್ಜರಿ ಆಟ ಮುಂದುವರಿಸಿದರು. 15ನೇ ಓವರ್‌ನಲ್ಲಿ ನಟರಾಜನ್ ಅವರ ಎಸೆತವನ್ನು ಸ್ಕ್ವೇರ್ ಲೆಗ್ ಕಡೆಗೆ ತಳ್ಳಿ ಒಂದು ರನ್ ಗಳಿಸಿದ ರಾಣಾ 14ನೇ ಅರ್ಧಶತಕ ಪೂರೈಸಿದರು. ನಟರಾಜನ್ ಅವರ ಮುಂದಿನ ಓವರ್‌ನ ಮೊದಲ ಎಸೆತದಲ್ಲಿ ಬೌಂಡರಿ ಗಳಿಸಿದ ರಾಣಾ ಎರಡನೇ ಎಸೆತದಲ್ಲಿ ವಿಕೆಟ್ ಕಳೆದುಕೊಂಡರು. ನಂತರ ರಸೆಲ್ ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ ರಂಜಿಸಿದರು. ಸುಚಿತ್ ಹಾಕಿದ ಇನಿಂಗ್ಸ್‌ನ ಕೊನೆಯ ಓವರ್‌ನ ಕೊನೆಯ ಮೂರು ಎಸೆತಗಳಲ್ಲಿ ಎರಡು ಸಿಕ್ಸರ್ ಮತ್ತು ಬೌಂಡರಿ ಸಿಡಿಸಿದರು.



ರಾಹುಲ್ ತ್ರಿಪಾಠಿ ಬ್ಯಾಟಿಂಗ್ ಸೊಗಸು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 8ಕ್ಕೆ 175 (20 ಓವರ್)

ಫಿಂಚ್ ಸಿ ಪೂರನ್ ಬಿ ಜಾನ್ಸೆನ್ 7 (5 ಎ, 4x1), ವೆಂಕಟೇಶ್ ಬಿ ನಟರಾಜನ್ 6 (13 ಎ, 4x1) ಶ್ರೇಯಸ್ ಬಿ ಉಮ್ರಾನ್ 28 (25 ಎ, 4x3), ಸುನಿಲ್ ಸಿ ಶಶಾಂಕ್ ಬಿ ನಟರಾಜನ್ 6 (2 ಎ, 4x1), ನಿತೀಶ್ ಸಿ ನಿಕೋಲಸ್ ಬಿ ನಟರಾಜನ್ 54 (36 ಎ, 4x6, 6x2), ಶೆಲ್ಡನ್ ಸಿ ನಟರಾಜನ್ ಬಿ ಉಮ್ರಾನ್ 7 (7 ಎ, 4x1), ರಸೆಲ್ ಔಟಾಗದೆ 49 (25 ಎ, 4x4, 6x4), ಕಮಿನ್ಸ್ ಸಿ ಜಾನ್ಸೆನ್ ಬಿ ಭುವನೇಶ್ವರ್ 3 (3 ಎ), ಅಮಾನ್ ಹಕೀಂ ಬಿ ಸುಚಿತ್ 5 (3 ಎ, 4x1), ಉಮೇಶ್ ಔಟಾಗದೆ 1 (1 ಎ)

ಇತರೆ (ಬೈ 2, ಲೆಗ್‌ಬೈ 4, ವೈಡ್ 3) 9

ವಿಕೆಟ್ ಪತನ: 1-11 (ಆ್ಯರನ್ ಫಿಂಚ್, 1.2), 2-25 (ವೆಂಕಟೇಶ್ ಅಯ್ಯರ್, 4.1), 3-31 (ಸುನಿಲ್ ನಾರಾಯಣ್, 4.3), 4-70 (ಶ್ರೇಯಸ್ ಅಯ್ಯರ್, 9.6), 5-103 (ಶೆಲ್ಡನ್ ಜಾಕ್ಸನ್, 12.6), 6-142 (ನಿತೀಶ್ ರಾಣಾ, 17.2), 7-153 (ಪ್ಯಾಟ್ ಕಮಿನ್ಸ್, 18.3), 8-158 (ಅಮಾನ್ ಹಕೀಂ ಖಾನ್, 19.1)

ಬೌಲಿಂಗ್: ಭುವನೇಶ್ವರ್ ಕುಮಾರ್ 4-0-37-1, ಮಾರ್ಕೊ ಜಾನ್ಸೆನ್ 4-0-26-1, ಟಿ. ನಟರಾಜನ್ 4-0-37-3, ಉಮ್ರಾನ್ ಮಲಿಕ್ 4-0-27-2, ಶಶಾಂಕ್ ಸಿಂಗ್ 1-0-10-0, ಜೆ.ಸುಚಿತ್ 3-0-32-1

ಸನ್‌ರೈಸರ್ಸ್ ಹೈದರಾಬಾದ್ 3ಕ್ಕೆ 176 (17.5 ಓವರ್)

ಅಭಿಷೇಕ್ ಬಿ ಕಮಿನ್ಸ್ 3 (10 ಎ), ವಿಲಿಯಮ್ಸನ್ ಬಿ ರಸೆಲ್ 17 (16 ಎ, 4x3), ರಾಹುಲ್ ಸಿ ವೆಂಕಟೇಶ್ ಬಿ ರಸೆಲ್ 71 (37 ಎ, 4x4, 6x6), ಮರ್ಕರಮ್ ಔಟಾಗದೆ 68 (36 ಎ, 4x6, 6x4), ನಿಕೋಲಸ್ ಔಟಾಗದೆ 5 (8 ಎ)

ಇತರೆ (ಬೈ 4, ವೈಡ್ 8) 12

ವಿಕೆಟ್ ಪತನ: 1-3 (ಅಭಿಷೇಕ್ ಶರ್ಮಾ, 1.4), 2-39 (ಕೇನ್ ವಿಲಿಯಮ್ಸನ್, 5.2), 3-133 (ರಾಹುಲ್ ತ್ರಿಪಾಠಿ, 14.2)

ಬೌಲಿಂಗ್: ಉಮೇಶ್ ಯಾದವ್ 4-0-31-0, ಪ್ಯಾಟ್ ಕಮಿನ್ಸ್ 3.5-0-40-1, ಆ್ಯಂಡ್ರೆ ರಸೆಲ್ 2-0-20-2, ಅಮಾನ್ ಹಕೀಂ ಖಾನ್ 1-0-13-0, ವರುಣ್ ಚಕ್ರವರ್ತಿ 3-0-45-0, ಸುನಿಲ್ ನಾರಾಯಣ್ 4-0-23-0

ಫಲಿತಾಂಶ: ಸನ್‌ರೈಸರ್ಸ್ ತಂಡಕ್ಕೆ 7 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	5	4	1	0	0	8	0.450
ರಾಜಸ್ಥಾನ	5	3	2	0	0	6	0.389
ಪಂಜಾಬ್	5	3	2	0	0	6	0.239
ಕೋಲ್ಕತ್ತ	6	3	3	0	0	6	0.223
ಲಖನೌ	5	3	2	0	0	6	0.174
ಬೆಂಗಳೂರು	5	3	2	0	0	6	0.006
ಹೈದರಾಬಾದ್	5	3	2	0	0	6	-0.196
ಡೆಲ್ಲಿ	4	2	2	0	0	4	-0.476
ಚೆನ್ನೈ	5	1	4	0	0	2	-0.745
ಮುಂಬೈ	5	0	5	0	0	0	-1.072

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಡೆಲ್ಲಿ ತಂಡದ ಫಿಸಿಯೊಗೆ ಕೋವಿಡ್

ಮುಂಬೈ (ಪಿಟಿಐ): ಐಪಿಎಲ್ ಕ್ರಿಕೆಟ್ ಟೂರ್ನಿ ಮೇಲೆ ಮತ್ತೆ ಕೋವಿಡ್–19ರ ಕರಿನೆರಳು ಆವರಿಸಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಫಿಸಿಯೊ ಪ್ಯಾಟ್ರಿಕ್ ಫರ್ಹಾಟ್ ಅವರು ಸೋಂಕಿಗೆ ಒಳಗಾಗಿದ್ದಾರೆ ಎಂದು ತಂಡದ ಪ್ರಕಟಣೆ ತಿಳಿಸಿದೆ.

ಭಾರತ ಕ್ರಿಕೆಟ್ ತಂಡದ ಫಿಸಿಯೊ ಕೂಡ ಆಗಿದ್ದ ಪ್ಯಾಟ್ರಿಕ್ ಮೇಲೆ ಡೆಲ್ಲಿ ಫ್ರಾಂಚೈಸ್‌ನ ವೈದ್ಯಕೀಯ ತಂಡ ಸೂಕ್ಷ್ಮ ನಿಗಾ ಇರಿಸಿದೆ ಎಂದು ತಿಳಿಸಲಾಗಿದೆ. ಕಳೆದ ವರ್ಷ ಕೋವಿಡ್‌ನಿಂದಾಗಿ ಟೂರ್ನಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಕೆಲವು ತಿಂಗಳ ನಂತರ ಯುಎಇಯಲ್ಲಿ ಮುಂದುವರಿಸಲಾಗಿತ್ತು.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	12
ಟಿ.ನಟರಾಜನ್	ಹೈದರಾಬಾದ್	11
ಉಮೇಶ್	ಕೋಲ್ಕತ್ತ	10

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	272
ಹಾರ್ದಿಕ್	ಗುಜರಾತ್	228
ಶಿವಂ ದುಬೆ	ಪಂಜಾಬ್	207

ಡುಪ್ಲೆಸಿ ಬಳಗಕ್ಕೆ ಪುಟಿದೇಳುವ ತವಕ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಸವಾಲು



ಹರ್ಷಲ್ ಪಟೇಲ್ –ಪಿಟಿಐ ಚಿತ್ರಗಳು

ಮುಂಬೈ (ಪಿಟಿಐ): ಹ್ಯಾಟ್ರಿಕ್ ಗೆಲುವಿನ ನಂತರ ಸೋಲಿನಿಂದ ನಿರಾಶೆಗೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಶನಿವಾರ ಎದುರಿಸಲಿದೆ.

ಮೊದಲ ಪಂದ್ಯದ ಸೋಲಿನ ನಂತರ ಮೂರು ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿದ್ದ ಫಫ್ ಡುಪ್ಲೆಸಿ ನಾಯಕತ್ವದ ಬೆಂಗಳೂರು ತಂಡ ಕಳೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಮಣಿದಿತ್ತು. ಬೌಲರ್‌ಗಳು ದುಬಾರಿಯಾದದ್ದು ಆ ಪಂದ್ಯದ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಮಧ್ಯಮ ವೇಗಿ ಹರ್ಷಲ್ ಪಟೇಲ್ ಅನುಪಸ್ಥಿತಿಯಲ್ಲಿ ಕಣಕ್ಕೆ ಇಳಿದಿದ್ದ ತಂಡವನ್ನು ರಾಬಿನ್ ಉತ್ತಪ್ಪ ಮತ್ತು ಶಿವಂ ದುಬೆ ಕಾಡಿದ್ದರು. ಹೀಗಾಗಿ ಚೆನ್ನೈ ಈ ಆವೃತ್ತಿಯ ಗರಿಷ್ಠ ಮೊತ್ತ ಪೇರಿಸಿತ್ತು.

ಸಂಬಂಧಿಯೊಬ್ಬರ ನಿಧನದ ಹಿನ್ನೆಲೆಯಲ್ಲಿ ಹರ್ಷಲ್ ಪಟೇಲ್ ಬಯೊಬಬಲ್ ತೊರೆದಿದ್ದರು. ಈಗ ಅವರು ತಂಡವನ್ನು ಸೇರಿಕೊಂಡಿದ್ದು ಶನಿವಾರದ ಪಂದ್ಯದ ಅಂತಿಮ 11ರಲ್ಲಿ ಸ್ಥಾನ ಪಡೆಯುವುದು ಖಚಿತವಾಗಿದೆ.

ಮೊಹಮ್ಮದ್ ಸಿರಾಜ್, ವನಿಂದು ಹಸರಂಗ ಮತ್ತು ಆಕಾಶ್ ದೀಪ್ ಕೂಡ ತಂಡದ ಬೌಲಿಂಗ್ ವಿಭಾಗದ ಭರವಸೆಯಾಗಿದ್ದಾರೆ. ಆದರೆ ಚೆನ್ನೈ ಎದುರಿನ ಪಂದ್ಯದಲ್ಲಿ ಇವರು ದುಬಾರಿಯಾಗಿದ್ದರು. ಸ್ಪಿನ್ ಜೋಡಿ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಶಹಬಾಜ್ ಅವರಿಗೂ ಚೆನ್ನೈ ಬ್ಯಾಟರ್‌ಗಳನ್ನು ನಿಯಂತ್ರಿಸಲು ಆಗಲಿಲ್ಲ. ಹೀಗಾಗಿ ಡೆಲ್ಲಿ ಬ್ಯಾಟರ್‌ಗಳನ್ನು ಎದುರಿಸಲು ಹೊಸ ತಂತ್ರದೊಂದಿಗೆ ತಂಡ ಕಣಕ್ಕೆ ಇಳಿಯಬೇಕಾಗಿದೆ.

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ
ರಾಯಲ್ ಚಾಲೆಂಜರ್ಸ್ ಬೆಂಗಳೂರು			
ವನಿಂದು ಹಸರಂಗ	5	10	20ಕ್ಕೆ4
ಹರ್ಷಲ್ ಪಟೇಲ್	4	6	11ಕ್ಕೆ2
ಆಕಾಶ್‌ದೀಪ್	5	5	45ಕ್ಕೆ3
ಡೆಲ್ಲಿ ಕ್ಯಾಪಿಟಲ್ಸ್			
ಕುಲದೀಪ್ ಯಾದವ್	4	10	35ಕ್ಕೆ4
ಖಲೀಲ್ ಅಹಮ್ಮದ್	3	7	25ಕ್ಕೆ3
ಮುಸ್ತಫಿಜುರ್ ರಹಮಾನ್	3	3	23ಕ್ಕೆ3

ಬ್ಯಾಟಿಂಗ್ ವಿಭಾಗದಲ್ಲಿ ಡುಪ್ಲೆಸಿ ಮತ್ತು ಯುವ ಎಡಗೈ ಆಟಗಾರ ಅನುಜ್ ರಾವತ್ ಉತ್ತಮ ಆರಂಭ ಒದಗಿಸುತ್ತಿದ್ದಾರೆ. ವಿಕೆಟ್ ಕೀಪರ್ ದಿನೇಶ್ ಕಾರ್ತಿಕ್ ಕೂಡ ಫಾರ್ಮ್‌ನಲ್ಲಿದ್ದಾರೆ. ಮಾಜಿ ನಾಯಕ ವಿರಾಟ್ ಕೊಹ್ಲಿ ಎರಡು ಬಾರಿ 40ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಆದರೆ ಸ್ಥಿರ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ.

ಭರವಸೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್: ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 44 ರನ್‌ಗಳ ಜಯ ಗಳಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ಭರವಸೆಯಲ್ಲಿದೆ. ಸತತ ಎರಡು ಅರ್ಧಶತಕ ಗಳಿಸಿರುವ ಆರಂಭಿಕ ಬ್ಯಾಟರ್ ಪೃಥ್ವಿ ಶಾ ಉತ್ತಮ ಲಯದಲ್ಲಿದ್ದಾರೆ. ಡೇವಿಡ್ ವಾರ್ನರ್ ಉಪಸ್ಥಿತಿ ತಂಡದ ನಿರೀಕ್ಷೆಯನ್ನು ಹೆಚ್ಚಿಸಿದೆ. ನಾಯಕ ರಿಷಭ್ ಪಂತ್ ಅವರಿಗೆ ನಿರೀಕ್ಷೆಗೆ ತಕ್ಕಂತೆ ಆಡಲು ಆಗುತ್ತಿಲ್ಲ.

ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಖಲೀಲ್ ಅಹಮ್ಮದ್ ಅವರ ಮೇಲೆ ತಂಡ ಭರವಸೆ ಇರಿಸಿಕೊಂಡಿದೆ. ಆ್ಯನ್ರಿಚ್ ನಾರ್ಕಿಯ, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್ ಮತ್ತು ಲಲಿತ್ ಯಾದವ್ ಅವರ ಬಲವೂ ತಂಡಕ್ಕಿದೆ.

ಶೇನ್ ವಾರ್ನ್‌ಗೆ ಆರ್‌ಸಿಬಿ ಶ್ರದ್ಧಾಂಜಲಿ: ಈಚೆಗೆ ಹೃದಯಾಘಾತದಿಂದ ನಿಧನರಾದ ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ಅವರಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಶ್ರದ್ಧಾಂಜಲಿ ಸಲ್ಲಿಸಿದೆ. 'ಆರ್‌ಸಿಬಿ ಬೋಲ್ಡ್ ಡೈರೀಸ್'ನಲ್ಲಿ ಮಾತನಾಡಿದ ಮಾಜಿ ನಾಯಕ ವಿರಾಟ್ ಕೊಹ್ಲಿ 'ಒಂದು ಸಮಯದಲ್ಲಿ ನಾನು ಶೇನ್ ವಾರ್ನ್ ಅವರ ಶೈಲಿಯನ್ನು ಅನುಕರಿಸಲು ಪ್ರಯತ್ನಿಸುತ್ತಿದ್ದೆ' ಎಂದಿದ್ದಾರೆ. ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ದಿನೇಶ್ ಕಾರ್ತಿಕ್ ಕೂಡ ವಾರ್ನ್ ಬಗ್ಗೆ ಮಾತನಾಡಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮುಂಬೈಗೆ ಜಯದ ನಿರೀಕ್ಷೆ

ಆಡಿರುವ ಎಲ್ಲ ಐದು ಪಂದ್ಯಗಳನ್ನು ಸೋತಿರುವ ಮುಂಬೈ ಇಂಡಿಯನ್ಸ್ ಶನಿವಾರ ನಡೆಯಲಿರುವ ಮೊದಲ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರು ಸೆಣಸಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ಪಂದ್ಯ	ರನ್	ಗರಿಷ್ಠ	ಅರ್ಧಶತಕ	ಬೌಂಡರಿ	ಸಿಕ್ಸರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು						
ಫಫ್ ಡುಪ್ಲೆಸಿ	5	146	88	1	10	7
ದಿನೇಶ್ ಕಾರ್ತಿಕ್	5	131	44*	-	13	9
ಅನುಜ್ ರಾವತ್	5	125	66	1	9	7
ಡೆಲ್ಲಿ ಕ್ಯಾಪಿಟಲ್ಸ್						
ಪೃಥ್ವಿ ಶಾ	4	160	61	2	21	6
ಋಷಭ್ ಪಂತ್	4	110	43	-	12	4
ಲಲಿತ್ ಯಾದವ್	4	74	48*	-	6	3



ಪೃಥ್ವಿ ಶಾ

ಹಾರ್ದಿಕ್ 'ಬುಲೆಟ್ ಥ್ರೋ' ವಿಡಿಯೊ ವೈರಲ್

ಮುಂಬೈ: ಗುಜರಾತ್ ಟೈಟನ್ಸ್ ತಂಡದ ಗೆಲುವಿಗೆ ಕಾರಣರಾದ ನಾಯಕ ಹಾರ್ದಿಕ್ ಪಾಂಡ್ಯ ಅವರ ಬುಲೆಟ್ ಥ್ರೋ ಕ್ರಿಕೆಟ್ ಪ್ರಿಯರ ಮನ ಗೆದ್ದಿದೆ. ರಾಜಸ್ಥಾನ ರಾಯಲ್ಸ್ ವಿರುದ್ಧ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರ ಥ್ರೋದಲ್ಲಿ ವಿಕೆಟ್ ಮುರಿದಿತ್ತು. ಇದರ ವಿಡಿಯೊ ವೈರಲ್ ಆಗಿದೆ.

ಮೊದಲು ಬ್ಯಾಟಿಂಗ್ ಮಾಡಿದ್ದ ಗುಜರಾತ್, ಹಾರ್ದಿಕ್ (ಔಟಾಗದೆ 87) ಅಬ್ಬರದಿಂದಾಗಿ 4ಕ್ಕೆ 192 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ್ದ ರಾಜಸ್ಥಾನಕ್ಕೆ 9 ವಿಕೆಟ್‌ಗಳಿಗೆ 155 ರನ್ ಗಳಿಸಲಷ್ಟೇ ಸಾಧ್ಯವಾಯಿತು. ನಾಯಕ ಸಂಜು ಸ್ಯಾಮ್ಸನ್ ಅವರನ್ನು ನೇರ ಎಸೆತದ ಮೂಲಕ ಹಾರ್ದಿಕ್ ರನೌಟ್ ಮಾಡಿದ್ದರು.

ಮಹಿಳಾ ಫುಟ್‌ಬಾಲ್ ಲೀಗ್: ದುಲರ್ ಮರಂಡಿ ಹ್ಯಾಟ್ರಿಕ್

ಭುವನೇಶ್ವರ: ದುಲಾರ್ ಮರಾಂಡಿ ಗಳಿಸಿದ ಹ್ಯಾಟ್ರಿಕ್ ಬಲದಿಂದ ಎಸ್‌ಎಸ್‌ಬಿ ತಂಡ ಮಹಿಳೆಯರ ಫುಟ್‌ಬಾಲ್ ಲೀಗ್‌ನ ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು. ಏಳನೇ ಬೆಟಾಲಿಯನ್ ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಸ್‌ಎಸ್‌ಬಿ 6–2ರಲ್ಲಿ ಹನ್ಸ್ ವಿಮೆನ್ಸ್ ಎಫ್‌ಸಿಯನ್ನು ಮಣಿಸಿತು.

ಏಳನೇ ನಿಮಿಷದಲ್ಲಿ ಮಿಂಚಿನ ವೇಗದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ಸಾವಿ ಮೂಲಕ ದೆಹಲಿಯ ಹನ್ಸ್ ತಂಡ ಮುನ್ನಡೆ ಸಾಧಿಸಿತ್ತು. 20ನೇ ನಿಮಿಷದಲ್ಲಿ ಜ್ಯೋತಿ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು.

ದ್ವಿತೀಯಾರ್ಧದಲ್ಲಿ ದುಲಾರ್ ಅವರ ಹ್ಯಾಟ್ರಿಕ್, ಪೂರ್ಣಿಮಾ ಲಿಂಡಾ ಅವರ ಎರಡು ಗೋಲು ಮತ್ತು ರಂಜಿತಾ ದೇವಿ ಅವರ ಗೋಲಿನೊಂದಿಗೆ ಎಸ್‌ಎಸ್‌ಬಿ ಜಯ ಗಳಿಸಿತು.

ಕಿಕ್‌ಸ್ಟಾರ್ಟ್ ಎಫ್‌ಸಿ ಜಯಭೇರಿ: ಬೆಂಗಳೂರಿನ ಕಿಕ್ ಸ್ಟಾರ್ಟ್ ಎಫ್‌ಸಿ ತಂಡ ಪಿಐಎಫ್‌ಎ ಎಸ್‌ಸಿಯನ್ನು 3–1ರಲ್ಲಿ ಮಣಿಸಿತು. 23ನೇ ನಿಮಿಷದಲ್ಲಿ ನಿರ್ಮಲಾ ದೇವಿ ಮೋಹಕ ಗೋಲು ಗಳಿಸಿ ಕಿಕ್‌ಸ್ಟಾರ್ಟ್‌ಗೆ ಮುನ್ನಡೆ ತಂದುಕೊಟ್ಟರು. 33ನೇ ನಿಮಿಷದಲ್ಲಿ ಪರಮೇಶ್ವರಿ ಐರೋಮ್ ಮುನ್ನಡೆ ಹೆಚ್ಚಿಸಿದರು. ಪಿಐಎಫ್‌ಎ ತಂಡ ನಿಸಿಲಿಯಾ ಗೋಲಿನ ಮೂಲಕ ತಿರುಗೇಟು ನೀಡಿತು. 58ನೇ ನಿಮಿಷದಲ್ಲಿ ಕಾವ್ಯಾ ಗೋಲು ಗಳಿಸಿ ಕಿಕ್‌ಸ್ಟಾರ್ಟ್‌ನ ಜಯವನ್ನು ಖಚಿತಪಡಿಸಿದರು.

ಇಂದಿನಿಂದ ರಾಜ್ಯ ಟೇಕ್ವಾಂಡೊ

ಹರಿಹರ: ರಾಜ್ಯಮಟ್ಟದ ಮುಕ್ತ ಟೇಕ್ವಾಂಡೊ ಚಾಂಪಿಯನ್‌ಷಿಪ್ ನಗರದ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದೆ ಎಂದು ಟೇಕ್ವಾಂಡೊ ಸಂಸ್ಥೆಯ ರಾಜ್ಯ ಕಾರ್ಯದರ್ಶಿ ಸಿ.ಜಿ.ಶಶಿವರ್ಧನ್ ತಿಳಿಸಿದರು.

'ಜಿಲ್ಲಾ ಟೆಕ್ವಾಂಡೊ ಸಂಸ್ಥೆ ಹಾಗೂ ಕರ್ನಾಟಕ ಕ್ರೀಡಾ ಭಾರತಿ ಆಶ್ರಯದಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಲ್ಲಿ 25 ಜಿಲ್ಲೆಗಳಿಂದ 800 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ' ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬಾಲಕ–ಬಾಲಕಿಯರು, ಪುರುಷ–ಮಹಿಳೆಯರ 4 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಪ್ರತಿ ವಿಭಾಗದಲ್ಲಿ ಮೊದಲ ನಾಲ್ಕು ಸ್ಥಾನ ಪಡೆದವರಿಗೆ ಕ್ರಮವಾಗಿ ಚಿನ್ನ, ಬೆಳ್ಳಿ, 2 ಕಂಚಿನ ಪದಕ ನೀಡಲಾಗುವುದು' ಎಂದರು. ರಾಜ್ಯ ಟೇಕ್ವಾಂಡೋ ಸಂಸ್ಥೆಯ ಅಧ್ಯಕ್ಷ ಕೆ.ಪಿ.ಮುನೇಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ್ ಕುಮಾರ್, ಕಾರ್ಯದರ್ಶಿ ಪ್ರಭಾಕರ್, ಸದಸ್ಯ ಶ್ಯಾಮಸುಂದರ್ ಮತ್ತು ಕ್ರೀಡಾಪಟು ಹರೀಶ್ ಹೊವಳೆ ಇದ್ದರು.

ಟೆನಿಸ್: ಅಜಯ್, ರಮೇಶ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಅಜಯ್ ಅವರು ಕರ್ನಾಟಕ ಸೀನಿಯರ್ಸ್ ಟೆನಿಸ್ ಆಟಗಾರರ ಸಂಸ್ಥೆಯ (ಸ್ಟೆಪಾಕ್) ಟೂರ್ನಿಯ 35–45ರಿಂದ ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕೆಎಸ್‌ಎಲ್‌ಟಿಎ, ಸೆಂಚುರಿ ಕ್ಲಬ್ ಮತ್ತು ಕೆಜಿಐಎಸ್ ಅಂಗಣದಲ್ಲಿ ಮೂರು ದಿನಗಳ ಕಾಲ ಟೂರ್ನಿ ನಡೆದಿತ್ತು. ಫೈನಲ್‌ನಲ್ಲಿ ಅಜಯ್ 6-4, 6-0ರಿಂದ ಅರುಣ್ ಕುಮಾರ್ ಅವರನ್ನು ಸೋಲಿಸಿದರು.

ಜಿ. ರಮೇಶ್ ಅವರು 46–55 ವರ್ಷದೊಳಗಿನವರ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಸಿಂಗಲ್ಸ್ ಫೈನಲ್‌ನಲ್ಲಿ ಅವರು 6-2, 6-4ರಿಂದ ವಿ.ಪುರುಷೋತ್ತಮ್ ಅವರನ್ನು ಮಣಿಸಿದರೆ, ಡಬಲ್ಸ್ ವಿಭಾಗದಲ್ಲಿ ಮನೋಜ್ ಮಸಂದ್ ಜೊತೆಗೂಡಿ 6-3, 7-6 (2) ರಿಂದ ಆರ್ಮುಗಂ ಮತ್ತು ಮುರುಗನ್ ಅವರನ್ನು ಸೋಲಿಸಿದರು.

ಸಿಂಗಲ್ಸ್ ವಿಭಾಗದ ಇನ್ನುಳಿದ ಫೈನಲ್ ಪಂದ್ಯಗಳಲ್ಲಿ ಪ್ರವಿಂದರ್ ವೇಲು (55–60 ವರ್ಷ) 6-1, 6-1ರಿಂದ ಸುನಿಲ್ ರಾಜಣ್ಣ ಎದುರು, ಎಂ.ಎಸ್. ಫಾಲಚಂದ್ರ (61–65 ವರ್ಷ) 6-7 (4), 6-4ರಿಂದ ರಾಜಶೇಖರ್ ವಿರುದ್ಧ, ಎಸ್.ಸೇತು (66–70 ವರ್ಷ) 6-2, 6-0ರಿಂದ ತುಳಸಿರಾಮ್ ವಿರುದ್ಧ, ಎನ್. ವಿಜಯಕುಮಾರ್ (71–75) 6-1, 6-2ರಿಂದ ಬಿ.ಎ. ಪ್ರಸಾದ್ ವಿರುದ್ಧ ಗೆದ್ದರು.



ಪ್ರಶಸ್ತಿಯೊಂದಿಗೆ (ಎಡದಿಂದ)– ಪರ್ವಿಂದರ್ ವೇಲು, ಜಿ.ರಮೇಶ್, ಎನ್.ವಿಜಯ ಕುಮಾರ್ ಮತ್ತು ಸಿ.ಡಿ. ಅಜಯ್

ರಾಷ್ಟ್ರೀಯ ಟಿ20 ಮಿಥಾಲಿ ಕಣಕ್ಕೆ

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ಮತ್ತು ಏಕದಿನ ತಂಡದ ನಾಯಕಿ ಮಿಥಾಲಿ ರಾಜ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮುಂದುವರಿಯುವ ಕುರಿತು ಊಹಾಪೋಹಗಳು ಹರಿದಾಡುತ್ತಿವೆ. ಈ ಮಧ್ಯೆ ಅವರು ರಾಷ್ಟ್ರೀಯ ಟಿ20 ಟ್ರೋಫಿ ಟೂರ್ನಿಯಲ್ಲಿ ರೈಲ್ವೇಸ್ ಒರ ಕಣಕ್ಕಿಳಿಯಲಿದ್ದಾರೆ.

ಇದೇ 18ರಂದು ಟಿ20 ಟೂರ್ನಿ ಆರಂಭವಾಗಲಿದ್ದು, ಏಕದಿನ ವಿಶ್ವಕಪ್ ಬಳಿಕ ಮೊದಲ ಬಾರಿ ಸ್ಪರ್ಧಾತ್ಮಕ ಕ್ರಿಕೆಟ್‌ನಲ್ಲಿ ಮಿಥಾಲಿ ಕಾಣಿಸಿಕೊಳ್ಳಲಿದ್ದಾರೆ.

ಕಳೆದ ತಿಂಗಳು ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಎದುರು ಸೋಲುವ ಮೂಲಕ ಭಾರತ ಟೂರ್ನಿಯಿಂದ ಹೊರಬಿದ್ದಿತ್ತು. ಅಂದಿನಿಂದ ಮಿಥಾಲಿ ಹಾಗೂ ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರ ಕ್ರಿಕೆಟ್ ಭವಿಷ್ಯದ ಕುರಿತು ಚರ್ಚೆಗಳು ನಡೆಯುತ್ತಿವೆ. ಇಬ್ಬರಿಗೂ ಈಗ 39 ವರ್ಷ ವಯಸ್ಸು.

ಜೂಲನ್ ಈಗ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ.

'ಕಿರಿಯ ಆಟಗಾರ್ತಿಯರಿಗೆ ಮಾರ್ಗದರ್ಶನ ಮಾಡಲು ಮಿಥಾಲಿ ಅವರು ಆಟದ ಅಂಗಣಕ್ಕಿಳಿಯಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಆರ್‌ಎಫ್‌ಡಿಎಲ್: ಬಿಎಫ್‌ಸಿ ಯುವ ತಂಡಕ್ಕೆ ಗೆಲುವು

ಬೆಂಗಳೂರು: ಮಿಡ್‌ಫೀಲ್ಡರ್ ಬೆಕೆ ಓರಮ್ ಮತ್ತು ಬದಲಿ ಆಟಗಾರ ರಾಹುಲ್ ರಾಜು ಗೋಲು ಗಳಿಸಿ ಬೆಂಗ ಳೂರು ಫುಟ್‌ಬಾಲ್ ಕ್ಲಬ್‌ಗೆ (ಬಿಎಫ್‌ಸಿ) ಅಮೋಘ ಜಯ ತಂದುಕೊಟ್ಟರು.

ಗೋವಾದಲ್ಲಿ ಶುಕ್ರವಾರ ಆರಂಭವಾದ ರಿಲಯನ್ಸ್ ಫೌಂಡೇ ಷನ್ ಡೆವಲಪ್‌ಮೆಂಟ್ ಲೀಗ್ (ಆರ್‌ಎಫ್‌ಡಿಎಲ್) ಫುಟ್‌ಬಾಲ್ ಟೂರ್ನಿಯ ತನ್ನ 2ನೇ ಪಂದ್ಯದಲ್ಲಿ ಬಿಎಫ್‌ಸಿ 2–0ಯಿಂದ ರಿಲಯನ್ಸ್ ಫೌಂಡೇಷನ್ ಯಂಗ್ ಚಾಂಪ್ಸ್ ತಂಡವನ್ನು ಮಣಿಸಿತು. ಯುವ ಆಟಗಾರರಿಗಾಗಿ ಇದೇ ಮೊದಲ ಬಾರಿ ಆಯೋಜಿಸಿರುವ ಲೀಗ್‌ನ ಉದ್ಘಾಟನಾ ಪಂದ್ಯದಲ್ಲಿ ಎಫ್‌ಸಿ ಗೋವಾ 1–0ಯಿಂದ ಚೆನ್ನೈಯಿನ್ ಎಫ್‌ಸಿಯನ್ನು ಮಣಿಸಿತ್ತು. ಪಂದ್ಯದ 24ನೇ ನಿಮಿಷದಲ್ಲಿ ಓರಂ ಅವರಿಂದಾಗಿ ಬೆಂಗಳೂರು ಮುನ್ನಡೆ ಸಾಧಿಸಿತು. ಇಂಜುರಿ (90 + 3ನೇ ನಿಮಿಷ) ಅವಧಿಯಲ್ಲಿ ರಾಹುಲ್ ಗೋಲು ಗಳಿಸಿದರು.

ಅಖಿಲ ಭಾರತ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್

ಆಯುಷ್, ಉನ್ನತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ ಶೆಟ್ಟಿ ಮತ್ತು ಉನ್ನತಿ ಹೂಡಾ ಅವರು ಅಖಿಲ ಭಾರತ ಜೂನಿಯರ್ (19 ವರ್ಷದೊಳಗಿನವರ) ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದಿದ್ದಾರೆ.

ಇಲ್ಲಿಯ ದ್ರಾವಿಡ್– ಪಡುಕೋಣೆ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ನಡೆದ ಫೈನಲ್‌ನಲ್ಲಿ ಶುಕ್ರವಾರ ಆಯುಷ್ 21-14, 21-16ರಿಂದ ದರ್ಶನ್ ಪೂಜಾರಿ ಅವರನ್ನು ಮಣಿಸಿದರು.

ಉನ್ನತಿ ಹೂಡಾ ಅವರಿಗೆ ಫೈನಲ್‌ನಲ್ಲಿ ರಕ್ಷಿತಾಶ್ರೀ ಎಸ್. ವಿರುದ್ಧ ವಾಕ್‌ಓವರ್ ಲಭಿಸಿತು.

ಬಾಲಕರ ಡಬಲ್ಸ್‌ನಲ್ಲಿ ದರ್ಶನ್ ಪೂಜಾರಿ ಮತ್ತು ಅಭಿನವ್ ಠಾಕೂರ್ ಅವರಿಗೆ ಪ್ರಶಸ್ತಿ ಒಲಿಯಿತು. ಈ ಜೋಡಿಯು ಫೈನಲ್‌ನಲ್ಲಿ 21-19, 18-21, 21-19ರಿಂದ ನಿಕೋಲಸ್ ನಥನ್ ರಾಜ್– ತುಷಾರ್ ಸುವೀರ್ ವಿರುದ್ಧ ಗೆದ್ದರು.

ಬಾಲಕಿಯರ ಡಬಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ವೆನ್ನಲಾ ಕೆ.– ಶ್ರೀಯಾಂಶಿ ವಾಲಿಶೆಟ್ಟಿ 12-21, 21-19, 21-14ರಿಂದ ಜ್ಞಾನಧಾ ಕಾರ್ತಿಕೇಯನ್– ಸಾನಿಯಾ ಸಿಕಂದರ್ ವಿರುದ್ಧ ಜಯಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಿಶ್ರ ಡಬಲ್ಸ್‌ನಲ್ಲಿ ಮಯಂಕ್ ರಾಣಾ– ನರ್ತನಾ ವಿ.ಆರ್. 21-17, 21-10ರಿಂದ ಸಮರವೀರ್ ಮತ್ತು ರಾಧಿಕಾ ಶರ್ಮಾ ಅವರನ್ನು ಮಣಿಸಿ ಚಾಂಪಿಯನ್ ಆದರು.



ಆಯುಷ್ ಶೆಟ್ಟಿ

ಸೆಮಿಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಬಂಗಾಳ ತಂಡವನ್ನು ಮಣಿಸಿ ರಾಷ್ಟ್ರೀಯ ಸೀನಿಯರ್ ಪುರುಷರ ಹಾಕಿ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ 4–3ರಿಂದ ಜಯಿಸಿತು. ತಂಡದ ಪರ ಹರೀಶ್ ಮುತಗಾರ (24ನೇ ನಿಮಿಷ), ದೀಕ್ಷಿತ್ ಎಸ್.ಪಿ. (34ನೇ ಮತ್ತು 59 ನಿ.) ಮತ್ತು ಯತೀಶ್ ಕುಮಾರ್ ಬಿ. (41ನೇ ನಿ.) ಗೋಲು ಗಳಿಸಿದರು.

ಆ್ಯಷಸ್ ಸರಣಿ ಸೋಲಿಗೆ ದಂಡ; ಟೆಸ್ಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಇಂಗ್ಲೆಂಡ್ ಆಟಗಾರ

ನಾಯಕತ್ವಕ್ಕೆ ಜೋ ರೂಟ್ ರಾಜೀನಾಮೆ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಸ್ಥಾನಕ್ಕೆ ಜೋ ರೂಟ್ ರಾಜೀನಾಮೆ ನೀಡಿದ್ದಾರೆ. ಆಸ್ಟ್ರೇಲಿಯಾ ಎದುರಿನ ಆ್ಯಷಸ್ ಸರಣಿಯಲ್ಲಿ ಮತ್ತು ವೆಸ್ಟ್ ಇಂಡೀಸ್ ಎದುರಿನ ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡದ ನೀರಸ ಪ್ರದರ್ಶನದ ನಂತರ ಅವರ ನಾಯಕತ್ವದ ಮೇಲೆ ಕತ್ತಿ ತೂಗುತ್ತಿತ್ತು.

2017ರಲ್ಲಿ ಅಲೆಸ್ಟರ್ ಕುಕ್ ನಂತರ ನಾಯಕತ್ವವನ್ನು ರೂಟ್ ಅವರಿಗೆ ವಹಿಸಲಾಗಿತ್ತು. ನಾಯಕನಾಗಿ ಇಂಗ್ಲೆಂಡ್ ಪರ ಅತಿ ಹೆಚ್ಚು ಪಂದ್ಯಗಳನ್ನು ಆಡಿದ ಮತ್ತು ಅತಿ ಹೆಚ್ಚು ಪಂದ್ಯಗಳಲ್ಲಿ ಜಯ ಗಳಿಸಿದ ದಾಖಲೆ ಅವರ ಹೆಸರಿನಲ್ಲಿದೆ. 31 ವರ್ಷದ ರೂಟ್ ನೇತೃತ್ವದಲ್ಲಿ ಇಂಗ್ಲೆಂಡ್ 2018ರಲ್ಲಿ ಭಾರತದ ವಿರುದ್ಧ 4–1ರಲ್ಲಿ ಮತ್ತು ನಂತರದ ವರ್ಷ ದಕ್ಷಿಣ ಆಫ್ರಿಕಾ ವಿರುದ್ಧ 3–1ರಲ್ಲಿ ಜಯ ಗಳಿಸಿತ್ತು.

ಆದರೆ ಈಚಿನ 12 ತಿಂಗಳಲ್ಲಿ ಅವರ ಕ್ರಿಕೆಟ್ ಜೀವನ ಭಾರಿ ತಿರುವು ಕಂಡಿತ್ತು. 2021ರ ಆರಂಭದಲ್ಲಿ ಮೂರು ಟೆಸ್ಟ್ ಪಂದ್ಯಗಳನ್ನು ಗೆದ್ದ ತಂಡ ನಂತರ 17 ಪಂದ್ಯಗಳ ಪೈಕಿ 11ರಲ್ಲಿ ಸೋತು ಐದನ್ನು ಡ್ರಾ ಮಾಡಿಕೊಂಡಿತ್ತು. ಅವರ ನಾಯಕತ್ವದಲ್ಲಿ ತಂಡ ಆಸ್ಟ್ರೇಲಿಯಾ ಎದುರು ಎರಡು ಬಾರಿ 4–0ಯಿಂದ ಸೋತಿತ್ತು.

ಅವರ ಅವಧಿಯಲ್ಲಿ ತಂಡ ಒಟ್ಟು 64 ಪಂದ್ಯಗಳನ್ನು ಆಡಿದ್ದು 27ರಲ್ಲಿ ಜಯ ಗಳಿಸಿತ್ತು. 26 ಪಂದ್ಯಗಳನ್ನು ಸೋತಿತ್ತು. ಅಲೆಸ್ಟರ್ ಕುಕ್ ನಂತರ ಟೆಸ್ಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಇಂಗ್ಲೆಂಡ್ ಆಟಗಾರ ಎನಿಸಿಕೊಂಡಿರುವ ರೂಟ್ 14 ಶತಕ ಸಿಡಿಸಿದ್ದಾರೆ. ನಾಯಕನಾಗಿ 5,295 ರನ್ ಕಲೆ ಹಾಕಿರುವ ಅವರು ಗರಿಷ್ಠ ರನ್ ಗಳಿಸಿರುವ ಐದನೇ ಆಟಗಾರ ಆಗಿದ್ದಾರೆ. ಗ್ರೇಮ್ ಸ್ಮಿತ್, ಅಲನ್ ಬಾರ್ಡರ್, ರಿಕಿ ಪಾಂಟಿಂಗ್ ಮತ್ತು ವಿರಾಟ್ ಕೊಹಿ ಮೊದಲ ನಾಲ್ಕು ಸ್ಥಾನಗಳಲ್ಲಿದ್ದಾರೆ.



ಜೋ ರೂಟ್ –ಎಎಫ್‌ಪಿ ಚಿತ್ರ

ನಾಯಕನಾಗಿ ಹೆಚ್ಚು ಪಂದ್ಯ ಆಡಿದವರು

ಆಟಗಾರ	ದೇಶ	ಪಂದ್ಯ
ಗ್ರಹಾಂ ಸ್ಮಿತ್	ದಕ್ಷಿಣ ಆಫ್ರಿಕಾ	109
ಅಲನ್ ಬಾರ್ಡರ್	ಆಸ್ಟ್ರೇಲಿಯಾ	93
ಸ್ಟೀಫನ್ ಫ್ಲೆಮಿಂಗ್	ನ್ಯೂಜಿಲೆಂಡ್	80
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	77
ಕ್ಲೈವ್ ಲಾಯ್ಡ್	ವೆಸ್ಟ್ ಇಂಡೀಸ್	74
ವಿರಾಟ್ ಕೊಹ್ಲಿ	ಭಾರತ	68
ಜೋ ರೂಟ್	ಇಂಗ್ಲೆಂಡ್	64

ಇಂಗ್ಲೆಂಡ್ ಪರ ಹೆಚ್ಚು ರನ್ ಗಳಿಸಿದವರು

ಆಟಗಾರ	ಪಂದ್ಯ	ರನ್
ಅಲೆಸ್ಟರ್ ಕುಕ್	161	12472
ಜೋ ರೂಟ್	117	9889
ಗ್ರಹಾಂ ಗೂಚ್	118	8900
ಅಲೆಕ್ ಸ್ಟೀವರ್ಟ್	133	8463
ಡೇವಿಡ್ ಗೋವರ್	117	8231

ಬಿಎಐಯೊಂದಿಗೆ ಜಟಾಪಟಿ: ಸೈನಾ ವೃತ್ತಿಜೀವನದ ಅಂತ್ಯ?

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗಾಗಿ ನಡೆಯುವ ಆಯ್ಕೆ ಟ್ರಯಲ್ಸ್‌ಗಳಿಂದ ಹಿಂದೆ ಸರಿಯುವ ಸೈನಾ ನೆಹ್ವಾಲ್ ನಿರ್ಧಾರದಿಂದ ಅವರ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ನ ಅದ್ಭುತ ಪಯಣ ಅಂತ್ಯವಾಗುವ ಸಾಧ್ಯತೆಯಿದೆ.

ಒಂದೂವರೆ ದಶಕಕ್ಕೂ ಹೆಚ್ಚು ಕಾಲ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ನಲ್ಲಿ ಛಾಪು ಮೂಡಿಸಿರುವ ಸೈನಾ, ಗ್ಲಾಸ್ಗೊ (2018), ನವದೆಹಲಿ (2010) ಮತ್ತು ಮೆಲ್ಬರ್ನ್ (2006) ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ.

ಹಿಸ್ಸಾರ್ ಮೂಲದ ಆಟಗಾರ್ತಿ ವೃತ್ತಿಪರ ಸರ್ಕ್ಯೂಟ್‌ನಲ್ಲಿ ಇನ್ನೂ ಉತ್ತಮ ಸಾಮರ್ಥ್ಯ ತೋರುವರು ಎಂಬುದರಲ್ಲಿ ಯಾವುದೇ ಸಂದೇಹ ಇಲ್ಲ. ಆದರೆ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಟ್ರಯಲ್ಸ್‌ಗಳಿಗೆ ಹಾಜರಾಗಲು ಅವರು ಒಪ್ಪದಿರುವುದು ಕಾಮನ್‌ವೆಲ್ತ್ ಗೇಮ್ಸ್ ಏಷ್ಯಾಡ್, ಒಲಿಂಪಿಕ್ಸ್ ಮತ್ತು ಉಬರ್ ಕಪ್‌ನಂತಹ ಟೂರ್ನಿಗಳಲ್ಲಿ ಭಾಗವಹಿಸುವ ಅವಕಾಶವನ್ನು ಕಸಿಯುವ ಸಾಧ್ಯತೆ ಇದೆ.

ಬ್ಯಾಡ್ಮಿಂಟನ್ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಕಡಿಮೆ ಕಾಲಾವಕಾಶದಲ್ಲಿ ನಡೆಸಲಾಗುತ್ತಿದೆ. ಈ ರೀತಿ ಟ್ರಯಲ್ಸ್ ನಿಗದಿಪಡಿಸಿರುವುದು ಸರಿಯಲ್ಲ ಎಂದು ಸೈನಾ ನೆಹ್ವಾಲ್ ಬಿಎಐ ವಿರುದ್ಧ ಗುರುವಾರ ಅಸಮಾಧಾನ ವ್ಯಕ್ತಪಡಿಸಿದ್ದರು.



ಸೈನಾ ನೆಹ್ವಾಲ್

ಆಸ್ಟ್ರೇಲಿಯಾ ತಂಡದ ಮೇಲೆ ದಾಳಿ ಬೆದರಿಕೆ: ವ್ಯಕ್ತಿ ಬಂಧನ

ಲಾಹೋರ್ (ಪಿಟಿಐ): ಪಾಕಿಸ್ತಾನ ಪ್ರವಾಸ ಕೈಗೊಂಡಿದ್ದ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮೇಲೆ ಭಯೋತ್ಪಾದಕ ದಾಳಿ ನಡೆಸುವುದಾಗಿ ಬೆದರಿಕೆ ಒಡ್ಡಿದ್ದ ಶಂಕಿತನನ್ನು ಲಾಹೋರ್ ಪ್ರಾಂತದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಆಸ್ಟ್ರೇಲಿಯಾ ತಂಡದ ಪಾಕಿಸ್ತಾನ ಪ್ರವಾಸ ಈ ತಿಂಗಳ ಆರಂಭದಲ್ಲಿ ಮುಕ್ತಾಯಗೊಂಡಿತ್ತು. ತಲಾ ಮೂರು ಟೆಸ್ಟ್ ಮತ್ತು ಏಕದಿನ, ಏಕೈಕ ಟ್ವೆಂಟಿ20 ಪಂದ್ಯ ತಂಡ ಆಡಿತ್ತು.

ಈ ಸಂದರ್ಭದಲ್ಲಿ ಆಸ್ಟ್ರೇಲಿಯಾದ ಆಂತರಿಕ ಸಚಿವಾಲಯಕ್ಕೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ ತಂಡದ ಮೇಲೆ ದಾಳಿ ನಡೆಸುವುದಾಗಿ ಬೆದರಿಕೆಯೊಡ್ಡಿದ್ದ. ಈ ಬಗ್ಗೆ ಗುಪ್ತಚರ ವಿಭಾಗ ತನಿಖೆ ಆರಂಭಿಸಿತ್ತು. ಇರ್ಫಾನ್ ನಾಸಿರ್ ಎಂಬಾತನನ್ನು ತೋಬಾ ಟೇಕ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಮುಭಾಶಿರ್ ಮಾಕೆನ್ ಬಹಿರಂಗ ಮಾಡಿದ್ದಾರೆ.

ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿ: ಸುಖಜೀತ್ ಸಿಂಗ್, ವರುಣ್, ಅಭಿಷೇಕ್ ಸಿಂಗ್ ಕೈಚಳಕ

ಅಮಿತ್ ಬಳಗಕ್ಕೆ ಮಣಿದ ಜರ್ಮನಿ ತಂಡ

ಭುವನೇಶ್ವರ (ಪಿಟಿಐ): ಭಾರತ ಹಾಕಿ ತಂಡವು ಅನನುಭವಿ ಜರ್ಮನಿ ವಿರುದ್ಧ ಮತ್ತೊಮ್ಮೆ ಪಾರಮ್ಯ ಮೆರೆಯಿತು. ಶುಕ್ರವಾರ ಇಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನ ಎರಡನೇ ಲೆಗ್‌ನಲ್ಲಿ 3-1ರಿಂದ ಗೆದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡಿತು.

ಅಮಿತ್ ರೋಹಿದಾಸ್ ನಾಯಕತ್ವದ ಭಾರತದ ಪರ ಸುಖಜೀತ್ ಸಿಂಗ್ (19ನೇ ನಿಮಿಷ), ವರುಣ್ ಕುಮಾರ್ (41ನೇ ನಿಮಿಷ) ಮತ್ತು ಅಭಿಷೇಕ್ ಸಿಂಗ್ (54ನೇ ನಿ.) ಕೈಚಳಕ ತೋರಿದರು. ಪ್ರವಾಸಿ ತಂಡದ ಏಕೈಕ ಗೋಲನ್ನು ಆ್ಯಂಟನ್ ಬೆಕೆಲ್ (45ನೇ ನಿ.) ದಾಖಲಿಸಿದರು.

ಗುರುವಾರ ನಡೆದ ಮೊದಲ ಹಣಾಹಣಿಯಲ್ಲಿ ಭಾರತ 3-0ಯಿಂದ ಜಯ ಸಾಧಿಸಿತ್ತು.ಭಾರತ ಸದ್ಯ ಲೀಗ್‌ನಲ್ಲಿ 12 ಪಂದ್ಯಗಳಿಂದ 27 ಪಾಯಿಂಟ್ಸ್ ಕಲೆಹಾಕಿದೆ. ಈ ಪಂದ್ಯದ ಎರಡನೇ ಕ್ವಾರ್ಟರ್ ಆರಂಭವಾದ ನಾಲ್ಕನೇ ನಿಮಿಷದಲ್ಲಿ ಸೊಗಸಾದ ಫೀಲ್ಡ್ ಗೋಲು ದಾಖಲಿಸಿದ ಸುಖಜೀತ್ ಭಾರತಕ್ಕೆ ಮುನ್ನಡೆ ಒದಗಿಸಿಕೊಟ್ಟರು.

33ನೇ ನಿಮಿಷದಲ್ಲಿ ಆತಿಥೇಯ ತಂಡಕ್ಕೆ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ಆದರೆ ಹರ್ಮನ್‌ಪ್ರೀತ್ ಸಿಂಗ್ ಹೊಡೆದ ಚೆಂಡು ತಡೆಯುವಲ್ಲಿ ಜರ್ಮನಿ ಗೋಲ್‌ಕೀಪರ್ ಜೀನ್ ಡ್ಯಾನ್‌ಬರ್ಗ್ ಯಶಸ್ವಿಯಾದರು. 41ನೇ ನಿಮಿಷದಲ್ಲಿ ದೊರೆತ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ವರುಣ್ ಗೋಲು ಗಳಿಸಿದರು.

ಇದಾದ ನಾಲ್ಕು ನಿಮಿಷಗಳ ಬಳಿಕ ಜರ್ಮನಿಯ ಬೆಕೆಲ್ ತಂಡದ ಹಿನ್ನಡೆ ತಗ್ಗಿಸಿದರು. ಆದರೆ ಹರ್ಮನ್‌ಪ್ರೀತ್ ನೀಡಿದ ಪಾಸ್‌ನಲ್ಲಿ ಅಭಿಷೇಕ್ ಚೆಂಡು ಗುರಿ ಸೇರಿಸಿ ಭಾರತದ ಸಂಭ್ರಮವನ್ನು ಹೆಚ್ಚಿಸಿದರು.


ವರುಣ್ ಕುಮಾರ್

ಟೆನಿಸ್: ಅಂಕಿತಾ, ಋತುಜಾ ಮಿಂಚು: ಭಾರತಕ್ಕೆ ಜಯ

ಅಂಟಲ್ಯಾ, ಟರ್ಕಿ (ಪಿಟಿಐ): ಭಾರತ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಟೂರ್ನಿಯಲ್ಲಿ ಮೊದಲ ಜಯ ಗಳಿಸಿದೆ. ಗುರುವಾರ ರಾತ್ರಿ ಇಲ್ಲಿ ನಡೆದ ಎರಡನೇ ಪಂದ್ಯದಲ್ಲಿ 2-0ಯಿಂದ ಟರ್ಕಿ ತಂಡದ ಎದುರು ಮೇಲುಗೈ ಸಾಧಿಸಿತು.

ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಹಣಾಹಣಿಯಲ್ಲಿ ಭಾರತದ ಋತುಜಾ ಭೋಸ್ಲೆ 6-4, 6-1ರಿಂದ ಬೀಟ್‌ರೈಸ್ ಗುಮುಲ್ಯ ಅವರನ್ನು ಸೋಲಿಸಿದರು. 23 ನಿಮಿಷಗಳ ಹಣಾಹಣಿಯಲ್ಲಿ ಋತುಜಾ ಅವರಿಗೆ ಗೆಲುವು ಒಲಿಯಿತು.ಎರಡನೇ ಪಂದ್ಯದಲ್ಲಿ ಅಂಕಿತಾ ರೈನಾ 6-1, 6-2ರಿಂದ ಆಲ್ದಿಲಾ ಸುಜಿಯಾದಿ ಅವರನ್ನು ಮಣಿಸಿದರು.

ಮೊದಲ ಪಂದ್ಯದಲ್ಲಿ ಚೀನಾ ಎದುರು ಭಾರತ 0-3ರಿಂದ ಸೋತಿತ್ತು.

ಕ್ವಾರ್ಟರ್‌ಫೈನಲ್‌ಗೆ ಕೋರಮಂಗಲ, ಎಂಸಿಎಚ್‌ಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಎಸ್‌ಸಿ ಮತ್ತು ಎಂಸಿಎಚ್‌ಎಸ್ ಬಿ.ಸಿ. ತಂಡಗಳು ರಾಜ್ಯ 13 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಎಂಟರಘಟ್ಟ ತಲುಪಿದವು.


ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕೋರಮಂಗಲ 58-38ರಿಂದ ಎಸ್. ಬ್ಲ್ಯೂಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಲಕ್ಷ್ಯ ಬಿ. ಮುರಗೋಡ 23 ಪಾಯಿಂಟ್ಸ್ ದಾಖಲಿಸಿದರು. ಓಂ ಕಲ್ಮಾಡಿ 15 ಪಾಯಿಂಟ್ಸ್ ಗಳಿಸಿದರು.

ಬಾಲಕರ ವಿಭಾಗದಲ್ಲಿ ಎಂಸಿಎಚ್‌ಎಸ್ ಬಿಸಿ 54-26ರಿಂದ ಎಂ.ಎನ್.ಕೆ. ರಾವ್ ತಂಡವನ್ನು ಸೋಲಿಸಿತು. ಎಂಸಿಎಚ್‌ಎಸ್‌ನ ಅದಿತಿ 22 ಪಾಯಿಂಟ್ಸ್ ಕಲೆಹಾಕಿದರು.

ಬಾಲಕರ ವಿಭಾಗದ ಇನ್ನುಳಿದ ಪ್ರೀ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಬೆಂಗಳೂರು ಸ್ಪೋರ್ಟಿಂಗ್ 50-33ರಿಂದ ನ್ಯಾಷನಲ್ಸ್ ಬಿ.ಸಿ. ಮೈಸೂರು ವಿರುದ್ಧ, ಅಪ್ಪಯ್ಯ ಬಿ.ಸಿ. 46-9 ರಿಂದ ಬಿ.ಸಿ ಬಿ.ಸಿ ತಂಡದ ಎದುರು, ಎಂ.ಎನ್.ಕೆ. ರಾವ್ ಪಾರ್ಕ್ 47-8ರಿಂದ ಮೌಂಟ್ಸ್ ಕ್ಲಬ್ ವಿರುದ್ಧ, ಎಚ್.ಬಿ.ಆರ್ ಬಿ.ಸಿ. 64-37ರಿಂದ ಎಂಸಿಎಚ್‌ಎಸ್ ಬಿ.ಸಿ. ವಿರುದ್ಧ, ಭಾರತ್ ಎಸ್.ಯು. 50- 28ರಿಂದ ಹಲಸೂರು ಎಸ್.ಯು. ವಿರುದ್ಧ, ಪಿಪಿಸಿ 47-31ರಿಂದ ರೋವರ್ಸ್ ವಿರುದ್ಧ ಗೆದ್ದವು.

ಬಾಲಕಿಯರ ವಿಭಾಗದ 16ರ ಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಮಲ್ಲ ಸಜ್ಜನ ಬಿ.ಸಿ. ಧಾರವಾಡ 30-26ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು, ಅಪ್ಪಯ್ಯ ಬಿ.ಸಿ. 43-12ರಿಂದ ರೋವರ್ಸ್ ಧಾರವಾಡ ಎದುರು, ಡಿವೈಇಎಸ್ ಮಂಡ್ಯ 45-4ರಿಂದ ಬಿ.ಸಿ ಬಿ.ಸಿ ವಿರುದ್ಧ, ಕೋರಮಂಗಲ ಎಸ್‌ಸಿ 44-13ರಿಂದ ಎಚ್‌ಬಿಆರ್ ಬಿ.ಸಿ. ವಿರುದ್ಧ ಜಯಿಸಿದವು.

ಪ್ರಜಾವಾಣಿ ಶನಿವಾರ, 16 ಏಪ್ರಿಲ್ 2022
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ



ಮಹಿಳಾ ಸೋಲೊ ಪ್ರವಾಸದ ಒಳಹೊರಗೆ

ಸಾಂದರ್ಭಿಕ ಚಿತ್ರ

ಏಕಾಂಗಿ ಸಂಚಾರಿ

ರಾಧಿಕಾ ವಿಟ್ಲ

ಒಂದು ಕಾಲ ಇತ್ತು. ಆಗೆಲ್ಲ ವರ್ಷಕ್ಕೊಂದು ಬೇಸಿಗೆ ರಜೆಯಲ್ಲೋ, ಅರ್ಧವಾರ್ಷಿಕ ರಜೆಯಲ್ಲೋ ಕುಟುಂಬ ಸಹಿತ ಯಾವುದಾದರೊಂದು ಪ್ರವಾಸಿತಾಣಕ್ಕೆ ಹೋಗಿ, ಒಂದೆರಡು ದಿನ ತಿರುಗಾಡಿ ಗ್ರೂಪ್ ಫೋಟೊಗೆ ಪೋಸ್ ಕೊಟ್ಟು, ಸಂತೋಷದಿಂದ ವಾಪಸು ಬರುವುದು. ಆಮೇಲೆ ಆ ಫೋಟೊಗಳನ್ನು ಮನೆಗೆ ಬರುವ ಗೆಳೆಯರು, ನೆಂಟರಿಷ್ಟರ ಜೊತೆಗೆ ಕೂತು ನೋಡಿ ಸಂತಸ ಪಡುವುದು. ಇದು ನಮ್ಮ ದೇಶದ ಮಧ್ಯಮ, ಕೆಳಮಧ್ಯಮ ವರ್ಗದ ಮನೆಮನೆ ಕಥೆಯಾಗಿತ್ತು.

ಈಗ ಕಾಲ ಬದಲಾಗಿದೆ. ಕಳೆದೆರಡು ದಶಕಗಳಿಂದ ಪ್ರವಾಸದ ಪರಿಕಲ್ಪನೆಯೂ ಬದಲಾಗಿದೆ. ಏಕಾಂಗಿ ಪ್ರವಾಸ (ಸೋಲೊ ಟ್ರಾವೆಲ್) ಕೂಡಾ ಸಾಕಷ್ಟು ಅರ್ಥಗಳನ್ನು ಪಡೆದುಕೊಂಡಿದೆ. ಪ್ರವಾಸಿ ಪ್ರಿಯರು ವಿಶೇಷವಾಗಿ ಯುವಸಮೂಹ ತಮ್ಮ ತಿರುಗಾಟಕ್ಕೊಂದು ಹೊಸ ಅರ್ಥ, ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ಮಹಿಳೆಯರು ತಮ್ಮ ಮಿತಿಗಳಿಂದ ಹೊರ ಬಂದು 'ಏಕಾಂಗಿ ಪ್ರವಾಸ'ದ ರುಚಿ ಸವಿಯುತ್ತಿದ್ದಾರೆ. ಇದು ಇತ್ತೀಚಿನ ವರ್ಷಗಳಲ್ಲಾದ ಗಮನಾರ್ಹ ಬೆಳವಣಿಗೆ.

ಎಂಥದ್ದೇ ಬದಲಾವಣೆಯಾದರೂ ಮಹಿಳೆಯೊಬ್ಬಳು ಒಂಟಿಯಾಗಿ ಪ್ರವಾಸ ಮಾಡುವಾಗ, ಅಷ್ಟೇ 'ತಯಾರಿ' ಮಾಡಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಆಗಾಗ ಪತ್ರಿಕೆಗಳಲ್ಲಿ ಕಾಣುತ್ತಿರುವ 'ಹೆಡ್‌ಲೈನ್'ಗಳು ಇಂತಹ ಕನಸು ಕಾಣುವ, ಧೀರ ಮಹಿಳೆಯರನ್ನೂ ಕೆಲವೊಮ್ಮೆ ಅಧೀರರನ್ನಾಗಿಸುತ್ತವೆ.

ಹಾಗಾದರೆ, ಮಹಿಳೆ ಏಕಾಂಗಿಯಾಗಿ ಪ್ರವಾಸ ಹೊರಟಾಗ ಏನೇನು ಸವಾಲುಗಳು ಎದುರಾಗುತ್ತವೆ? ತನ್ನ ಎಲ್ಲ ಜವಾಬ್ದಾರಿಗಳನ್ನು ತಾನೇ ಹೊತ್ತುಕೊಂಡು ಪ್ರಪಂಚ ಸುತ್ತಿ ಸುರಕ್ಷಿತವಾಗಿ ಮರಳಿ ಬರುವುದು ಹೇಗೆ? ರಾತ್ರಿ ಒಬ್ಬರೇ ಹೋಟೆಲ್‌ನಲ್ಲಿ ಉಳಿದುಕೊಳ್ಳೋದು ಎಷ್ಟು ಸುರಕ್ಷಿತ? ಕಡಿಮೆ ವೆಚ್ಚದಲ್ಲಿ, ಸುರಕ್ಷಿತವೆನಿಸುವ ವಸತಿ ತಾಣಗಳಿವೆಯಾ? ಇತ್ಯಾದಿ ಇತ್ಯಾದಿ ಪ್ರಶ್ನೆಗಳು ಸಾಮಾನ್ಯ. ಇಂಥ ಹಲವು ಪ್ರಶ್ನೆಗಳಿಗೆ ಇಲ್ಲಿ ಸಲಹೆಗಳ ಮೂಲಕ ಉತ್ತರ ಹೇಳುವ ಪ್ರಯತ್ನ ಮಾಡಿದ್ದೇನೆ.

> ಮಹಿಳೆಯರಲ್ಲಿ 'ಏಕಾಂಗಿ ಪ್ರವಾಸ (ಸೋಲೊ ಟ್ರಿಪ್)' ಎನ್ನುವುದು ಇತ್ತೀಚೆಗೆ ಟ್ರೆಂಡ್ ಆಗಿದೆ. ಒಬ್ಬರಿಂದ ಒಬ್ಬರು ಸ್ಫೂರ್ತಿ ಪಡೆದು ಒಂಟಿ ಪ್ರವಾಸಕ್ಕೆ ಹೊರಡಲು ಅಣಿಯಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರವಾಸದ ವೇಳೆ ಕೈಗೊಳ್ಳಬೇಕಾದ ಸಿದ್ಧತೆಗಳ ಕುರಿತು ಇಲ್ಲಿ ಮಾಹಿತಿ ಇಲ್ಲಿದೆ.

ಆತ್ಮವಿಶ್ವಾಸ ಮುಖ್ಯ

ಏಕಾಂಗಿಯಾಗಿ ಪ್ರವಾಸ ಹೊರಟ ಮಹಿಳೆಗೆ ಬಹುಮುಖ್ಯವಾಗಿ ಬೇಕಾದದ್ದು ಆತ್ಮವಿಶ್ವಾಸ. ಹೀಗೆ ಪ್ರವಾಸ ಹೊರಟಾಗ 'ಯಾರೋ ಏನೆಂದುಕೊಳ್ಳುತ್ತಾರೋ' ಎನ್ನುವುದಕ್ಕಿಂತ, ತಾನು 'ಒಂಟಿಯಾಗಿ ಓಡಾಡಬಲ್ಲೆ' ಎಂಬ ಧೈರ್ಯವಷ್ಟೇ ಇಲ್ಲಿ ಕೆಲಸ ಮಾಡುತ್ತದೆ. ಹೋಗುವ ನಿಮಗೆ ಹೊಸ ಊರು, ಹೊಸ ಪರಿಸರ, ಹೊಸ ಮುಖಗಳ ನಡುವೆ ತಾನು ತನ್ನನ್ನು ಸಂಭಾಳಿಸಿಕೊಂಡು, ಒಬ್ಬಳೇ ಇರುವುದನ್ನು ಖುಷಿಪಡಬಲ್ಲೆ ಎಂಬ ಆತ್ಮವಿಶ್ವಾಸ, ನಂಬಿಕೆ ಇದ್ದರೆ ಸಾಕು.



ಜನಪ್ರಿಯ ತಾಣಗಳು ಸುರಕ್ಷಿತ

ಮೊದಲ ಬಾರಿಗೆ ಪ್ರವಾಸ ಹೊರಟಿದ್ದರೆ, ಹೆಚ್ಚು ಜನಪ್ರಿಯ ತಾಣಗಳನ್ನು ಆಯ್ಕೆ ಮಾಡಿಕೊಳ್ಳಿ. ಅವು ಯಾವತ್ತೂ ಸುರಕ್ಷಿತ. ಜನಪ್ರಿಯ ತಾಣಗಳಲ್ಲಿ ವಸತಿಗಾಗಿ ಉತ್ತಮ ಆಯ್ಕೆಗಳು ಇದ್ದೇ ಇರುತ್ತವೆ. ಹೋಟೆಲ್‌ಗಳ ಆಯ್ಕೆ ಕಷ್ಟವೆನಿಸಿದರೆ, ಯೂತ್ ಹಾಸ್ಟೆಲ್‌ಗಳು, ಮಹಿಳಾ ಹಾಸ್ಟೆಲ್‌ಗಳು, ಹೋಂಸ್ಟೇಗಳು ಕೂಡ ನಮ್ಮ ಬಜೆಟ್‌ಗೆ ಅನುಕೂಲಕರವಾಗಿ, ಸುರಕ್ಷತೆಯ ದೃಷ್ಟಿಯಿಂದಲೂ ನೆಮ್ಮದಿ ಎನಿಸುತ್ತವೆ. ಮಾತ್ರವಲ್ಲ, ಧಾರಾಳವಾಗಿ ಸಿಗುತ್ತವೆ. ಕೆಲವು 'ಹಾಸ್ಟೆಲ್‌ಗಳಿಗೆ' ಮೊದಲೇ ಸದಸ್ಯತ್ವ ಪಡೆದಿರಬೇಕಾಗುತ್ತದೆ. ಅಂತರ್ಜಾಲದಲ್ಲಿ ಕೊಂಚ ಹುಡುಕಾಡಿ, ರಿವ್ಯೂಗಳು, ಕಾಮೆಂಟುಗಳನ್ನು ಓದಿಕೊಂಡು, ಸರಿಯಾದ ವಿವರಗಳನ್ನು ಕೇಳಿ ಪಡೆದುಕೊಂಡು, ಮುಂಗಡ ಕಾಯ್ದಿರಿಸಿಕೊಂಡರೆ ನೆಮ್ಮದಿಯಾಗಿ ಪ್ರಯಾಣ ಮಾಡಬಹುದು.

ಟಿಕೆಟ್ ಬುಕಿಂಗ್ ಸಂದರ್ಭದಲ್ಲಿ, ಆದಷ್ಟು ತಡರಾತ್ರಿ ತಲುಪುವಂಥ ವಿಮಾನ, ರೈಲುಗಳನ್ನು ಕಾಯ್ದಿರಿಸದಿರುವುದು ಒಳ್ಳೆಯ ನಿರ್ಧಾರ. ಜನಸಂಚಾರವಿರುವ ಸಮಯದಲ್ಲೇ ತಲುಪುವಂತೆ ನೋಡಿಕೊಂಡರೆ ಸುರಕ್ಷಿತವಾಗಿ ಕಾಯ್ದಿರಿಸಿದ ರೂಮಿಗೆ ತಲುಪಬಹುದು.

ಸರಳತೆ, ಸಭ್ಯತೆ, ಶಿಸ್ತು..

ಸರಳತೆ, ಶಿಸ್ತು, ಸಭ್ಯತೆ, ಏಕಾಂಗಿ ಪ್ರವಾಸಿಗೆ ಇರಲೇಬೇಕಾದ ಮುಖ್ಯ ಗುಣಗಳು. ಇವು ಇಡೀ ಪ್ರಯಾಣದ ಶಕ್ತಿ. ನಾವು ತೊಡುವ ಬಟ್ಟೆಯಿಂದ ನಡತೆಯವರೆಗೆ ಸಭ್ಯವಾಗಿದ್ದರೆ, ಆಯಾ ಊರಿನ ಸಂಸ್ಕೃತಿಗೆ ಹೊಂದುವಂತಿದ್ದರೆ, ಎಂಥ ಜಾಗದಲ್ಲೂ ಸುರಕ್ಷಿತವಾಗಿರಬಹುದು. ಇವು ಎದುರಿಗಿರುವವರು ನಮ್ಮನ್ನು ನೋಡಬಹುದಾದ ದೃಷ್ಟಿಕೋನವನ್ನೂ ಬದಲಾಯಿಸುತ್ತದೆ. ಸ್ಥಳೀಯರಿಗೆ ನಾವು ತೋರಿಸುವ ಗೌರವ, ಮುಖದಲ್ಲೊಂದು ಸುಂದರ ನಗು ಎಂಥ ಜಾಗದಲ್ಲೂ ನಮಗೆ ಒಳ್ಳೆಯದನ್ನೇ ಮಾಡುತ್ತದೆ. ದೇಶ, ಭಾಷೆ, ಗಡಿಗಳ ಹಂಗನ್ನು ಮೀರಿ ಮಾನವ ಸಂಬಂಧವನ್ನು ಬೆಸೆಯುವ ಕೊಂಡಿ ಇದು.

ಅಂದಹಾಗೆ, ಒಬ್ಬರೇ ಇದ್ದೇವೆಂದು ಯಾರೇನು ಹೇಳಿದರೂ ತಲೆಯಾಡಿಸುವುದು ಮೂರ್ಖತನದ ಪರಮಾವಧಿ. ಪ್ರಶ್ನೆ ಮಾಡುವುದೂ ಆತ್ಮವಿಶ್ವಾಸವನ್ನಷ್ಟೇ ತೋರಿಸುತ್ತದೆ. ಜೊತೆಗೆ ಸುಲಭವಾಗಿ ಮೋಸ ಹೋಗುವುದನ್ನೂ ತಪ್ಪಿಸುತ್ತದೆ. ಪರಿಸ್ಥಿತಿ ಸಂದರ್ಭಗಳನ್ನು ಅರಿತು ನಡೆಯುವ ಜಾಣತನ ಇದ್ದರೆ ಸಾಕು.

ಮಾಹಿತಿ ಸಂಗ್ರಹ ಮುಖ್ಯ

ಹೋಗುವ ಮೊದಲು ಆ ಪ್ರದೇಶದ ಬಗೆಗಿನ ಸರಿಯಾದ ಮಾಹಿತಿ, ಓದು ಕೂಡಾ ಮುಖ್ಯ. ಯಾವತ್ತೂ ಪ್ರವಾಸ ಮಾಡುವವರು ಪರ್ಯಾಯ ಯೋಜನೆಗಳನ್ನು (ಪ್ಲಾನ್ ಎ, ಪ್ಲಾನ್ ಬಿ ತರಹ) ಮಾಡಿಕೊಂಡಿರಬೇಕು. ಮೊದಲನೆಯದಕ್ಕೆ ಅಡಚಣೆಯಾದರೆ, ಮತ್ತೊಂದು ಯೋಜನೆಯಂತೆ ಪ್ರಯಾಣಿಸಬಹುದು. ಆದಷ್ಟು ಕಡಿಮೆ ಲಗೇಜು ಕೊಂಡೊಯ್ದರೆ ಪ್ರಯಾಣ ಸುಖಕರವಾಗಿರುತ್ತದೆ. ಅಂದ ಹಾಗೆ ಪ್ರವಾಸದ ವೇಳೆ ಪರ್ಸ್, ಫೋನ್, ಐಡಿ ಕಾರ್ಡ್ ಇತ್ಯಾದಿಗಳ ಮೇಲೆ ನಿಗಾ ಇರಲಿ. ಕಾಲಕಾಲಕ್ಕೆ ಆಪ್ತರಿಗೆ ತಾನೆಲ್ಲಿರುವೆ ಎಂಬ ಮಾಹಿತಿ, ತಾನು ಪ್ರಯಾಣಿಸುವ ವಾಹನದ ಮಾಹಿತಿಯನ್ನು ಅಪ್‌ಡೇಟ್ ಮಾಡುತ್ತಿದ್ದರೆ ಒಳ್ಳೆಯದು. ದುಬಾರಿ ಗ್ಯಾಜೆಟ್‌ಗಳು, ಆಭರಣಗಳ ಪ್ರದರ್ಶನ ಮಾಡುವುದರಿಂದ ವೃಥಾ ತೊಂದರೆಯನ್ನು ಆಹ್ವಾನಿಸಿಕೊಂಡಂತೆ ಎಂಬುದೂ ನೆನಪಿರಲಿ.

'ಪ್ರಪಂಚ ತುಂಬ ಕೆಟ್ಟುಹೋಗಿದೆ. ಇಲ್ಲಿ ಮಹಿಳೆಯರಿಗೆ ಸುರಕ್ಷತೆಯೇ ಇಲ್ಲ' ಎಂಬ ನಕಾರಾತ್ಮಕ ಚಿಂತನೆಗಳನ್ನು ಮೊದಲು ಬಿಸಾಕಿ, ಧೈರ್ಯದಿಂದ ಹೆಜ್ಜೆ ಇಡಿ. ಹೊಸತನ್ನು ಆಸ್ವಾದಿಸುವ, ಗುಣವಿದ್ದರೆ ಈ ಏಕಾಂಗಿ ಪ್ರವಾಸ, ನಮ್ಮ ಮುಂದೆ ಚಂದನೆಯ ಜಗತ್ತೊಂದನ್ನು ತೆರೆದಿಡುತ್ತದೆ. ❖

ಶೇರಿಂಗ್ 'ವಾಹನ' ಉತ್ತಮ

ಒಬ್ಬರೇ ನಗರ ಸುತ್ತುವಾಗ ಅಥವಾ ಬೇರೆ ಜಾಗಗಳನ್ನು ನೋಡಿಕೊಂಡು ಬರಲು ಹೊರಟಾಗ ಸಹ ಪ್ರಯಾಣಿಕರಿರುವ ಶೇರಿಂಗ್ ಟ್ಯಾಕ್ಸಿಗಳು, ಸಾರ್ವಜನಿಕ ಸಾರಿಗೆಗಳನ್ನು ಆಯ್ಕೆ ಮಾಡಿಕೊಳ್ಳುವುದೂ ಉತ್ತಮ ಉಪಾಯ. ಇದಲ್ಲದೆ, ಬಹಳಷ್ಟು ಸಲ ಸಾಮಾಜಿಕ ಜಾಲತಾಣಗಳಲ್ಲಿ ಸಮಾನ ಮನಸ್ಕ ಟ್ರಾವೆಲ್ ಗುಂಪುಗಳನ್ನು ಗಮನಿಸುತ್ತಿದ್ದರೆ, ಸಹ ಪಯಣಿಗರಾಗಿ ಉತ್ತಮ ಸೋಲೊ ಟ್ರಾವೆಲರ್‌ಗಳು ಅಲ್ಲಿ ಸಿಗುವ ಸಾಧ್ಯತೆಗಳೂ ಇರುತ್ತವೆ. ಕೆಲವೊಮ್ಮೆ ಇಂತಹ ಅಚಾನಕ್ ಭೇಟಿಗಳು, ಬದುಕಿನಲ್ಲಿ ಮರೆಯಲಾಗದ ಸಂಬಂಧಗಳನ್ನೂ ತರಬಹುದು.

ವೈವಿಧ್ಯಮಯ ಈರುಳ್ಳಿ ದೋಸೆ

ನಳಪಾಕ



ಚಂದ್ರಕಲಾ ಮಂಜುನಾಥ್

ಸಾದಾ ಈರುಳ್ಳಿ ದೋಸೆ

ಬೇಕಾಗುವ ಸಾಮಗ್ರಿಗಳು: ದೋಸೆ ಹಿಟ್ಟು, ಉಪ್ಪು - ರುಚಿಗೆ ತಕ್ಕಷ್ಟು, ಅಡುಗೆ ಸೋಡಾ - ಎರಡು ಚಿಟಿಕೆ, ಅಡುಗೆ ಎಣ್ಣೆ.

ಈರುಳ್ಳಿ ಒಗ್ಗರಣೆಗೆ ಬೇಕಾಗುವ ಸಾಮಗ್ರಿಗಳು: ಈರುಳ್ಳಿ -3, ಚಿಟಿಕೆ ಸಾಸಿವೆ, ಕರಿಬೇವು, ಕಡಲೆಬೇಳೆ (ಬೇಕಿದ್ದವರು ಬಳಸಬಹುದು), ಕೊತ್ತಂಬರಿ ಸೊಪ್ಪು, ಹಸಿಮೆಣಸಿನಕಾಯಿ, ಉಪ್ಪು - ಎರಡು ಚಿಟಿಕೆ, ಅಡುಗೆ ಎಣ್ಣೆ - 2 ಚಮಚ.

ತಯಾರಿಸುವ ವಿಧಾನ: ಒಗ್ಗರಣೆಗೆ ಬೇಕಾಗುವ ಪದಾರ್ಥಗಳೆಲ್ಲವನ್ನೂ ಸಣ್ಣಗೆ ಹೆಚ್ಚಿಟ್ಟುಕೊಳ್ಳಬೇಕು. ಬಾಣಲೆಗೆ ಎರಡು ಚಮಚ ಎಣ್ಣೆ ಹಾಕಿ. ಎಣ್ಣೆ ಕಾದ ನಂತರ ಸಾಸಿವೆ, ಕರಿಬೇವು, ಹಸಿಮೆಣಸಿನಕಾಯಿ, ಈರುಳ್ಳಿ ಹಾಕಿ ಚೆನ್ನಾಗಿ ಹುರಿಯಿರಿ. ಎರಡು ಚಿಟಿಕೆ ಉಪ್ಪು ಸೇರಿಸಿ. ಸ್ಟವ್ ಆಫ್ ಮಾಡಿ. ನಂತರ ಹೆಚ್ಚಿಟ್ಟುಕೊಂಡ ಕೊತ್ತಂಬರಿ ಸೊಪ್ಪನ್ನು ಸೇರಿಸಿ ತಣ್ಣಗಾಗಲು ಬಿಡಿ. ದೋಸೆ ತವಾ ಮೇಲೆ ದೋಸೆ ಹಿಟ್ಟನ್ನು ಸೌಟಿನಿಂದ ಹರಡಿ ತಕ್ಷಣವೇ ಈರುಳ್ಳಿ ಒಗ್ಗರಣೆಯನ್ನು ದೋಸೆಯ ಮೇಲೆ ಹರಡಿ ಸ್ವಲ್ಪ ನಿಧಾನಕ್ಕೆ ಒತ್ತಿ. ಮೇಲೊಂದು ಚಮಚ ಎಣ್ಣೆ ಹಾಕಿ ಎರಡೂ ಕಡೆ ಬೇಯಿಸಿ. ಈರುಳ್ಳಿ ದೋಸೆ ಕಾಯಿ ಚಟ್ನಿಯೊಂದಿಗೆ ಸವಿಯಲು ಕೊಡಿ.

ನೆನಪಿಡಿ: ಒಗ್ಗರಣೆಗೆ ಹಸಿಮೆಣಸಿನಕಾಯಿ ಬದಲಿಗೆ ಸಾಂಬಾರಿನ ಪುಡಿ ಬೆರೆಸಿದರೆ ಮತ್ತೊಂದು ರುಚಿ ಸಿಗುತ್ತದೆ.



ಪಾಲಕ್ ಈರುಳ್ಳಿ ದೋಸೆ

ಬೇಕಾಗುವ ಸಾಮಗ್ರಿಗಳು: ದೋಸೆ ಹಿಟ್ಟು, ಪಾಲಕ್ ಸೊಪ್ಪು– ಎರಡು ಹಿಡಿ, ಉಪ್ಪು - ರುಚಿಗೆ ತಕ್ಕಷ್ಟು, ಸೋಡಾ - ಎರಡು ಚಿಟಿಕೆ, ಅಡುಗೆ ಎಣ್ಣೆ.

ಈರುಳ್ಳಿ ಒಗ್ಗರಣೆ: ಸಾದಾ ಈರುಳ್ಳಿ ದೋಸೆ ರೆಸಿಪಿಯಲ್ಲಿ ನೀಡಿರುವ ಮಾಹಿತಿಯಂತೆ ಒಗ್ಗರಣೆ ಸಿದ್ಧಪಡಿಸಿಕೊಳ್ಳಿ.

ತಯಾರಿಸುವ ವಿಧಾನ : ಎರಡು ಹಿಡಿ ಪಾಲಕ್ ಸೊಪ್ಪನ್ನು ತೊಳೆದು ಸ್ವಲ್ಪ ನೀರಿನಲ್ಲಿ ಬೇಯಿಸಿಕೊಳ್ಳಿ. ತಣ್ಣಗಾದ ಪಾಲಕ್ ಸೊಪ್ಪನ್ನು ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿಕೊಂಡ ಪಾಲಕ್ ಪೇಸ್ಟ್ ಅನ್ನು ದೋಸೆ ಹಿಟ್ಟಿಗೆ ಸೇರಿಸಿ, ಉಪ್ಪು, ಎರಡು ಚಿಟಿಕೆ ಸೋಡಾ ಹಾಕಿ ಕಲೆಸಿಡಿ.

ದೋಸೆ ಹೆಂಚು/ತವಾ ಮೇಲೆ ಪಾಲಕ್ ಮಿಶ್ರಿತ ದೋಸೆ ಹಿಟ್ಟು ಹರಡಿ. ಒಗ್ಗರಣೆ ಹಾಕಿದ ಈರುಳ್ಳಿ ಮಿಶ್ರಣವನ್ನು ದೋಸೆ ಹಿಟ್ಟು ಹಸಿ ಇರುವಾಗಲೇ ಹರಡಿ, ಸ್ವಲ್ಪ ಒತ್ತಿ. ಮೇಲೊಂದು ಚಮಚ ಎಣ್ಣೆ ಹಾಕಿ ಎರಡೂ ಬದಿ ಬೇಯಿಸಿದರೆ ಪಾಲಕ್ ದೋಸೆ ಸವಿಯಲು ಸಿದ್ದ.

ಇದೇ ವಿಧಾನದಲ್ಲಿ ಪಾಲಕ್ ಬದಲು ಬೇರೆ ಬೇರೆ ಸೊಪ್ಪುಗಳು ಅಥವಾ ಬೀಟ್‌ರೂಟ್ ಬಳಸಿ ವಿಧವಿಧವಾದ ದೋಸೆ ತಯಾರಿಸಬಹುದು.



ರಾಗಿ ಈರುಳ್ಳಿ ದೋಸೆ

ಬೇಕಾಗುವ ಸಾಮಗ್ರಿಗಳು: ರಾಗಿಹಿಟ್ಟು - 1ಕಪ್, ಉದ್ದಿನಬೇಳೆ - ಅರ್ಧ ಕಪ್, ಅವಲಕ್ಕಿ - ಕಾಲು ಕಪ್, ಮೆಂತ್ಯೆ - ಒಂದು ಚಮಚ.


ಈರುಳ್ಳಿ ಒಗ್ಗರಣೆ: ಸಾದಾ ಈರುಳ್ಳಿ ದೋಸೆ ರೆಸಿಪಿಯಲ್ಲಿ ತಿಳಿಸಿರುವಂತೆ ಒಗ್ಗರಣೆ ಸಿದ್ಧಪಡಿಸಿಕೊಳ್ಳಿ.

ತಯಾರಿಸುವ ವಿಧಾನ: ಉದ್ದಿನಬೇಳೆ, ಮೆಂತ್ಯೆಯನ್ನು 5 ತಾಸು ನೆನೆಸಿಕೊಳ್ಳಿ. ರುಬ್ಬುವ ಅರ್ಧ ಗಂಟೆ ಮೊದಲು ಅವಲಕ್ಕಿ ತೊಳೆದು ನೆನೆಸಿಡಿ. ಎಲ್ಲವನ್ನೂ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರಾಗಿಹಿಟ್ಟನ್ನು ಸ್ವಲ್ಪವೇ ನೀರಿನಲ್ಲಿ ಕಲೆಸಿಕೊಂಡು ರುಬ್ಬಿದ ಉದ್ದಿನಬೇಳೆ ಮಿಶ್ರಣದೊಂದಿಗೆ ಕಲೆಸಿ. ಒಂದು ರಾತ್ರಿ ಅಥವಾ 8 ತಾಸು ಹುದುಗು ಬರಲು ಬಿಡಿ.

ರಾಗಿದೋಸೆ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು, ಎರಡು ಚಿಟಿಕೆ ಸೋಡಾ ಬೆರೆಸಿ ಕಾದ ಹೆಂಚು/ತವಾದ ಮೇಲೆ ಸೌಟಿನಿಂದ ಹರಡಿ. ಹಿಟ್ಟು ಹಸಿಯಿರುವಾಗಲೇ ಒಗ್ಗರಣೆ ಮಾಡಿಕೊಂಡ ಈರುಳ್ಳಿ ಮಿಶ್ರಣವನ್ನು ಹರಡಿ ಮೇಲೊಂದು ಚಮಚ ಎಣ್ಣೆ ಹಾಕಿ ಎರಡೂ ಬದಿ ಬೇಯಿಸಿದರೆ ರಾಗಿ ಈರುಳ್ಳಿ ದೋಸೆ ಸವಿಯಲು ಸಿದ್ಧ.

ಮತ್ತೆ ಮತ್ತೆ ಅದೇ ಪ್ರಶ್ನೆಗಳು

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

•20ರ ಯುವಕ. ಹಸ್ತಮೈಥುನ ಅಭ್ಯಾಸವಿದೆ. ನನ್ನ ಎತ್ತರವನ್ನು ಜಾಸ್ತಿಮಾಡಬಹುದೇ?

ಹೆಸರು ಊರು ತಿಳಿಸಿಲ್ಲ.

•21ರ ಯುವಕ. 12 ವರ್ಷದವನಾಗಿದ್ದಾಗಿನಿಂದ ಹಸ್ತಮೈಥುನ ಮಾಡುತ್ತಿದ್ದೇನೆ. ಶಿಶ್ನದ ಗಾತ್ರ ಚಿಕ್ಕದಾಗಿದ್ದು ಮುದುಡಿದಂತೆ ಇರುತ್ತದೆ. ವಿವಾಹವಾದ ನಂತರ ಏನಾಗಬಹುದು ಎಂದು ಯೋಚನೆಯಾಗಿದೆ. ಪರಿಹಾರವೇನು?

ಹೆಸರು ಊರು ತಿಳಿಸಿಲ್ಲ.

•23ರ ಯುವಕ. ಕೆಲವರ್ಷಗಳಿಂದ ಹಸ್ತಮೈಥುನ ಮಾಡುತ್ತಿದ್ದೇನೆ. ಈಗ ಭಯ ಕಾಡುತ್ತಿದೆ. ಇದನ್ನು ಬಿಡುವುದು ಹೇಗೆ?

ಹೆಸರು ಊರು ತಿಳಿಸಿಲ್ಲ.

•ಪದವಿ ವಿದ್ಯಾರ್ಥಿ. ಹಸ್ತಮೈಥುನ ಅಭ್ಯಾಸವಿದೆ. ವಾರಕ್ಕೆ ಎಷ್ಟು ಸಾರಿ ಮಾಡಬಹುದು?

ಹೆಸರು ಊರು ತಿಳಿಸಿಲ್ಲ.

•10ವರ್ಷದಿಂದ ಹಸ್ತಮೈಥುನ ಮಾಡುತ್ತಿದ್ದೇನೆ. ಶಿಶ್ನದ ತುದಿಯಲ್ಲಿ ಕಪ್ಪು ಬಣ್ಣವಾಗಿದೆ. ಕೆಲವೊಮ್ಮೆ ತುರಿಕೆಯಾಗುತ್ತದೆ. ಪರಿಹಾರವೇನು?

ಹೆಸರು ಊರು ತಿಳಿಸಿಲ್ಲ.



ಹದಿಹರೆಯದ ಲೈಂಗಿಕ ಬೆಳವಣಿಗೆ ಮತ್ತು ಆಸಕ್ತಿಗಳ ಕುರಿತಾಗಿ ಈ ಅಂಕಣದಲ್ಲಿ ಹಲವಾರು ಸಾರಿ ಬರೆಯಲಾಗಿದೆ. ಹಾಗಿದ್ದರೂ ನಮ್ಮ ಯುವಜನತೆಯಿಂದ ಮತ್ತೆ ಮತ್ತೆ ಅದೇ ಪ್ರಶ್ನೆಗಳು ಬರುತ್ತಿವೆ. ಇದು ಯುವಜನತೆಯಲ್ಲಿ ಮತ್ತು ಒಟ್ಟಾರೆ ಸಮಾಜದಲ್ಲಿ ಲೈಂಗಿಕತೆಯ ಕುರಿತಾಗಿ ಇರುವ ಭಯ ಆತಂಕ ಅಜ್ಞಾನಗಳ ಸೂಚನೆಯಾಗಿದೆ. ಹಾಗೆಯೇ ಸಮಾಜವಿಜ್ಞಾನಿಗಳು ಮತ್ತು ಸರ್ಕಾರಗಳು ಸೇರಿ ಮಕ್ಕಳಿಗೆ ಅವರ ವಯಸ್ಸಿಗೆ ಅನುಗುಣವಾಗಿ ಸೂಕ್ತ ವೈಜ್ಞಾನಿಕ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ತುರ್ತಾಗಿ ರೂಪಿಸುವ ಅಗತ್ಯವನ್ನು ಒತ್ತಿ ಹೇಳುತ್ತದೆ.

ಹಸ್ತಮೈಥುನ ಆರೋಗ್ಯಕರ ಲೈಂಗಿಕ ಪ್ರವೃತ್ತಿ ಎಂದು (ದಿನಾಂಕ 30 ಜನವರಿ 2021ರ ಸಂಚಿಕೆ) ಇದೇ ಅಂಕಣದಲ್ಲಿ ವಿವರವಾಗಿ ಬರೆಯಲಾಗಿದೆ. ಇದನ್ನು ಓದಿದರೆ ಸಹಾಯವಾಗುತ್ತದೆ. ನಿಮ್ಮೊಳಗೆ ಮನೆಮಾಡಿರುವ ಭಯ ಆತಂಕಗಳೇ ಎಲ್ಲಾ ಸಮಸ್ಯೆಗೆ ಮೂಲ ಕಾರಣ.

ದೇಹದ ಎತ್ತರ ಮತ್ತು ಲೈಂಗಿಕ ಅಂಗಾಂಗಗಳ ಅಳತೆ ಆಕಾರಗಳು ಆನುವಂಶಿಕವಾದದ್ದು. ಇವುಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ಪ್ರಚಾರ ಮಾಡುವ ಔಷಧಿಗಳಿಂದ ಪ್ರಯೋಜನವಾಗುವುದಿಲ್ಲ. ಲೈಂಗಿಕ ಸುಖಕ್ಕೂ ಅಂಗಾಂಗಗಳ ಆಕಾರಕ್ಕೂ ಸಂಬಂಧವಿರುವುದಿಲ್ಲ. ಸಂಗಾತಿಗಳ ನಡುವಿನ ಆತ್ಮೀಯತೆಯು ತೃಪ್ತಿ ಸಮಾಧಾನಕರ ಲೈಂಗಿಕ ಅನುಭವ ನೀಡುತ್ತದೆ. ಹಾಗಾಗಿ ಯುವಕರು ವಿದ್ಯೆ ಉದ್ಯೋಗಗಳ ಮೂಲಕ ಮೊದಲು ಸ್ವತಂತ್ರರಾಗುವುದರತ್ತ ಗಮನ ಹರಿಸಿದರೆ ತಮಗೆ ಒಪ್ಪುವ ಸಂಗಾತಿಯನ್ನು ಹುಡುಕಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲಿಯವರೆಗೆ ಕಾಮದ ಒತ್ತಡವನ್ನು ಹಸ್ತಮೈಥುನದಿಂದ ತಣಿಸಿಕೊಳ್ಳಬಹುದು.

ನೈರ್ಮಲ್ಯ ಮತ್ತು ಖಾಸಗೀತನವನ್ನು ಕಾಯ್ದುಕೊಳ್ಳುವುದರ ಕಡೆ ಯುವಜನತೆ ಎಚ್ಚರವಹಿಸಬೇಕು. ನಿಮ್ಮ ಖುಷಿಯ ಕ್ಷಣಗಳು ಇತರರಿಗೆ ಮುಜುಗರವುಂಟುಮಾಡಬಾರದು. ಒಳಉಡುಪು ಮತ್ತು ಲೈಂಗಿಕ ಅಂಗಾಂಗಗಳ ಮೇಲೆ ತೇವಾಂಶ ಸಂಗ್ರಹವಾದರೆ ತುರಿಕೆ ಉಂಟಾಗಬಹುದು.

ಸಂಗಾತಿ ಇದ್ದಾಗ ಎಷ್ಟು ಸಾರಿ ಬೇಕಾದರೂ ಸೇರಬಹುದಲ್ಲವೇ? ಹಾಗೆಯೇ ಹಸ್ತಮೈಥುನವೂ ಕೂಡ. ದೇಹ ಮನಸ್ಸುಗಳಿಗೆ ಸಾಕೆನಿಸಿದಾಗ ಅವು ಸ್ಪಂದನೆಯನ್ನು ನಿಲ್ಲಿಸುತ್ತವೆ. ಆದರೆ ಹದಿಯರೆಯದವರು ಹಸ್ತಮೈಥುನವನ್ನು ಬೇಸರ ಕಳೆಯುವ ಸಾಧನವಾಗಿ ಬಳಸಿದಾಗ ಅದು ನಶೆಯ ರೀತಿಯಲ್ಲಿ ಅಂಟಿಕೊಳ್ಳುತ್ತದೆ. ಹಸ್ತಮೈಥುನ ತಮ್ಮೊಳಗಿರುವ ಹಿಂಜರಿಕೆ ಅಸಹಾಯಕತೆ ಬೇಸರ ಕೀಳರಿಮೆ ದುಃಖ ಮುಂತಾದವುಗಳನ್ನು ಮರೆಯುವ ಮಾರ್ಗವಾದಾಗ ಅದನ್ನು ಬಿಡಲಾಗದ ಸ್ಥಿತಿಗೆ ತಲುಪಬಹುದು. ಈ ರೀತಿಯ ಮಾನಸಿಕ ಹೋರಾಟಗಳನ್ನು ಅರ್ಥಮಾಡಿಕೊಂಡು ನಿಭಾಯಿಸುವುದನ್ನು ಕಲಿಯಬೇಕು.

ಅಗತ್ಯವಿದ್ದಲ್ಲಿ ಮನೋಚಿಕಿತ್ಸಕರು ಅಥವಾ ಲೈಂಗಿಕ ತಜ್ಞರನ್ನು ಭೇಟಿಯಾಗಬಹುದು. ವೈದ್ಯರ ಮೇಲ್ವಿಚಾರಣೆಯಿಲ್ಲದೆ ಯಾವುದೇ ಔಷಧಗಳನ್ನು ಬಳಸಬಾರದು. ಆಯುರ್ವೇದದ ಹೆಸರಿನಲ್ಲಿ ಪ್ರಚಾರದಲ್ಲಿರುವ ಔಷಧಗಳೂ ಕೂಡ ಕೆಲವೊಮ್ಮೆ ಹಾನಿಮಾಡಬಹುದು. ❖

ಪ್ರಜಾವಾಣಿ ನೋಡಿಯೊ

ಈ ವಿಷಯಕ್ಕೆ ಸಂಬಂಧಿಸಿ ಮತ್ತಷ್ಟು ವಿವರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬಿಟ್ಲಿ ಲಿಂಕ್: https://bit.ly/3JKh8Um

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ bhoomika@prajavani.co.in